ಸಂಪುಟ 7

ಸಂಚಿಕೆ 2

ಕನ್ನಡ ಅಧ್ಯಯನ

ಚಳಿ ಸಂಚಿಕೆ



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಲೇಖಕರಿಗೆ ಸೂಚನೆ

೧. ಲೇಖನಗಳು ಕರ್ನಾಟಕ ಅಧ್ಯಯನಗಳಿಗೆ ಸಂಬಂಧಿಸಿರಬೇಕು ಅಥವಾ ಕರ್ನಾಟಕ ಅಧ್ಯಯನಗಳಿಗೆ ಹೊಸ ಆಯಾಮ ನೀಡಬಲ್ಲ ತಾತ್ವಿಕ ಚಿಂತನೆಗಳನ್ನು ಒಳಗೊಂಡಿರಬೇಕು.

೨. ಅನುವಾದಿತ ಲೇಖನವಾಗಿದ್ದಲ್ಲಿ ಸಂಬಂಧಪಟ್ಟವರ ಅನುಮತಿಯನ್ನು ಪಡೆದಿರಬೇಕು.

೩. ಲೇಖನಗಳನ್ನು ಹಾಳೆಯ ಒಮ್ಮಗ್ಗುಲಲ್ಲಿ ಅಂದವಾಗಿ ಬರೆದಿರಬೇಕು.

೪. 'ಲೇಖನಗಳು' ೫ ರಿಂದ ೧೦ ಪುಟಗಳ ಒಳಗೆ ಹಾಗೂ 'ಹೊಳಹು'ಗಳು ೧ ರಿಂದ ೨ ಪುಟಗಳ ಒಳಗೆ ಇರಬೇಕು.

೫. ಲೇಖನಗಳಲ್ಲಿ ಬರುವ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಟಿಪ್ಪಣಿಗಳನ್ನು ನೀಡುವಾಗ, ಕೆಳಕಂಡ ಮಾದರಿ ಅನುಸರಿಸಿದರೆ ಒಳ್ಳೆಯದು. ಲೇಖನದ ಒಳಗೆ: ಲೇಖಕರ ಸಂಕ್ಷಿಪ್ತ ಹೆಸರು, ಕೃತಿವರ್ಷ, ಪುಟಸಂಖ್ಯೆ -ಈ ಕ್ರಮದಲ್ಲಿ. ಉದಾ: (ಚಿಮೂ: ೧೯೯೩:೫೪) ಲೇಖನದ ಕೊನೆಗೆ: ಲೇಖಕ, ವರ್ಷ, ಕೃತಿ, ಪ್ರಕಾಶನ, ಊರು -ಈ ಕ್ರಮದಲ್ಲಿ ಉದಾ: ಚಿದಾನಂದಮೂರ್ತಿ ಎಂ. (೧೯೯೩) ಹೊಸತು ಹೊಸತು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಲೇಖನಗಳ ಒಳಗಿನ ಅಭಿಪ್ರಾಯಗಳು ಆಯಾ ಲೇಖಕರವು. ವಿಶ್ವವಿದ್ಯಾಲಯದವಲ್ಲ.

೭. ಲೇಖನಗಳನ್ನು ಪತ್ರಿಕೆಯ ಆಶಯಕ್ಕೆ ಅನುಗುಣವಾಗಿ ಆಯ್ದು ಪ್ರಕಟಿಸಲಾಗುವುದು. ಅಪ್ರಕಟಿತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ. ಆದ್ದರಿಂದ ಲೇಖಕರು ಲೇಖನದ ನಕಲನ್ನು ಇಟ್ಟುಕೊಳ್ಳುವುದು.

೮. ಲೇಖನ ಕಳಿಸುವ ವಿಳಾಸ: ಸಂಪಾದಕ
'ಕನ್ನಡ ಅಧ್ಯಯನ' ಪತ್ರಿಕೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಚಂದಾ ವಿವರ	:	ವಾರ್ಷಿಕ ಚಂದಾ: ರೂ. ೫೦.೦೦ ಐದು ವರ್ಷಗಳಿಗೆ: ರೂ. ೨೦೦.೦೦
ಚಂದಾ ಕಳಿಸುವ ವಿಳಾಸ	:	ನಿರ್ದೇಶಕರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ - ೫೮೩ ೨೭೬

ಕನ್ನಡ ಅಧ್ಯಯನ

ಕನ್ನಡ ಅಧ್ಯಯನ

ಚಳಿ ಸಂಚಿಕೆ

ಸಂಪಾದಕ

ರಹಮತ್ ತರೀಕೆರೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

KANNADA ADHYAYANA (Quartely) Vol. VII-2
Ed. by Dr. Rahamath Tarikere

Published by The Director, Prasaranga,
Kannada University, Hampi, Vidyaranya - 583 276

Pages : x + 146

ತ್ರೈಮಾಸಿಕ ಪತ್ರಿಕೆ, ಸಂಪುಟ ೭, ಸಂಚಿಕೆ ೨ (ಅಕ್ಟೋಬರ್, ನವೆಂಬರ್, ಡಿಸೆಂಬರ್ ೨೦೦೧)

© ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಲಹಾ ಸಂಪಾದಕರು	:	ಡಾ. ಎಂ.ಎಂ. ಕಲಬುರ್ಗಿ
		ಪ್ರೊ. ಎಸ್.ಎಸ್. ಹಿರೇಮಠ
		ಪ್ರೊ. ಅಲ್ಲಮಪ್ರಭು ಬೆಟ್ಟದೂರ
		ಡಾ. ಕೆ.ವಿ. ನಾರಾಯಣ
		ಪ್ರೊ. ಹನುಮಣ್ಣ ನಾಯಕ ದೊರೆ
		ಪ್ರೊ. ಲಕ್ಷ್ಮಣ್ ತೆಲಗಾವಿ
ಸಹಾಯಕ ಸಂಪಾದಕರು	:	ಶಿವಾನಂದ ವಿರಕ್ತಮಠ
		ಸುಜ್ಞಾನಮೂರ್ತಿ

ಬಿಡಿ ಪ್ರತಿ ಬೆಲೆ	:	ರೂ. ೧೫.೦೦
ವಾರ್ಷಿಕ ಚಂದಾ	:	ರೂ. ೫೦.೦೦
ಪಂಚವಾರ್ಷಿಕ ಚಂದಾ	:	ರೂ. ೨೦೦.೦೦
ಮುಖಪುಟ	:	ಕೆ.ಕೆ. ಮಕಾಳಿ
ಚಿತ್ರ	:	ಜಿ. ಜಯಕುಮಾರ್

ಪ್ರಕಾಶಕರು
ಪ್ರೊ. ಎ.ವಿ. ನಾವಡ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಡಿ.ಟಿ.ಪಿ.
ಸಂಧ್ಯಾ ಕಂಪ್ಯೂಟರ್ ಗ್ರಾಫಿಕ್ಸ್, ಹೊಸಪೇಟೆ

ಮುದ್ರಕರು
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಗದಗ

ಸೊಲ್ಲು

ಅನುಭಾವಿಗಳ ಅಧ್ಯಯನದಲ್ಲಿ ತೊಡಕು

● ಸಂಪಾದಕ

ಕೆಳೆದ ಹತ್ತು ವರುಷಗಳಿಂದ ಕನ್ನಡದಲ್ಲಿ ಅನುಭಾವಿಪಂಥಗಳ ಅಧ್ಯಯನಗಳು ಹೆಚ್ಚಾಗಿ ನಡೆಯುತ್ತಿವೆ. ಇವುಗಳಲ್ಲಿ ಕೈವಾರ ನಾರಾಯಣಪ್ಪನಂತಹ ಯೋಗಿಗಳ, ಮಂಟೇಸ್ವಾಮಿ ಮಾದೇಶ್ವರ ಮುಂತಾದ ಜನಪದ ಸಂತಪರಂಪರೆಗಳ, ಶಿಶುನಾಳ ಶರೀಫ ಕಡಕೋಳ ಮಹಾದೇವಪ್ಪ ಚೆನ್ನೂರಜಲಾಲಸಾಬ ಮುಂತಾದ ತತ್ವಪದಕಾರರ, ಸೂಫಿ ನಾಥ ಮುಂತಾದ ಪಂಥಗಳ ಅಧ್ಯಯನಗಳೆಲ್ಲ ಸೇರಿವೆ. ಇವುಗಳಲ್ಲಿ ಕಂಡುಬರುತ್ತಿರುವ ಒಂದು ಮುಖ್ಯ ಗುಣ ಮತ್ತು ಸಮಸ್ಯೆ ಎಂದರೆ, ಸಾಮಾಜಿಕ ಸಮಾನತೆಯ ಆಶಯಕ್ಕೆ ಒತ್ತು ಕೊಡುವುದು. ಉಳಿದಂತೆ ಆಧುನಿಕ ಡೆಮಾಕ್ರಟಿಕ್ ಮೌಲ್ಯಗಳ ದೃಷ್ಟಿಯಲ್ಲಿ ಮುಜುಗರ ಹುಟ್ಟಿಸುವ ಅನೇಕ ವೈರುಧ್ಯಗಳನ್ನು ಕುರಿತಂತೆ ನಿರ್ಲಕ್ಷ್ಯತೋರುವುದು; ಈ ವಿದ್ಯಮಾನವನ್ನು ಪರಿಶೀಲಿಸಬೇಕು.

ಪ್ರಪಂಚೀಕರಣದ ಹಿಂಚು ಮುಂಚಿನ ಈ ಹೊತ್ತಲ್ಲಿ ಶುರುವಾಗಿರುವ ಅನುಭಾವಿಗಳ ಮೇಲಿನ ಈ ಅಧ್ಯಯನಗಳಿಗೆ ಹಲವು ಪ್ರೇರಣೆಗಳಿವೆ. ಅವುಗಳಲ್ಲಿ ಅಧಿಕಾರಸ್ಥರ ಶಕ್ತಿಗಳ ವಿರುದ್ಧದ ಪ್ರತಿರೋಧವು ಮುಖ್ಯವಾದುದು. ಇದಕ್ಕೆ ತಕ್ಕನಾಗಿ ಅನುಭಾವಿಗಳು ತಂತಮ್ಮ ಕಾಲದ ಪ್ರಭುತ್ವಗಳ ವಿರುದ್ಧ ದಂಗೆಯೆದ್ದವರು. ಅನುಭಾವಿ ಪಂಥಗಳಲ್ಲಿ ಈ ಪ್ರತಿರೋಧ ಸತ್ವದ ಆಶಯಗಳಿರಲು ಕಾರಣವಿದೆ. ಅದೆಂದರೆ, ಈ ಪಂಥಗಳು ಆದಿಯಿಂದಲೂ ಕೆಳಜಾತಿ ಕೆಳವರ್ಗಗಳ ಧಾರ್ಮಿಕ ಆಧ್ಯಾತ್ಮಿಕ ಅಭಿವ್ಯಕ್ತಿಯಾಗಿದ್ದವು. ಭಾರತದಲ್ಲಿ ಅನುಭಾವವಾದವು ಕ್ಲಾಸಿಕಲ್ ಧರ್ಮಗಳ ಪ್ರತಿಷ್ಠಿತತೆ, ಸನಾತನವಾದ, ರಾಜಕೀಯ ಸರ್ವಾಧಿಕಾರ, ಸಾಮಾಜಿಕ ಶ್ರೇಣೀಕರಣಗಳ ವಿರುದ್ಧ ಹಿಂದುಳಿದ ಜಾತಿ- ವರ್ಗಗಳು ಒಡ್ಡಿದ ಪ್ರತಿರೋಧಗಳನ್ನು ಪ್ರತಿನಿಧಿಸಿತ್ತು ಎನ್ನಬಹುದು. ಮಾತ್ರವಲ್ಲ, ಅದು ಆಳುವ ಶಕ್ತಿಗಳ ಎದುರಲ್ಲಿ, ದುಡಿವ ಸಮುದಾಯಗಳು ಪರ್ಯಾಯವಾಗಿ ಸೃಷ್ಟಿಸಿಕೊಂಡ ಲೋಕದೃಷ್ಟಿಯನ್ನೂ ಫಿಲಾಸಫಿಯನ್ನೂ ಒಳಗೊಂಡಿತ್ತು. ಅವೈದಿಕ ದರ್ಶನಗಳಾದ ಸಾಂಖ್ಯ ಯೋಗ ತಂತ್ರ ನ್ಯಾಯ ಇವುಗಳ ಹಿನ್ನೆಲೆಯಲ್ಲಿ ಸುಪ್ತವಾಗಿ ಇವೆ ಕೂಡ. ಹೀಗಾಗಿ ಆಧುನಿಕ ಕಾಲದಲ್ಲಿ ಧರ್ಮ ಅನುಭಾವ ಅಧ್ಯಾತ್ಮ ಮುಂತಾದ ಶಬ್ದಗಳನ್ನು ಉಚ್ಚರಿಸಲು ಕೂಡ ಹಿಂಜರಿಯುತ್ತಿದ್ದ ವೈಚಾರಿಕರು ಕೂಡ, ತಮ್ಮ ಉಗ್ರವೈಚಾರಿಕತೆ ಅನುಮಾನಗಳನ್ನು ಬಿಟ್ಟುಕೊಟ್ಟು, ಈ ಪಂಥಗಳನ್ನು

ಹೊಸ ಶ್ರದ್ಧೆ ಉಮೇದುಗಳ ಕಣ್ಣಲ್ಲಿ ನೋಡಲಾರಂಭಿಸಿದರು. ಹೀಗೆ ಶುರುವಾದ ಅಧ್ಯಯನ ಗಳು ಆಧುನಿಕ ಸಮಾಜವು ಪಡೆದುಕೊಳ್ಳಲು ಸೆಣಸುತ್ತಿರುವ ಸಾಮಾಜಿಕ ಆರ್ಥಿಕ ಸಮಾನತೆ ಯಂತಹ ಮೌಲ್ಯಗಳಿಗೆ ಹೇಗೋ ಲಗತ್ತಾದವು. ಈ ಅಧ್ಯಯನಗಳಲ್ಲಿ ತೊಡಗಿರುವ ಮೂರು ನೆಲೆಗಳೆಂದರೆ- ಸಾಂಸ್ಕೃತಿಕ ಐಡೆಂಟಿಟಿ ಹುಡುಕುವವರದು, ಸೆಕ್ಯುಲರ್ ಸಮಾಜ ಕನಸಿಸು ವವರದು ಹಾಗೂ ಆಧುನಿಕತೆ ವಿರೋಧಿಯಾದ ದೇಶೀವಾದಿಗಳದ್ದು.

ಮೊದಲನೆಯದಾಗಿ- ಸಾಮಾಜಿಕ ನ್ಯಾಯಕ್ಕಾಗಿ ಕೆಳಜಾತಿ ವರ್ಗಗಳು ಹೂಡಿರುವ ಹೋರಾಟಗಳಿಗೆ ಬೆಂಬಲವಾಗಿ ಚಾರಿತ್ರಿಕವಾದ ಒಂದು ಪರಂಪರೆ ಕಟ್ಟಿಕೊಡುವ ಅಧ್ಯಯನ ಗಳು. ಇಲ್ಲಿ ಸಾಮಾಜಿಕ ಸಮಾನತೆಯ ಸಾಧಿಸುವ ಆಶಯ ಜತೆಜತೆಗೆ, ತಮಗೂ ಒಂದು ಚರಿತ್ರೆ ಇದೆ, ಉಚ್ಚಜಾತಿಯವರಿಗಿಂತ ಭಿನ್ನವಾದ ಸಾಂಸ್ಕೃತಿಕ ವಿಶಿಷ್ಟತೆ ಇದೆ ಎಂದು ತೋರಿಸುವ ಹಂಬಲಗಳು ಇವೆ. ತಿಂತಿಣಿಮೋನಪ್ಪ, ಕಡಕೋಳದ ಮಡಿವಾಳಪ್ಪ, ಕೈವಾರದ ತಾತಯ್ಯ ಮುಂತಾದ ಸಂತರ-ಕವಿಗಳ ಹೆಸರಲ್ಲಿ ನಡೆದ ಸಂಶೋಧನ ಚಟುವಟಿಕೆ ಮತ್ತು ಸಂಘಟನೆಗಳು, ಹಿಂದುಮುಂದಾಗಿ ಅಥವಾ ಜತೆಜತೆಯಾಗಿ ನಡೆದಿವೆ ಎಂಬುದನ್ನು ಗಮನಿಸ ಬೇಕು. ಇಲ್ಲಿ ಆಯಾ ಅನುಭಾವಿಗಳ ತತ್ತ್ವಜ್ಞಾನ ಅಷ್ಟು ಮುಖ್ಯವಲ್ಲ. ಅವರು ಸಂಕೇತಗಳಾಗು ವುದು ಮುಖ್ಯ. ಅನುಭಾವಿಗಳನ್ನು ಸಾಂಸ್ಕೃತಿಕ ನಾಯಕರಾಗಿ ಪುನರ್ ವ್ಯಾಖ್ಯಾನಿಸಿಕೊಳ್ಳುವ ಈ ಕೆಲಸ ಮುಂದುವರೆದು, ಜಾತಿಯಾಧರಿತ ರಾಜಕೀಯ ಸಾಮಾಜಿಕ ಪ್ರಯೋಜನಗಳನ್ನು ಪಡೆಯುವುದಕ್ಕಾಗಿ ಸಂಘಟನೆ ಕಟ್ಟಿಕೊಳ್ಳುವುದರಲ್ಲಿ ಮುಗಿಯುವುದುಂಟು.

ಎರಡನೆಯದಾಗಿ ಅನುಭಾವಿಗಳ ಅಧ್ಯಯನಗಳನ್ನು ಬೇರೆ ಜಾತಿಗಳಿಗೆ ಸೇರಿದ, ಸೆಕ್ಯುಲರಿಸಂ ಮೌಲ್ಯಗಳನ್ನು ಒಪ್ಪುವ, ಪ್ರತಿಷ್ಠಿತ ಧರ್ಮ ಜಾತಿ ವರ್ಗಗಳ ಹೆಜಿಮೊನಿಯನ್ನು ಸೈದ್ಧಾಂತಿಕವಾಗಿ ವಿಮರ್ಶಿಸುವ ಜಾತ್ಯತೀತರು ಮಾಡುತ್ತಿರುವುದು ಇದಕ್ಕೆ ಕಾರಣ, ಈ ಅನುಭಾವಿ ಸಾಹಿತ್ಯ ಹಾಗೂ ಪಂಥದ ಆಚರಣೆಗಳಲ್ಲಿ ಕಂಡುಬರುವ ಆಶಯಗಳು, ಸಮಾಜವಾದಿ ಸಮಾಜದ ತುಡಿತಗಳಿಗೆ ಹತ್ತಿರವಾಗಿರುವುದು. ಅನುಭಾವಿಪಂಥಗಳು ಚರಿತ್ರೆಯುದ್ದಕ್ಕೂ ಸಾಂಸ್ಥಿಕ ಧರ್ಮಗಳ ಎದುರಾಳಿಯಾಗಿ ಬೆಳೆದುಬಂದಿದ್ದರಿಂದ, ಅವುಗಳ ಸಾಹಿತ್ಯದಲ್ಲಿ ಧಾರ್ಮಿಕ ಮೂಲಭೂತವಾದಕ್ಕೆ ಪ್ರತಿಯಾದ ವಿಚಾರಗಳಿವೆ. ಧರ್ಮದ ವಿಕಾರ ರೂಪಗಳಾದ ಕೋಮುವಾದವೂ ಧಾರ್ಮಿಕ ಮೂಲಭೂತವಾದವೂ ಹೆಚ್ಚಾಗಿರುವ ಸದ್ಯದ ಪರಿಸ್ಥಿತಿಯಲ್ಲಿ, ಅನುಭಾವಿಗಳ ಅಧ್ಯಯನವು ಸೆಕ್ಯುಲರಿಗರ ಪಾಲಿಗೆ, ಯುದ್ಧತಂತ್ರವಾಗು ವಷ್ಟು ಮಹತ್ವವನ್ನು ಪಡೆದುಕೊಂಡಿದೆ.

ಮೂರನೆಯದಾಗಿ ಅನುಭಾವಿಗಳ ಪ್ರಸ್ತಾಪವನ್ನು ದೇಶಿವಾದಿಗಳು ಮಾಡುತ್ತಿರುವುದು. ದೇಶೀವಾದಿಗಳ ಮುಖ್ಯ ನಿಲುವೆಂದರೆ, ಯಾಂತ್ರಿಕ ಆಧುನಿಕತೆಯನ್ನು ಕೇಡನ್ನಾಗಿ ನೋಡುವುದು. 'ಗ್ರಾಮೀಣ' 'ಜಾನಪದ' 'ಸಾಂಪ್ರದಾಯಕ' ಜಗತ್ತುಗಳನ್ನು ಚೈತನ್ಯಶೀಲ ಪರ್ಯಾಯವೆಂದು ಉದಾರವಾಗಿ ಮಂಡಿಸುವುದು. ಅನಂತಮೂರ್ತಿ ಡಿ ಆರ್ ನಾಗರಾಜ ಮುಂತಾದವರ ಮೇಲೆ ಪ್ರಭಾವ ಬೀರಿದ್ದ ಜಿ ಎನ್ ದೇವಿ, ಅಶೀಶ್‌ನಂದಿ ಅವರ ಮೂಲಕ

ಈ ಪೋಸ್ಟ್ ಮಾಡರ್ನಿಸಂ ಚಿಂತನೆಗಳು ಕನ್ನಡಕ್ಕೆ ಪ್ರವೇಶಿಸಿದವು. ಇವು ಕೂಡ ಸಮುದಾಯಗಳ ಸಾಂಸ್ಕೃತಿಕ ಐಡೆಂಟಿಟಿಯ ಪ್ರಶ್ನೆಯನ್ನು ಮುಖ್ಯ ಎಂದು ಹೇಳುತ್ತಿವೆ. ದೇಶೀಯತೆ ದೇಶೀಭಾಷೆಗಳ ದೇಶೀಸಂಸ್ಕೃತಿಗಳ ಹೆಸರಿನಲ್ಲಿ ಕನ್ನಡದಲ್ಲಿ ಕಾಣಿಸಿಕೊಂಡಿರುವ ಹೆಚ್ಚಿನ ಚಿಂತನೆಗಳಲ್ಲೂ ಇದೇ ಪಶ್ಚಿಮದ ಬಗೆಗಿನ ಆತಂಕ, ಆಧುನಿಕತೆ ಕುರಿತ ಸಂಶಯಪ್ರವೃತ್ತಿ, ಸಂಸ್ಕೃತ ಶಿಷ್ಟಪರಂಪರೆಗಳ ಬಗ್ಗೆ ಸೆಡವು, ಜಾನಪದ ಧರ್ಮಗಳ ಬಗ್ಗೆ ವಿಮರ್ಶೆಯಿಲ್ಲದ ಸಮ್ಮತಿ ಮುಂತಾದ ಲಕ್ಷಣಗಳಿವೆ.

ಈ ಮೂರು ಪ್ರಮುಖ ಮಾದರಿಗಳಲ್ಲಿ ನಡೆಯುತ್ತಿರುವ ಅಧ್ಯಯನಗಳ ಸಮಾನ ಸಮಸ್ಯೆಯೆಂದರೆ, ಈ ಅನುಭಾವಿ ಪಂಥಗಳ ಆಚರಣೆ ತಾತ್ವಿಕತೆ ಸಾಹಿತ್ಯಗಳ ಒಳಗೆ ಇರುವ ಅನೇಕ ವೈರುಧ್ಯಗಳನ್ನು ಬಿಟ್ಟುಕೊಡುವುದು. ಉದಾಹರಣೆಗೆ, ಮೊದಲ ಮಾದರಿಯ ಸಾಂಸ್ಕೃತಿಕ ಚಹರೆ ಹುಡುಕುವ ಅಧ್ಯಯನಗಳು, ಜಾತಿಭೇದ ನಿರಾಕರಿಸಿದ ಸಂತರನ್ನು ಜಾತಿ ಗುರುತಾಗಿ ಮತ್ತೆ ಬಂಧಿಸುತ್ತವೆ. ನಮಗೆ ವಿಶಿಷ್ಟ ಗುರುತುಗಳಿವೆ ಆದರೆ ಅಸಮಾನತೆ ಅಳಿಯಬೇಕು ಎಂದು ಕೇಳುತ್ತವೆ. ಅದರಲ್ಲೂ ಕೆಳಜಾತಿಯ ಸಾಂಸ್ಕೃತಿಕ ಸಂಕೇತಗಳಾಗುತ್ತಿರುವ ವಾಲ್ಮೀಕಿ ಕಾಳಿದಾಸರ ಕನಕದಾಸ ವಿಷಯದಲ್ಲಿ (ಇವರು ಅನುಭಾವಿಗಳಲ್ಲ) ಈ ಸಮಸ್ಯೆ ಇನ್ನೂ ಆಳವಾಗಿದೆ. ವಾಲ್ಮೀಕಿಯನ್ನು ಸಾಂಸ್ಕೃತಿಕ ನಾಯಕನಾಗಿಸಿಕೊಳ್ಳುವವರಿಗೆ, ಅವನು 'ರಾಮಾಯಣ'ದಂತಹ ಮಹಾಕಾವ್ಯ ಬರೆದ ಎಂದು ಅಭಿಮಾನ ಹುಟ್ಟುವುದು ಸಹಜ. ಆದರೆ ಬೇಡಜಾತಿಗೆ ಸೇರಿದ ವಾಲ್ಮೀಕಿ ಆಳುವವರ್ಗದ ಭಾಷೆಯಾದ ಸಂಸ್ಕೃತವನ್ನು ಯಾಕೆ ಆರಿಸಿಕೊಂಡದ್ದು, ಅವನ ಕಾವ್ಯನಾಯಕನು ವಾನರರನ್ನು ರಾಕ್ಷಸರನ್ನು ದಮನಮಾಡುವುದು, ಹೆಣ್ಣಾದ ಸೀತೆಯನ್ನು ತುಚ್ಛೀಕರಿಸುವುದು, ಶಂಬೂಕನ ತಲೆಗಡಿಯುವುದು - ಈ ಪ್ರಶ್ನೆಗಳನ್ನು ಏನು ಮಾಡಬೇಕು? ಕನಕನನ್ನು ಸಂಕೇತವಾಗಿ ಪ್ರತಿಷ್ಠಾಪಿಸುವಲ್ಲಿ ಕೂಡ ಇಂತಹ ಸಮಸ್ಯೆಗಳಿವೆ.

ಈ ಬೆಳವಣಿಗೆಗೆಗಳನ್ನು ನೈತಿಕ ಆಕ್ರೋಶದಿಂದ ನಿರಾಕರಿಸುವ ಸಿನಿಕತೆಕತೆಯಿಂದ ಸರಿ ತಪ್ಪುಗಳ ಸರಳ ತುದಿಗಳಿಂದ ನೋಡುವ ಅಪಾಯವಿದೆ. ಇವನ್ನು ನಮ್ಮ ಸಾಮಾಜಿಕ ವಾಸ್ತವದಲ್ಲಿ ಕ್ರಿಯಾಶೀಲವಾಗಿರುವ ಚಾರಿತ್ರಿಕ ಒತ್ತಡಗಳಲ್ಲಿಟ್ಟು ನೋಡಬೇಕಾಗಿದೆ. ಚರಿತ್ರೆಯ ಯಾವುದೇ ಸಂಗತಿಗಳನ್ನು ಸಂಕೇತಗಳನ್ನಾಗಿ ಮಾಡಿಕೊಂಡು ಅವುಗಳ ಒಳ ವೈರುಧ್ಯ ಕಳೆದು ಮಂಡಿಸುವಿಕೆಗೆ ಇನ್ನೂ ಬೇರೆಬೇರೆ ಆಯಾಮಗಳಿವೆ. ದೇಶೀವಾದಿಗಳು ಆಧುನಿಕತೆಯನ್ನು ವಿರೋಧಿಸುವುದಕ್ಕೆ ವರ್ಗದ ಪ್ರಶ್ನೆಯನ್ನು ಎತ್ತದಿರುವುದಕ್ಕೆ ಕಾರಣಗಳಿವೆ. ಆದರೆ ಹಿಂದುಳಿದ ಜಾತಿ ವರ್ಗಗಳಿಂದ ಬಂದಿರುವ ವಿದ್ವಾಂಸರೂ ತಮ್ಮ ಪ್ರಮೇಯಗಳಲ್ಲಿ ವರ್ಗವೈರುಧ್ಯದ ಪ್ರಶ್ನೆಯನ್ನು ಬಿಟ್ಟುಕೊಡುತ್ತಿರುವುದು ಸೋಜಿಗ. ಯಾರ ಬೆನ್ನಹಿಂದೆ ಅವರನ್ನು ಹುಟ್ಟಿಸಿ ಬೆಳೆಸಿ ರೂಪಿಸಿ ಆಧುನಿಕ ಸ್ಥಾನಮಾನವಿರುವ ಜಾಗಗಳಿಗೆ ಕಳಿಸಿದ ಸಮುದಾಯ, ಬಿಡುಗಡೆಗಾಗಿ ಬದಲಾವಣೆಗಾಗಿ ಇನ್ನೂ ಕಾದು ನಿಂತಿದೆಯೋ, ಆ ಸಮುದಾಯದ ತುಡಿತಗಳನ್ನು ಈ ಅಧ್ಯಯನ, ಸಂಘಟನೆ, ಸಾಂಸ್ಕೃತಿಕ ಗುರುತಿನ ಹುಡುಕಾಟಗಳು

ನಿಜವಾಗಿ ಪ್ರತಿನಿಧಿಸುತ್ತಿವೆಯೇ? ಎಷ್ಟೋ ಸಲ ನಾವು ಅನುಭಾವಿ ಸಾಹಿತ್ಯ ಹಾಡುವ ಕಲೆಗಾರರ ಕಲೆಯನ್ನು ಮೆಚ್ಚುತ್ತೇವೆ. ಅವರ ಅವಸ್ಥೆಯನ್ನು ಗಮನಿಸುವುದಿಲ್ಲ. ಅವರಲ್ಲಿರುವ ಕಲೆ ಉಳಿಯಬೇಕು ಎಂದು ಬಯಸುತ್ತೇವೆ. ಆದರೆ ಆ 'ಕಲೆ' ಅವರ ಆರ್ಥಿಕ ಸಾಮಾಜಿಕ ಹಿಂದುಳಿದಿರುವಿಕೆಯ ಅವಿನಾಭಾಗವಾಗೇ ಉಳಿದಿದೆ ಎಂಬುದು ಗುರುತಿಸುವುದಿಲ್ಲ. ಸಮಾನತೆ ಹೋರಾಟದ ಆಶಯಗಳುಳ್ಳ ಮಂಟೇಸ್ವಾಮಿ ಕಥೆಯನ್ನು ಹಾಡುವ ನೀಲಗಾರರು ಆಧ್ಯಾತ್ಮಿಕ ಅರ್ಥದಲ್ಲಲ್ಲ, ಸಾಮಾಜಿಕ ಅರ್ಥದಲ್ಲೂ ಭಿಕ್ಷುಕರಂತಿದ್ದಾರೆ. ಅವರ ಸಾಹಿತ್ಯದಲ್ಲಿ ಬಡತನದ ವೈಭವೀಕರಣ ಬರುತ್ತದೆ. ಇದನ್ನು ಹೇಗೆ ಅರ್ಥೈಸುವುದು? ಆಧುನಿಕ ಜೀವನದ ಯಾವ ಸೌಲಭ್ಯವನ್ನೂ ಕಾಣದ, ಕಾಣಲು ಹಾತೊರೆಯುವ ಗಾಯಕರು ಹಾಡುವ ಸಾಹಿತ್ಯವನ್ನು 'ವಿಕಾರವಾದ' ಆಧುನಿಕತೆಗೆ ಪರ್ಯಾಯ ಎಂದು ವ್ಯಾಖ್ಯಾನಿಸುವುದೇ ಒಂದು ವ್ಯಂಗ್ಯ. ಸಂತರ ಜಾತ್ರೆ ಉರುಸುಗಳಲ್ಲಿ ಜನ ತಮ್ಮ ಜಾತಿಧರ್ಮಗಳನ್ನು ಮೀರಿ ಸೇರುವುದು, ಸೆಕ್ಯುಲರ್ ಚಿಂತನೆಗೆ ಕೋಮುಸಾಮರಸ್ಯವೆಂದು ಹಿತವಾಗಿ ತೋರುತ್ತದೆ. ಆದರೆ, ಈ ಆಚರಣೆಗಳಲ್ಲಿ ದಲಿತರನ್ನು ಸ್ತ್ರೀಯರನ್ನು ಕುರಿತು ಪಕ್ಷಪಾತವಿರುವುದು ಅಥವಾ ಇಲ್ಲಿ ಊಳಿಗಮಾನ್ಯ ವ್ಯವಸ್ಥೆಯು ನಿರಾತಂಕವಾಗಿ ಮುಂದುವರೆಯುವುದು ಚರ್ಚೆಗೆ ಬರುವುದಿಲ್ಲ. ಪಠ್ಯಗಳಲ್ಲಿ ಶಿಷ್ಟ ಸಾಹಿತ್ಯಕ್ಕಿಂತ, ಆಚರಣೆಗಳಲ್ಲಿ ವೈದಿಕ ಆಚರಣೆಗಳಿಗಿಂತ ಭಿನ್ನವಾದುದು ಇದೆ. ಇವು ಚರಿತ್ರೆಯಲ್ಲಿ ನಿರಾಕರಣೆಗೆ ಒಳಗಾಗಿದ್ದವು ಎಂಬುದೇ ವಿಮರ್ಶೆಯಿಲ್ಲದ ಸಂಭ್ರಮಕ್ಕೆ ಕಾರಣವಾಗಿದೆಯೇ? ಸಾಹಿತ್ಯವನ್ನು ಸರಳವಾದ ಪ್ರಗತಿಪರ ಆಶಯಗಳಲ್ಲಿ ಗ್ರಹಿಸುವ ಈ ಅಧ್ಯಯನಗಳು ಪಠ್ಯವನ್ನು ಹುಶಾರಾಗಿ ಓದುವುದನ್ನೇ ಬಿಟ್ಟುಕೊಟ್ಟಿವೆಯೆ?

ಅನುಭಾವಿ ಪಂಥಗಳ ಅಧ್ಯಯನಗಳಲ್ಲಿ ಇಂತಹ ವೈರುಧ್ಯಗಳನ್ನು ಬಿಟ್ಟುಕೊಡುವುದು ಚಾರಿತ್ರಿಕದೋಷ ಮಾತ್ರವಲ್ಲ. ಗಂಭೀರವಾದ ಸೈದ್ಧಾಂತಿಕ ರಾಜಕೀಯ ಸಮಸ್ಯೆ ಕೂಡ. ಈ ದೃಷ್ಟಿಕೋನವು ವಾಸ್ತವವನ್ನು ಸರಳವಾದ ಪರಸ್ಪರ ವಿರುದ್ಧವಾದ ಎರಡು ಹೋಳುಗಳನ್ನಾಗಿ ಮಾಡಿಕೊಂಡು ನೋಡುತ್ತದೆ. ಮಧ್ಯಮವರ್ಗಕ್ಕೆ ಏರಿದ ವ್ಯಕ್ತಿಗಳ ಇಚ್ಛೆಗಳೇ ಅವರ ಸಮುದಾಯದ ಇಚ್ಛೆಯೆಂದು ಜನರಲೈಸ್ ಮಾಡುತ್ತದೆ. ಮುಖ್ಯವಾಗಿ ಎಲ್ಲ ದಮನಿತರ ಸಮಾನ ಶತ್ರುವಾಗುತ್ತಿರುವ ಅಂತಾರಾಷ್ಟ್ರೀಯ ರಾಜಕೀಯ ಆರ್ಥಿಕ ವಿದ್ಯಮಾನಗಳನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ.

ಪರಿವಿಡಿ

೧. ಸೊಲ್ಲು

ಅನುಭಾವಿಗಳ ಅಧ್ಯಯನದಲ್ಲಿ ತೊಡಕು
ಸಂಪಾದಕ

೨. ಲೇಖನಗಳು

ವಿಸ್ಮೃತಿತತ್ವ ಮತ್ತು ದೇಸಿಸತ್ವ ೧
ಹಿ ಚಿ ಬೋರಲಿಂಗಯ್ಯ

'ಹಾಲುಮತ ಪುರಾಣ'ದ ಬೀರಪ್ಪ ೧೪
ವೀರಣ್ಣ ದಂಡೆ

'ರಾಮಧಾನ್ಯ ಚರಿತೆ'ಯ ರೂಪಕ ವಿವೇಕ ೨೩
ಎಸ್ ಜಿ ಸಿದ್ಧರಾಮಯ್ಯ

'ನಿಸರ್ಗ'ದ ಮರುಓದು ೩೪
ಬಾಳಾಸಾಹೇಬ ಲೋಕಾಪುರ

ಕಂಪ್ಯೂಟರ್ ಮೂಲಕ ಹಸ್ತಪ್ರತಿಗಳ ಪುನಾರಚನೆ ಮತ್ತು ಪ್ರಸರಣ ೩೮
ವೀರೇಶ ಬಡಿಗೇರ

೩. ಹಿಂದಣ ಹೆಜ್ಜೆ

ಸಾಹಿತ್ಯ ಮತ್ತು ಕಾಮಪ್ರಚೋದನೆ ೪೩
ಅನಕೃ

೪. ಕನ್ನಡಿ

'ಸ್ಪೀಕಿಂಗ್ ಆಫ್ ಶಿವ'ದ ಪ್ರಸ್ತಾವನೆ ೬೧
ಮೂಲ: ಎ ಕೆ ರಾಮಾನುಜನ್
ಅನು: ಚಂದ್ರಶೇಖರ ನಂಗಲಿ

೫. ಹೊಳಹು

‘ನಿಶಾನೆ’ ಬಾರಿಸುವುದು ೯೭
ಬಿ ಎಂ ಪುಟ್ಟಯ್ಯ

ಬೆಳಗಾವಿಯ ಬಹುಭಾಷಿಕತೆ ೯೯
ರವಿ ಉಪಾಧ್ಯ

ಮರಾಠಿಯಲ್ಲಿ ದೀಪಾವಳಿ ವಿಶೇಷಾಂಕಗಳು ೧೦೧
ಸರಜೂ ಕಾಟ್ಕರ್

೬. ಪರಿಚಯ

ಎಸ್ ಶೆಟ್ಟರ ಅವರ ‘ಇನ್‌ವೈಟಿಂಗ್ ಡೆತ್’ ೧೦೫
ಸದಾನಂದ ಕನವಳ್ಳಿ

೭. ಎಲೆಮರೆ

ವಿರೂಪಾಕ್ಷಪ್ಪ ಅಬ್ಬಿಗೇರಿ ೧೦೯
ನಾಗಭೂಷಣ ಪಾಟೀಲ

೮. ಮುಖಾಮುಖಿ

ಎಸ್ ಶೆಟ್ಟರ್ ಅವರೊಂದಿಗೆ ೧೧೧
ಸಂಪಾದಕ

೯. ಆಕರಸೂಚಿ

‘ವಡ್ಡಾರಾಧನೆ’ ಅಧ್ಯಯನಗಳು ೧೩೯
ಅಮರೇಶ ನುಗಡೋಣಿ

೧೦. ಈ ಸಂಚಿಕೆ ಲೇಖಕರು ೧೪೬

ವಿಸ್ಮೃತಿತತ್ವ ಮತ್ತು ದೇಸಿಸತ್ವ

● ಹಿ.ಚಿ. ಬೋರಲಿಂಗಯ್ಯ

ವಸಾಹತುಶಾಹಿಯ ಬಗ್ಗೆ ಮಾತನಾಡಲಿಲ್ಲ ಎಂದರೆ ಅದು ಅಧ್ಯಯನವೇ ಅಲ್ಲ ಎಂಬಷ್ಟರ ಮಟ್ಟಿಗೆ ಆ ಪರಿಭಾಷೆ ಈಗ ಕ್ಲೀಷೆಯಾಗಿಬಿಟ್ಟಿದೆ. ೨೦ನೇ ಶತಮಾನದ ಇಡೀ ಯುಗ ಸ್ವಾತಂತ್ರ್ಯ ಹೋರಾಟ ಮತ್ತು ಹಾಗೆ ಪಡೆದುಕೊಂಡ ಸ್ವಾತಂತ್ರ್ಯದ ಮೇಲೆ ಆಗಿರುವ ವಸಾಹತುಶಾಹಿ ಪ್ರಭಾವದ ಚರ್ಚೆಯೇ ಆಗಿದೆ. ಅಂದರೆ ವಸಾಹತುಶಾಹಿ ಸೃಷ್ಟಿಸಿದ ಅನೇಕ ವ್ಯವಸ್ಥೆಗಳಿಂದ ಇನ್ನೂ ಹೊರಬರಲಾಗಿಲ್ಲ ಎಂಬುದೇ ಆ ಚರ್ಚೆಯ ತವಕ.

ಭಾರತದಲ್ಲಿ ಅಕ್ಷರಜ್ಞಾನ ಎಂಬುದು ಎಲ್ಲರಿಗೂ ಇರಲಿಲ್ಲ. ಬೇಕೆಂದವರು ಪಡೆದು ಕೊಳ್ಳುವ ಸ್ವಾತಂತ್ರ್ಯವೂ ಇರಲಿಲ್ಲ ಎಂಬುದು ಗೊತ್ತಿರುವ ವಿಚಾರವೇ ಆಗಿದೆ. ಕಳೆದ ಶತಮಾನದಲ್ಲಷ್ಟೇ ಅಂಥ ಭಾಗ್ಯ ಶೂದ್ರಾತಿಶೂದ್ರರಿಗೆ ಲಭ್ಯವಾಯಿತು. ಹಾಗೆ ಲಭ್ಯವಾದ ಶಿಕ್ಷಣದ ಬೆಳಕಿನಲ್ಲಿ ನಮ್ಮ ಹಿಂದಿನದನ್ನು ನೋಡಿಕೊಳ್ಳಲು ತೊಡಗಿದಾಗ ತಟ್ಟನೆ ನಮಗೆ ಗೋಚರಿಸುತ್ತಿದ್ದದು ಬ್ರಿಟಿಶ್ ಅಧಿಕಾರಶಾಹಿ ಮಾತ್ರ. ಅದು ಸ್ವಾತಂತ್ರ್ಯ ಹೋರಾಟ ಸಂದರ್ಭದ ತುರ್ತು ಕೂಡ ಆಗಿತ್ತು. ಆದ್ದರಿಂದಲೇ ಇಡೀ ಭಾರತ ಎಂದರೆ ಒಂದು, ನಾವೆಲ್ಲ ಭಾರತೀಯರು ಎಂಬ ಏಕೀಭಾವ ಎಲ್ಲರಲ್ಲಿಯೂ ಆವರಿಸುತ್ತಿತ್ತು. ಆದರೆ ರಾಜಕೀಯವಾಗಿ ಸತ್ಯವಾದ್ದೆಲ್ಲ ಸಾಂಸ್ಕೃತಿಕವಾಗಿಯೂ ಸತ್ಯವಾಗಿರಬೇಕಾಗಿಲ್ಲ.

ಇಡೀ ಭಾರತಕ್ಕೆ 'ಒಂದು ಸಂಸ್ಕೃತಿ' ಇದೆ, ಅದೇ 'ಭಾರತೀಯ ಸಂಸ್ಕೃತಿ' ಎಂಬ ಏಕಮುಖಿ ಚಿಂತನೆಯನ್ನು ಈಗ ಸುಲಭವಾಗಿ ಮಂಡಿಸುವಂತಿಲ್ಲ. ಭಾರತದಂಥ ದೇಶ ಬಹುಮುಖೀ ಸಂಸ್ಕೃತಿಯನ್ನು ಪ್ರತಿನಿಧಿಸುವ ಒಂದು ಸಂಕೀರ್ಣ ಭೂ ಪ್ರದೇಶವಾಗಿದ್ದು ಕೆಲವರು ಊಹಿಸುವಂಥ ಒಂದೇ ಸಂಸ್ಕೃತಿ ಇರಲು ಸಾಧ್ಯವಿಲ್ಲ ಎಂಬ ತಿಳುವಳಿಕೆ ಈಗ ಗಟ್ಟಿಗೊಳ್ಳುತ್ತಿದೆ. ಪ್ರತಿಯೊಂದು ನೆಲದ ವಿವಿಧ ಭಾಷೆಗಳು, ಅಲ್ಲಿನ ಜನ, ಅವರ ಆಚಾರ ವಿಚಾರಗಳು, ರೂಢಿಸಿಕೊಂಡ ಮೌಲ್ಯಗಳು, ಅವರವರ ಒಟ್ಟಾರೆ ಲೋಕದೃಷ್ಟಿ ಇತ್ಯಾದಿ ಗಳನ್ನು ಅವಲೋಕಿಸಿದಾಗ ಸಾವಿರಾರು ಸಂಸ್ಕೃತಿ ವಿಶೇಷಗಳು ಕಣ್ಣ ಮುಂದೆ ತಾಕಲಾಡಿ ನಮ್ಮಲ್ಲಿ ದಿಗ್ಭ್ರಮೆ ಹುಟ್ಟಿಸುತ್ತವೆ. ಸ್ಥಳೀಯವಾಗಿ, ನೆಲದ ಗುಣ ಪಡೆದ, ಆಯಾ ಜನತೆಯ ಉಸಿರೊಡನೆ ಬೆಳದುಬಂದ ಈ ಸಾಂಸ್ಕೃತಿಕ ವಿಶೇಷಗಳು ಭಾರತೀಯ ಸಂಸ್ಕೃತಿಯ ಜೀವಕೋಶಗಳೇ ಹೊರತು 'ಭಾರತಕ್ಕೆ ಒಂದೇ ಸಂಸ್ಕೃತಿ' ಎಂಬುದು ಹುಸಿಯ ಕಂತೆ.

ಈ ಹಿನ್ನೆಲೆಯನ್ನು ಇಟ್ಟುಕೊಂಡೇ ಭಾರತದ ಮೇಲೆ ನಡೆದ ವಸಾಹತು 'ಆಕ್ರಮಣಗಳನ್ನು' ಚರ್ಚಿಸಬಹುದು. ಇಲ್ಲಿ ಬ್ರಿಟಿಶರು ಮಾತ್ರ ಈ ದೇಶದ ಮೇಲೆ ಆಕ್ರಮಣ ಮಾಡಿಲ್ಲ ಎಂಬುದನ್ನು ಸ್ಪಷ್ಟಪಡಿಸಲು ಬೇಕೆಂದೇ 'ಆಕ್ರಮಣಗಳು' ಎಂಬ ಬಹುವಚನ ಪ್ರಯೋಗ ಮಾಡಿದ್ದೇನೆ. ಬ್ರಿಟಿಶರಿಗಿಂತ ಮೊದಲು ಅನೇಕ ಯೂರೋಪಿಯನ್ನರು, ಅದಕ್ಕಿಂತ ಹಿಂದೆ ಮೊಗಲರು, ಅದಕ್ಕಿಂತ ಹಿಂದೆ ಆರ್ಯರು, ಅದಕ್ಕಿಂತ ಹಿಂದೆ ದ್ರಾವಿಡರು.

ನಮ್ಮೆಲ್ಲ ಪುರಾತನ ದೌರ್ಬಲ್ಯಗಳನ್ನು ಬ್ರಿಟಿಶ್ ವಸಾಹತುಶಾಹಿ ಮೇಲೆ ಹಾಕುತ್ತಿರುವ ಕೆಲವರ ವಾದಗಳನ್ನು ಕಂಡಾಗ ವಸ್ತುನಿಷ್ಠವಾಗಿ ನಮ್ಮ ಬೆನ್ನನ್ನು ನಾವೇ ಪರಿಶೀಲಿಸಿಕೊಳ್ಳಬೇಕಾಗಿದೆ. ಇದರಿಂದ ರಾಜಕೀಯವಾಗಿ ನಾವೆಲ್ಲ ಒಂದೇ ದೇಶದವರಾದರೂ ಸಾಂಸ್ಕೃತಿಕವಾಗಿ ವಿಭಿನ್ನ ಜೀವನಶೈಲಿ ಇಟ್ಟುಕೊಂಡವರು. ಈ ಸತ್ಯದ ಪಾತಳಿಯ ಮೇಲೆಯೇ ವಸಾಹತುಶಾಹಿ ಕುರಿತ ಚಿಂತನೆ ಮಾಡಬಹುದು.

ನನ್ನ ದೃಷ್ಟಿಯಲ್ಲಿ ಬಹುಮುಖ್ಯವಾಗಿ ನಾವು ಪಡೆದುಕೊಂಡದ್ದು ಮತ್ತು ಕಳೆದುಕೊಂಡದ್ದು ಎರಡು ರೀತಿಯ ವಸಾಹತುಶಾಹಿಗಳ ಮೂಲಕ. ಇವತ್ತಿನ ಭಾರತವನ್ನು ಪ್ರಭಾವಿಸುವಲ್ಲಿ, ರೂಪಿಸುವಲ್ಲಿ ಹಾಗೂ ವಿರೂಪಗೊಳಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ ಆ ಎರಡು ಯಾವುವೆಂದರೆ-

ಒಂದು-ವೈದಿಕ ವಸಾಹತುಶಾಹಿ, ಎರಡು-ಬ್ರಿಟಿಶ್ ಅಥವಾ ಪಾಶ್ಚಾತ್ಯ ವಸಾಹತುಶಾಹಿ.

ಇತಿಹಾಸದ ಹಲವು ಹಂತಗಳಲ್ಲಿ ಘಟಿಸಿದ ವೈದಿಕೀಕರಣದ ಮೂಲಕ ಇಲ್ಲಿನ ಸ್ಥಳೀಯ ಸಮುದಾಯಗಳ ಸಂಸ್ಕೃತಿ ವಿಶೇಷಗಳು, ವಿವಿಧ ಲೋಕದೃಷ್ಟಿಗಳು ಮಣ್ಣು ಮುಸುಕಿದ ವಜ್ರದಂತೆ ಅಡಗಿರುವುದನ್ನು ಈ ಮರೆವುಗಾರರಿಗೆ ತೋರಿಸಿಕೊಡಲು ಸಾಧ್ಯವಿಲ್ಲವೆ? ವಿದೇಶಿ ಸಿದ್ಧಾಂತಗಳ ನೆರಳಿನಲ್ಲಿ ಅಥವಾ ಬ್ರಿಟಿಶ್ ವಸಾಹತುಶಾಹಿ ಸೃಷ್ಟಿಸಿದ ಭ್ರಮೆಗಳಲ್ಲಿ ನರಳಿ ನಮ್ಮದನ್ನು ಅರ್ಥಮಾಡಿಕೊಳ್ಳಲು ವಿಫಲರಾಗಿರುವ ಇಂಗ್ಲಿಶ್ ಮೋಹಿಗಳಿಗೆ ಕನ್ನಡದ ದೇಶೀ ಸತ್ವವನ್ನು ಅರ್ಥಮಾಡಿಸಲು ಸಾಧ್ಯವಿಲ್ಲವೆ? ಇವು ಕಾಡುತ್ತಿರುವ ಎರಡು ಪ್ರಶ್ನೆಗಳು. ಒಂದು ಕಡೆಯಿಂದ ಇಂಗ್ಲಿಶ್ ವಿದ್ವಾಂಸರು ಮತ್ತು ಇಂಗ್ಲಿಶ್ ಮೋಹಿಗಳ ದಾಳಿ, ಮತ್ತೊಂದು ಕಡೆಯಿಂದ ವೈದಿಕಶಾಹಿಗಳ ವೈಭವೀಕೃತ ಭ್ರಮಾತ್ಮೀಕರಣ-ಇವುಗಳಿಂದಾವರಿಸಿದ ವಿಸ್ಮೃತಿಗಳಿಂದ ಬಿಡುಗಡೆಗೊಳ್ಳಬೇಕಾದ ತುರ್ತು- ಈ ಗಂಭೀರ ವಿಷಯಗಳ ಬಗ್ಗೆ ಇನ್ನಷ್ಟು ಚರ್ಚೆ ಅಗತ್ಯ ಎಂಬುದು ನನ್ನ ಅನಿಸಿಕೆ.

ಯಾವುದು ವಿಸ್ಮೃತಿ?

ಸಮಕಾಲೀನ ಸಂಸ್ಕೃತಿ ಚರ್ಚೆಗೆ ಅಪಾರ ಕೊಡುಗೆ ನೀಡಿರುವ ಹೆಗ್ಗೋಡಿನ ಅಕ್ಷರ ಪ್ರಕಾಶನದವರು, ಡಿ. ಆರ್. ನಾಗರಾಜ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಹೊರತಂದಿರುವ 'ಅಕ್ಷರ ಚಿಂತನ ಮಾಲೆ'ಯ ಗ್ರಂಥಗಳ ಕೆಲವು ವಿವರಗಳನ್ನು ಬಳಸಿಕೊಂಡು ನನ್ನ ವಾದ ಇಡಬಯಸುತ್ತೇನೆ. ಈ ಮಾಲೆಯನ್ನು ಕುರಿತ ತಮ್ಮ ಆಶಯ ಬರಹಗಳಲ್ಲಿ ಡಿ.ಆರ್. ಹೀಗೆ ಹೇಳುತ್ತಾರೆ.

"ಸಮಾಜಗಳಿಗೆ ವಿಚಿತ್ರ ರೀತಿಯ ಮರೆವು ಆವರಿಸುತ್ತದೆ. ಅದರಲ್ಲೂ ತಾನು ಚಿಂತಿಸುತ್ತಿದ್ದ, ಪ್ರತಿಕ್ರಿಯಿಸುತ್ತಿದ್ದ, ಭಾವಿಸುತ್ತಿದ್ದ ಕ್ರಮಗಳು ಮರೆತು ಹೋಗುವುದು ದೊಡ್ಡ ದುರಂತವೇ ಸರಿ. ವಸಾಹತುಶಾಹಿ ನಂತರದ ಭಾರತೀಯ ಸಮಾಜಕ್ಕೆ ಈ ರೀತಿಯ ವಿಸ್ಮೃತಿ ಈಗ ಆವರಿಸಿಬಿಟ್ಟಿದೆ. ನಮ್ಮ ಸಮಾಜದೊಳಗೆ ಅಂತರ್ಗತವಾಗಿದ್ದ ವೈವಿಧ್ಯಮಯ ವೈಚಾರಿಕ ರಚನೆಗಳು ಮರೆತು ಹೋಗಿರುವುದರಿಂದ ಈ ಲಭ್ಯವಿರುವ ಚಿಂತನಕ್ರಮಗಳು ಪೂರ್ಣವಾಗಿ ಪಶ್ಚಿಮಮುಖಿಯಾಗಿ ಬಿಟ್ಟಿದೆ. ನಮ್ಮನ್ನು ಕಾಡುತ್ತಿರುವ ಬಿಕ್ಕಟ್ಟುಗಳನ್ನು ಅವುಗಳ ಮೂಲಕ ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಕ್ಷರ ಚಿಂತನದ ಪ್ರಮುಖ ಗುರಿ ಈ ವೈಚಾರಿಕ ವಿಸ್ಮೃತಿಯನ್ನು ದಾಟುವುದೇ ಆಗಿದೆ.

ಕನ್ನಡಿಗಳೋ ದೀಪಗಳೋ ಆಗದ ಚಿಂತನೆಗಳು ನಿರುಪಯುಕ್ತ. ಈಗ ನಮ್ಮನ್ನು ಕಿತ್ತು ತಿನ್ನುತ್ತಿರುವ ಹಲವಾರು ಸಮಸ್ಯೆಗಳನ್ನು ಎದುರಿಸಲು ಉಪಯುಕ್ತವಾಗುವಂತಹ ಪರ್ಯಾಯ ಚಿಂತನ ಕ್ರಮಗಳನ್ನು 'ಅಕ್ಷರ ಚಿಂತನ' ವಿಮರ್ಶಾತ್ಮಕವಾಗಿ ಮಂಡಿಸುತ್ತದೆ. ಈಗ ಪ್ರತಿಷ್ಠಿತವಾಗಿರುವ, ಬಲಿಷ್ಠವಾಗಿರುವ ಚಿಂತನಕ್ರಮಗಳಿಗಿಂತ ಬೇರೆಯದನ್ನು ಹುಡುಕುವ ಈ ಪುಸ್ತಕ ಮಾಲೆ, ಈಗ ಪಶ್ಚಿಮದಲ್ಲೂ ಭಿನ್ನಮತೀಯವಾಗಿರುವಂಥದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ವ್ಯಕ್ತಿಗಳು, ಚಳುವಳಿಗಳು, ಆಲೋಚನಾ ಪ್ರಸ್ಥಾನಗಳು, ಬಿಡಿಕೃತಿಗಳು ಹಾಗೂ ಅನುವಾದಗಳು, ಸ್ವತಂತ್ರ ಕೃತಿಗಳು, ವ್ಯಾಖ್ಯಾನಗಳು ಹೀಗೆ ವಿವಿಧ ಹರಹಿನಲ್ಲಿ ಈ ಪುಸ್ತಕಮಾಲೆ ಬರಲಿದೆ. ಕನ್ನಡದ ಮೂಲಕವೇ ಸಮಸ್ತ ವಿಶ್ವವನ್ನು ಕಂಡುಕೊಳ್ಳುವ ಮಹತ್ವಾಕಾಂಕ್ಷಿ ಪ್ರಯತ್ನ ಇದು".

ಡಿ.ಆರ್. ಅವರ ಈ ಆಶಯದ ಮಾತುಗಳಲ್ಲಿ ಕೇವಲ ಪಶ್ಚಿಮದಿಂದ ಉಂಟಾದ ವಿಸ್ಮೃತಿಯ ಬಗೆಗಿನ ಕಾಳಜಿ ಮತ್ತು ದುಗುಡ ಇದೆಯೇ ಹೊರತು ಭಾರತದಲ್ಲಿಯೇ ಉಂಟುಮಾಡಿದ ವ್ಯವಸ್ಥಿತ ವಿಸ್ಮೃತಿಯ ಬಗ್ಗೆ ಪ್ರಸ್ತಾಪವೇ ಇಲ್ಲ. ಈ ಇನ್ನೂರು ವರ್ಷಗಳ ಅವಧಿಯಲ್ಲಿ ಘಟಿಸಿದ ಅನೇಕ ವಿದ್ಯಮಾನಗಳಿಂದ ಉಂಟಾದ ವಿಸ್ಮೃತಿ ಅವರಿಗೆ ತುಂಬ ಮುಖ್ಯವಾಗಿ ಕಾಣುತ್ತಿದೆ. ಕಳೆದ ಎರಡು ಸಾವಿರ ವರ್ಷಗಳಿಂದ ಸತತವಾಗಿ ಆವರಿಸುತ್ತಾ ಬಂದ ವಿಸ್ಮೃತಿಯ ಬಗ್ಗೆ ಡಿ.ಆರ್. ಏನೂ ಹೇಳದಿರುವುದು ಆಶ್ಚರ್ಯಕರ ಸಂಗತಿಯೇ ಆಗಿದೆ.

ಹಾಗೆಯೇ ಇದೇ ಚಿಂತನ ಮಾಲೆಯಲ್ಲಿ ಪ್ರಕಟವಾದ 'ದಾವ್ ದ ಜಿಂಗ್ '(ಪಥಧರ್ಮ ಸೂತ್ರ) ಗ್ರಂಥದ ಪ್ರಸ್ತಾವನೆಯಲ್ಲಿ ಪ್ರಸಿದ್ಧ ಲೇಖಕ ಯು.ಆರ್. ಅನಂತಮೂರ್ತಿ ಅವರು ಹೇಳುವ ಮಾತುಗಳು ಹಾಗೂ ಭಾರತೀಯ ಸಂಸ್ಕೃತಿಯ ಬಗ್ಗೆ ಅವರು ತೋರುವ ಅತೀವ ಕಾಳಜಿ ಕೂಡ ಇಲ್ಲಿ ವಿಚಾರಾರ್ಹ.

"ಐರೋಪ್ಯ ವಿದ್ವಾಂಸರನ್ನೆಲ್ಲ ಓದುತ್ತಿದ್ದಂತೆ ನನಗೊಂದು ವಿಷಯ ಮನವರಿಕೆ ಯಾಯಿತು. ಅವರು ಬಹುಶ್ರುತರು, ಉತ್ತಮ ಶೋಧಕರು,ಆದರೆ ಐರೋಪ್ಯ ಮನಸ್ಸಿಗೆ ಏಷ್ಯಾದ ಚಿಂತನಕ್ರಮ ಅರ್ಥವಾಗುವುದಿಲ್ಲ. ಭಾವುಕವಾಗಿ ಅವರು ಒಲಿದಾಗಲೂ

ಶಾಸ್ತ್ರೀಯವಾಗಿ ಅವರು ಒಲಿಯಲಾರರು. ಅವರು ಪಾಶ್ಚಾತ್ಯದ ಅನುಭವವನ್ನು ಪರಿಶುದ್ಧ ಸ್ಥಿತಿಯಲ್ಲಿ ಕಾಣಲು ಆಸೆಪಡುತ್ತಾರೆ. ಒಂದೋ ಮನುಷ್ಯ ಅನುಭಾವಿಯಾಗಿ ಅಲೌಕಿಕನಾಗಿರಬೇಕು; ಅಥವಾ ಅವನು ಲೌಕಿಕವಾಗಿ ಭೌತ ಪ್ರಪಂಚದ ಪ್ರಯೋಜನಕಾರಿಯಾದ ವಿಷಯಗಳಲ್ಲಿ ಆಸಕ್ತನಾಗಿರಬೇಕು. ಇದು ಅವರ ಗ್ರಹಿಕೆ. ತಮ್ಮ ಹಿರಿಮೆಯನ್ನು, ಪ್ರಪಂಚದ ಮೇಲಿನ ತಮ್ಮ ಅಧಿಕಾರವನ್ನು ಲೋಕನಿಷ್ಠ ತಾಂತ್ರಿಕತೆಯಿಂದ ಸ್ಥಾಪಿಸಿಕೊಂಡ ಐರೋಪ್ಯರಿಗೆ ಪಾಶ್ಚಾತ್ಯದ ಅನುಭಾವ ತಮ್ಮ ಜೀವನಕ್ರಮವಾದ ಲೋಪದಿಂದಾಗಿ ಪ್ರಿಯವಾದ್ದು. ತಮ್ಮಲ್ಲಿ ಇಲ್ಲದ್ದನ್ನು ತಮ್ಮದಲ್ಲದ್ದನ್ನು ಪರರಲ್ಲಿ ಕಾಣುವುದಾಗಲೀ, ಅದನ್ನು ಮೆಚ್ಚುವುದಾಗಲೀ ಅವರ ಲೌಕಿಕ ಪಾರಮ್ಯವನ್ನು ಅಲುಗಾಡಿಸುವಂಥ ಭಾವನೆಯಲ್ಲ. ತಮ್ಮ ಕೊರತೆಯನ್ನು ಬೌದ್ಧಿಕವಾಗಿ ಹೀಗೆ ತುಂಬಿಕೊಳ್ಳುವುದೂ ಅವರಿಗೆ ಗೊತ್ತಿಲ್ಲದಂತೆಯೇ ಅವರ ಲೌಕಿಕ ಪಾರಮ್ಯವನ್ನು ಬೆಳೆಸುವಂಥದೇ. ಅದ್ದರಿಂದ ಪಾಶ್ಚಾತ್ಯದಲ್ಲಿ ತಮ್ಮದೇ ಆದ ರೀತಿಯಲ್ಲಿ ಋಷಿಗಳು ಈ ಲೋಕದ ಬಗ್ಗೆಯೂ ತಲೆಕೆಡಿಸಿಕೊಂಡ ಚಿಂತನಶೀಲರು ಇದ್ದಾರೆ ಎಂಬುದು ಅವರನ್ನು ಗೊಂದಲಕ್ಕೀಡು ಮಾಡುತ್ತದೆ. ವಾಸ್ತವಿಕ ಪ್ರಪಂಚವನ್ನು ಅವರು ತಾಂತ್ರಿಕ ಜ್ಞಾನದಲ್ಲಿ ಅರಿತಂತೆಯೇ, ಪಾಶ್ಚಾತ್ಯದಲ್ಲೂ ಅನುಭಾವಿಗಳು ಅರಿಯಬಲ್ಲವರಾಗಿದ್ದರು ಎಂಬುದಾಗಲೀ, ಇಹಕ್ಕು-ಪರಕ್ಕು ಒಟ್ಟಾಗಿ ಸಲ್ಲುವ ಸಮಗ್ರ ಪವಿತ್ರ ಕಲ್ಪನೆ ಐರೋಪ್ಯ ವೈಜ್ಞಾನಿಕ ಚಿಂತನಾಕ್ರಮಕ್ಕೆ ಲೌಕಿಕದೃಷ್ಟಿಯಿಂದಲೇ ಸವಾಲಾಗಬಲ್ಲುದೆಂಬುದಾಗಲೀ ಅವರಿಗೆ ಮನದಟ್ಟಾಗುವುದು ಕಷ್ಟ. ಮನದಟ್ಟಾದರೆ ಅವರು ಈಗಿರುವಂತೆ ಇರಲಾರರು. ಅದು ಭಯ ಹುಟ್ಟಿಸುವ ಸಂಗತಿ.

ಪಾಶ್ಚಾತ್ಯ ಪ್ರಭಾವದಿಂದ ಉಂಟಾದ ವಿಸ್ಮೃತಿಯನ್ನು ತೊಡೆಯಬೇಕೆಂಬ ಅನಂತಮೂರ್ತಿಯವರ ಚಿಂತನೆ ಸರಿಯೇ. ಆದರೆ ಸಾವಿರಾರು ವರ್ಷಗಳ ಹಿಂದೆಯೇ ನಡೆದ ರಾಮನ ಪ್ರಯಾಣವೆಂಬ ರಾಜ್ಯ ವಿಸ್ತರಣೆ ಮತ್ತು ಆ ಮೂಲಕ ವಿಸ್ತರಿಸಲಾದ ವೈದಿಕ ತತ್ತ್ವಾನುಷ್ಠಾನ ವೃತ್ತಾಂತದಿಂದ ಇವತ್ತಿನ ರಾಮಜನ್ಮ ಭೂಮಿಯ ಪ್ರಸಂಗದವರೆಗೆ ಸ್ಥಳೀಯ ಸಂಸ್ಕೃತಿಗಳ ಮತ್ತು ಮೂಲನಿವಾಸಿ ಜೀವನಕ್ರಮದ ಮೇಲಾದ ಬ್ರಹ್ಮಾತ್ಮೀಕರಣದ ವಿಸ್ಮೃತಿಗೆ ಯಾರು ಹೊಣೆ? ಮತ್ತು ಅದರ ಬಿಡುಗಡೆ ಹೇಗೆ?

ಅನಂತಮೂರ್ತಿಯವರು ಪಶ್ಚಿಮದ ಪ್ರಭಾವದಿಂದಾದ ವಿಸ್ಮೃತಿಗೆ ಅಥವಾ ಭಾರತೀಯತೆಯನ್ನು ಕುರಿತಾದ ಅನಾದರಕ್ಕೆ ಪರ್ಯಾಯವಾಗಿ ಚೀನಾದ ಲಾವ್ ತ್ಸು ಬರೆದ 'ದಾವ್ ದ ಜಿಂಗ್'ದ ಆದರ್ಶಗಳನ್ನು ನಮ್ಮ ಮುಂದೆ ಇಡುತ್ತಾರೆ. ವಾಸ್ತವವಾಗಿ ದಾವ್ ದ ಜಿಂಗ್ ಹೇಳುವ ತತ್ತ್ವಾದರ್ಶಗಳು ನಮ್ಮೊಳಗಿನ ವಿಸ್ಮೃತಿಯ ಬಗ್ಗೆ ಕಣ್ಣು ತೆರೆಸುವ ಅಪೂರ್ವ ಸಂಗತಿಗಳು ಎಂಬುದೇನೋ ಸರಿ. ಅಷ್ಟೇ ಅಲ್ಲ, ಬುಡಕಟ್ಟು ಜನರ ಪರಮೋಚ್ಚ ಮೌಲ್ಯಗಳನ್ನು ಸಾರುವ ಅಪೂರ್ವ ಲೋಕದೃಷ್ಟಿಯೂ ಅಲ್ಲಿದೆ.

ಮನುಷ್ಯನ ಅವನತಿ ಹೇಗಾಯಿತು ಎಂಬುದಕ್ಕೆ ಜುವಾಂಗ್ ತ್ಸೆಯ ಮಾತುಗಳು ಹೀಗಿವೆ: "ಒಂದಾನೊಂದು ಕಾಲದಲ್ಲಿ ಪುರಾತನರು ಸರಳವಾಗಿ ಬದುಕುತ್ತಿದ್ದರು; ಆಗ 'ಯಿನ್'

ಮತ್ತು 'ಯಾಂಗ್'ಗಳು ಸಮರಸವಾಗಿದ್ದವು. ಪ್ರಾಣಿಗಳ ಚೈತನ್ಯಗಳೂ ಮನುಷ್ಯರ ಚೈತನ್ಯಗಳೂ ಪರಸ್ಪರ ಹೊಂದಿಕೊಂಡಿದ್ದವು. ನಾಲ್ಕು ಋತುಗಳು ತಮ್ಮ ಕ್ರಮವನ್ನು ತಪ್ಪುತ್ತಿರಲಿಲ್ಲ. ಜನ ಎಳೆ ವಯಸ್ಸಿನಲ್ಲಿ ಸಾಯುತ್ತಿರಲಿಲ್ಲ. ಜನರಿಗೆ ಜ್ಞಾನವಿದ್ದರೂ ಅದನ್ನು ಬಳಸಬೇಕೆಂದು ಅನ್ನಿಸುತ್ತಿರಲಿಲ್ಲ. ಅದು ಒಗ್ಗಟ್ಟಿನ ಕಾಲ; ತಮ್ಮ ಸ್ವಭಾವಕ್ಕೆ ಸಹಜವಾಗಿ ಜನ ಬದುಕುತ್ತಿದ್ದ ಕಾಲ; ತದನಂತರ ಜನರ ಶೀಲದಲ್ಲಿ ಅವನತಿ ತೋರಿತು. ಸೂಯಿಚೆನ್ ಮತ್ತು ಹೋಷಿ ಎಂಬ ಇಬ್ಬರು ದೊರೆಗಳು ಹುಟ್ಟಿಕೊಂಡರು. ಅವರು ಬೆಂಕಿಯ ಉಪಯೋಗವನ್ನು ಕಂಡುಕೊಂಡರು; ಮತ್ತು ಪ್ರಾಣಿಗಳನ್ನು ಹೇಗೆ ಪಳಗಿಸಬೇಕೆಂಬುದನ್ನು ಕಲಿತರು. ಇದಾದನಂತರ ಅವರು ಆಳುತ್ತಿದ್ದ ಪ್ರಪಂಚ ನಿಸರ್ಗಕ್ಕೆ ಹೊಂದಿಕೊಂಡಿದ್ದರೂ ಸಹ, ಒಗ್ಗಟ್ಟು ಕಳೆದುಹೋಯಿತು. ಮನುಷ್ಯನ ಶೀಲ ಇಳಿಮುಖವಾಯಿತು. ಆ ಮೇಲಿಂದ ಶುನುಂಗ್ ಮತ್ತು ಹಾಂಗ್ಟಿ ಎಂಬ ಇಬ್ಬರು ಚಕ್ರವರ್ತಿಗಳು ಹುಟ್ಟಿಕೊಂಡರು. ಅವರು ವ್ಯವಸಾಯವನ್ನು ಪ್ರಾರಂಭಿಸಿದರು. ರೇಷ್ಮೆಯ ಬಳಕೆಯನ್ನು ಕಲಿಸಿಕೊಟ್ಟರು. ಅವರ ಆಳ್ವಿಕೆಯಲ್ಲಿ ಶಾಂತಿ ಇತ್ತು; ಆದರೆ ಪ್ರಪಂಚ ನಿಸರ್ಗದಿಂದ ದೂರವಾಗಲು ಮೊದಲಾಯಿತು. ಮನುಷ್ಯನ ಶೀಲ ಇನ್ನಷ್ಟು ಕೆಳಗಿಳಿಯಿತು. ಇದಾದ ಮೇಲೆ ಯಾವೋ ಮತ್ತು ಶುನ್ ಎಂಬ ಇಬ್ಬರು ಚಕ್ರವರ್ತಿಗಳು ಪ್ರಪಂಚವನ್ನು ಆಳಲು ಶುರುಮಾಡಿದರು. ಅವರು ತಮ್ಮ ಆಳ್ವಿಕೆಯಲ್ಲಿ ಸಂಸ್ಕೃತಿಯನ್ನು ತಂದರು. ಅದರಿಂದ ಮನುಷ್ಯ ಸುಳ್ಳಾಗಲು ಶುರುವಾದ. ಅವನ ಮೂಲದ ಸರಳತೆ ಕಳೆದು ಹೋಯಿತು. ತಾನು ಒಳ್ಳೆಯವನಾಗಿರಬೇಕೆಂದು ಉದ್ದೇಶಪಟ್ಟು ಪ್ರಯತ್ನಿಸುವುದರಿಂದಾಗಿ ಮನುಷ್ಯ ದಾವ್‌ನಿಂದ ದೂರವಾದ. ಹೊಗಳಿಸಿಕೊಳ್ಳಬೇಕೆಂಬ ಆಸೆಯಿಂದ ಒಳ್ಳೆಯ ಕೆಲಸಗಳನ್ನು ಮಾಡಲು ಶುರುಮಾಡಿದ ಪ್ರಕೃತಿಯಿಂದ ದೂರವಾಗಿ ತನ್ನ ಮನಸ್ಸನ್ನು ಬೆಳಗಿಸಿಕೊಳ್ಳಲು ಮನುಷ್ಯ ಹವಣಿಸಿದ. ಒಂದು ಮನಸ್ಸು ಇನ್ನೊಂದು ಮನಸ್ಸನ್ನು ಉಜ್ಜುವುದು ಶುರುವಾಗಿ ಜ್ಞಾನ ಹುಟ್ಟಿಕೊಂಡಿತು. ಆದರೆ ಜ್ಞಾನದಿಂದ ಮಾತ್ರ ಈ ಪ್ರಪಂಚದಲ್ಲಿ ಶಾಂತಿ ನೆಲಸಲಾರದು ಎಂದು ತಿಳಿದು, ಈ ಜನರು ಸಾಂಸ್ಕೃತಿಕವಾದ ನಯ ನಾಜೋಕುಗಳನ್ನು ಬೆಳೆಸಿಕೊಂಡರು; ತನ್ನ ವಿದ್ವತ್ತನ್ನು ಹೆಚ್ಚಿಸಿಕೊಂಡರು. ನಯವಾದ ಸಭ್ಯತೆ ಮನುಷ್ಯನ ಶೀಲವನ್ನು ನಾಶಮಾಡಿತು. ವಿದ್ವತ್ತು ಮನುಷ್ಯನ ಬುದ್ಧಿಶಕ್ತಿಯನ್ನು ಮಂಕಾಗುವಂತೆ ಮಾಡಿತು. ಈ ಕಾಲದಿಂದಲೂ ಜನರು ಗಲಿಬಿಲಿಗೆ ಒಳಗಾಗಿ, ತಮ್ಮ ದಾರಿಯನ್ನು ಕಳೆದುಕೊಂಡು, ತಮ್ಮ ನೈಜ ಸ್ವಭಾವಕ್ಕೆ ಮರಳುವ ದಾರಿ ಕಾಣದೆ ವಿಹ್ವಲಿತರಾಗಿದ್ದಾರೆ.

ಮನುಷ್ಯ ಕುಲದ ವಿಕಾಸಾತ್ಮಕ ಚರಿತ್ರೆಯಂತಿರುವ ಹಾಗೂ ಅಭಿವೃದ್ಧಿಯ ಒಂದೊಂದು ಹಂತದಲ್ಲೂ ನೈತಿಕವಾಗಿ ಅಧಃಪತನ ಹೊಂದುವ ಮೂಲಕ ಆಸೆಬುರುಕತನವನ್ನು, ಅಹಂಕಾರವನ್ನು ತುಂಬಿಕೊಂಡ ಮನುಷ್ಯನ ಸಣ್ಣತನವನನ್ನು ಚೆನ್ನಾಗಿ ಪರಿಚಯಿಸುತ್ತದೆ. ಆದರೆ, ಜುವಾಂಗ್ ತ್ಸೆಯ ಈ ಮಾತು ಕೇವಲ ವಿಸ್ಮೃತಿಯಲ್ಲಿರುವ ಭಾರತೀಯರಿಗೆ ಅಥವಾ ಏಷ್ಯನರಿಗೆ ಮಾತ್ರ ಹೇಳಿದ್ದಲ್ಲ. ಇಡೀ ಮನುಕುಲಕ್ಕೆ ಹೇಳಿದ್ದು. ಇದೊಂದು ದರ್ಶನ.

ಜಗತ್ತಿನ ಯಾವುದೇ ಮನುಕುಲಕ್ಕೆ ಇದು ಅನ್ವಯ. ತೈಯ ಈ ಮಾತುಗಳ ಮೂಲಕ ಅನಂತಮೂರ್ತಿ ಮತ್ತೆ ಪಕಾಪಕಿ ಐರೋಪ್ಯರ ಹೋಲಿಕೆಗೆ ಇಳಿಯುತ್ತಿದ್ದಾರೆಯೇ ಹೊರತು, ತಮ್ಮದೇ ತೀರ್ಥಹಳ್ಳಿಯ ಸುತ್ತಮುತ್ತಲಿರುವ ಹಾಗೂ ಸಹ್ಯಾದ್ರಿಯ ಗರ್ಭದಲ್ಲಿರುವ ಅನೇಕ ಬುಡಕಟ್ಟುಗಳು ತೈಯ ತತ್ವಾದರ್ಶಗಳನ್ನೇ ಉಳಿಸಿಕೊಂಡು ಇನ್ನು ಬದುಕುತ್ತಿದ್ದಾರೆ ಎಂಬುದನ್ನಾಗಲೀ, 'ಭಾರತೀಯ'ವಾದದ ಮೇಲುವರ್ಗದ ಸಂಸ್ಕೃತಿ ಸ್ಥಾಪಕ ಶಕ್ತಿಗಳಿಂದಲೇ ಅವರ ಆದರ್ಶಗಳಿಗೆ ಅಪಾಯ ಒದಗಿದೆ ಎಂಬುದನ್ನಾಗಲೀ ಯಾಕೆ ಯೋಚಿಸುವುದಿಲ್ಲ? ತಮ್ಮ ಸುತ್ತಮುತ್ತಲೇ ಇರುವ ಇಂಥ ಸತ್ಯಗಳನ್ನು ಮರೆತು- "ಹೀಗೆ ವಿಹ್ವಲಿತರಾದ ನಾವು, ಯೂರೋಪಿನ ತಂತ್ರಜ್ಞಾನದ ಅಭಿವೃದ್ಧಿಶೀಲ ದಾರಿಯನ್ನೇ ಹಿಡಿಯುತ್ತಿರುವ ನಾವು, ಈಗ ದಾವ್ ದ ಜಿಂಗ್ ಓದುತ್ತಿದ್ದೇವೆ" ಎಂದು ಉದ್ಗರಿಸುವುದಲ್ಲದೆ, ತಮ್ಮ ತಂದೆ ಮಂಡಳ ಬರೆದು ದೇವಿಯನ್ನು ಆಹ್ವಾನಿಸುತ್ತಿದ್ದ ಪ್ರಸಂಗ ನೆನಪಿಸಿಕೊಳ್ಳುತ್ತಾರೆ ಅನಂತಮೂರ್ತಿ. ಆದರೆ, ಇಂಥ ವಿಸ್ಮೃತಿಗೆ ಉತ್ತರ ನಮ್ಮ ಬುಡಕಟ್ಟಿನ ಜೀವನದಲ್ಲಿ ಹಾಗೂ ನಮ್ಮ ಮೌಖಿಕ ಕಾವ್ಯಗಳಲ್ಲಿಯೇ ಇದೆ ಎಂಬ ಪ್ರಜ್ಞೆ ನಮಗೆ ಬರಬೇಕಾಗಿದೆ.

ನಮ್ಮ ನಡುವಿದ್ದ ಅತ್ಯಂತ ಪ್ರತಿಭಾವಂತ ಚಿಂತಕ ಹಾಗೂ ನಮ್ಮ ಓರಗೆಯವರಲ್ಲಿ ಚಿಂತನೆಯ ಕಿಚ್ಚು ಹಚ್ಚಿದ ಲೇಖಕ ಡಿ.ಆರ್. ನಾಗರಾಜ್ ಈ ಚಿಂತನಮಾಲೆಯ ಪ್ರಧಾನ ಸಂಪಾದಕರಾಗಿ ಮಹತ್ವದ್ದನ್ನು ಸಾಧಿಸಿದ್ದಾರೆ. ಪಾಶ್ಚಾತ್ಯ ಮತ್ತು ಭಾರತೀಯ ಸಾಹಿತ್ಯವನ್ನು ಅಪಾರವಾಗಿ ಓದಿಕೊಂಡಿದ್ದ ಅವರು ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರಂಥ ಮೌಖಿಕ ಮಹಾಕಾವ್ಯಗಳನ್ನು ಹಚ್ಚಿಕೊಂಡಿದ್ದುದು ಒಂದು ವಿಶೇಷ. ಆದರೂ ಈ ಮಾಲಿಕೆಯ ಆಶಯವನ್ನು ಪ್ರತಿಪಾದಿಸುತ್ತಾ 'ಪಶ್ಚಿಮದ ಅಭ್ಯಾಸಗಳನ್ನು ದಾಟುವ ಕ್ರಮ' ಎಂದು ಅವರು ಹೇಳುತ್ತಾರೆ. ದಾವ್ ದ ಜಿಂಗ್‌ಗೆ ಬರೆದ ಹಿನ್ನುಡಿಯಲ್ಲಿ "ಆಧುನಿಕ ಪಶ್ಚಿಮದ ಜಗತ್ತು ಕಳೆದ ೧೫೦ ವರ್ಷಗಳಿಂದ ಶೋಧಿಸಿರುವ ತಾತ್ವಿಕ ಆಶಯ ಎಂದರೆ ಅಧಿಕಾರದ್ದು. ಅದರಲ್ಲೂ ಪ್ರಭುತ್ವದ ಅಧಿಕಾರ ಸ್ವರೂಪವನ್ನು ಕುರಿತ ಶೋಧನೆಯೇ ಪಶ್ಚಿಮದ ತಾತ್ವಿಕತೆಯ ಈಚಿನ ಅತ್ಯುತ್ತಮ ಸಾಧನೆ. ಮಾರ್ಕ್ಸ್‌ನಿಂದ ಹಿಡಿದು ಫೂಕೋ ತನಕವೂ ಈ ಮಾತು ಸಲ್ಲುತ್ತದೆ. ಅಧಿಕಾರದಿಂದ ನಿಯಂತ್ರಣಗೊಳ್ಳುವ ಬಗೆಗೇ ಕ್ರಾಂತಿಕಾರಿಗಳ ಧ್ಯಾನವಿದೆ. ಪ್ರಭುತ್ವ ಮತ್ತು ಕ್ರಾಂತಿ- ಈ ಎರಡರ ಸರಳ ವೈರುಧ್ಯದಲ್ಲೇ ಆ ಚಿಂತನಾಕ್ರಮ ಬೆಳೆಯುತ್ತಾ ಹೋಗುತ್ತದೆ" ಎಂದು ಪಶ್ಚಿಮದ ಕಡೆಗೇ ಒತ್ತುಕೊಟ್ಟು ಧ್ಯಾನಿಸುತ್ತಾ ನಿಂತುಬಿಡುವ ಡಿ.ಆರ್. ನಾಗರಾಜ್ ಸ್ಥಾಪಿತ ಸಂಸ್ಕೃತಿಗಳ ವಿರುದ್ಧ ನಿರ್ಣಯಾತ್ಮಕ ಹೋರಾಟ ಮಾಡಿ ತಮ್ಮತನವನ್ನು ಉಳಿಸಿಕೊಳ್ಳಲು ಹೆಣಗಿದ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರರಂಥ ಸಾಂಸ್ಕೃತಿಕ ನಾಯಕರನ್ನು, ಮತ್ತಿತರ ಬುಡಕಟ್ಟು ವೀರರನ್ನು ಈ ಮಾಲಿಕೆಯಿಂದ ದೂರವಿಟ್ಟಿದ್ದಾರೆ. ಇದು ಕೂಡ ಒಂದು ರೀತಿಯ ಮರೆವು ಎಂದೇ ನನ್ನ ನಂಬಿಕೆ.

ಹಾಗೆಂದಾಕ್ಷಣ ಡಿ.ಆರ್. ಇಂಡಿಯಾದ ಸ್ಥಾಪಿತ ಶಕ್ತಿಗಳ ಪರವಾಗಿದ್ದಾರೆ ಎಂದೇನೂ

ಹೇಳಬೇಕಾಗಿಲ್ಲ. ಅವೈದಿಕ ಪರಂಪರೆಯ ಬಗ್ಗೆ ಅವರಿಗೆ ಗಾಢವಾದ ಶ್ರದ್ಧೆ ಇದೆ. ಆದ್ದರಿಂದಲೇ 'ದಾರಾಶಿಖೋ' ಮತ್ತು 'ದಾರು ಪ್ರತಿಮಾನಾ ಪೂಜಿವೆ' ಎಂಬಂಥ ಗ್ರಂಥಗಳೂ ಈ ಮಾಲಿಕೆಯಲ್ಲಿ ಬರಲು ಸಾಧ್ಯವಾಗಿದೆ.

'ದಾರು ಪ್ರತಿಮಾ ನಾ ಪೂಜಿವೆ' ಎಂಬ ಪುಸ್ತಕ ಈ ಮಾಲಿಕೆಯಲ್ಲಿ ಅತ್ಯಂತ ಮುಖ್ಯವಾದುದ್ದು ಎಂದು ನನ್ನ ಭಾವನೆ. ಸ್ಥಳೀಯ ಜನರ ಹಸನು ಜೀವನವನ್ನು ಮತ್ತು ಅವರ ಮೂಲ ಸಂಸ್ಕೃತಿಯನ್ನು ಕಬಳಿಸಿದ ಆಳುವ ಹಾಗೂ ಪುರೋಹಿತಶಾಹಿ ಜನರಿಗೆ ತೋರಿದ ಪ್ರತಿಭಟನೆಯ ಕಥಾನಕಗಳು ಈ ಸಂಪುಟದಲ್ಲಿವೆ. ಅನೇಕ ವರ್ಷಗಳ ಕಾಲ ಒರಿಸ್ಸಾದಲ್ಲಿ ನಿರಂತರವಾಗಿ ನಡೆದ ಈ ಸಂಘರ್ಷದ ಕಥನ ತುಂಬ ಕುತೂಹಲಕಾರಿ. 'ದೀನಬಂಧು'ವಾಗಿ ಆದಿವಾಸಿಗಳ ಪ್ರೀತಿಯ ದೈವವಾಗಿದ್ದ ಪುರಿಯ ಜಗನ್ನಾಥ 'ಬಡಾ ಠಾಕೂರನಾಗಿ' ಪರಿವರ್ತಿತ ಹೊಂದುವ ಮೂಲಕ ಅವರಿಂದ ದೂರ ಸರಿದು ಬ್ರಾಹ್ಮಣರ 'ಪರ'ವಾದದ್ದನ್ನು ಅನೇಕ ಘಟನೆಗಳ ಮೂಲಕ ಈ ಸಂಪುಟ ವಿವರಿಸುತ್ತದೆ. ಅಷ್ಟರ ಮಟ್ಟಿಗೆ ಈ ಸಂಪುಟ ದೇಸಿ ಸಂಸ್ಕೃತಿ ವಾದಕ್ಕೆ ನ್ಯಾಯ ಸಲ್ಲಿಸಿದೆ. ಭಾರತದಲ್ಲಿನ ಸ್ವಚ್ಛಂದ ಬುಡಕಟ್ಟು ವ್ಯವಸ್ಥೆ ಸಾಂಸ್ಕೃತಿಕವಾಗಿ ಹೇಗೋ ಹಾಗೆ ರಾಜಕೀಯ ಮತ್ತು ಆರ್ಥಿಕವಾಗಿ ಕೂಡ ಹೇಗೆ ಛಿದ್ರಗೊಂಡಿತು ಎಂಬ ಒರಿಸ್ಸಾದ ಉದಾಹರಣೆಗಳನ್ನು ಇಲ್ಲಿ ನೀಡಲಾಗಿದೆ.

ಬುಡಕಟ್ಟು ಸಂಸ್ಕೃತಿಯನ್ನು ಹಾಗೂ ಆ ಸಂಸ್ಕೃತಿಯೊಳಗೆ ಅಂತರ್ಗತವಾಗಿರುವ ಲೋಕದೃಷ್ಟಿಯನ್ನು ಅಧ್ಯಯನ ಮಾಡಬೇಕು ಯಾಕೆ ಎಂದರೆ ಶತಶತಮಾನಗಳಿಂದ ಘಟಿಸಿರುವ ಇಂತ ವೈಚಿತ್ರ್ಯಗಳನ್ನು ತಿಳಿದುಕೊಂಡು, ವಾತಾಪಿ ಹೊಟ್ಟೆಯಲ್ಲಿಯೂ ಜೀರ್ಣವಾಗದೆ ಉಳಿದಿರುವ, ತನ್ನ ದೇಸೀ ಸತ್ವವನ್ನು ಉಳಿಸಿಕೊಂಡಿರುವ ಮೌಲ್ಯಗಳನ್ನು ಹುಡುಕುವುದಕ್ಕಾಗಿ ಎಂಬುದು ನನ್ನ ನಂಬಿಕೆ.

ಇಂಗ್ಲಿಶರ ಪ್ರಭುತ್ವದಿಂದಾಗಿ ಬುಡಕಟ್ಟುಗಳ ಮೇಲಾದ ಪ್ರಭಾವ ಎಂಥದ್ದು? 'ದಾರು ಪ್ರತಿಮಾ ನಾ ಪೂಜಿವೆ' ಕೃತಿಯ ಪ್ರಕಾರ ಇತ್ತೀಚಿಗಿನ ೧೯ನೇ ಶತಮಾನದಲ್ಲಿಯೂ ಗುಡ್ಡಗಾಡು ಜನರನ್ನು ವಂಚಿಸಿದವರು ಇಂಗ್ಲಿಶರಲ್ಲ, ನಾವೇ. ನಮ್ಮೊಳಗಿನ ಹಿತಾಸಕ್ತಿಗಳೇ. ಹಾಗಾದರೆ ಬ್ರಿಟಿಶರ ಆಳ್ವಿಕೆಯ ಪ್ರಭಾವದಿಂದ ಬುಡಕಟ್ಟು ಜನರ ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲಾದ ಪ್ರಭಾವ ಎಂಥದ್ದು? ಕಳೆದ ಎರಡು ಸಾವಿರ ವರ್ಷಗಳಿಂದ ನಿರಂತರವಾಗಿ ನಡೆದ ಧರ್ಮದ ಅಥವಾ ಪಂಥದ ಹೆಸರಿನ ರುದ್ರ ತಾಂಡವಕ್ಕಿಂತ ಈ ೧೫೦ ವರ್ಷಗಳ ಬಣ್ಣದ ವೇಷದ ನಟನೆಯೂ ಕಡಿಮೆಯದೇನಲ್ಲ. ಬುಡಕಟ್ಟುಗಳಿಗೆ ಸ್ವಂತ ಆಸ್ತಿಯ ಕಲ್ಪನೆ ಇರಲಿಲ್ಲ. ತೀರಾ ಮೊದಲಿಗೆ ಆಹಾರ ಸಂಗ್ರಹಣೆ ಮತ್ತು ಬೇಟೆಯಿಂದ ಹೊಟ್ಟೆ ಹೊರೆದು ಕೊಳ್ಳುತ್ತಿದ್ದ ಇವರು ಕೃಷಿಯ ಅನ್ವೇಷಣೆಯ ನಂತರ ಕೂಡ ಒಂದೆಡೆ ನಿಂತು ಒಂದೇ ಭೂಮಿಯನ್ನು ನಂಬಿ ಬದುಕಿದವರಲ್ಲ. ಇವರು 'ಕುಮರಿ' ಬೇಸಾಯ ಮಾಡುತ್ತಾ ಜಾಗದಿಂದ ಜಾಗಕ್ಕೆ ಸ್ಥಳಾಂತರವಾಗುತ್ತಿದ್ದರು. ಯಾವುದೇ ಭೂಮಿಯಲ್ಲಿ ಕಾಡು ಕಡಿದರೂ ಅನಂತರ ಅದರ ಪಾಡಿಗೆ ಅದನ್ನು ಏಳು ವರ್ಷ ಬಿಟ್ಟರೆ ಮತ್ತದೇ ಕಾಡು ಆವರಿಸಿಕೊಳ್ಳುತ್ತದೆ. ಇದನ್ನು

ತಿಳಿದಿದ್ದ ಈ ಜನರು 'ಖಾಯಂ ಕೃಷಿ' ಭೂಮಿಯ ಬದಲಾಗಿ 'ಕುಮರಿ ಕೃಷಿ'ಯನ್ನು ಅವಲಂಬಿಸಿ ಆ ಮೂಲಕ ಕಾಡಿಗೆ ಯಾವುದೇ ಅಪಾಯವೂ ಒದಗದಂತೆ ಸಮತೋಲನ ಕಾಪಾಡಿಕೊಂಡು ಬರುತ್ತಿದ್ದರು. ಹೀಗೆ ಇಡೀ ಕಾಡು ತಮ್ಮದು ಎಂಬ ಮನೋಭಾವದಿಂದ ಬಾಳುವ ಮೂಲಕ ಕಾಡಿನ ಅಸ್ತಿತ್ವಕ್ಕೆ ಧಕ್ಕೆ ಬರದಂತೆ ಬದುಕಿದ ಇವರನ್ನು ಅತಿಕ್ರಮಿಸಿ ಕಾಡು ಮತ್ತು ಭೂಮಿ ಸರ್ಕಾರದ್ದು ಎಂದು ಬ್ರಿಟಿಶರು ಹಿಡಿದರು.

ವಾಸ್ಕೋಡಿಗಾಮ ಪಶ್ಚಿಮ ಕರಾವಳಿಯ ಕಲ್ಲಿಕೋಟೆಯಲ್ಲಿ ಕಾಲಿಟ್ಟಂದಿನಿಂದಲೇ ಪಶ್ಚಿಮಘಟ್ಟದ ಕಾಡುಗಳಲ್ಲಿನ ಅರ್ಥವ್ಯವಸ್ಥೆ ರೂಪುಗೊಳ್ಳತೊಡಗಿತು ಅಥವಾ ಚುರುಕುಗೊಳ್ಳತೊಡಗಿತು. ಇಂಡಿಯಾದ ಸಾಂಬಾರ ಪದಾರ್ಥಗಳ ಆಸೆಯಿಂದ ಬರತೊಡಗಿದ ಯೂರೋಪಿಯನ್ನರು ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಈ ವಸಾಹತುಗಳ ತೀವ್ರ ವ್ಯಾಪಾರದ ಚಟುವಟಿಕೆಗಳ ನಡುವೆಯೇ ಪಶ್ಚಿಮ ಘಟ್ಟದ ಕಾಡುಗಳು ತೋಟಗಳಾಗಿ ಪರಿವರ್ತಿತವಾಗುತ್ತಿದ್ದವು. ಇಂಥ ಸಂಕ್ರಮಣಾವಸ್ಥೆಯ ಸಂದರ್ಭದಲ್ಲಿಯೇ ಮಲೆನಾಡಿನ ಕೆಲವು ಆಯಕಟ್ಟಿನ ಜಾಗಗಳಿಗೆ ಭೂಮಾಲಿಕರು ಬರತೊಡಗಿದ್ದು ಅಥವಾ ಯೂರೋಪಿಯನ್ನರ ಬೆನ್ನ ಹಿಂದೆ ಭೂಮಾಲಿಕರಾದದ್ದು. ಈ ತೆರನಾಗಿ ಯಾವಾಗ 'ವ್ಯವಹಾರಿಗಳು' ಮಲೆನಾಡಿಗೆ ಕಾಲಿಟ್ಟರೋ ಆಗಿನಿಂದಲೇ ಗಿರಿಜನರ ಸ್ವಚ್ಛಂದ ಜೀವನ ಅಸ್ಥಿರವಾಗತೊಡಗಿತು. ನಮ್ಮ ಆಧುನಿಕ ವಸಾಹತುಶಾಹಿ ಎನಿಸಿದ ಅರಣ್ಯ ಇಲಾಖೆಯ ಈಗಿನ ಚಟುವಟಿಕೆಗಳಿಗೆ ಪೂರ್ವದಲ್ಲಿ ನಡೆದ ಈ ಯೂರೋಪಿಯನ್ ವಸಹಾತುಶಾಹಿಯ ಪ್ರಭಾವವನ್ನು ನಾವು ಅರ್ಥಮಾಡಿಕೊಳ್ಳದೆ ಇವತ್ತಿನ ಗಿರಿಜನರ ಬದುಕನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

ಗಿರಿಜನರ ಅಸ್ಥಿರತೆಯ ಭೀತಿ ಹೆಚ್ಚಾಗತೊಡಗಿದ್ದು ಬ್ರಿಟಿಶರ ಕಾಲದಲ್ಲೇ. ಭಾರತದ ವ್ಯಾಪಾರ ವ್ಯವಹಾರದ ಏಕಸ್ವಾಮ್ಯವನ್ನು ಸ್ಥಾಪಿಸಿದ ಬ್ರಿಟಿಶರು ರಾಜಕೀಯವಾಗಿ ಭಾರತವನ್ನು ಹಿಡಿದುದರ ಜೊತೆಗೇ ತಮ್ಮ ಮೂಲೋದ್ದೇಶವಾದ ಸಾಂಬಾರ ಪದಾರ್ಥಗಳ ರಫ್ತಿಗೆ ಹೆಚ್ಚು ಗಮನಕೊಟ್ಟರು. ಇದರ ಪರಿಣಾಮವಾಗಿ ಕಾಡುಗಳು ಕಾಫಿ, ಟೀ, ಏಲಕ್ಕಿ, ಮೆಣಸು, ಕೋಕೋ ಹಾಗೂ ರಬ್ಬರ್ ತೋಟಗಳಾಗಿ ಪರಿವರ್ತಿತಗೊಳ್ಳತೊಡಗಿದವು. ಆದರೆ ಹೀಗೆ ಪರಿವರ್ತಿತಗೊಂಡ ತೋಟಗಳ ಇಡೀ ಮಾಲಿಕತ್ವವನ್ನು ಬ್ರಿಟಿಶರೇ ವಹಿಸಿಕೊಳ್ಳಲು ಸಾಧ್ಯವಿರಲಿಲ್ಲ. ಕೆಲವು ಭಾಗಗಳಲ್ಲಿ ಅವರೇ ತೋಟದ ಮಾಲೀಕರಾಗಿಯೂ ಇದ್ದುದು ನಿಜವಾದರೂ ಹಲವಾರು ತೋಟಗಳಿಗೆ ನಮ್ಮ ಭೂಮಾಲೀಕರು ಮಾಲೀಕರಾದರು. ಹೀಗೆ ಪರಿವರ್ತಿತಗೊಂಡ ತೋಟಗಳಲ್ಲಿ ದುಡಿಯುವವರು ಯಾರು? ಅಮಾಯಕರಾದ ಗಿರಿಜನರು ಮಾತ್ರ. ಹೀಗಾಗಿ ಭೂಮಿಯ ಸ್ವಾಧೀನವನ್ನು ಕೆಲವೇ ಕೆಲವರಿಗೆ ಒಪ್ಪಿಸುವ ಮೂಲಕ ಅದೇ ನೆಲದ ಮೂಲನಿವಾಸಿಗಳನ್ನು ಅತಂತ್ರರನ್ನಾಗಿಸುವ ತಂತ್ರ ಬ್ರಿಟಿಶರ ಕಾಲದಲ್ಲಿ ನಡೆಯಿತು. ಈ ತಂತ್ರ ಅವರಿಗೆ ಎರಡು ರೀತಿಯ ಪ್ರಯೋಜನಕ್ಕೆ ಬಂತು. ಹೀಗೆ ಕೆಲವರನ್ನೇ ಭೂ ಒಡೆಯರನ್ನಾಗಿ ಮಾಡುವ ಮೂಲಕ ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಕಾಡಿನ ಸ್ವಾಮ್ಯವನ್ನು ತಾವೇ ಹೊಂದುವುದು ಮೊದಲನೆಯ ಉದ್ದೇಶವಾದರೆ, ಭೂಮಿಯಿಂದ

ಬೇರ್ಪಡಿಸಿ, ಕೂಲಿಯಾಳುಗಳನ್ನಾಗಿ ಪರಿವರ್ತಿಸಿದ ಗಿರಿಜನರನ್ನು ಮತಾಂತರಕ್ಕೆ ಪ್ರೇರೇಪಿಸುವುದು ಅವರ ಎರಡನೆಯ ಉದ್ದೇಶ. ಮತಾಂತರಕ್ಕೆ ಒಪ್ಪಿದವರಿಗೆ ಭೂಮಿ ನೀಡುತ್ತೇವೆ ಎಂಬ ಭರವಸೆ ನೀಡಿ ಅವರಲ್ಲಿ ಭ್ರಮೆಯನ್ನು ತುಂಬುವ ಕೆಲಸವೂ ನಡೆಯಿತು.

ಭಾರತದ ಬುಡಕಟ್ಟುಗಳ ಮೇಲೆ ಬ್ರಿಟಿಶರು ಮತ್ತು ಇಂಡಿಯಾದ ಮಹಾ ನೇಮನಿಷ್ಠರು ಉಂಟುಮಾಡಿದ ಪ್ರಭಾವ ಹಾಗೂ ಅದರಿಂದಾಗಿ ಅವರ ನಂಬಿಕೆ ಮತ್ತು ಮೌಲ್ಯಗಳ ಮೇಲಾದ ಅಪಚಾರವನ್ನು ವೆರಿಯರ್ ಎಲ್ವಿನ್ ತಮ್ಮ ಸ್ವಂತ ಅನುಭವದಿಂದ ಹೀಗೆ ವರ್ಣಿಸುತ್ತಾರೆ-

"ಗಿರಿಜನರಲ್ಲಿ ಏನು ಸಿಗುವುದೋ ಅದನ್ನು ಕಸಿದುಕೊಳ್ಳಲು ತಮ್ಮ ಇಡೀ ಜೀವನವನ್ನು ಮುಡುಪಾಗಿಟ್ಟು ಸಮಾಜದಲ್ಲಿ ದೊಡ್ಡಮನುಷ್ಯರೆನಿಸಿಕೊಂಡ ಅನೇಕ ಜನರಿದ್ದಾರೆ ನಮ್ಮಲ್ಲಿ. ಅವರು ಗಿರಿಜನರನ್ನು ಶಾಕಾಹಾರಿಗಳನ್ನಾಗಿ ಮಾಡಲು ಹೋಗಿ ಮಾಂಸಾಹಾರದ ಬದಲು ಬೇರೆ ಯಾವುದನ್ನೂ ಅವರಿಗೆ ಕೊಡಲಿಲ್ಲ. ಪಾನಿರೋಧವನ್ನು ಜಾರಿಗೆ ತಂದು ಅವರಿಗೆ ಮದುವೆ ಮುಂಜಿಗಳಲ್ಲಿ ಆನಂದವೀಯುವ ಬೇರೊಂದನ್ನು ನೀಡಲಿಲ್ಲ. ಅವರ ಸರಳ ಉಡುಪು ಅಸಹ್ಯವೆಂದು ಹೇಳಿ ಅವರ ಮೇಲೆ ಆರ್ಥಿಕ ಹೊರೆಯನ್ನು ಹೊರೆಸಿದ್ದಾರೆ. ಯುವಕ ಯುವತಿಯರ ಪ್ರೇಮಸುಖಕ್ಕೆ ಅಡ್ಡಿಬಂದಿದ್ದಾರೆ. ಬಡಜನರಿಂದ ಬಣ್ಣ, ಅಂದ ಚೆಂದ ಮತ್ತು ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಕಂಡಮಾರ್ಗಗಳಲ್ಲಿ ಶೋಷಣೆ ಮಾಡುವುದರಷ್ಟೇ ಕೆಟ್ಟದ್ದು.

ನನಗೆ ಹಿಂದೂಮತ ಒಪ್ಪಿತವಲ್ಲವೆಂಬ ಆಪಾದನೆಯನ್ನು ಕೆಲವು ಸಲ ಮಾಡಿದ್ದಾರೆ. ಇದು ಶುದ್ಧ ಅಪದ್ಧ. ಹಿಂದೂಮತದ ಕೆಲವು ವಿಚಾರಗಳು ಗಿರಿಜನರಿಗೆ ಒಳ್ಳೆಯವಲ್ಲವೆಂದು ನಾನು ಹೇಳಿದ್ದೇನೆ ನಿಜ. ಹಿಂದೂ ಸುಧಾರಕರು ಗಿರಿಜನ ಸಮಾಜದಿಂದ ಕೆಟ್ಟದ್ದನ್ನು ತೆಗೆದುಹಾಕುವ ಬದಲು, ಅದನ್ನು ತಂದು ಹಾಕುವ ಸಂಭವವುಂಟು. ಮೊದಲು ಇಲ್ಲದ ಕಟ್ಟುನಿಟ್ಟಾದ ಜಾತಿಪದ್ಧತಿ, ವಿಧವಾವಿವಾಹ ನಿಷೇಧ ಪದ್ಧತಿ- ಇವೆಲ್ಲಾ ಹಿಂದೂ ಸುಧಾರಕರು ಮಧ್ಯ ಇಂಡಿಯಾದ ಗಿರಿಜನರಲ್ಲಿ ತಂದ ಸುಧಾರಣೆಗಳು. ಇಷ್ಟೇ ಅಲ್ಲದೆ, ಅದು ತಿನ್ನಬಾರದು ಇದು ಕುಡಿಯಬಾರದು ಎಂಬ ನಿಷೇಧಗಳು ಬೇರೆ. ಇವೆಲ್ಲಕ್ಕಿಂತ ಹೆಚ್ಚಿನ ವಿಚಾರವೆಂದರೆ, ಹಿಂದೂಮತ ಗಿರಿಜನ ಪ್ರದೇಶದಲ್ಲಿ ಹರಡಿದಂತೆ ಅವರಿಗೆ ಸಮಾಜದಲ್ಲಿ ದೊರೆಯುತ್ತಿದ್ದ ಕೀಳುಸ್ಥಾನ.

ವೆರಿಯರ್ ಎಲ್ವಿನರ ಗಿರಿಜನ ಪ್ರಪಂಚ

ವೆರಿಯರ್ ಎಲ್ವಿನ್ನರ ಈ ಮಾತುಗಳ ಹಿನ್ನೆಲೆಯಲ್ಲಿ ನಮ್ಮ ವೈದಿಕಶಾಹಿ ಸ್ಥಳೀಯ ಸಂಸ್ಕೃತಿಗಳನ್ನು ಹೇಗೆ ನೋಡಿತು ಎಂಬುದನ್ನು ನಾವು ಗಮನಿಸಬೇಕು. ತನ್ನ ಸುತ್ತಲಿನ ಜನಸಾಮಾನ್ಯರ ಬದುಕನ್ನು ಕಡೆಗಣ್ಣಿನಲ್ಲಿ ಕೂಡ ನೋಡದೆ ನಿರ್ಲಕ್ಷಿಸಿದ ವೈದಿಕ ಧೋರಣೆಯ ಇತಿಹಾಸಕಾರರು ಮತ್ತು ಪಂಡಿತರು ಗಿರಿಜನರ ಬದುಕಿಗಂತೂ ಕಣ್ಣು ತೆರೆಯಲೇ ಇಲ್ಲ. ತಮ್ಮದೇ ಭೂಮಿಯಲ್ಲಿರುವ ಅರಣ್ಯ, ಕಣಿವೆ, ಕಂದರಗಳನ್ನು ವರ್ಣಿಸಿದ ಅವರು

ಆ ಒಡಲಲ್ಲಿ ತಮ್ಮಂಥ ಜೀವಿಗಳಿದ್ದಾರೆ ಎಂಬ ಬಗ್ಗೆ ಮಾತ್ರ ಸಂಪೂರ್ಣ ತಟಸ್ಥರಾದರು. ಮಹಾಭಾರತ, ರಾಮಾಯಣಗಳ ಇಡೀ ಕಥೆ ಕಾಡಿನಲ್ಲಿ ತೆರೆದುಕೊಳ್ಳದಾದರೂ ಅಲ್ಲಿ ಮುಖ್ಯವಾಗಿರುವವರು ಮಾತ್ರ ವೈದಿಕ ವೀರರೆ. ಮಹಾಭಾರತದಲ್ಲಿನ ಏಕಲವ್ಯ ಎಂಬ ಗಿರಿವಾಸಿ ಅಡವಿಕುಮಾರ ವೀರನಾಗಿ ಕಾಣಿಸಿಕೊಳ್ಳುತ್ತನಾದರೂ ವೈದಿಕ ಪರಮೋಚ್ಚನಾದ ದ್ರೋಣನ ಭಕ್ತ ಮತ್ತು ಆಜ್ಞಾನುವರ್ತಿ. ಕಡೆಗೆ ಬೆರಳನ್ನೇ ಕತ್ತರಿಸಿಕೊಂಡ ಬಲಿಪಶು. ರಾಮಾಯಣದಲ್ಲಿ ಬರುವ ಆಂಜನೇಯ, ಸುಗ್ರೀವಾದಿಗಳು ಅಡಿಗಡಿಗೂ ರಾಮಲಕ್ಷ್ಮಣರ ಕಾಲಮೇಲೆ ಹೊರಳಾಡುವ ಕೇವಲ ವಾನರರು. ಇವರು ರಾವಣನಂಥ 'ಪಾಪಿ'ಗಳ ವಿಚಾರದಲ್ಲಿ ಎಷ್ಟೇ ವೀರರಾದರೂ ರಾಮಲಕ್ಷ್ಮಣರಿಗೆ ಗಡಗಡ ನಡುಗುವ ಬಗ್ಗಿದ ಗೂನಿನ ಅಂಜುಬುರುಕರು. ಇಡೀ ವೈದಿಕ ಪರಂಪರೆಯ ಗಾಢ ಆಲಿಂಗನದಲ್ಲಿ ಬೆಳೆದ ಆಗಿನ ನಮ್ಮ 'ನಾಗರಿಕ' ಸಂತಾನ ಅಡವಿಯ ಬಗ್ಗೆ ಮತ್ತು ಅದರೊಡಲಿನ ಜೀವಿಗಳ ಬಗ್ಗೆ ಯಾವ ಧೋರಣೆ ತಳೆದಿದೆ? ವೈದಿಕತನದಿಂದ ದೂರಿವಿದ್ದೇವೆ ಎಂದು ಹೇಳಿಕೊಳ್ಳುವ ನಮ್ಮ ಹೊಸ ಬುದ್ಧಿಜೀವಿ ವರ್ಗ ಯಾವ ದೃಷ್ಟಿಯಿಂದ ಈ ಜನರನ್ನು ಕಾಣತೊಡಗಿದೆ? ಇದು ಅತ್ಯಂತ ಕುತೂಹಲಕಾರಿ ಮತ್ತು ವಿಶ್ಲೇಷಣೆಗೆ ಯೋಗ್ಯವಾದ ವಿಚಾರ.

'ವರ್ಣ' ಮತ್ತು 'ಧರ್ಮ'ದ ಲವಲೇಶವೂ ಗೊತ್ತಿಲ್ಲದ ಆ ಜನ ಸಂಘಜೀವಿಗಳಾಗಿದ್ದರು ಮತ್ತು ಭೌಗೋಳಿಕವಾಗಿ ತಮ್ಮನ್ನು ಗುರುತಿಸಿಕೊಳ್ಳಲು ಸಂಕೇತಗಳನ್ನು ಇಟ್ಟುಕೊಂಡಿದ್ದರು. ಹಸಿವು ಮತ್ತು ಕಾಮ ಮಾತ್ರ ಅವರಲ್ಲಿ ದ್ವೇಷ ಹುಟ್ಟಿಸುತ್ತಿದ್ದವಾದರೂ ಅದು ತಾತ್ಕಾಲಿಕವಾಗಿರುತ್ತಿತ್ತು. ಯಾವಾಗ 'ಆರ್ಯ'ರು ಅನ್ನುವ ಶ್ವೇತವರ್ಣೀಯ 'ಜನ' ಈ ಭೂಖಂಡದ 'ಮಾನವ'ರ ಕಾಡಿಗೆ ಕಾಲಿಟ್ಟರೋ, ಆಗ ಪ್ರಪ್ರಥಮ ಬಾರಿಗೆ ಈ ನೆಲ ಅವರ ವಸಾಹತುಶಾಹಿ ಮುಷ್ಟಿಗೆ ಸಿಲುಕಿಕೊಂಡಿತು. ಇವರು 'ಮಾನವ'ರಾಗಿದ್ದವರನ್ನು 'ಜನ'ರನ್ನಾಗಿಸಿ ವರ್ಣೇತರರಾಗಿದ್ದವರನ್ನು ವರ್ಣಭಿದ್ರಿತರನ್ನಾಗಿ ಮಾಡಿದ್ದಲ್ಲದೆ, ಬಣ್ಣದ ಕಾರಣಕ್ಕಾಗಿ ಮತ್ತು ಅಕ್ಷರದ ಕಾರಣಕ್ಕಾಗಿ ಈ ನೆಲದವರನ್ನು ಅಸ್ಪೃಶ್ಯರನ್ನಾಗಿಸಿಬಿಟ್ಟರು. ಕ್ರಮೇಣ ನಿಸರ್ಗ ಹಿಂದೆ ಸರಿದು, ಆರ್ಯರು ಹೊತ್ತುತಂದ ಮನುಷ್ಯ ರೂಪದ ಅತಿಮಾನುಷ ದೇವರುಗಳು ಆ ನಿಸರ್ಗವನ್ನೇ ನಿಯಂತ್ರಿಸಲು ಹೊರಟುಬಿಟ್ಟವು.

ಈ ಬಗ್ಗೆ ಪ್ರಸಿದ್ಧ ಇತಿಹಾಸಕಾರ ಡಿ.ಡಿ. ಕೋಸಾಂಬಿ ಹೀಗೆ ಹೇಳುತ್ತಾರೆ. "ನಾಗರೀಕರು ಅರಣ್ಯವಾಸಿಗಳೂ ಮುಖಾಮುಖಿಯಾದಾಗ ಮೂರು ಬಗೆಯ ಪರಿಣಾಮಗಳು ಸಂಭವನೀಯ. ಒಂದು ನಾಗರೀಕರು ಅರಣ್ಯವಾಸಿಗಳನ್ನು ಅವರ ವಾಸಸ್ಥಾನಗಳನ್ನು ಇವರು ಆಕ್ರಮಿಸಿಕೊಳ್ಳಬಹುದು. ಆಧುನಿಕ ಕಾಲದಲ್ಲಿ ಅಮೆರಿಕಾ, ಆಸ್ಟ್ರೇಲಿಯ ದೇಶಗಳಲ್ಲಿ ಸಂಭವಿಸಿದ್ದು ಹೀಗೆಯೇ. ಎರಡು, ಅರಣ್ಯವಾಸಿಗಳಿಗೆ ವ್ಯವಸಾಯವನ್ನು ಕಲಿಸಿ ಅವರನ್ನು ಕೃಷಿಕಾರರನ್ನಾಗಿಸಿ, ತಮ್ಮ ನಾಗರೀಕ ಸಮಾಜದ ಕೆಳಸ್ತರದಲ್ಲಿ ಅವರನ್ನು ಶ್ರಮಿಕ ವರ್ಗವನ್ನಾಗಿ ಸೇರಿಸಿಕೊಂಡು ನೆಲೆಗೊಳಿಸಿವುದು. ಮೂರು, ಅವರಲ್ಲಿ ಸಹ ವರ್ಗವಿಭಜನೆ ಪ್ರವೇಶಿಸುವಂತೆ ಮಾಡಿ, ಕೆಲವರನ್ನು ಕೃಷಿಕರೆಂದೂ, ಕೆಲವರನ್ನು ಪಾಲಕರೆಂದೂ ವಿಭಜಿಸಿ

ಆ ಮೂಲಕ ಕೃಷಿ ಸಮಾಜವನ್ನು ವಿಸ್ತರಣೆ ಮಾಡುವುದು. ಈ ಮೂರರಲ್ಲಿ ಮೊದಲಿನ ಬಗೆಗಿಂತ ಎರಡು ಮೂರನೆಯ ಬಗೆಗಳು ನಮ್ಮ ದೇಶದ ಚರಿತ್ರೆಯಲ್ಲಿ ಹೆಚ್ಚಾಗಿ ಸಂಭವಿಸಿದೆ. ನಾಶಗೊಳಿಸುವ ಪ್ರವೃತ್ತಿಗಿಂತ ವಿಲೀನಗೊಳಿಸಿಕೊಳ್ಳುವ ಕ್ರಿಯೆಯಲ್ಲಿ ಸಮಾನತೆಯ ಸಮಾವೇಶವಿಲ್ಲ. ಅರಣ್ಯವಾಸಿಗಳು ನಾಗರೀಕರ ಅಧೀನದಲ್ಲಿ ಬಂದು ಸೇರುತ್ತಾರಷ್ಟೇ. ಈ ವಿಲೀನ ಕ್ರಿಯೆಯಲ್ಲಿ ಸಾಂಸ್ಕೃತಿಕ ಸಂಗತಿಗಳು. ಆರಾಧನೆಗಳು ಒಳಗೊಳ್ಳುವಾಗ ಅರಣ್ಯವಾಸಿಗಳ ದೈವಗಳು ನಾಗರಿಕರ ದೇವರುಗಳ ಹೆಂಡತಿಯರಾಗಿ, ಭಕ್ತರಾಗಿ, ವಾಹನ ಗಳಾಗಿ ಅವತಾರಗೊಂಡು ಅಂಗೀಕಾರಗೊಳ್ಳುತ್ತವೆ. ಇಂಥ ವಿಲೀನದ ನಂತರವೂ ನಾಗರೀಕರ ಪೂಜೆಗಳದೇ ಮೇಲುಗೈಯಾಗುತ್ತದೆ.''

ರಾಮಾಯಣ ಮಹಾಕಾವ್ಯದಲ್ಲಿ ಬರುವ ಹಲವು ಪ್ರಸಂಗಗಳ ಹಿನ್ನೆಲೆಯಲ್ಲಿಯೂ ಈ ರೀತಿಯ ವಿಲೀನ ಹಾಗೂ ಸಂಸ್ಕೃತೀಕರಣದ ಪ್ರಕ್ರಿಯೆಗಳು ನಡೆದಿರುವುದನ್ನು ಸೂಕ್ಷ್ಮವಾಗಿ ಗುರುತಿಸಬಹುದು. ಬುಡಕಟ್ಟು ಜನಾಂಗವಾದ ಗೊಂಡರ 'ರಾಮಾಯಣ'ದಲ್ಲಿ ಇದನ್ನು ಚೆನ್ನಾಗಿ ನೋಡಬಹುದು. ರಾಮನ ಯುದ್ಧ ಮತ್ತು ಜಯಗಳನ್ನು ಮೂಲದಲ್ಲಿ ವಾಲ್ಮೀಕಿ ಯಾವ ರೂಪದಲ್ಲಿ ಬರೆದನೋ ತಿಳಿಯದು. ಮುಂದೆ ಆಳುವ ವರ್ಗ ಮತ್ತು ಅದಕ್ಕೆ ಪೂರಕವಾದ ಪುರೋಹಿತ ವರ್ಗದ ಹಿತಾಸಕ್ತಿಗೆ ಹಾಗೂ ಅವರ ರಾಜಕೀಯ ನಿಯಂತ್ರಣಕ್ಕೆ ಅನುಕೂಲವಾಗುವಂತೆಯೇ ರಾಮಾಯಣಗಳು ಪುನರ್‌ನಿರ್ಮಾಣವಾದವು. ಈ ಅವಸ್ಥಾಂತರ ದಲ್ಲಿ ವಿಷ್ಣುವಿನ ಅವತಾರಗಳ ಕಲ್ಪನೆ ಕುಡಿಯೊಡೆಯಿತು. ರಾಮ ಮಹಾವಿಷ್ಣುವಿನ ಅವತಾರವಾದ. ಅಷ್ಟೇ ಅಲ್ಲ; ಹತ್ತು ಅವತಾರಗಳನ್ನು ಎತ್ತುವ ಮೂಲಕ ಇಡೀ ಪುರಾಣಗಳ ಜನಕ ವಿಷ್ಣುವಾದ. ಈ ಎಲ್ಲ ಹತ್ತು ಪುರಾಣಗಳ ನಾಯಕರ ಆಶಯವೂ ಹೆಚ್ಚು ಕಡಿಮೆ ರಾಕ್ಷಸರನ್ನು ಕೊಲ್ಲುವುದೇ ಆಗಿತ್ತು. ಮಹಾ ವಿಷ್ಣು ಹತ್ತು ಅವತಾರಗಳನ್ನು ಎತ್ತಿ ಕೊಂದ ರಾಕ್ಷಸರೆಲ್ಲ ಮತ್ತಾರು ಅಲ್ಲದೆ ವಿವಿಧ ಬುಡಕಟ್ಟುಗಳ ನಾಯಕರೇ ಆಗಿದ್ದರು. ಆರ್ಯರ ಸಾಮ್ರಾಜ್ಯ ವಿಸ್ತರಣೆಯ ವಿವಿಧ ಕಾಲಘಟ್ಟಗಳಲ್ಲಿ ಅವರಿಂದ ಹತರಾದ ವಿರೋಧಿ ನಾಯಕರೆಲ್ಲ ಹೀಗೆ ರಾಕ್ಷಸರೆಂಬ ನಾಮಕರಣ ಪಡೆದು ಕಡೆಗೆ ಮಹಾ ವಿಷ್ಣು ದಯಪಾಲಿಸಿದ ಸದ್ಗತಿಗೆ ಒಳಗಾದರು. ಈ ರೀತಿಯಲ್ಲಿ ದಕ್ಷಿಣದ ಕಾಡುಗಳಲ್ಲಿ ಸ್ವಚ್ಛಂದ ಜೀವನ ನಡೆಸುತ್ತಿದ್ದ ಬುಡಕಟ್ಟುಗಳನ್ನು ಗೆದ್ದು, ಅವರನ್ನೆಲ್ಲ ವರ್ಣಾಶ್ರಮ ಧರ್ಮದ ಬೋನಿಗೆ ಹಾಕಿ, ಅವರನ್ನು 'ಸುಸಂಸ್ಕೃತ'ಗೊಳಿಸಿದ ಕೀರ್ತಿ ಆರ್ಯರಿಗೆ ಮಾತ್ರ ಸಲ್ಲುತ್ತದೆ.

ಆರಂಭದಲ್ಲಿ ಪ್ರಸ್ತಾಪಿಸಿದಂತೆ ಭಾರತ ಪಡೆಯಬೇಕೆಂಬ ಹಂಬಲದ ರಾಷ್ಟ್ರೀಯವಾದಿ ಚಳುವಳಿ ಆ ಸಂದರ್ಭದ ಅಗತ್ಯಕ್ಕಾಗಿ ಒಂದು ವರ್ಗದ ಸಂಸ್ಕೃತಿಯನ್ನು ಇಡೀ ದೇಶದ ಸಂಸ್ಕೃತಿ ಎಂದು ಸಾರಿತ್ತು. ಅನೇಕ ಬುಡಕಟ್ಟು ಸಮುದಾಯಗಳು ಕೂಡ ಈ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದವು. ಆದರೆ ದೇಶವ್ಯಾಪಿಯಾಗಿ ತನ್ನ ಹಕ್ಕು ಸ್ಥಾಪಿಸುತ್ತಿರುವ 'ದೊಡ್ಡಣ್ಣ ಸಂಸ್ಕೃತಿ'ಯನ್ನು ವೈಭವಿಸುವವರು ಅರ್ಥ ಮಾಡಿಕೊಳ್ಳಬೇಕು. ಈ ದೇಶದ ಪ್ರತಿಯೊಂದು ಸಣ್ಣ ಸಮುದಾಯಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆ. ತನ್ನದೇ ಆದ

ಅಸ್ತಿತ್ವ ಇದೆ ಎಂದು. ಕೀಳರಿಮೆಯಲ್ಲಿ ನರಳುತ್ತಿರುವ ಅವರಲ್ಲಿ ಆತ್ಮವಿಶ್ವಾಸ ಉಂಟಾಗು ವಂಥ ರೀತಿಯಲ್ಲಿ ಅವರ ಸಹಜ ಮೌಲ್ಯಗಳಿಗೆ ನಾವು ಬೆಲೆ ಕೊಡುವಂತಾಗಬೇಕು. ಹಾಗಾದಲ್ಲಿ ಮಾತ್ರ ಈ ದೇಶಕ್ಕೆ ಬಂದಿರುವ ರಾಜಕೀಯ ಸ್ವಾತಂತ್ರ್ಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಸ್ವಾತಂತ್ರ್ಯವೂ ಆಗಿ ವಿಸ್ತರಣೆಗೊಳ್ಳಲು ಸಾಧ್ಯ.

ಕೊನೆಯಲ್ಲಿ ಒಂದು ಮಾತು. ಬುಡಕಟ್ಟು ಸಂಸ್ಕೃತಿಯ ಹೇರಳ ಮಾಹಿತಿಗಳನ್ನು ಆಧರಿಸಿ ಹೇಳುವುದಾದರೆ, ಈ 'ವಿಸ್ಮೃತಿ' ಎಂಬ ಪರಿಕಲ್ಪನೆಯೇ ಸುಳ್ಳು. ಯಾಕೆಂದರೆ ಯಾವುದೇ ಸಂಸ್ಕೃತಿ ಹೊರಗಿನ ಯಾವುದನ್ನು ಇದ್ದಕ್ಕಿದ್ದಂತೆ ಸ್ವೀಕರಿಸುವುದಿಲ್ಲ. ಅಥವಾ ಅದು ಹೇಗಿದೆಯೋ ಹಾಗೆ ಸ್ವೀಕರಿಸುವುದಿಲ್ಲ. ಅಸಂಖ್ಯಾತ ಆರ್ಯ ದೇವತೆಗಳು ಮತ್ತು ದಶಾವತಾರದ ಪುರಾಣಗಳ ನಡುವೆಯೂ ನಮ್ಮ ಗ್ರಾಮದೇವತೆಗಳು ಇಂದಿಗೂ ತಮ್ಮ ಅಸ್ತಿತ್ವ ಉಳಿಸಿಕೊಂಡಿರುವುದು ಇದಕ್ಕೆ ಸಾಕ್ಷಿ. ಉತ್ತರ ಕನ್ನಡದ ಹಾಲಕ್ಕಿಗಳು ಮತ್ತು ಗೊಂಡರು ವ್ಯವಸ್ಥಿತವಾದ ವೈದಿಕೀಕರಣಕ್ಕೆ ಒಳಗಾದರೂ ತಮ್ಮ ಮೂಲ ನಿಸರ್ಗ ದೈವಾರಾಧನೆಯನ್ನು ಕೈಬಿಡಲಿಲ್ಲ. ರಾಮಾಯಣದ ಮಹಾ ಪತಿವ್ರತೆಯಾದ ಸೀತೆ ಬುಡಕಟ್ಟುಗಳಲ್ಲಿ ಸ್ವೇಚ್ಛೆ ಮತ್ತು ಮುಕ್ತತೆಯನ್ನು ಬಯಸುವ ಹೆಣ್ಣಾಗಿ ಪರಿವರ್ತನೆಗೊಂಡಳು. ಆರ್ಯರು ಸೃಷ್ಟಿಸಿದ ಅನೇಕಾನೇಕ ಸ್ಥಾಪಿತ ಪುರಾಣಗಳು ಬುಡಕಟ್ಟಿನ ಕಥೆಗಳನ್ನೇ ಹೇಳುವ ಸ್ಥಳೀಯ ಪುರಾಣಗಳಾಗಿ ಮಾರ್ಪಾಟು ಹೊಂದಿದವು.

ಆದ್ದರಿಂದ, ವಿಸ್ಮೃತಿ ವಾದವನ್ನು ಮಂಡಿಸುವ ನಮ್ಮ ಪಾಶ್ಚಾತ್ಯ ವಿರೋಧಿ ಚಿಂತಕರಾಗಲೀ, ಭ್ರಮಾತ್ಮೀಕರಣವಾದವನ್ನು ಮಂಡಿಸುವ ನಮ್ಮ ವೈದಿಕ ವಿರೋಧಿ ಚಿಂತಕರಾಗಲಿ ತಮ್ಮ ತಮ್ಮ ವಾದಗಳನ್ನು ಮಂಡಿಸುವಾಗ ಬುಡಕಟ್ಟು ಸಂಸ್ಕೃತಿಯ ವಾಸ್ತವಾಂಶಗಳನ್ನು ಸರಿಯಾಗಿ ಪರಿಗಣಿಸಿದಂತಿಲ್ಲ. ಅಂದರೆ, ಇವರೆಲ್ಲ ತಮ್ಮ ವಿಚಾರಗಳನ್ನು ಮಂಡಿಸುವ ಸಂದರ್ಭದಲ್ಲಿ ಸಾಮಾಜಿಕ ಮತ್ತು ರಾಜಕೀಯ ಅಂಶಗಳನ್ನು ಪ್ರಧಾನ ಆಕರಗಳನ್ನಾಗಿಸಿ ಸಿದ್ಧಾಂತಗಳನ್ನು ಕಟ್ಟುತ್ತಾರೆಯೇ ಹೊರತು, ಸೂಕ್ಷ್ಮಾತಿಸೂಕ್ಷ್ಮವಾದ ಸಂಸ್ಕೃತಿಯ ಒಳಪ್ರವಾಹಗಳನ್ನು ನಿರ್ಲಕ್ಷಿಸಿದ್ದಾರೆ. ಅನಂತ ದೂರಕ್ಕೂ ಮೈಯೊಡ್ಡಿ ಮಲಗಿದ ಸಾಗರದೊಳಗೆ ಒಂದು ಸಮುದ್ರವನ್ನು ಮತ್ತೊಂದು ಸಮುದ್ರವನ್ನು ಬೆಸೆಯುವ ಒಳಪ್ರವಾಹದ ಗಂಗಾಮಾರ್ಗವಿರುವಂತೆ, ಭಾರತೀಯ ಸಂಸ್ಕೃತಿ ಎಂಬ ಈ ಮೇಲ್ಸ್ತರ ಕಡಲಿನ ಅಂತರ್ಯದಲ್ಲಿ ಅದರ ವೈದಿಕ ಅಕ್ಟೋಪಸ್ ಮತ್ತು ಪಾಶ್ಚಾತ್ಯ ಶಾಸ್ತ್ರಗಳನ್ನು ಜೀರ್ಣ ಮಾಡಿಕೊಳ್ಳುವ ಸಾಮರ್ಥ್ಯದ ತೀವ್ರಸ್ವರೂಪದ ಒಳ ಪ್ರವಾಹಗಳಿವೆ. ಸಾಧಾರಣ ಮಾತಿನಲ್ಲಿ ಹೇಳುವುದಾದರೆ ಅದೊಂದು ರೀತಿಯ ನೀರು ಮತ್ತು ಬೆಂಕಿಗಳ ಸರಸ. ನೀರಿನಿಂದ ಎಂಥ ಬೆಂಕಿಯನ್ನು ಆರಿಸಬಹುದು. ಆದರೆ ಪ್ರಕ್ಷುಬ್ಧಗೊಂಡ ಸಮುದ್ರದಲ್ಲಿ ಚಂಡಮಾರುತ ಎದ್ದ ಸಮಯದಲ್ಲಿ ನೀರಿನ ಒಳಗಿಂದಲೇ ಬೆಂಕಿ ಉದಿಸುತ್ತದೆ. ಆದ್ದರಿಂದ ಎಲ್ಲಕ್ಕಿಂತ ನೇಚರ್ ದೊಡ್ಡದು. ಉಳಿದವೆಲ್ಲ ತಾತ್ಕಾಲಿಕ.

ವಿದ್ವಾಂಸರ ಆಶಯಗಳ ಪ್ರಕಾರ ಇದೀಗ ವಿಸ್ಮೃತಿಯಿಂದ ಹೊರಬರುತ್ತಿರುವ ಸ್ಥಳೀಯ

ಜ್ಞಾನಪರಂಪರೆ ಮತ್ತು ಬಹುಮುಖೀ ಸಂಸ್ಕೃತಿಗಳ ನೈಜ ತತ್ವಗಳು, ಈ ಹಿಂದೂ ಎಂಬ ಭ್ರಮಾತ್ಮಕ ಕಲ್ಪನೆಯನ್ನು ಛಿದ್ರಗೊಳಿಸುವ ನಿಟ್ಟಿನಲ್ಲಿದೆ. ಅಂದಾಕ್ಷಣ ಇದು ನಾಳೆಯೇ ನಡೆದು ಹೋಗುತ್ತದೆಂದಲ್ಲ. ಕಾಲ ಪಕ್ವಗೊಂಡಾಗ ಅಂಥ ಪ್ರಕ್ರಿಯೆಗಳು ತಮ್ಮಷ್ಟಕ್ಕೆ ತಾವೇ ನಡೆದು ಹೋಗುತ್ತವೆ.

ವಾಸ್ತವವಾಗಿ ಹೇಳಬೇಕೆಂದರೆ, ಹೊರ ಜಗತ್ತಿನ ದೃಷ್ಟಿಯಲ್ಲಿ ಸದ್ಯಕ್ಕೆ ಮರೆತಂತಿರುವ ನೈಜ ತತ್ವಗಳನ್ನು ಮತ್ತೊಮ್ಮೆ ನೆನಪಿಸುವ ಕ್ರಿಯೆ ಇದು. ಆದ್ದರಿಂದ ಸಂಬಂಧಪಟ್ಟ ಸಮುದಾಯ ಅಥವಾ ಜನವರ್ಗ ವಿಸ್ಮೃತಿಗೊಂಡಿವೆ ಎಂಬುದು ಸರಿಯಲ್ಲ. ನಿಜ ಹೇಳಬೇಕೆಂದರೆ, ನಮ್ಮ ಸಂಸ್ಕೃತಿ ಚಿಂತಕರ ಮತ್ತು ಜನಪದ ಅಧ್ಯಯನಕಾರರ ವಿಸ್ಮೃತಿ ಇದು.

ಗ್ರಂಥಸೂಚಿ

೧. ಅನಂತಮೂರ್ತಿ. ಯು.ಆರ್.(ಅನು)-ದಾವ್ ದ ಜಿಂಗ್ (ಪಥಧರ್ಮ ಸೂತ್ರ) ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೪.

೨. ಕಕ್ಕಿಲಾಯ ಬಿ.ವಿ.(ಅನು)- ಭಾರತೀಯ ದರ್ಶನಗಳು (ಡಾ. ದೇವಿಪ್ರಸಾದ್ ಚಟ್ಟೋಪಾಧ್ಯಾಯ) ನವಕರ್ನಾಟಕ ಪ್ರಕಾಶನ, ೧೯೯೪.

೩. ಕೃಷ್ಣಮೂರ್ತಿ ಅಗ್ರಹಾರ(ಅನು)-ದಾರಾಶಿಖೋ, ಅಕ್ಷರ ಪ್ರಕಾಶನ, ಹೆಗ್ಗೋಡು ೧೯೯೩.

೪. ಬೋರಲಿಂಗಯ್ಯ ಹಿ.ಚಿ.-ಕಾಡು, ಕಾಂಕ್ರೀಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೫.

೫. ಬೋರಲಿಂಗಯ್ಯ ಹಿ.ಚಿ.-ಗೊಂಡರ ರಾಮಾಯಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೬. ರಾಜಶೇಖರ ಜಿ. (ಅನು)-ದಾರುಪ್ರತಿಮಾ ನ ಪೂಜಿವೇ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೩.

೭. ರಾಮಕೃಷ್ಣ ಜಿ. (ಅನು)-ದರ್ಶನ (ದೇವಿಪ್ರಸಾದ್ ಚಟ್ಟೋಪಾಧ್ಯಾಯ) ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೫.

೮. ಶ್ರೀಮತಿ ಎಚ್.ಎಸ್. (ಅನು) ಪ್ರಾಚೀನ ಭಾರತದ ಚರಿತ್ರೆ (ಡಿ.ಡಿ. ಕೊಸಾಂಬಿ ಅವರ ಚಿಂತನೆಗಳು) ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಮೈಸೂರು ೧೯೯೮.

೯. ನಾಗೇಗೌಡ ಎಚ್.ಎಲ್.(ಅನು) ವೆರಿಯರ್ ಎಲ್ವಿನರ ಗಿರಿಜನ ಪ್ರಪಂಚ, ಸಾಹಿತ್ಯಸದನ ಪ್ರಕಾಶನ, ಬೆಂಗಳೂರು, ೧೯೬೭.

'ಹಾಲುಮತ ಪುರಾಣ'ದ ಬೀರಪ್ಪ

● ವೀರಣ್ಣ ದಂಡೆ

ಕರ್ನಾಟಕದ ಮೂರನೇ ಒಂದು ಭಾಗದಷ್ಟಿರುವ ಬಹುದೊಡ್ಡ ಸಮುದಾಯವಾದ ಕುರುಬರ ಸಾಂಸ್ಕೃತಿಕ ನಾಯಕನಾದ ಬೀರಪ್ಪನ ಬಗೆಗಿನ ವಿವರಗಳನ್ನು ಗಮನಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಕುರುಬ ಜನಾಂಗ ದಟ್ಟವಾಗಿರುವ ಕಡೆಗಳಲ್ಲೆಲ್ಲಾ ಬೀರೇದೇವರ ಗುಡಿಗಳಿದ್ದು, ಇವತ್ತಿಗೂ ಕುರುಬ ಜನಾಂಗದ ಆರಾಧ್ಯ ದೈವವಾಗಿ ಬೀರಪ್ಪ ಕಾಣಿಸುತ್ತಾನೆ. ಬೀರಪ್ಪನ ಗುಡಿಗಳಿರುವ ಸ್ಥಳಗಳ ಕ್ಷೇತ್ರ ಕಾರ್ಯ ಮಾಡಿದರೆ, ಈ ನಾಯಕನ ಬಗೆಗೆ ಅನೇಕ ಬಗೆಯ ಸಂಗತಿಗಳು ದೊರೆಯಬಹುದಾಗಿದೆ. ಆದರೆ ಸದ್ಯಕ್ಕೆ ಈ ಪ್ರಬಂಧದ ಸಂಗತಿಗಳು ಜನಪದ ಹಾಲುಮತ ಮಹಾಕಾವ್ಯಕ್ಕೆ ಮಾತ್ರ ಸೀಮಿತಗೊಂಡಿವೆ.

ಏಳುನೂರು ಪುಟಗಳ ವ್ಯಾಪ್ತಿಯ ಈ ಕಾವ್ಯದ ತುಂಬ ಹರಡಿಕೊಂಡಿರುವ ಬೀರಪ್ಪನ ಬೃಹತ್ ವ್ಯಕ್ತಿತ್ವವನ್ನು, ಸಂಕ್ಷಿಪ್ತವಾದ ಕ್ಯಾನ್‌ವಾಸಿನಲ್ಲಿ ಹಿಡಿದು ತೋರಿಸುವಲ್ಲಿ - ಕೆಲ ಪ್ರಮುಖವಾದ ಸಾಮಾನ್ಯ ಅಂಶಗಳನ್ನು ಗಮನಿಸಿ, ಸೂತ್ರರೂಪದ ಒಂದು ಚೌಕಟ್ಟನ್ನು ರೂಪಿಸಿಕೊಳ್ಳುವುದು ಅನಿವಾರ್ಯ. ಇದು ಬೀರಪ್ಪನಂತಹ ವಿಸ್ತಾರ ವ್ಯಕ್ತಿತ್ವದ ರಾಚನಿಕ ಸ್ವರೂಪವನ್ನು ಪರಿಚಯಿಸುವ ಒಂದು ಅಗತ್ಯದ ಪ್ರಯತ್ನವಾಗಿ ಕಾಣುತ್ತದೆ. ಇಂತಹ ಒಂದು ಚೌಕಟ್ಟನ್ನು ರೂಪಿಸಿಕೊಳ್ಳದಿದ್ದರೆ, ತೆಕ್ಕೆಗೆ ಮೀರುವ ವಿಸ್ತಾರಕ್ಕೆ ಪ್ರಾರಂಭದ ಪ್ರಯತ್ನವಾಗಿ ಒಂದು ಪ್ರಸ್ತಾಪ ಹಾಕಲೂ ಅಸಾಧ್ಯವಾಗುತ್ತದೆ. ಇದೂ ಒಂದು ಬಗೆಯ ಅನಿವಾರ್ಯ ಪ್ರಯತ್ನವೇ ಎನಿಸುತ್ತದೆ.

ಬರವಣಿಗೆ ಮೂಲದ ಕನ್ನಡ ಸಾಹಿತ್ಯದಲ್ಲಿ 'ಬೀರಪ್ಪ'ನ ಹೆಸರು ಎರಡು ಕಡೆ ಕಂಡು ಬರುತ್ತವೆ. ಒಂದು ಬಸವಣ್ಣನ ವಚನದಲ್ಲಿ, ಎರಡು ೧೪ನೇ ಶತಮಾನದ ಮಧುರ ಕವಿಯ 'ಧರ್ಮನಾಥ ಪುರಾಣ' ಕಾವ್ಯದಲ್ಲಿ.

೧) ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ
ಕೆರೆ, ಬಾವಿ ಹೂ ಗಿಡು ಮರಂಗಳಲ್ಲಿ
ಗ್ರಾಮ ಮಧ್ಯಗಳಲ್ಲಿ ಚೌಪಥ ಪಟ್ಟಣ ಪ್ರದೇಶದಲ್ಲಿ ಒರಿಯಾಲದ ಮರದಲ್ಲಿ
ಮನೆಯ ಮಾಡಿ ಕೆರೆವೆಮ್ಮೆಯ ಹಸುಗೂಸು ಬಸುರು ಬಾಣತಿ
ಕುಮಾರಿ ಕೊಡಗೂಸೆಂಬುವರ ಹಿಡಿದು ತಿಂಬ, ತಿರಿದುಂಬ
ಮಾರಯ್ಯಾ ಬೀರಯ್ಯಾ ಕೇಚರಗಾಮಿಲ ಅಂತರಬೆಂತರ

ಕಾಳಯ್ಯಾ ಧೂಳಯ್ಯಾ ಕೇತಯ್ಯಾಗಳೆಂಬ ನೂರು ಮಡಕೆಗೆ
ನಮ್ಮ ಕೂಡಲಸಂಗಮದೇವ ಶರಣೆಂಬುದೊಂದು ದಡಿ ಸಾಲದೆ? -ಬಸವಣ್ಣ

೨) ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೇ ಬೀದಿವರೆಯೇ ಬೀರನ ಕಥೆಯೇ | - ಮಧುರ

ಈ ಮೇಲಿನ ಉಲ್ಲೇಖಗಳಲ್ಲಿ ಬೀರಪ್ಪ ಕ್ಷುದ್ರ ದೇವತೆಗಳಲ್ಲಿ ಗಣಿಸಲ್ಪಡುತ್ತಾನೆ. ಆದರೆ ಹಾಲುಮತ ಪುರಾಣದಲ್ಲಿ ಬೀರಪ್ಪನ ಹುಟ್ಟೇ ದಬ್ಬಾಳಿಕೆ ಮತ್ತು ದುಷ್ಟಶಕ್ತಿಯ ಮತ್ತು ಜೀವವಿರೋಧಿ ಕ್ರಿಯೆಗೆ ಒಂದು ಪ್ರತಿಭಟನೆಯಂತಿದೆ. ಹೀಗಾಗಿ ಇಡೀ ಜೀವಮಾನವೆಲ್ಲ ಆತ ರೌದ್ರಾವತಾರಿಯಾಗಿ ಕಾಣುತ್ತಾನೆ. ಅಲ್ಲದೆ ಸ್ವತಃ ಹಾಲುಮತ ಪುರಾಣದಲ್ಲೆ ಕ್ಷುದ್ರ ದೇವತೆಗಳಿಗೆ ನಡೆದುಕೊಳ್ಳುವುದನ್ನು ಬೀರಪ್ಪ ಮತ್ತು ಮಾಳಿಂಗರಾಯ ವಿರೋಧಿಸುತ್ತಾರೆ. ಡಂಕನಾಡ ದೈಗೊಂಡನ ಪ್ರಸಂಗದಲ್ಲಿ-ಮನೆಯ ಕ್ಷುದ್ರ ದೇವರನ್ನು ಪೂಜಿಸಿದಾಗ, ಫಲಪಡೆಯದ ದೈಗೊಂಡ ಬೀರಪ್ಪನ ಮೊರೆ ಹೋಗುವ ಮೂಲಕ ಅನ್ನನೀರು ಪಡೆಯುವಂತಾಗುತ್ತಾನೆ. ಹೀಗಾಗಿ ಬೀರಪ್ಪನ ಬಗ್ಗೆ ಸರಿಯಾದ ತಿಳುವಳಿಕೆ ಮೂಡಬೇಕಾದುದು ಇನ್ನುಮೇಲೆ ಅವಶ್ಯವಿದೆಯೆಂದು ಎನಿಸುತ್ತದೆ. ಈ ಮೇಲಿನ ಎರಡು ಉದಾಹರಣೆಗಳನ್ನು ಬೀರಪ್ಪನ ಚರಿತ್ರೆಯಲ್ಲಿ ಪ್ರಾಚೀನ ಉಲ್ಲೇಖಗಳಾಗಿ ಇಟ್ಟುಕೊಳ್ಳಬಹುದಾಗಿದೆ. ಜನಪದ ಹಾಲುಮತ ಮಹಾಕಾವ್ಯದ ಪುರುಷ ಪಾತ್ರಗಳಲ್ಲಿ ಬೀರಪ್ಪ ಮತ್ತು ಮಾಳಿಂಗರಾಯ ಪ್ರಮುಖರು. ಬೀರಪ್ಪನು ಮಾಳಿಂಗರಾಯನ ಗುರು. ಭೂಲೋಕದ ಶಿವನು ಗುರುವಾಗಿ, ದೇವರಾಗಿ ಬೀರಪ್ಪ ಕಾಣುತ್ತಾನೆ. "ಸ್ವಾಮಿ ನಮ್ಮಯ ದೇವರು ಬಂದಾರ ಬನ್ನಿರೆ" ಎಂಬ ಪ್ರಸಿದ್ಧ ಸಾಲು ಬೀರಪ್ಪನಿಗೆ ಸಂಬಂಧಿಸಿದ್ದಾಗಿದೆ. ಬೀರಪ್ಪ ಉಗ್ರ ಸ್ವರೂಪಿ. ಶಿವನ ಬೆವರಿನಿಂದ ಜನಿಸಿದವ. ಈತನನ್ನು ಮಾಯಕಾರ, ಕರಿಯದೇವರು, ಬೀರಲಿಂಗ, ಲಿಂಗ ಬೀರಣ್ಣ, ಚನ್ನಿಂಗ ಬೀರಣ್ಣ, ಮಾಯಕಾರರ ಮಿಂಡ ಮುಂತಾದ ವಿಶೇಷಣಗಳಿಂದ ಕರೆಯಲಾಗುತ್ತದೆ. ಇಡೀಕಾವ್ಯದ ಮುಖ್ಯಧಾರೆ ಬೀರಪ್ಪನಾದರೆ, ಅವನಿಗೆ ಅನುಸರಿಸಿಕೊಂಡು ಕಾವ್ಯದ ಪೂರ್ವಾರ್ಧದಲ್ಲಿ ಮಾಯವ್ವ, ಉತ್ತರಾರ್ಧದಲ್ಲಿ ಮಾಳಿಂಗರಾಯ ಕಾಣುತ್ತಾರೆ. ಮಾಳಿಂಗರಾಯನ ಬೆನ್ನ ಹಿಂದಿನ ಬಲವಾಗಿ ಬೀರಪ್ಪ ತೋರುತ್ತಾನೆ.

ಮುಖ್ಯವಾಗಿ ಈ ಕಾವ್ಯ ಒಕ್ಕಲುತನ ಉದ್ಯೋಗವಾಗಿಸಿಕೊಂಡ ಮತ್ತು ಹೈನುಗಾರಿಕೆಗೆ ಸಂಬಂಧಿಸಿದ ಕುರಿ, ಆಕಳು, ಎಮ್ಮೆ ಸಾಕುವ ಜನಾಂಗಗಳಿಗೆ ಸಂಬಂಧಿಸಿದ್ದಾಗಿದೆ. ಇಂತಹ ಬದುಕಿನ ಜನಗಳ ಪುರಾತನ ಚಾರಿತ್ರಿಕ ವ್ಯಕ್ತಿಯಾಗಿ, ಒಮ್ಮೊಮ್ಮೆ ಪೌರಾಣಿಕ ವ್ಯಕ್ತಿಯಾಗಿ ಬೀರಪ್ಪ ನಮಗೆ ಕಾಣಿಸುತ್ತಾನೆ.

ಈ ಕಾವ್ಯದಲ್ಲಿ ಭೂಮಿಯ ಮೇಲೆ ಕುರಿ ಕಾಯುವ ಕೆಲಸ ಮಾಡುವರು ಹೆಣ್ಣುಮಕ್ಕಳು. ಕೈಲಾಸದ ಕುರಿಗಳನ್ನು ಭೂಮಿಗೆ ಹೊಡೆತಂದಾಕೆಯೂ ಪಾರ್ವತಿಯೇ. ದಿಟ್ಟೆಯ

ಬಿಬರಾಯನ ಏಳು ಜನ ಹೆಣ್ಣುಮಕ್ಕಳು. ಏಳು ಹಿಂಡು ಕುರಿಗಳನ್ನು ಕಾಯುತ್ತಿದ್ದರು. ಇವುಗಳನ್ನೇ ಮುಂದೆ ಬೀರಪ್ಪನನ್ನು ಸಲುಹಿದ ಮಾಯವ್ವ ಕಾಯುತ್ತಾಳೆ. ಈ ಮಾಯವ್ವ ಬಿಬರಾಯನ ಸಾಕುಮಗಳು. ಈಕೆಯು ಕುರಿಗಳನ್ನೇ ಬೀರಪ್ಪ ಕಾಯುವುದು. ಹೀಗೆ ಬೀರಪ್ಪ ಕಾಯ್ದ ಕುರಿಗಳನ್ನೇ ಮಾಳಿಂಗರಾಯ ಕಾಯುವುದು. ಆದರೆ ಮಾಳಿಂಗರಾಯನು ಆಕಳುಗಳನ್ನು ಕಾಯುವ ಮನೆತನಕ್ಕೆ ಸೇರಿದವನು. ಈ ಕಾವ್ಯದಲ್ಲಿ ಎಮ್ಮೆ ಕಾಯುವ ಗೌಳಿಗರ ಪ್ರಸ್ತಾಪವೂ ಬಂದು, ಆಕಳು ಕಾಯುವ ಮತ್ತು ಎಮ್ಮೆ ಕಾಯುವ ಜನಗಳ ನಡುವೆ ಸಂಘರ್ಷ ನಡೆಯುವುದನ್ನು ಈ ಕಾವ್ಯದ ಘಟನೆಗಳಲ್ಲಿ ಕಾಣುತ್ತೇವೆ.

ಆದರೆ ಕುರಿಗಳು ಶಾಂತಸ್ವಭಾವದ ಹೈನದ ಪ್ರಾಣಿಗಳಾಗಿ, ಕೊನೆಗೆ ಕುರಿಕಾಯುವರೇ ಕುರುಬರೆಂದು ಪ್ರಸಿದ್ಧರಾಗಿ, ಬೀರಪ್ಪನ ಉದ್ಯೋಗವನ್ನೇ ಈ ಜನಾಂಗ ಮುಂದುವರೆಸಿದ್ದನ್ನು ಕಾಣುತ್ತೇವೆ. ಕಾಡಿನ ಕುರಿಗಳನ್ನು, ಕಾಡಾಕಳುಗಳನ್ನು ಪಳಗಿಸಿ, ಬದುಕಿನ ಸಂಪತ್ತನ್ನಾಗಿ ಪರಿವರ್ತಿಸುವ ಮಹತ್ವದ ಚಾರಿತ್ರಿಕ ದಾಖಲೆಗಳೂ ಈ ಕಾವ್ಯದಲ್ಲಿ ದೊರೆಯುತ್ತವೆ.

ಬೀರಪ್ಪನು ಜನಿಸಿದ ಕೂಡಲೇ ಆತನ ಸೋದರಮಾವನಾದ ಕಾಳಿನಾರಾಯಣ-ಬೀರಪ್ಪನಿಂದ ತನ್ನ ಜೀವಕ್ಕೆ ಅಪಾಯವಿದೆಯೆಂದು ಪೈಲ್ವಾನರಿಂದ ಅರಣ್ಯಕ್ಕೆ ಸಾಗಿಸಿ, ಒಣಗಿದ ಗಿಡಕ್ಕೆ ತೊಟ್ಟಿಲು ಕಟ್ಟಿಸುತ್ತಾನೆ. ಈ ತೊಟ್ಟಿಲನ್ನು ಹೊತ್ತುಕೊಂಡು ಬಂದ ಪೈಲ್ವಾನರು ಹಸಿವು, ನೀರಡಿಕೆಯಾಗಿ ತಾಯಿ ಸೂರಮ್ಮದೇವಿ ಇರಿಸಿದ ತೊಟ್ಟಿಲಿನ ನೈವೇದ್ಯ, ಮಗಿಯ ನೀರು ಕಂಡು, ಇದ್ದಷ್ಟು ತಿನ್ನೋಣವೆಂದು ಕುಳಿತರೆ, ಆ ನೈವೇದ್ಯ ಮತ್ತು ಮಗಿನೀರು ಸರಿಯುವುದೇ ಇಲ್ಲ. ಮುಂದೆ ಸಿರಿವಂತಿಕೆ ಕಳೆದುಕೊಂಡ ಡಂಕನಾಥ ದೈಗೊಂಡನು ಬೀರಪ್ಪನಲ್ಲಿ ಹರಿಕಿ ಹೊರಲು ಹೊರಟರೆ, ಆತ ಉಣ್ಣುವ ಬುತ್ತಿ ಸವೆಯದಂತಾಗುತ್ತದೆ, ಒಣಗಿದ ಬಾವಿಗಳು ಸೆಲೆಯೊಡೆಯುತ್ತವೆ.

ಬದುಕಿನ ಆಧಾರಗಳಾದ ಒಕ್ಕಲುತನ ಮತ್ತು ಹೈನುಗಾರಿಕೆಯನ್ನವಲಂಬಿಸಿ ಬದುಕುವ ಜನರ ದೈವಕ್ಕೆ ಸಂಬಂಧಿಸಿದ ಇನ್ನೊಂದು ಮುಖ್ಯ ಸಂಗತಿ ಎಂದರೆ ಭಕ್ತಿ. ಇಲ್ಲಿ ಕೈಲಾಸಕ್ಕೂ ಭೂಲೋಕಕ್ಕೂ ಬಹಳ ಸರಳವಾದ ಓಡಾಟ, ಸಂಬಂಧಗಳೆಲ್ಲ ಕಾಣಿಸುತ್ತವೆ. ಕೈಲಾಸದಲ್ಲಿರುವ ಶಿವನ ಪೂಜಾರಿಯಾಗಿ ಭೂಲೋಕದ ಕಾಳಿನಾರಾಯಣ ಕಾಣುತ್ತಾನೆ. ಶಿವನು ಈ ಕಾಳಿನಾರಾಯಣನಿಂದಲೇ ಕಾಡಿಬೇಡಿ ವಿವಿಧ ಬಗೆಯಿಂದ ಪೂಜೆಗೈಸಿಕೊಳ್ಳುತ್ತಾನೆ.

ಹಾಗೆಯೇ ಬೀರಪ್ಪ ತನ್ನ ಪೂಜಾರಿಯಾದ ಮಾಳಿಂಗರಾಯನಿಂದ ಪೂಜೆಗೈಸಿಕೊಳ್ಳುತ್ತಾನೆ. ಬೀರಪ್ಪನ ತಂದೆ ಬಾಳ ಭರಮದೇವರು, ಶಿವನ ಲೀಲೆಯಿಂದಾಗಿ ಭೂಲೋಕದ ಕಮಳಾದೇವಿಯಲ್ಲಿ ಜನಿಸಿದವ. ಪಾರ್ವತಿಯಿಂದಲೇ ಜೋಪಾನಗೊಂಡವ. ಬಾಳ ಭರಮನ ಹೆಂಡತಿ ಸೂರಮ್ಮದೇವಿ ಶಿವನ ಪೂಜಾರಿಯಾದ ಕಾಳಿನಾರಾಯಣನ ತಂಗಿ. ಈ ಸೂರಮ್ಮದೇವಿ ಮತ್ತು ಬಾಳಭರಮರ ಮಗನಾಗಿ, ಶಿವನ ಚೆವರ ಸೇವನೆಯಿಂದ ಜನಿಸಿದವನು ಬೀರಪ್ಪ. ಹೀಗಾಗಿ ಬೀರಪ್ಪನನ್ನು ಶಿವನ ಪ್ರತಿಸ್ವರೂಪನನ್ನಾಗಿಯೇ ಈ ಕಾವ್ಯ ವರ್ಣಿಸುತ್ತದೆ. ಅರ್ಥಾತ್ ಬೀರಪ್ಪ ಭೂಲೋಕದಲ್ಲಿರುವ ಶಿವಸ್ವರೂಪಿ ಮಾನವ. ಆದ್ದರಿಂದ ಈತ

ಯಾರಿಗೂ ಪೂಜೆ ಮಾಡುವ ಪ್ರಸಂಗ ಕಾಣಲಾರೆವು. ಬೀರಪ್ಪನು ತನಗೊಬ್ಬ ಶಿಷ್ಯನನ್ನು ಅವನಿಂದಲೇ ಬೇಡಿ ಪಡೆಯುತ್ತಾನೆ. ಆತನೇ ಮಾಳಿಂಗರಾಯ. ಹೀಗಾಗಿ ಬೀರಪ್ಪನ ಪೂಜಾರಿಯ ರೂಪದಲ್ಲಿ ಮಾಳಿಂಗರಾಯ ಕಾಣಿಸುತ್ತಾನೆ. ಬೀರಪ್ಪ ಶಿವನಂತೆ ದೇವರಾಗಿಯೇ ತೋರುತ್ತಾನೆ.

ಹೀಗಾಗಿ 'ಜನಪದ ಹಾಲುಮತ ಮಹಾಕಾವ್ಯ'ದಲ್ಲಿ ದೇವರು-ಪೂಜಾರಿ-ಭಕ್ತ ಎಂಬ ಮೂರು ತತ್ತ್ವಗಳು ಕಾಣಸಿಗುತ್ತವೆ. ಗುರು-ದೇವರಾಗಿ, ಶಿಷ್ಯ-ಪೂಜಾರಿಯಾಗಿ, ನಿಷ್ಠೆವುಳ್ಳವ-ಭಕ್ತನಾಗಿ ಕಾಣುತ್ತಾನೆ. ಹೀಗಾಗಿ ಗುರು-ದೇವರು ಎಂದರೆ ಬೀರಪ್ಪ, ಶಿಷ್ಯ-ಪೂಜಾರಿ ಎಂದರೆ ಮಾಳಿಂಗರಾಯ- ಎಂದು ಆದರ್ಶರಾಗಿ ಚಿತ್ರಿತರಾಗಿದ್ದಾರೆ.

ದೇವರು ಮತ್ತು ಪೂಜಾರಿಯಲ್ಲಿರುವ ಅನ್ಯೋನ್ಯತೆ ಎಂತಹದು ಎಂಬುದನ್ನು ಅರಿಯಲು ನಮಗೆ ಈ ಕಾವ್ಯದಲ್ಲಿ ಒಂದು ಉದಾಹರಣೆ ದೊರೆಯುತ್ತದೆ. ಒಬ್ಬ ಭಕ್ತನು ಬೀರಪ್ಪನಿಗೆ 'ಬಾನದಬುತ್ತಿ' ತರುತ್ತಿದ್ದಾನೆ. ದಾರಿಯಲ್ಲಿ ಮಾಳಿಂಗರಾಯ ತನಗೆ ಹಸಿವಾಗಿರುವುದರಿಂದ ಆ ಬುತ್ತಿ ಬೇಡುತ್ತಾನೆ. ಆದರೆ ಅದನ್ನು ದೇವರಿಗೆ ಒಯ್ಯುತ್ತಿರುವುದರಿಂದ ಬುತ್ತಿ ಕೊಡಲಾಗುವುದಿಲ್ಲ ಎಂದು ಹೇಳಿದ ಭಕ್ತ, ಬೀರಪ್ಪನಲ್ಲಿಗೆ ಬಂದು ನೈವೇದ್ಯ ಅರ್ಪಿಸುತ್ತಾನೆ. ಬುತ್ತಿ ಬಿಚ್ಚಿ ನೋಡಿದರೆ, ಬುತ್ತಿಯ ತುಂಬ ಹುಳಗಳಾಡುತ್ತವೆ. ದಾರಿಯಲ್ಲಿ ಯಾರಾದರೂ ಬುತ್ತಿ ಬೇಡಿದ್ದರೆ? ಎಂದು ಬೀರಪ್ಪ ಕೇಳಲಾಗಿ, ಹೌದೆನ್ನುತ್ತಾನೆ. ಆತ ಮಾಳಿಂಗರಾಯ ಎಂಬುದನ್ನು ಅರಿತುಕೊಂಡ ಬೀರಪ್ಪ, ಮಾಳಿಂಗರಾಯನಿಗೇ ಸಲ್ಲದ ಬುತ್ತಿ ನನಗೆ ಬೇಡ ಎಂದು ಹೇಳುತ್ತಾನೆ. ಪೂಜಾರಿ ಮತ್ತು ದೇವರ ಅನ್ಯೋನ್ಯತೆಯನ್ನು ಈ ಘಟನೆ ಬಿತ್ತರಿಸುತ್ತದೆ. ಅದಕ್ಕಾಗಿ ಈ ಕಾವ್ಯ ಸಾರುವುದು.

ಹಾಲಿನಂತವ ದೇವರ ಸೀತಾಳದಂತವ ಪೂಜಾರಿ
ಸೀತಾಳದಂತವ ಪೂಜಾರಿ ಸಮುದುರುದಂತಹ ಭಕ್ತನ

ಈ ದೇವರು-ಪೂಜಾರಿ-ಭಕ್ತ ಈ ಮೆಟ್ಟಿಲಿನ ತತ್ತ್ವದ ಪರಿಷ್ಕರಣೆಯಿಂದ ವೀರಶೈವದಲ್ಲಿ ದೇವರು-ಭಕ್ತ ಎಂಬ ಎರಡೇ ತತ್ತ್ವಗಳನ್ನು ಉಳಿಸಿಕೊಂಡಂತೆ ತೋರುತ್ತದೆ.

ಜನಪದ ಸಾಂಸ್ಕೃತಿಕ ನಾಯಕನ ಜೀವನವನ್ನು ಅವಲೋಕಿಸಿದರೆ ಅವರ ಬದುಕು ಮತ್ತು ವ್ಯಕ್ತಿತ್ವದೊಂದಿಗೆ ಒಂದಿಷ್ಟು ಪೌರಾಣಿಕ ಅಂಶಗಳನ್ನು ಬೆರಸಿ ಹೇಳುವ ಪದ್ಧತಿ ಜನಪದದಲ್ಲಿದ್ದುದು ಸಾಮಾನ್ಯವಾಗಿ ತೋರುತ್ತದೆ. ಇದಕ್ಕೆ ಹಲವಾರು ಕಾರಣಗಳನ್ನು ಗುರುತಿಸಿಕೊಳ್ಳಬಹುದಾಗಿದೆ. ಈ ನಾಯಕರು ತಮ್ಮ ಜನಗಳಿಗಾಗಿ ಯಾವುದೇ ಉಪದೇಶದಂತಹ ತಾತ್ತ್ವಿಕ ಮಾತುಗಳನ್ನು ಆಡಲಾರರು. ಅವರ ಬದುಕೇ ಒಂದು ಆದರ್ಶವಾಗಿದ್ದು; ಅದಕ್ಕಾಗಿ ಜನ ಅವರನ್ನು ದೇವರೆಂದೂ, ಬೇಡಿದ್ದನ್ನು ಕೊಡುವ ಶಕ್ತಿ ಇಂತಹವರಿಗೆ ಇರುವುದೆಂದೂ ನಂಬುತ್ತಾರೆ ಮತ್ತು ಪೂಜಿಸುತ್ತಾರೆ. ಈ ನಂಬುಗೆಗಳೇ ಕಾರಣವಾಗಿ ಅನೇಕ ಪೌರಾಣಿಕ ಸಂಗತಿಗಳನ್ನು ಸೃಷ್ಟಿಸುತ್ತಾರೆ. ಈ ಪೌರಾಣಿಕ ಸಂಗತಿಗಳ ಮಹತ್ವವೆಂದರೆ ತಮ್ಮ ದೈವವನ್ನು ಅವರ ವ್ಯಕ್ತಿತ್ವವನ್ನು ಇನ್ನಷ್ಟು ಬೆಳಗಿಸುವುದು ಮತ್ತು ಪ್ರಸ್ತುತ ಬದುಕಿನ ಜೊತೆಗೆ ಆ

ನಾಯಕರ ಸಂಬಂಧವನ್ನು ಬೆಸೆದುಕೊಳ್ಳುವುದು; ವರ್ತಮಾನ ಮಹತ್ವವನ್ನು ಬಿತ್ತರಿಸುವುದು. ಇವುಗಳ ಜೊತೆ ಈ ಕೆಲವು ಅಂಶಗಳನ್ನು ಗುರುತಿಸಿಕೊಳ್ಳುವ ಅಗತ್ಯ ಇರುತ್ತದೆ.

೧. ತಾವು ದೈವವೆಂದು ಸ್ವೀಕರಿಸುವ ನಾಯಕನ ವ್ಯಕ್ತಿತ್ವವು ಇತರ ಜನಾಂಗದ ನಾಯಕರಿಗಿಂತ ಕಡಿಮೆ ಎನಿಸಬಾರದು.

೨. ಮುಖ್ಯವಾಗಿ ಈ ನಾಯಕ ದುಷ್ಟ ವ್ಯಕ್ತಿಗಳನ್ನು, ಸಂಗತಿಗಳನ್ನು ಎದುರಿಸಬೇಕಾಗುವಾಗ, ಯಾವುದೇ ತೊಂದರೆಗೆ ಸಿಲುಕಬಾರದು; ಅವೆಲ್ಲಾ ನಿರಾಯಾಸವಾಗಿ ದೂರಾಗಬೇಕು.

೩. ಇಂತಹ ವ್ಯಕ್ತಿ ಅದ್ಭುತ ಅಸಾಮಾನ್ಯವೆನಿಸುವಂತಿರಬೇಕು.

-ಇಂತಹ ನಾಯಕನನ್ನು ಬಯಸುವ ಸಂದರ್ಭದಲ್ಲಿ ಜನಪದರು ಇಟ್ಟುಕೊಳ್ಳುವ ಸಾಮಾನ್ಯ ಮಾನದಂಡಗಳೆಂದರೆ:

೧. ದೈವದ ಅನುಗ್ರಹದಿಂದ ಗರ್ಭದಲ್ಲಿ ಮೂಡುವುದು

೨. ಅಯೋನಿಜ ಮತ್ತು ಮೃತ್ಯುಂಜಯನಾಗುವುದು

೩. ಮಾಂತ್ರಿಕ-ಅಸಾಮಾನ್ಯ ಶಕ್ತಿಯ ಸ್ಪರ್ಶ ಪಡೆದಿರುವುದು.

೪. ಸಮಾಜಮುಖಿ ಬೆಳವಣಿಗೆ

೫. ರೌದ್ರಾವತಾರಿ-ವೀರಯೋಧನಾಗುವುದು

೧. ದೈವದ ಅನುಗ್ರಹದಿಂದ ಗರ್ಭ

ಈ ಕಾವ್ಯ ಬೀರಪ್ಪನಿಗೆ ಸಂಬಂಧಿಸಿದಂತೆ ಪ್ರಾರಂಭವಾಗುವುದು. ಬಂಜೆಯ ಸಮಸ್ಯೆಯಿಂದಲೇ. ಬೀರಪ್ಪನ ತಂದೆ ಬಾಳಭರಮನಿಗೆ ತಂಗಿಯನ್ನು ಕೊಟ್ಟು ಮದುವೆ ಮಾಡಿದ ಕಾಳಿನಾರಾಯಣನೇ ಬಂಜೆ ಎಂದು ಹಂಗಿಸುತ್ತಾನೆ. ಇದನ್ನು ತಿಳಿದ ಸೂರಮ್ಮದೇವಿ ಶಿವನಲ್ಲಿಗೆ ಹೋಗಿ, ಉಗ್ರ ತಪಗೈದು ತನ್ನ ಹಣೆಬರಹದಲ್ಲಿಲ್ಲದ ಮಕ್ಕಳ ಫಲವನ್ನು ಬೇಡುತ್ತಾಳೆ. ಶಿವನು ಅನಿವಾರ್ಯ ಕೊನೆಗೆ ತನ್ನ ಹಣೆಯ ಬೆವರನ್ನೇ ನೀಡುತ್ತಾನೆ. ಶಿವನು ಬಾಳಭರಮ-ಸೂರಮ್ಮದೇವಿಯರು ಶಿವನ ಬೆವರನ್ನು ಸೇವಿಸಲು ಬೀರಪ್ಪ ಸೂರಮ್ಮದೇವಿಯ ಗರ್ಭದಲ್ಲಿ ಮೂಡುತ್ತಾನೆ.

೨. ಅಯೋನಿಜ ಮತ್ತು ಮೃತ್ಯುಂಜಯ

ಬೀರಪ್ಪನ ಸೋದರಮಾವನಾದ ಕಾಳಿನಾರಾಯಣ, ತಂಗಿ ಸೂರಮ್ಮದೇವಿಯ ಗರ್ಭದಲ್ಲಿ ಮೂಡಿರುವ ಭ್ರೂಣವನ್ನು ಮುಗಿಸಿಹಾಕಲು ನಾನಾ ತರಹ ಪ್ರಯತ್ನಗಳನ್ನು ಮಾಡುತ್ತಾನೆ. ವಿಷದ ಬುತ್ತಿ ಗರ್ಭಿಣಿ-ತಂಗಿಗೆ ತಿನ್ನಿಸಬೇಕೆಂದು ಅಣ್ಣ ಬರುವಾಗ ಗರ್ಭಸ್ಥ ಶಿಶು ತಾಯಿ -ಕನಸಿನಲ್ಲಿ ವಿಷದ ಬುತ್ತಿಯ ಸಮಾಚಾರವನ್ನರಹುತ್ತದೆ. ಬುತ್ತಿ ಊಟ ಮಾಡುವ ಮೊದಲು ಒಂದು ತುತ್ತು ಗರ್ಭಿಣಿ ನಾಯಿ, ಬೆಕ್ಕಿಗೆ ಹಾಕಿ ಪರೀಕ್ಷಿಸುವಂತೆ ಎಚ್ಚರಿಸುತ್ತದೆ. ಆತ ತರುತ್ತಿರುವ ವಿಷದ ಸೀರೆ. ಕುಪ್ಪಸ, ದಂಡಿಗಳನ್ನು ಬೇರೆ ಬೇರೆ ವಸ್ತುವಿನ ಮೇಲೆ ಹಾಕಿ ಪರೀಕ್ಷಿಸಲು ಹೇಳುತ್ತದೆ.

ಅಣ್ಣ ಮನೆಗೆ ಬಂದಾಗ ಸೂರಮ್ಮದೇವಿ ಆತ ತಂದ ಬುತ್ತಿಯ ಒಂದು ತುತ್ತನ್ನು

ಗರ್ಭಿಣಿ ಬೆಕ್ಕು, ನಾಯಿಗೆ ಒಗೆಯುತ್ತಾಳೆ. ಅವು ಕಂದಲ ಹಾಕಿಕೊಂಡು ಸುತ್ತು ಬೀಳುತ್ತವೆ. ಸೀರೆ ಕುಬ್ಬಸ, ದಂಡಿಗಳನ್ನು ತಗುಲಿಸಿದ ಕಟ್ಟಿಗೆಯ ಸಾಮಾನುಗಳೆಲ್ಲ ಉರಿದು ಬೀಳುತ್ತವೆ. ಹೀಗಾಗಿ ಇದರಿಂದ ಸೂರಮ್ಮದೇವಿ ಪಾರಾಗುತ್ತಾಳೆ. ಕಾಳಿನಾರಾಯಣ ಮತ್ತೆ ಕೂಸು ಜನಿಸುವ ಕಾಲಕ್ಕೆ, ಅದು ಗರ್ಭದಿಂದ ಹೊರಗಾದ ಕೂಡಲೇ ಕೊಲ್ಲಲು ಉಕ್ಕಿನ ಉಗುರುಗಳೊಂದಿಗೆ ಮೂರು ಸೂಲಗಿತ್ತಿಯವರನ್ನು ಕಳಿಸುತ್ತಾನೆ. ಅವರು ಎಲ್ಲರನ್ನು ಹೊರಗೆ ಕಳಿಸಿ, ಗರ್ಭಿಣಿಯ ಕಣ್ಣುಕಟ್ಟಿ, ಉಕ್ಕಿನ ಉಗುರುಗಳನ್ನು ಸಿಕ್ಕಿಸಿಕೊಂಡು ತಯಾರಾಗುತ್ತಾರೆ. ಕಾವ್ಯ ನಮಗೆ ಒರೆಯುತ್ತದೆ; -

> ಲಿಂಗ ಬೀರಣ್ಣ ದೇವರ ಹೊಟ್ಟಿ ಒಳಗೇನಂದಾನ
> ಘಾತವಾಯಿತಂದಾನೆ ಮೋಸವಾಯಿತಂದಾನ
> ಲಿಂಗ ಬೀರಣ್ಣ ದೇವರೆ ಹೊಟ್ಟಿ ಒಳಗೆ ನಿಂತಾನ
> ಉರದ ಬೆಂಕಿನಾದನೆ ತೆಲಿವಂದು ಖೆಂಡನಾದವ
> ಗಾಡಿಕಾರನ ಗಂಡನೆ ಮೋಡಿಕಾರನ ಮಿಂಡನೆ
> ಕೋಲಮಿಂಚ ಹೊಡೆದಾವೆ ಗಡಗಡ ಗದ್ದಣಕಿ ಆದಾವ
> ಮೂರಮಂದಿ ನಾರ್ಯಾರಿಗ ಕಣ್ಣ ಕಟ್ಟಿದ್ರಂಗಾಯಿತ
> ಲಿಂಗ ಬೀರಣ್ಣ ದೇವರ ಬಯಲಿಗ ಜಿಗದು ನಿಂತಾನ
> ಸೂಲಗಿತ್ತಿ ಸುಬ್ಬವಗ ಬಾಯಿ ಮ್ಯಾಲ ಒದ್ದಾನ
> ನಡುವ ಹಿಡಿಯ ನಾಗವ್ವಗ ಟೊಂಕದಮ್ಯಾಲೆ ಒದ್ದಾನ
> ಸುದ್ದಿ ಒಯ್ಯ ಸುಬ್ಬವಗ ಬೆನ್ನಿನ ಮ್ಯಾಲ ಒದ್ದಾನ
> ಮೂರು ಮಂದಿ ನಾರೇರ ಏಳುತ ಬೀಳುತ ಓಡ್ಯಾರ
> ಲಿಂಗಬೀರಣ್ಣ ದೇವರ ತಾಯಿ ಮುಂದ ಮನಗ್ಯಾನ

ಹೀಗೆ ಕ್ರೋಧಗೊಂಡು ಒಮ್ಮೆಲೇ ಗರ್ಭದಿಂದ ಸಿಡಿದು ನಿಂತ ಬೀರಪ್ಪ ಮಿಂಚಿನ ರೂಪದವನಾಗಿ, ಹೆಂಗಸರನ್ನು ಒದ್ದೋಡಿಸಿ, ಮಗುವಾಗಿ ತಾಯಿ ಮಗ್ಗಲಿಗೆ ಮಲಗುತ್ತಾನೆ.

ಇಂತಹ ಬೀರಪ್ಪನ ಸಾವನ್ನು ಕಾವ್ಯ ಹೇಳುವುದೇ ಇಲ್ಲ. ಹಾಲುಮತ ಪುರಾಣದ ಪ್ರಮುಖ ಪಾತ್ರಗಳು ತಮ್ಮ ಕ್ರಿಯೆ ಮುಗಿದಂತೆಲ್ಲ ಅಲ್ಲಲ್ಲೇ ಕರಗಿ ಬಿಡುತ್ತವೆ. ಅದರಲ್ಲೂ ಬೀರಪ್ಪ ಮಾಳಿಂಗರಾಯ, ಮಾಯವ್ವ, ಇವರ ಸಂಬಂಧದಲ್ಲಿ ಕಾವ್ಯ ಅತ್ಯಂತ ಗೌರವದ ಭಾವನೆ ಇಟ್ಟುಕೊಂಡಿರುವುದನ್ನು ಕಾಣುತ್ತೇವೆ. ಇವರೆಲ್ಲ ತಮ್ಮ ಕ್ರಿಯೆ ಮುಗಿದಂತೆ ಅಲ್ಲಲ್ಲಿ ನೆನೆಯುತ್ತ ಹೋಗುತ್ತಾರೆ.

ಜನಪದರ ಹುಟ್ಟು ಮತ್ತು ಸಾವುಗಳ ಈ ಬಗೆಯ ನಿರೂಪಣೆಯ ತಂತ್ರಗಳನ್ನು ಶಿಷ್ಟರು ಅಯೋನಿಜ ಮತ್ತು ಮೃತ್ಯುಂಜಯ ಪರಿಕಲ್ಪನೆಗಳಾಗಿ ಬೆಳಸಿಕೊಂಡಂತೆ ತೋರುತ್ತದೆ.

೩. ಅಸಾಮಾನ್ಯ ಶಕ್ತಿಯ ಸ್ಪರ್ಶ

ಬೀರಪ್ಪನದು ಆಗಾಧ ವ್ಯಕ್ತಿತ್ವ. ಕಪ್ಪಿಲಿ ಕರಿಚಲುವನಾದ ಈತನು ಕೆಕ್ಕರಗಣ್ಣು, ಕ್ವಾರಿಮೀಸಿ, ಬೆಳ್ಳಿ ಉಡದಾರ, ಬಂಗಾರ, ಚೆಂಡಿಕಿ, ಕಾಲಲಿ ಪದ್ಮವುಳ್ಳವನೆಂದು ಕಾವ್ಯ

ನಮಗೆ ಪರಿಚಯಿಸುತ್ತದೆ. ಸಕ್ಕರೆ ಮುತ್ತು ಅತ್ತರೆ ಹವಳ ಉದರುವ ವಿಲಕ್ಷಣ ಸ್ವರೂಪದವನಾದ ಈತ ಗಾರುಡಿಕಾರನ ಗಂಡನೂ, ಮೋಡಿಕಾರನ ಮಿಂಡನೂ ಆಗಿದ್ದಾನೆ. ಬೇಕಾದಾಗ ಬೇಕಾದಲ್ಲಿ ಕಾಣಿಸುವ ಈತ ಹುಟ್ಟುತ್ತಲೇ ಸೂಲಗಿತ್ತಿಯವರನ್ನು ಒದ್ದೋಡಿಸಿ ಕೂಸಾಗಿ ತಾಯಿ ಮಗ್ಗಲಿಗೆ ಮಲಗಿದುದನ್ನು ಹಿಂದೆ ಉಲ್ಲೇಖಿಸಲಾಗಿದೆ. ತಾನು ಮೋಹಿಸಿದ ಕಸ್ತೂರಿ ಕಾಮವ್ವನಲ್ಲಿ ತಲುಪಲು ಸ್ಫುರದ್ರೂಪಿ ಹೆಣ್ಣಾಗಿ, ಬಳೆಗಾರ ವೇಷದ ಮುದುಕನಾಗಿ, ಸೂತ್ರದ ತೇಜಿಯ ಮೇಲೆ ಕುಳಿತು ಆಕಾಶದಲ್ಲಿ ಹಾರುವವನಾಗಿ, ಚಿಗುರಿಯಾಗಿ, ಚೇಳಾಗಿ, ಹಾವಾಗಿ ಕೊನೆಗೆ ಲಿಂಗವಾಗಿ, ಮಾಳಪ್ಪ ಕರೆದಲ್ಲಿ ಕೂಡಲೇ ಹಾಜರಾಗುವವನಾಗಿ ಅದ್ಭುತ ಮತ್ತು ಅಸಾಮಾನ್ಯ ಶಕ್ತಿವುಳ್ಳವನಾಗಿ ಬೀರಪ್ಪ ನಮಗೆ ಕಾಣುತ್ತಾನೆ. ಈ ಎಲ್ಲ ಮಾಂತ್ರಿಕ ಶಕ್ತಿಯ ಜೊತೆ ದೈವೀ ಸ್ಪರ್ಶವುಳ್ಳವನಾಗಿ ಕಾಣಲು ಕಾವ್ಯ ಅವನಲ್ಲಿ ಪೌರಾಣಿಕ ಲಕ್ಷಣಗಳನ್ನು ಬೆರಸಿ ಹೇಳಲು ಬಯಸುತ್ತದೆ. ಅಷ್ಟೇ ಅಲ್ಲ ಬೀರಪ್ಪನನ್ನು ದೈವವಾಗಿಯೇ ಕಾಣಲು ಬಯಸುತ್ತದೆ.

ಬೀರಪ್ಪ ಹುಟ್ಟುತ್ತಲೇ ಕೆಟ್ಟಶಕುನ ಹೊಂದಿರುವುದರಿಂದ ಅವನನ್ನು ಮನೆಯಲ್ಲಿಟ್ಟುಕೊಳ್ಳಬಾರದೆಂದು ಅಡವಿಗೆ ಸಾಗಿಸುವಲ್ಲಿ ಸೋದರಮಾವ ಯಶಸ್ವಿಯಾಗುತ್ತಾನೆ. ಕೂಸು ಹಾಕಿದ್ದ ತೊಟ್ಟಿಲು ನಾಲ್ಕು ಜನ ಪೈಲ್ವಾನರಿಗೆ ನೆಲಬಿಟ್ಟು ಮೇಲೇಳಲಿಲ್ಲ. ಆದರೆ ತಾಯಿ ಬಂದು ಕೈ ಮುಟ್ಟಿದರೆ ತೊಟ್ಟಿಲು ಪೈಲ್ವಾನರಿಗೆ ಹಗುರವಾಗಿ ಮೇಲಕ್ಕೆತ್ತಲು ಸಾಧ್ಯವಾಯಿತು. ಅವರ ಹೆಗಲ ಮೇಲೆ ತೊಟ್ಟಿಲು ಅಂತರವೇ ಚಲಿಸುತ್ತಿತ್ತು ಎಂಬಂತಹ ವಿವರಗಳೇನಕವು ಅವನಲ್ಲಿ ದೈವೀಶಕ್ತಿಯನ್ನು ಕಾಣಲು ಬಯಸಿದ ಮಾತುಗಳು.

ಬೀರಪ್ಪ ಅಸುರರನ್ನು ಸಂಹರಿಸಲು ನಿಂತಾಗಲಂತು ಕಾವ್ಯ ಅವರ ರೂಪವನ್ನು ಪರಿಚಯಿಸುವ ರೀತಿ ಇನ್ನೂ ಅದ್ಭುತವಾಗಿದೆ. 'ಪಾತಾಳದಾಗ ಇವನ ಪಾದೇನ ಕೈಲಾಸದಾಗಿವನ ಕಳಸೇನ' ಎಂದು ಹೇಳುವಾಗ, ವಚನಕಾರರು ದೇವರ ಲಕ್ಷಣವನ್ನು ಬಣ್ಣಿಸುವ 'ಪಾತಾಳದಿಂದತ್ತತ್ತ ನಿಮ್ಮ ಚರಣ| ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ' ಎಂಬ ಮಾತುಗಳು ಸುಳಿದುಹೋಗುತ್ತವೆ. 'ಮುಳ್ಳಿನಕಿನ್ನ ಮೊನಿ ಆಗ್ಯಾನೆ ಕಲ್ಲಿನಕಿನ್ನ ಕೊನಿ ಆಗ್ಯಾನೆ' ಎನ್ನುವಲ್ಲಿ 'ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯ' ಎಂಬ ವಚನ ಸಾಲುಗಳೂ ನೆನಪಿಗೆ ಬರುತ್ತವೆ.

೪. ಸಮಾಜಮುಖಿ ಬೆಳವಣಿಗೆ

ಬೀರಪ್ಪನು ಹುಟ್ಟುತ್ತಲೇ ಮನೆ ಹೊರಗೆ ಆಗುವ ಸನ್ನಿವೇಶದಲ್ಲಿ ಆತ- ಕೇವಲ ಒಂದು ಮನೆಗಾಗಿ ಅಲ್ಲ ಸಮಾಜಕ್ಕಾಗಿ ಎಂಬ ಸಾಂಕೇತಿಕತೆ ಅಡಗಿದಂತಿದೆ. ಪರದೇಶಿಯಾದ ಬೀರಪ್ಪ ಇನ್ನೊಬ್ಬ ಪರದೇಶಿಯಾದ ಮಾಯವ್ವನ ಉಡಿಯಲ್ಲಿ ಬಿದ್ದು ಬೆಳೆಯುತ್ತಾನೆ. ಹೀಗೆ ಹುಟ್ಟುತ್ತಲೇ ಬೀರಪ್ಪನ ತಿರುಗಾಟ ಪ್ರಾರಂಭವಾಗುತ್ತದೆ. ಆತ ಚಂಡಿನಾಟದಲ್ಲಿ ಹೊಡೆದ ಒಂಬತ್ತು ಲಗ್ಗೆಗಳು ಬಿದ್ದ ಒಂಬತ್ತು ಊರುಗಳಲ್ಲಿ ಒಂದೊಂದು ಮಠಗಳಾದವೆಂದು ಕಾವ್ಯ ಚಿತ್ರಿಸುತ್ತದೆ. ಆ ಮಠಗಳೆಲ್ಲ ಬೀರಪ್ಪನ ಮಠಗಳೆಂದು ಜನ ಇವತ್ತಿಗೂ ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಬೀರಪ್ಪನು ಯೌವ್ವನಕ್ಕೆ ಬಂದು ಸೋದರಮಾವನ ಮಗಳು ಸೋದರಸೊಸೆ ಕನ್ನಿ ಕಾಮವ್ವನನ್ನು ಸೂತರ ತೇಜಿ ಏರಿ, ಗೆದ್ದು ತಂದರೂ, ಮನೆಯಲ್ಲಿ ಆರಾಮವಾಗಿ ಉಳಿದು ಸಂಸಾರ ಮಾಡದೆ ಅಕ್ಕ ಮಾಯವ್ವನ ಜೊತೆ ದಿಗ್ವಿಜಯಕ್ಕೆ ಹೊರಡುತ್ತಾನೆ. ಜನರಿಗೆ ತೊಂದರೆ ಕೊಡುತ್ತಿರುವ ರಾಕ್ಷಸರನ್ನು ಕೊಂದು ವಿಜಯ ಸಾಧಿಸುತ್ತಾನೆ. ಬಾಗಿಯ ಭಗನಾಥ ನನ್ನು, ದೈತ್ಯ ಕ್ಯಾಣೇಸೂರನನ್ನು, ಚಿಂಚಿಲಿಯ ವನದೇವತೆಯನ್ನು ಸಂಹಾರ ಮಾಡುತ್ತಾನೆ.

ಮುಂದೆ ಅಕ್ಕನ ಕುರಿಗಳನ್ನು ಕಾಯುತ್ತ ೧೨ ವರ್ಷ ತಪಸ್ಸು ಮಾಡುತ್ತಾನೆ. ಅವನ ಮೇಲೆ ಹುತ್ತ ಬೆಳೆಯುತ್ತದೆ. ಶಿವ ಪ್ರತ್ಯಕ್ಷನಾಗಿ ಕೇಳಿದರೆ ತನಗೆ ತಕ್ಕ ಶಿಷ್ಯನು ಬೇಕೆಂದು ಮಾಳಿಂಗರಾಯನನ್ನು ಬೇಡಿ ಪಡೆಯುತ್ತಾನೆ. ಮಾಳಿಂಗರಾಯನ ಮುಖಾಂತರ ಅನೇಕ ಕೆಲಸಗಳನ್ನು ಮಾಡಿಸುತ್ತಾನೆ. ತನ್ನನ್ನು ನೆನೆದರೆ ಆಹಾರ, ನೀರು ದೊರೆಯುವ, ತನಗೆ ನಡೆದುಕೊಳ್ಳುವವರು ಹಣ್ಣಿನ ಗಿಡಗಳನ್ನು ನೆಡುವ, ನೀರಿನ ಬಾವಿ ತೋಡಿ ಅರವಟ್ಟಿಗೆಗಳನ್ನಿ ಡುವ ಕೆಲಸಗಳಲ್ಲಿ ತೊಡಗಿಸುತ್ತಾನೆ. ಹೀಗೆ ಬೀರಪ್ಪ ಸದಾ ಪರರಿಗಾಗಿ ಜೀವಿಸಿದ ವ್ಯಕ್ತಿಯಂತೆಯೇ ಕಾಣುತ್ತಾನೆ.

೫. ರೌದ್ರಾವತಾರಿ-ವೀರಯೋಧ

ಬೀರಪ್ಪನು ಶಿವನ ಬೆವರಿನಿಂದ ಜನಸಿದವ. ಹೊಟ್ಟೆಯಲ್ಲಿಯೇ ಉಗ್ರ ರೂಪ ತಾಳಿ, ಸಿಡಿದು ಹೊರಬಂದು ತನ್ನನ್ನು ಕೊಲ್ಲಲು ನಿಂತ ಸೂಲಗಿತ್ತಿಯರನ್ನು ಒದ್ದೋಡಿಸಿದವನು. ಇಲ್ಲಿಂದಲೇ ಅವನ ರೌದ್ರಾವತಾರದ ದರ್ಶನ ನಮಗೆ ಆಗುತ್ತದೆ.

ಬೀರಪ್ಪನದು ಕ್ರೋಧಗೊಳ್ಳುವ ಸ್ವಭಾವ. ತನ್ನ ಸಲುಗೆಯವರಾದರೆ, ಕೋಪದಿಂದ ಕಾಡಿಸಿ ನೋಡಿ ಕಾಪಾಡಲು ನಿಲ್ಲುವವ ದೈತ್ಯರಂತಹ ಜನಕಂಟಕ ಜೀವಿಗಳಾದರೆ ಅವರನ್ನು ಸಂಹರಿಸಿ ತನ್ನ ರೌದ್ರಾವತಾರದಲ್ಲಿ ವೀರಯೋಧನಂತೆ ಕಾಣುವ ಗುಣ ಅವನಲ್ಲಿ ವಿಶಿಷ್ಟ ವಾಗಿದೆ.

ಮಾಯವ್ವನೊಂದಿಗಿನ ಸಂಬಂಧ ಬಲು ವಿಶಿಷ್ಟವಾದುದು. ಕನ್ಯೆಯಾದ ಆಕೆಯ ಎದಿಬದಿ ಗಳು ಚಿಗಿತು, ಬಾಣಂತಿ ಸ್ವರೂಪ ಬಂದುದೇ ಬೀರಪ್ಪನನ್ನು ಸಲುಹತಿಂದು 'ಮನಕೆ ತಾಯಿಯಾಗಿ, ಜನಕೆ ಅಕ್ಕನಾಗಿ' ಬೀರಪ್ಪನನ್ನು ಸಲುವಿದಾಕೆ ಮಾಯವ್ವ. ಅವಳೊಂದಿಗಿನ ಹಟ, ಸೆಡವುಗಳೆಲ್ಲ ತಾಯಿ-ಮಗನ ಸಂಬಂಧದಲ್ಲಿ-ಕಾಣುವ ಸಲುಗೆಯಾಟಗಳೇ ಎನಿಸುತ್ತವೆ.

ಆಡಲು ಚಂಡು, ಚಿಣಿ, ದಾಂಡ, ಕಾಡಿಬೇಡುವುದಷ್ಟೇ ಅಲ್ಲ, ಹೆಂಡತಿಯನ್ನು ಗೆದ್ದು ತರಲು ಸೂತ್ರದ ತೇಜಿಯನ್ನು ಮಾಯವ್ವನೇ ಮಾಡಿಸಿ ಕೊಡುತ್ತಾಳೆ. ಆದರೆ ಒಮ್ಮೆ ಹಬ್ಬಕ್ಕೆ ಆಕೆಯನ್ನು ಕರೆಯಲು ಸ್ನೇಹಿತನಿಗೆ ಕಳುಹಿಸಿದಾಗ ಮಾಯವ್ವ ಬರದೇ ಇರಲು ಕಾದು ಕೆಂಡವಾಗುತ್ತಾನೆ. ಕ್ರೋಧಗೊಂಡು, ತಾನೇ ಹೋಗಿ ತನಗೆ ಕೂಡ್ರಲು ನಾಗರಗದ್ದುಗೆ ಬೇಕೆಂದೂ, ಮೀಯಲು ಮೀಸಲು ನೀರುಬೇಕೆಂದೂ ಹಟ ಮಾಡುತ್ತಾನೆ. ಆಕೆ ಅವೆಲ್ಲ ಪೂರೈಸಿದಾಗ 'ನಾನು ಕಾಡಲು ಬಂದಿಲ್ಲ ಕಾಪಾಡಲು ಬಂದಿದ್ದೇನೆ' ಎಂದು ಅಕ್ಕನ ಮುಂದೆ ಸೋಲನ್ನು ಒಪ್ಪುತ್ತಾನೆ.

ಇಂತಹವೇ ಅನೇಕ ಘಟನೆಗಳನ್ನು ಮಾಳಿಂಗರಾಯನ ಸಂಬಂಧದಲ್ಲಿ ಕಾಣುತ್ತೇವೆ. ಈತನಿಂದ ಅನೇಕ ಬಗೆಯಲ್ಲಿ ಕಾಡಿಬೇಡಿ ಪೂಜೆಗೊಳ್ಳುತ್ತಾನೆ. 'ಅಟಕೆ ಹುಲಿಮರಿ ಜೂಟಕೆ ಹುಲಿಗಿಣ್ಣ' ಬೇಕೆಂದು ಬೇಡಿ ಪಡೆಯುತ್ತಾನೆ. ಮಾಳ ಹೋಗುವ ದಾರಿಯಲ್ಲಿ ಹಾವು ಚೇಳು ಹಾಕಿ ನೋಡುತ್ತಾನೆ. ಗುಡುಗು ಸಿಡಿಲುಗಳೊಂದಿಗೆ ಜಡಿಮಳೆ ಸುರಿಸುತ್ತಾನೆ. ಮಾಳಿಂಗರಾಯ ಇವಕ್ಕೆಲ್ಲ ಮಣಿಯದೇ ಮುಂದುವರೆಯಲು 'ನಗುನಗುತ ಆಡಿದ ಮಾತ ಮಾಳ ಹಿಡಿದಾನಂದಾನ' ಎಂದು ಮತ್ತೆ ಅವನ ಬೆಂಬಲಕ್ಕೆ ನಿಲ್ಲುತ್ತಾನೆ.

ಹೀಗೆ 'ಜನಪದ ಹಾಲುಮತ ಮಹಾಕಾವ್ಯ' ಮೊದಲಬಾರಿಗೆ ಕಟ್ಟಿಕೊಡುವ ಬೀರಪ್ಪನ ವ್ಯಕ್ತಿಚಿತ್ರ ಕಾಣುತ್ತದೆ. ಆತ ಗರ್ಭದಲ್ಲಿ ಮೂಡುತ್ತಲೇ ಜೀವನಾಶ ಕೃತ್ಯಗಳು ನಡೆಯುವುದರಿಂದ, ಅವನ ಜನನವೇ ಒಂದು ಪ್ರತಿಭಟನಾ ರೂಪದಲ್ಲಿ ದೊರೆಯುತ್ತದೆ. ಹೀಗಾಗಿ ಬೀರಪ್ಪನು ಸತತವಾಗಿ ದುಷ್ಟಶಕ್ತಿಯ ವಿರುದ್ಧ ಬಂಡೇಳುವ, ಪ್ರತಿಭಟಿಸುವ, ಕ್ರೋಧದ ವ್ಯಕ್ತಿತ್ವದವನಾಗಿ ಕಾಣುತ್ತಾನೆ. ಆದರೆ ತನ್ನವರ ಎದುರಿಗೆ ಅವನ ಹಟಮಾರಿತನಗಳೆಲ್ಲ ಪ್ರೀತಿಯ ಸಲುಗೆಯ ವರ್ತನೆಗಳಾಗಿ ಮಾರ್ಪಡುವುದನ್ನು ಕಾಣುತ್ತೇವೆ.

●

'ರಾಮಧಾನ್ಯ ಚರಿತೆ'ಯ ರೂಪಕ ವಿವೇಕ

● ಎಸ್.ಜಿ. ಸಿದ್ಧರಾಮಯ್ಯ

ಸಂಸ್ಕೃತೀಕರಣ

ಶ್ರೇಣೀಕರಣ ವ್ಯವಸ್ಥೆಯಲ್ಲಿ ಮೇಲ್ಜಾತಿಯ ದಬ್ಬಾಳಿಕೆಗೆ ಸಿಕ್ಕಿದಂತೆ ಅವಮಾನ ಸಂಕಟಗಳನ್ನು ಅನುಭವಿಸಿದ ಮನಸ್ಸುಗಳು ಅಕ್ಷರದ ಬೆಳಕಿಗೆ ತೆರೆದುಕೊಂಡ ಕಾಲಘಟ್ಟಗಳಲ್ಲಿ ಈ ಸಂಕಟ ಸ್ಥಿತಿಯ ವಿರುದ್ಧ ಹಲವು ರೀತಿಯಲ್ಲಿ ಪ್ರತಿಕ್ರಿಯಿಸಿವೆ. ಈ ಅವಮಾನದ ಅರಿಮೆಯನ್ನು ದಾಟುವುದಕ್ಕೆ ಹಲವು ಉಪಾಯಗಳನ್ನು ಅನುಸರಿಸಿವೆ. ಅಂಥ ಹಲವು ಉಪಾಯಗಳಲ್ಲಿ ಸಂಸ್ಕೃತೀಕರಣವೂ ಒಂದು.

"ಸಂಸ್ಕೃತೀಕರಣವೆಂದರೆ ಶ್ರೇಣೀಕರಣಗೊಂಡ ಸಮಾಜದಲ್ಲಿ ಕೆಳಗಿನ ಮೆಟ್ಟಿಲಿನಲ್ಲಿರುವವರು ಮೇಲಿನ ಮೆಟ್ಟಿಲನ್ನೇರುವುದಕ್ಕೆ ನಡೆಸುವ ಪ್ರಯತ್ನಗಳು. ಸಾಮಾಜಿಕವಾದ ಅಂತಸ್ತನ್ನು ಪಡೆಯಬೇಕೆಂಬ ಹಂಬಲವು ಹೀಗೆ ಮೇಲೇರಲು ಪ್ರೇರೇಪಿಸುತ್ತದೆ. ಈ ಬಗೆಯ ಮೇಲ್ಮುಖ ಚಲನೆಯಲ್ಲಿ ಹರಿಯುವವರ ಮನದೊಳಗಿನ ನಂಬಿಕೆಯಿದು. ತಮ್ಮ ಸಾಂಸ್ಕೃತಿಕ ಲೋಕವು ಕೀಳಾದುದು ಮತ್ತು ಕೇಡು(ಮೌಢ್ಯ)ಗಳಿಂದ ತುಂಬಿದುದು; ತಮಗಿಂತ ಮೇಲೆ ಇರುವ ಸಾಂಸ್ಕೃತಿಕ ಜಗತ್ತು ಉತ್ತಮವಾದುದು ಮತ್ತು ಒಳ್ಳೆಯದು. ಈ ಗ್ರಹಿಕೆಯ ತಳಪಾಯವೆಂದರೆ, ಶ್ರೇಷ್ಠತೆ ಮತ್ತು ಕನಿಷ್ಠತೆಗಳ ಮಾದರಿಗಳನ್ನು ರೂಪಿಸಿ ಹೇರಿರುವವರ ತರ್ಕವನ್ನು ಹೇರಿಸಿಕೊಂಡವರೂ ಒಪ್ಪಿಕೊಂಡಿರುವುದು. ಇಂಥ ಚಲನೆಯು ತಮ್ಮದನ್ನು ನಿರಾಕರಿಸಿಕೊಂಡು ಇಡುವ ಮೊದಲ ಹೆಜ್ಜೆಯಿಂದ ಶುರುವಾಗಿ ಅನ್ಯರದ್ದನ್ನು ಒಪ್ಪಿಕೊಳ್ಳುವ ಇನ್ನೊಂದು ಹೆಜ್ಜೆಗೆ ಬಂದು ನಿಂತುಬಿಡುತ್ತದೆ. ಯಾವತ್ತೂ ಸಂಸ್ಕೃತೀಕರಣದ ದಾರಿಯನ್ನಾಯ್ದುಕೊಳ್ಳುವುದೆಂದರೆ ಮುಂದೆ ಹೆಜ್ಜೆಗಳನ್ನಿಡಲು ಸರಿಯಾದ ಜಾಗ ಸಿಗದೆ ಎರಡನೇ ಹೆಜ್ಜೆಗೆ ನಿಂತುಬಿಡುವುದು. ತಾವು ಏನಾಗಬಯಸಿದ್ದರೋ ಹಾಗಾಗಲು ಆಗದೆ ಹಿಂದಕ್ಕೆ ಮರಳಲಾಗದೆ ಎರಡನೇ ದರ್ಜೆಯಲ್ಲಿಯೇ ಉಳಿದು ಪರಿಭವ ಅನುಭವಿಸುವ ಸ್ಥಿತಿಯೊದಗಿ ಬಿಡುವುದು ಅಥವಾ ತಾವು ಬಯಸಿದಂತೆ ಆಗಿಬಿಟ್ಟಿದ್ದೇವೆಂದು ಭ್ರಮೆಯಲ್ಲಿ ಉಳಿದು ಬಿಡುವುದು. ಕನಕದಾಸ ಇದಕ್ಕೆ ಬಹಳ ಒಳ್ಳೆಯ ಉದಾಹರಣೆ. ಅವನ ಚರಿತ್ರೆಯನ್ನು ನೋಡಿದರೆ ಸಾಂಸ್ಕೃತಿಕವಾಗಿ ಮೇಲು ಚಲನೆಗೊಳ್ಳಲು ಹರಿಭಕ್ತಿಯ ಹಾದಿಯನ್ನು ಆರಿಸಿಕೊಂಡು ಪಡಬಾರದ ಪಾಡುಗಳನ್ನು ಅನುಭವಿಸಿರುವುದು ಗೊತ್ತಾಗುತ್ತದೆ; "ಇದು ತನ್ನಂತೆ ತಾನು

ಉಳಿಯದೆ ಹಾಗೂ ನಿರ್ಮೋಹನಿದ್ದೂ ನಿರ್ಮುಕ್ತಾಗದೆ ದ್ವಂದ್ವಗಳಲ್ಲೇ ಸಿಲುಕಿ ಬಿಡುವ ಅತಂತ್ರ ಸ್ಥಿತಿ'' (ತರೀಕೆರೆ: ೧೯೯೮ 'ಮರದೊಳಗಣ ಕಿಚ್ಚು', ೯೫). ಚರಿತ್ರೆಯುದ್ದಕ್ಕೂ ಈ ಸಂಸ್ಕೃತೀಕರಣದ ಮೋಹ ಹಲವು ಸಮುದಾಯಗಳನ್ನೂ ಹಾಗೂ ವ್ಯಕ್ತಿತ್ವಗಳನ್ನೂ ಕಾಡಿದೆ. ಯಾವಾಗಲೂ ಸಂಸ್ಕೃತೀಕರಣಗಳು ತಾತ್ಕಾಲಿಕ ಬಿಡುಗಡೆಯ ಕಿರುಚಲನೆಗಳೇ ಹೊರತು ಅಂತಿಮ ವಿಮೋಚನೆ ಅಲ್ಲ. ಕನಕದಾಸರ ಜೀವನ-ವಿವರಗಳನ್ನು ಗಮನಿಸಿದರೆ ಮೇಲಿನ ಈ ಎಲ್ಲ ಮಾತುಗಳ ಸತ್ಯ ಮನವರಿಕೆಯಾಗುತ್ತದೆ. ದಾಸರ ದಾಸನಾದರೂ ಕನಕದಾಸನಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ಸಿಗಲಿಲ್ಲ. ಪ್ರತಿಭೆ ಪಾಂಡಿತ್ಯಗಳಿದ್ದೂ ಕೋಣಮಂತ್ರ ದೀಕ್ಷೆಯ ಅವಮಾನಕ್ಕೆ ಒಳಗಾಗುವುದು ತಪ್ಪಲಿಲ್ಲ. ''ಭಾಗವತರಾದರೂ ಬ್ರಾಹ್ಮಣರಾಗ ಲಿಲ್ಲ. ಮತಾಚಾರ್ಯರ ಅನುಗ್ರಹ ಪಡೆದರೂ ಮತಾನುಯಾಯಿಯಾಗಲಿಲ್ಲ. ಕನಕನಕಿಂಡಿ ಮತ್ತು ಕೋಣಮಂತ್ರ ದೀಕ್ಷೆ ಕತೆಗಳ ಒಳ ಅರ್ಥವೇ ಶೂದ್ರನಾದ ಕನಕದಾಸನಿಗೆ ಸಾಮಾಜಿಕ ವಾಗಿ ವೈದಿಕ ಸರಿಸಮಾನ ಸ್ಥಾನಮಾನದ ಸ್ಪಷ್ಟ ನಿರಾಕರಣೆಯಾಗಿದೆ.'' (ಮರುಚಿಂತನೆ: ಪುಟ ೬೭, ಕೆ.ಜಿ. ನಾಗರಾಜಪ್ಪ, ೧೯೯೮) ''ಅವನಿಗೊಂದು ಪುರಾಣದ ಮಹತ್ವಕೊಟ್ಟು, ಶೂದ್ರಜಾತಿಯ ಸಂಸ್ಕಾರವನ್ನು ತೊಳೆದು ವೈದಿಕ ಮಾರ್ಗದವರು ಮನ್ನಣೆಕೊಡುವು ದಕ್ಕಾಗಿಯೇ ಕನಕದಾಸನ ಅವತಾರ ಕಲ್ಪನೆಯ ಕತೆ ಹುಟ್ಟಿರಬಹುದು'' (ಮರುಚಿಂತನತೆ-ಕೆ.ಜಿ. ನಾಗರಾಜಪ್ಪ).

ಕೀರ್ತನೆಗಳು: ವ್ಯಕ್ತಿನಿಷ್ಠ ಕೃತಿಗಳು

ಕನಕದಾಸರ ವ್ಯಕ್ತಿನಿಷ್ಠ ಕೃತಿಗಳಾದ ಕೀರ್ತನೆಗಳಲ್ಲಿ ಸಂಸ್ಕೃತೀಕರಣದ ಹಂಬಲವೇ ಅಪಾರವಾಗಿ ಮೆರೆದಿದೆ. ಈ ಹಂಬಲ ವೈದಿಕ ವರ್ಣವ್ಯವಸ್ಥೆ ಹೇರಿರುವ ಶ್ರೇಷ್ಠತೆ ಕನಿಷ್ಠತೆಗಳ ಪ್ರಮಾಣಸೂತ್ರವನ್ನು ಇತ್ಯಾತ್ಮಕವಾಗಿ ಒಪ್ಪಿಕೊಂಡು ಅದನ್ನು ಅನುಸರಿಸುವ ಸಾಧನೆಯ ವಿಶೇಷತೆಗಳನ್ನು ವಿವರಿಸುವುದೇ ಆಗಿದೆ. ಕುಲವನ್ನು ಕುರಿತ ಇವರ ಪ್ರಸಿದ್ಧ ಕೀರ್ತನೆಗಳನ್ನೇ ಇಲ್ಲಿ ವಿವೇಚನೆಗೆ ಎತ್ತಿಕೊಳ್ಳಬಹುದು.

ನಾವು ಕುರಬರೋ ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಕುರಿ ಹಿಂಡುಗಳ
ಅಷ್ಟಮದ ಮತ್ಸರಗಳೆಂಬ ಟಗರುಗಳು
ದೃಷ್ಟಿ ಜೀವಾತ್ಮನೆಂಬೋ ಆಡು
ಸೃಷ್ಟಿ ಪ್ರಸಿದ್ಧಿಪೆಂತೆಂಬುವಾ ಹೋತುಗಳು
ಕಟ್ಟಿ ಕೋಲಿನಲಿ ಇರುತಿರುವ ನಮ್ಮಜ್ಜ
ವೇದಶಾಸ್ತ್ರ ಪುರಾಣವೆಂತೆಂಬ ಶ್ವಾನಗಳು
ಕಾದಿದ್ದು ನಮ್ಮಜ್ಜ ಹಿಂಡಿನೊಳಗೆ
ಹಾದಿಕಾಣದೆ ಕೂಗಿ ಬಾಯಾರಿ ಕಾಲ್ಗೆರಗೆ
ಆದರಿಸಿ ಅಂಬಲಿಯನೆರೆವ ನಮ್ಮಜ್ಜ

ಅರಿಯೆಂಬ ಮರಿಗಳು ಹಿಂಡಿನೊಳಗೆ ಬಂದು
ಮಾರಿ ವ್ಯಾಘ್ರವೆಂತೆಂಬ ತೋಳಹೊಕ್ಕು
ಕುರುಬ ಹಿಂಜಾವದಲಿ ಕುರಿಯ ಮರಿವುದ ಕಂಡು
ಅರಿತು ಅರಿಯದ ಹಾಗೆ ಇರುವ ನಮ್ಮಜ್ಜ

ಹುಟ್ಟೋದಕ್ಕೆ ಮೊದಲಿಲ್ಲ ಸಾಯೋದಕ್ಕೆ ಕೊನೆಯಿಲ್ಲ
ಹುಟ್ಟು ಸಾವಿನ ಹೊಲಬ ಬಲ್ಲ ನಮ್ಮಜ್ಜ
ಅಷ್ಟು ಪ್ರಾಣಿಗಳಿಗೆ ಇಷ್ಟು ಅಂಬಲಿಮಾಡಿ .
ಹೊಟ್ಟೆ ತುಂಬಿದ ಹಾಗೆ ಎರೆವ ನಮ್ಮಜ್ಜ

ಕಲಿಯುಗಕೆ ಗೌಡನಿವ ಸಂಗಾತಿ ಮಂತ್ರಿಸುತ
ಕಲಿಯುಗಂಗಳನೆಲ್ಲ ಮರೆತನೀತ
ಜಲಜಾಕ್ಷ ಕಾಗಿನೆಲೆಯಾದಿ ಕೇಶವನ ಮನ
ವೊಲಿಸಿ ಭಜಿಸಿದವನು ಹುಚ್ಚುಗುರುಬ.

ಈ ಕೀರ್ತನೆಯಲ್ಲಿ ಕುರಿಕಾಯುವ ಪ್ರಸ್ತಾಪವಿದ್ದರೂ ಕುರಿಕಾಯುವ ಕಾಯಕವನ್ನು ನೈತಿಕ ಕೆಚ್ಚಿನಿಂದ ಉನ್ನತೀಕರಿಸುವುದಕ್ಕಿಂತ ಕಾಯಕ ವಿವರವನ್ನು ಒಂದು ತಂತ್ರವಾಗಿ ಬಳಸಿ ಆಧ್ಯಾತ್ಮಿಕ ವಿಚಾರವನ್ನು ಪ್ರತಿಪಾದಿಸಲಾಗುತ್ತದೆ. ಈ ಆಧ್ಯಾತ್ಮಿಕ ವಿಚಾರವೂ ಆತ್ಮವಾದಿ ನೆಲೆಯ ಆಲೋಚನಾವಿಧಾನವೇ ಆಗಿದೆ.

ವಚನಕಾರರ ಭಿನ್ನತೆ

ಈ ರಚನೆಯ ಮಿತಿ ಗೊತ್ತಾಗಬೇಕಾದರೆ ಅಂಬಿಗರ ಚೌಡಯ್ಯ, ಕಾಳವ್ವೆ, ನುಲಿಯ ಚಂದಯ್ಯ ಮತ್ತಿತರ ಕಾಯಕಜೀವಿ ವಚನಕಾರರ ವಚನಗಳಲ್ಲಿ ಕಾಯಕ ವಿಚಾರ ಹೇಗೆ ಕಾಯಕ ಗೌರವದ ಪ್ರಶ್ನೆಯಾಗಿ ಕಾಯಕದ ಉನ್ನತೀಕರಣದ ವಿಚಾರವಾಗಿ ಆತ್ಮಪ್ರತ್ಯಯದ ಅರಿಮೆಯಾಗಿ ಬೆಳದಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಅಂಬಿಗರ ಚೌಡಯ್ಯನ ಈ ವಚನವನ್ನು ನೋಡಿ:

ಅಂಬಿಗ ಅಂಬಿಗ ಎಂದು ಕುಂದು ನುಡಿಯದಿರು
ನಂಬಿದರೆ ಒಂದೆ ಹುಟ್ಟಲಿ ಕಡೆಯ
ಹಾಯಿಸುವನಂಬಿಗ ಚೌಡಯ್ಯ

ಕಾಯಕವನ್ನೇ ತನ್ನ ಹೆಸರಿನ ವಿಶೇಷಣವಾಗಿಸಿಕೊಂಡಿರುವ, ಈ ಹೆಸರನ್ನೇ ತನ್ನ ವಚನಗಳ ಅಂಕಿತದೈವವಾಗಿಸಿಕೊಂಡಿರುವ ಅಂಬಿಗರ ಚೌಡಯ್ಯನು ತನ್ನ ಈ ವಚನದಲ್ಲಿ ಹೇಳುತ್ತಿರುವು ದಾದರೂ ಏನನ್ನು? ಅಂಬಿಗ ಎಂಬುದು ಕಾಯಕ ನಿಷ್ಠೆಯ ಆತ್ಮಪ್ರತ್ಯಯದ ಕುಲಸೂಚಿ ಯಾಗಿದೆ; ವ್ಯಕ್ತಿತ್ವದರ್ಶಿಯಾಗಿದೆ. ಸಮಾಜದಲ್ಲಿ ಜಾತಿಸೂಚಕವಾಗಿ ಹೀಗಳಿಕೆಯ ನಿಂದನಾ ಪದವಾಗಿ ಪ್ರಯೋಗವಾಗುತ್ತಿರುವ ಈ ಅಂಬಿಗ ಶಬ್ದಕ್ಕೆ ಚೌಡಯ್ಯ ಕೊಡುವ ಮೌಲ್ಯವಿಶೇಷ ನೈತಿಕ ಎಚ್ಚರದ ನೆಲೆಯಲ್ಲಿ ಬಿತ್ತಿ ಬೆಳೆದದ್ದು. ಕಾಯಕದ ಸ್ವರೂಪವನ್ನೇ ಜೀವದ್ರವ್ಯವಾಗಿಸಿ ಅದರ ಘನತೆಯನ್ನು ಎತ್ತಿ ತೋರಿಸುವ ಗುಣಶೀಲದ್ದು. ಈ ಘನತೆ ಕನಕದಾಸನ 'ನಾವು

ಕುರುಬರು' ಕೀರ್ತನೆಯಲ್ಲಿ ಕಂಡುಬರುವುದಿಲ್ಲ. ಕುರಿಕಾಯುವ ಕೆಲಸದ ಸ್ವರೂಪವನ್ನು ಕೇವಲ ತಾಂತ್ರಿಕ ಸಾಧನವಾಗಿ ಬಳಸಿ ಮೇಲ್‌ವರ್ಣದ ಅಧ್ಯಾತ್ಮಿಕ ಮೌಲ್ಯವನ್ನು ಈ ತಂತ್ರದ ಮುಖೇನ ವ್ಯಾಖ್ಯಾನಿಸುತ್ತಿದೆ. ಮೂಲ ಕಾಯಕದ ಯಾವ ಹಿರಿಮೆ ಗರಿಮೆಗಳೂ ಈ ರಚನೆಯಲ್ಲಿ ಜೀವದ್ರವ್ಯವಾಗಿಲ್ಲ. ಅಂಬಿಗನ 'ಹುಟ್ಟು' 'ಕಡೆಹಾಯಿಸು' ಪದಗಳ ಅರ್ಥಮೌಲ್ಯ ಸಹಜಶ್ಲೇಷೆಯಲ್ಲಿ ಅನುಭಾವಿಕ ವಿಸ್ತಾರವನ್ನು ಪಡೆಯುತ್ತದೆ. ಆದರೆ ಕನಕದಾಸನ 'ನರಕುರಿ ಆಗಮ ವೇದಶಾಸ್ತ್ರ ಶ್ವಾನ ಅರಿಮರಿ' ಇತ್ಯಾದಿ ಪದಗಳಲ್ಲಿ ಹೋಲಿಕೆಯ ಅಪವಿತ್ರ ಮೈತ್ರಿ ಇದೆ. ಇದು ಕಾಯಕ ಮೂಲದ ಜಿಡ್ಡುಗುರುಬರ, ಸಿಂಡುಗುರುಬರ, ಬೂದಿಗುರುಬರ ಕಾಯಕ ನಿಷ್ಠೆಯನ್ನು ಶ್ರಮಮೌಲ್ಯವನ್ನು ಅವಜ್ಞೆಗೈದಂತೆ ಬೆಳೆದ ಅಧ್ಯಾತ್ಮಿಕತೆಯ ಅಪವಿತ್ರ ಮೈತ್ರಿ. ಆತ್ಮವಾದಿ ಸಾಧನೆಯ ಸ್ವರೂಪವನ್ನು ಕುರಿಕಾಯುವ ಕಾಯಕವಿಧಾನದ ತಾಂತ್ರಿಕ ಸ್ವರೂಪದಲ್ಲಿ ನಿರ್ವಚಿಸಿದ ಪಾಂಡಿತ್ಯ ಅಷ್ಟೆ. ಕುಲವನ್ನು ಕುರಿತ ಕನಕದಾಸನ ಮತ್ತೊಂದು ಸುಪ್ರಸಿದ್ಧ ರಚನೆಯನ್ನು ಗಮನಿಸಿ.

ಕುಲಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ

ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜಾ

ಜಲವೆ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀ ದೇಹ
ನೆಲೆಯರಿತು ನೀ ನೆನೆಕಂಡ್ಯ ಮನುಜಾ

ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರಾ
ಹಿರಿಮೆಯ ನೆಲೆಯಾದಿಕೇಶವರಾಯನ
ಸಿರಿಕಾಗಿನೆಲೆಯಾದಿ ಕೇಶವರಾಯನ
ಚರಣಕಮಲವನೆ ಕೀರ್ತಿಸುವನೆ ಕುಲಜ

ಈ ರಚನೆ ಕೂಡ ಶ್ರೇಣೀಕರಣ ವ್ಯವಸ್ಥೆಯೊಳಗಿನ ಕುಲಭೇದವನ್ನು ಕುರಿತ ಸಿಟ್ಟಾಗದೆ ಸಂಕಟವಾಗದೆ ಟೀಕೆಯಾಗದೆ 'ಹರಿಯೇ ಸರ್ವೋತ್ತಮ' ತತ್ತ್ವವನ್ನು ಪ್ರತಿಪಾದಿಸ ಹೊರಟ ಭಾವೋತ್ಸಾಹವಾಗಿದೆ. ಈ ಭಾವೋತ್ಸಾಹಕ್ಕೆ ಹರಿಸೃಷ್ಟಿಯಲ್ಲಿ ಕಾಣುವ ವಸ್ತುಮೂಲಗಳ ಸಮಾನತೆಯನ್ನು ತಾರ್ಕಿಕ ಅಂಶಗಳಾಗಿ ಮಾತ್ರ ಬಳಸಿಕೊಳ್ಳಲಾಗಿದೆ. ತಾರ್ಕಿಕತೆಯೂ ಕೂಡ ಹರಿಸರ್ವೋತ್ತಮ ತತ್ತ್ವವನ್ನು ಪ್ರತಿಪಾದಿಸುವುದಕ್ಕೆ ಒದಗಿ ಬಂದಿರುವ ತಂತ್ರಗಾರಿಕೆಯ ಉಪಾದಿಯಾಗಿದೆಯೇ ಹೊರತು ಕುಲಸಮಾನತೆಯ ಮೇಲಗ್ಗೆ ಪ್ರಧಾನತೆ ಪಡೆದಿಲ್ಲ.

ಕಣಿಯ ಹೇಳಬಂದೆ ನಾರಾಯಣನಲ್ಲದೆ ಇಲ್ಲವೆಂದು-ಮಿಕ್ಕ
ಬಣಗು ದೈವದ ಗೊಡವೆ ಬೇಡ ನರಕ ತಪ್ಪದು.

ಎಕ್ಕನಾತಿಯರು ಕಾಟಿ ಜಕ್ಕಿಜಲಕನ್ಯೆಯರು
ಸೊಕ್ಕಿನಿಂದ ಸೊಂಟಮುರುಕ ಬೈರೇದೇವರು
ಮಿಕ್ಕಮಾರಿ ಮಸಣಿ ಚೌಡಿ ಮೈಲಾರಿ ಮೊದಲಾದ
ಠಕ್ಕುದೈವದ ಗೊಡವೆ ಬೇಡ ನರಕ ತಪ್ಪದು.

ಸುತ್ತಣವರ ಮಾತಕೇಳಿ ಗುತ್ತಿಯ ಎಲ್ಲಮ್ಮಗೊಲಿದು
ಬತ್ತಲೆಯ ದೇವರೆದುರು ಬರುವುದ ನೋಡಿರೋ
ಮತ್ತೆ ಬೇವಿನುಡಿಗೆಯ ಅರ್ತಿಯಿಂದುಟ್ಟುಗೊಂಡು
ಮುಕ್ತಿಕಾಂಬೆವೆಂಬ ಮೌಢ್ಯ ಬೇಡಿರೋ

ತೊಳದವರ ಮಾತುಕೇಳಿ ಖೂಳರೆಲ್ಲ ಕೂಡಿಕೊಂಡು
ಹಾಳುಮಾಡಿ ಕೈಯಲ್ಲಿದ್ದ ಹೊನ್ನುಹಣಗಳ
ಬಾಳುತಿಪ್ಪ ಕೋಣಕುರಿಯ ಏಳಬೀಳ ಕೊರಳಕೊಯ್ದು
ಬೀಳಬೇಡಿ ನರಕಕೆಂದು ಹೇಳ ಬಂದೆನೋ

ಹೊಳ್ಳದ ಬಿಟ್ಟೇರು ಸಹಿತ ಸುಳ್ಳರೆಲ್ಲ ಕೂಡಿಕೊಂಡು
ಬೆಳ್ಳನ ಬೆಳತನಕ ನೀರತಡಿಯಲಿ ಕುಳಿತು
ಗುಳ್ಳೆಗೊರಚೆ ಕೂಡಿತಿಂದು ಕಳ್ಳಕೊಡನ ಬರಿದು ಮಾಳ್ಪ
ಪೊಳ್ಳುದೈವದ ಗೊಡವೆ ಬೇಡ ನರಕ ತಪ್ಪದು

ಪೊಡವಿಗಧಿಕ ವಿಜಯನಗರದೊಡೆಯ ಕಟ್ಟೆವೆಂಕಟೇಶ
ಕಡುಚೆಲ್ವಿ ಕಟ್ಟಾಣಿ ಕನಕನೊಡೆಯ
ಬಾಡದಾದಿ ಕೇಶವನ ಪಾದಬಿಡದೆ ಭಜಿಸಿರೋ
ಜಡದೈವಗಳ ಇಂಥ ಪೂಜೆ ಬೇಡಿರೋ

ಕಣಿಹೇಳುವ ಕೊರವಂಜಿಯ ತಂತ್ರವನ್ನಿಲ್ಲಿ ಬಳಸಿಕೊಂಡು ಕನಕದಾಸರು ಹೇಳುತ್ತಿರುವುದಾದರೂ ಏನನ್ನು? ಬಾಡದಾದಿಕೇಶವ ಶ್ರೇಷ್ಠ ಮಿಕ್ಕದೈವಗಳು ಕನಿಷ್ಠ ಎಂಬ ಸಂಸ್ಕೃತೀಕರಣಗೊಂಡ ಮನಸ್ಸಿನ ಪ್ರಮಾಣದೃಷ್ಟಿಯನ್ನು. ಇಲ್ಲಿ ತಳಸಂಸ್ಕೃತಿಗಳ ಕುಲಾಚಾರಗಳನ್ನು ಸಾರಾಸಗಟಾಗಿ ಮೂಢಾಚಾರಗಳೆಂದು ಗುಡಿಸಿ ಹಾಕುವುದಕ್ಕಿಂತ ಅಪಾಯಕಾರಿಯಾದದ್ದು, ಶ್ರೇಷ್ಠ ಕನಿಷ್ಠವೆನ್ನುವ ವರ್ಣ ಪ್ರಮಾಣವನ್ನು ಒಪ್ಪಿ ಸಂಸ್ಕೃತೀಕರಣಗೊಳ್ಳುವುದು. ಇದು ದೇವ-ದೀನ, ಯಜಮಾನ-ಸೇವಕ ಈ ಭೇದದ ಎರಡನೇ ಹೆಜ್ಜೆಯ ಮೇಲು-ಕೀಳಿನ ನೆಲೆಯಲ್ಲಿ ನಿಂತುಬಿಡುವ ಆತ್ಮಹತ್ಯಾಕಾಂಡ. ಎಕ್ಕನಾತಿ ಕಾಟಿ ಜಕ್ಕಿ ಮಾರಿ ಮಸಣಿ ಚೌಡಿ ಮೈಲಾರಿ ಇತ್ಯಾದಿ ಕುಲಮೂಲದ ದೇವದೇವಿಯರು ಕನಕದಾಸರಿಗೆ ಜಡದೈವಗಳಾಗಿ ಕಂಡಿರುವುದು ಶ್ರೇಣೀಕರಣ ತತ್ವನ್ನು ಪರೋಕ್ಷವಾಗಿ ಒಪ್ಪಿಕೊಂಡ ಬುದ್ಧಿಮೂಲದ ಕೀಳರಿಮೆಯ ಭಾವಫಲವೇ ಸರಿ. ಮೇಲು ತೋರಿಕೆಯಲ್ಲಿ ಚಲನರೂಪಿಗಳಂತೆ ಭಾಸವಾಗುವ

ವೈದಿಕ ಜಪವ್ಯವಸ್ಥೆಯ ಆಚರಣೆಗಳು. ಇವರಿಗೆ ಮೋಕ್ಷಮಾರ್ಗಗಳಾಗಿ ಕಾಣುತ್ತಿರುವುದು ವಿಚಿತ್ರವಾಗಿದೆ.

ಹೀಗಾಗಿ ಸಂಸ್ಕೃತೀಕರಣಗೊಂಡ ಮನಸ್ಸು ತಾನು ಒಪ್ಪಿಕೊಂಡ ವರ್ಣಸ್ತರದ ಜೀವನ ಮೌಲ್ಯವನ್ನು ಪ್ರತಿಪಾದಿಸುವ ಆವೇಗದಲ್ಲಿ ತನ್ನ ಹುಟ್ಟಿನ ಮೂಲದ ಸಂಸ್ಕೃತಿಯಲ್ಲಿಯೇ ಇರಬಹುದಾಗಿರುವ ಗುಣಶೀಲತೆಗಳನ್ನು ಹಾಗೂ ಅದು ಅನುಭವಿಸುತ್ತಿರುವ ಅವಮಾನ ಸಂಕಟಗಳನ್ನೂ ಬವಣೆ ಬೇಗುದಿಗಳನ್ನೂ ಎತ್ತಿ ಹಿಡಿಯುವುದರಲ್ಲಿ ವಿಫಲವಾಗುತ್ತದೆ. ಇಂಥ ಸಂಸ್ಕೃತೀಕರಣ ಪ್ರಕ್ರಿಯೆಯು ಆಲೋಚನಾ ಕ್ರಮದಿಂದ ಅಲಕ್ಷಿತ ಸಮುದಾಯಗಳಿಗೆ ಯಾವ ಪ್ರಯೋಜನವೂ ಇಲ್ಲ. ಬದಲಾಗಿ ಅಲಕ್ಷಿತ ಸಮುದಾಯಗಳ ಬದುಕಿಗೆ ಇದರಿಂದ ಅಪಾಯವೇ ಹೆಚ್ಚು. ಈ ಶ್ರೇಣೀಕರಣ ವ್ಯವಸ್ಥೆಯ ಅಸಮಾನತೆಯನ್ನು ತೊಡೆಯುವ ಸಂದರ್ಭದಲ್ಲಿ ಮೇಲ್ಜಾತಿಯ ಮನಸ್ಸುಗಳು ಅಪವರ್ಗೀಕರಣಕ್ಕೂ ಕೆಳಜಾತಿಯ ಮನಸ್ಸುಗಳು ನೈತಿಕ ಆತ್ಮಪ್ರತ್ಯಯದ ಪ್ರಕ್ರಿಯೆಗೂ ಒಳಗಾಗಬೇಕಾದ ಅಗತ್ಯವಿದೆ. ಇದು ನಮ್ಮ ಎರಡು ಚಳವಳಿಗಳ ಸಂದರ್ಭದಲ್ಲಿ ಕಾಣಿಸಿದ ನಡೆಯೂ ಆಗಿದೆ. ವಚನ ಚಳವಳಿ ಸಂದರ್ಭವನ್ನು ಇಲ್ಲಿ ಗಮನಿಸಬಹುದು.

ಬಸವಣ್ಣನ ಮಾದರಿ

ಬಸವಣ್ಣ ತನ್ನನ್ನು ಮೇಲರಿಮೆಯ ಪಾಪಪ್ರಜ್ಞೆಯಿಂದ ಕೆಳಗಿಳಿಸಿಕೊಂಡು ಹಸಿವಿನ ನೋವಿನ ಅವಮಾನದ ನೆಲೆಯ ಶ್ರಮಜೀವಿಗಳ ಜೊತೆ ಪವಿತ್ರತರ ಭಾವದಲ್ಲಿ ಗುರುತಿಸಿ ಕೊಂಡಿರುವುದು ನಮ್ಮ ಸಾಮಾಜಿಕ ಸಂದರ್ಭದಲ್ಲಿ ತೀರ ಅಗತ್ಯವಾದ ಅಪವರ್ಗೀಕರಣ ಪ್ರಕ್ರಿಯೆ. ಹೀಗೆ ಅಪವರ್ಗೀಕರಣಗೊಳ್ಳುವಾಗ ವೈದಿಕನೆಲೆಯ ಅಮಾನವೀಯ ವರ್ಗಹಿತ ವನ್ನು ನಿರಾಕರಿಸುತ್ತಲೇ, ಸಮಾನತೆಯ ಪರ್ಯಾಯ ಆಚರಣೆಯೊಂದನ್ನು ಸಂರಚನೆಗೊಳಿ ಸುತ್ತಾ ನಡೆಯುತ್ತಾನೆ. ಈ ಸಂರಚನೆ ಮತ್ತೊಂದು ರೀತಿಯಲ್ಲಿ ಅಲಿಖಿತ ಪರಂಪರೆಯ ದೇಶೀಯ ನೆಲದಲ್ಲಿ ಬೇರು ಬಿಟ್ಟು ಬೆಳೆದ ಆಶಯವೇ ಆಗಿದೆ. ಮೇಲ್ಜಾತಿಯಲ್ಲಿ ಹುಟ್ಟಿಬಂದ ಬಸವಣ್ಣನಂಥ ಸಾಧಕರಿಗೆ ತಾವು ಹುಟ್ಟಿ ಬಂದ ಮೂಲನೆಲೆಯ ಹುಸಿಭಾವದ ಅನೈತಿಕಾಂಶದ ಮೇಲರಿಮೆಯನ್ನು ನೀಗಿಕೊಳ್ಳುವುದಕ್ಕೆ, ಕೆಳಗಿನ ಶ್ರಮಿಕ ಸಮುದಾಯದ ಜೊತೆ ತಮ್ಮನ್ನು ಗುರುತಿಸಿಕೊಂಡು ನೈತಿಕ ಶುದ್ಧಿಯನ್ನು ಪಡೆಯುವುದಕ್ಕೆ ಈ ರೀತಿಯ ಕೆಳಮುಖೀ ಚಲನೆ ಅನಿವಾರ್ಯ ಹಾಗೂ ಅಗತ್ಯ. 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ' ಎಂಬ ಆತಂಕದಲ್ಲಿ ಇದು ಕಂಡುಬರುತ್ತದೆ.

> ಚನ್ನಯ್ಯನ ಮನೆಯ ದಾಸಿಯ ಮಗನು
> ಕಕ್ಕಯ್ಯನ ಮನೆಯ ದಾಸಿಯ ಮಗಳು
> ಇವರಿಬ್ಬರು ಹೊಲದಲ್ಲಿ ಬೆರಣಿಗೆ ಹೋಗಿ ಸಂಗವ ಮಾಡಿದರು.
> ಇವರಿಬ್ಬರಿಗೆ ಹುಟ್ಟಿದ ಮಗ ನಾನು
> ಕೂಡಲ ಸಂಗಮದೇವ ಸಾಕ್ಷಿಯಾಗಿ

ಎಂದು ತನ್ನ ಹುಟ್ಟನ್ನೇ ಸಾಮಾಜಿಕ ನೀತಿಯ ಅಪವಿತ್ರತೆಯ ಪಲ್ಲಟದಲ್ಲಿ ಪವಿತ್ರಗೊಳಿಸಿಕೊಳ್ಳುತ್ತಾನೆ. ಕೆಳವರ್ಗದ ಜನತೆಯ ಆತ್ಮವಿಶ್ವಾಸವನ್ನು ಎತ್ತಿಹಿಡಿಯುವ ಕಾರ್ಯದಲ್ಲಿ ಬಸವಣ್ಣನ ಮನಸ್ಸು ಹರಿದಿರುವ ಪರಿ ಅಪೂರ್ವವಾದುದು. ಕೆಳಜಾತಿಗಳ ನೈತಿಕತೆಯ ಎದುರು ಮೇಲ್ಜಾತಿಯ ಅಪರಾಧೀ ಪ್ರಜ್ಞೆ ಆತ್ಮವಿಮರ್ಶೆ ಮಾಡಿಕೊಂಡು, ಪಶ್ಚಾತ್ತಾಪದಿಂದ ತನ್ನನ್ನು ತಾನು ಕೆಳಸ್ತರದ ಜನರ ಸಹಜ ಪ್ರವೃತ್ತಿಗಳ ಪ್ರಗತಿಪರ ನೆಲೆಯಲ್ಲಿ ಗುರುತಿಸಿಕೊಂಡು ಸಮಾನತೆಯನ್ನು ಆಶಿಸುವ ಭಾವಮೂಲದಲ್ಲಿ ಚಲಿಸಿದೆ. ಆದರೆ ಅದೇ ಕಾಲಮಾನದಲ್ಲಿ ಶ್ರಮಿಕಮೂಲದಿಂದ ಅಲಕ್ಷಿತ ಮೂಲಗಳಿಂದ ಬಂದ ಕೆಲವು ವಚನಕಾರರ ವಚನಗಳಲ್ಲಿ ಆತ್ಮಪ್ರತ್ಯಯದ ಮಾರ್ಗ ಕಂಡುಬರುತ್ತದೆ. ಅಂಬಿಗರ ಚೌಡಯ್ಯ ಕಾಳವ್ವೆ ನುಲಿಯ ಚಂದಯ್ಯ ಇಂಥವರು ಇದಕ್ಕೆ ಉದಾಹರಣೆಯಾಗುತ್ತಾರೆ.

ರೇವಣಸಿದ್ಧೇಶ್ವರ ನಡೆ

ಈ ಹಿನ್ನೆಲೆಯಲ್ಲಿ ಕಂಡರೆ ಕನಕದಾಸರ ಆಲೋಚನೆ ನೈತಿಕ ಎಚ್ಚರದ ಆತ್ಮಪ್ರತ್ಯಯದ ದಿಕ್ಕನ್ನು ಹಿಡಿಯುವುದಕ್ಕಿಂತ ಆತ್ಮವಾದಿ ನೆಲೆಯ ಸಾಂಸ್ಕೃತಿಕ ದಾಸ್ಯದ ನೊಗಕ್ಕೆ ಹೆಗಲು ಕೊಟ್ಟಿದ್ದೇ ಆಗಿದೆ. ಆದರೆ ಇದೇ ಕುಲಮೂಲದಿಂದ ಬಂದ ಮತ್ತೊಬ್ಬ ಚಾರಿತ್ರಿಕ ಪುರುಷ ರೇವಣಸಿದ್ಧೇಶ್ವರನ ನಡೆ ಇದಕ್ಕೆ ಭಿನ್ನವಾದುದಾಗಿದೆ, ಇದು ಗಮನಿಸಲೇಬೇಕಾದ ವಿಚಾರ. ರೇವಣ್ಣ ಸಿದ್ದೇಶ್ವರನನ್ನು ಇಡೀ ಕುರುಬ ಜನಪದ ಸಮುದಾಯ ಕುಲಗುರು ಗುರುಸ್ವಾಮಿ ಎಂದು ಸ್ವೀಕರಿಸಿದೆ. ಇದಕ್ಕೆ ಕಾರಣವಾದ ಐತಿಹಾಸಿಕ ಸಂಗತಿಯೊಂದನ್ನು ಜನಪದ ಸಮುದಾಯ ಕಾವ್ಯವಾಗಿ ಹಾಡಿದೆ. ಆ ಕಾವ್ಯದ ಅನುಸಾರ; ರೇವಣ ಸಿದ್ದೇಶ್ವರ ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿ ಲಿಂಗದೀಕ್ಷೆ ಪಡೆಯುತ್ತಾನೆ. ಆದರೆ ಶರಣ ಸಂದೋಹ ಇವನ ಕುಲಮೂಲದ ಸಮುದಾಯದ ಬಗ್ಗೆ ತೋರಿದ ಅವಮಾನಕರ ವರ್ತನೆಗೆ ಶರಣರ ವಿರುದ್ಧ ಸಿಡಿದು ಹೊರಬರುತ್ತಾನೆ. ಇಡೀ ಕುರುಬ ಜನಾಂಗದ ಸಮುದಾಯವನ್ನು ತನ್ನ ಬೆನ್ನಹಿಂದೆ ಕಟ್ಟಿಕೊಂಡು ಸಾಮಾಜಿಕ ಸ್ಥಾನಮಾನಕ್ಕಾಗಿ ಆತ್ಮಪ್ರತ್ಯಯ ಮೆರೆದು ಹೋರಾಡುತ್ತಾನೆ:

> ಅವರಿದ್ದಿದ್ದಿತ್ತಾಕೆ ಇದ್ದಲ ಚೆಲ್ಲೋರೆ
> ಅವರಿದ್ದಲ್ಲಿ ಜಿಡ್ಡು ನಿಲುವಾರ | ಆಲುಮತನೋರ
> ಆರು ಕಳ್ಳಾಬೇಕೆ ಇಡಿರಲ್ಲ
>
> ವೋದೋದುತ್ತಾಕೆ ಬೂದೀಯ ಚೆಲ್ಲೋರು
> ವೋದಲ್ಲಿ ಜಿಡ್ಡು ನಿಲುಬಾರ | ಆಲುಮತನೋರ
> ಅತ್ತು ಕಳ್ಳಬೇಕೆ ಇಡಿರಲ್ಲ
>
> ತನ್ನೊರವ್ರಂಗದಾರೆ ಮನ್ನೇರು ಮುನಿದೆದ್ದು
> ಗೇನಿಸಿ ಗಂಡ್ರು ಮನುದಾಗೆ | ರೇವಣ ಸಾಮಿ
> ಗುರುವೆ ತಾನೊಲ್ಲು ತ್ರಬಸೀಗೆ

ಸಾಣೆಕಲ್ಲಿನ ಮ್ಯಾಲೆ ನಲವತ್ತು ಕಿರಿಯಣುತೆ
ತಾಯಿನೋಡವರೆ ಇನಿವಂದ | ಆಲುಮತುನೋರಿಗೆ
ಬಾಳೆಯೆಲೆ ಮೇಲೆ ತ್ರಬಸವರೆ

ತಪಸ್ಸಿಗೆ ಕುಳಿತ ರೇವಣಸಿದ್ಧನ ಪಾದದಿಂದ ನೆತ್ತಿವರೆಗಿನ ಅಂಗಾಂಗ ಸಮಸ್ತಗಳಲ್ಲಿ ಹುಟ್ಟಿ ಬೆಳೆದದ್ದು ಪ್ರಕೃತಿ ಸಮಸ್ತ. ಆ ಪ್ರಕೃತಿಯನ್ನು ಆಶ್ರಯಿಸಿ ಬಾಳಿದ್ದು ಇರುವೆಂಬತ್ತು ಕೋಟಿ ಜೀವರಾಶಿ. ಪ್ರಕೃತಿ ಮತ್ತು ಜೀವರಾಶಿಗಳ ನಡುವಿನ ಕರುಳ ಸಂಬಂಧದ ಈ ಅದ್ಭುತ ಕಲ್ಪನೆ ನಿತ್ಯನೂತನವಾದಷ್ಟೆ ಧ್ವನಿಪೂರ್ಣವಾದದ್ದು. ಸಾಮಾಜಿಕ ಸ್ಥಾನಮಾನದ ಹಕ್ಕಿಗಾಗಿ ನಡೆಸಿದ ಹೋರಾಟದ ಸಂದರ್ಭದಲ್ಲಿ ಸಾಧನೆಯ ಕ್ರಿಯಾರೂಪವಾಗಿ ಬಂದಿರುವ ಈ ವರ್ಣನೆ ಒಂದು ಪ್ರತಿಮಾಧ್ವನಿಯಿಂದ ಕೂಡಿದೆ. ಇವನ ತಪಸ್ಸಿಗೆ ಮೆಚ್ಚಿ ಶಿವನಾರಾಯಣರು ಪ್ರತ್ಯಕ್ಷವಾಗುತ್ತಾರೆ.

ಅತ್ತೂರ ಕೊಡುವೆ ಅತ್ತೋ ತೇಜಿ ಕೊಡುವೆ
ಮತ್ತೆ ನಮಸಮ್ದ ದೊರೆತನ | ನಾ ಕೊಡುವೆತಿ
ನೀ ವತ್ತೀದ ತ್ರಬಸ ಯಿಳಿಗುರುವೆ

ಎಂದು ಕೇಳುತ್ತಾರೆ. ಆದರೆ ರೇವಣ್ಣ ತಾನು ಯಾವುದಕ್ಕಾಗಿ ತಪಸ್ಸು ಮಾಡಿದ್ದನೋ ಆ ಉದ್ದೇಶವನ್ನೇ ಅವರ ಮುಂದೊಡ್ಡುತ್ತಾ-

ಅತ್ತೂರು ಐದಾವೆ ಅತ್ತೋತೇಜ್ಯೆದಾವೆ
ಮತ್ತ ನಿಮಸಮ್ದ ದೊರೆತನ| ನಮಗೀವೆ
ಅತ್ತು ಕಲ್ಯಾಚೆ ಕುರುಬರ| ಕೊಟ್ಟಾರೆ
ನಾನತ್ತೀದ ತ್ರಬಸ ಇಳುದೇನು

ಎನ್ನುತ್ತಾನೆ.

ಊರು ಪಡೆಯಲಿಲ್ಲ ಒಕ್ಕಲು ಪಡೆಯಲಿಲ್ಲ
ಯೀನಗುರುಬರ ಪಡೆದಲ್ಲೋ
ಸೀಮೆ ಪಡೆಯಲಿಲ್ಲ ಭೂಮಿ ಪಡೆಯಲಿಲ್ಲ
ಜಿದ್ದುಗುರುಬರ ಪಡೆದಲ್ಲೋ

ಎಂದು ಶಿವನಾರಾಯಣರು ಇವನನ್ನು ಹೀಯಾಳಿಸುತ್ತಾರೆ. ಅದಕ್ಕೆ ರೇವಣ್ಣ ಜಗ್ಗುವುದಿಲ್ಲ. ಹಿಡಿದ ಪಟ್ಟನ್ನು ಬಿಡದ ರೇವಣ್ಣ ಓಟ್ಟಿನ ತಟ್ಟಿಯ ಮೇಲೆ ಸತ್ತಮರಿಯನ್ನು ಹಾಕಿ ಹಾಲುಮತದವರನ್ನು ಮತ್ತೆ ಒಳಗೊಳ್ಳುತ್ತಾನೆ. ಎತ್ತು ಕರೆಡೆ ಜೂಜು ಮತ್ತೆ ಪಗಡೆ ಜೂಜುಗಳು ನಡೆದು ತನ್ನ ಕೆತ್ತರಿಸಿ ಬರುವ ಟಗರನ್ನು ಬಿಟ್ಟು ಕಾಳಗವನ್ನು ಗೆಲ್ಲುತ್ತಾನೆ. ಹೋರಾಟದಲ್ಲಿ ಸತ್ತಟಗರು ರೇವಣ್ಣನ ಸತ್ಯದಿಂದ ಮತ್ತೆ ಬದುಕಿದ್ದೂ ಅಲ್ಲದೆ ಕಾಳಗವನ್ನು ಗೆಲ್ಲುತ್ತದೆ. ಕಲ್ಯಾಣ ಪಟ್ಟಣದೊಳಗೆ ಈ ಕಾಳಗ ಗೆದ್ದ ಬಗ್ಗೆ ಮತ್ತು ಕುರುಬರಿಗೆ ಗುರುವಾಗಿ ರೇವಣ್ಣ ಗುರುತನ ಪಡೆದ ಬಗ್ಗೆ ಶಾಸನವಾದುವಂತೆ. ಕುರುಬರ ಸಾಮಾಜಿಕ ಬದುಕಿನ ಮೇಲೆ ನಡೆದ ದೌರ್ಜನ್ಯದ ಈ ಹೋರಾಟವನ್ನು ನಿರೂಪಣೆ ತುಂಬಾ ಸಾಂಕೇತಿಕವಾಗಿ

ಹಿಡಿದಿಟ್ಟಿದೆ. ಶಿವನಾರಾಯಣರು ವೀರಶೈವ ವೈದಿಕ ಮತಗಳನ್ನು ಸೂಚಿಸುತ್ತಿದ್ದರೆ, ಹೀನ ಗುರುಬ ಜಿಡ್ಡುಗುರುಬ ಪದಗಳು ಕುರುಬರಿಗೆ ಅವರು ಹಾಕಿದ ಸಾಮಾಜಿಕ ಬಹಿಷ್ಕಾರವನ್ನು ಸೂಚಿಸುತ್ತಿವೆ. ಕಾಯಕವೇ ಕೈಲಾಸ ಎಂಬ ತತ್ತ್ವವನ್ನು ತನ್ನ ಅಂತಃಸತ್ವವಾಗಿಸಿಕೊಂಡ ವೀರಶೈವವೂ ವೈದಿಕರ ದಾರಿಯನ್ನೇ ಹಿಡಿದು ನಡೆದಿರುವುದನ್ನು ಇಲ್ಲಿಯ ಸಾಮಾಜಿಕ ಸಂಘರ್ಷದ ನಿರೂಪಣೆ ಶಕ್ತಿಯುತವಾಗಿ ತೆರೆದಿಟ್ಟಿದೆ.

ಹೀಗೆ ತನ್ನ ಮೂಲಸಮುದಾಯ ಅವಮಾನಕ್ಕೆ ಒಳಗಾದ ಸಂಕಟವನ್ನು ರೇವಣ್ಣ ತನ್ನದಾಗಿಸಿಕೊಂಡು ಹೋರಾಡುತ್ತಾನೆ. ಆ ಹೋರಾಟದ ಸಂದರ್ಭದಲ್ಲಿ ಅವನು ತೋರಿರುವ ಆತ್ಮಪ್ರತ್ಯಯದ ನಡೆ ಪ್ರಗತಿಪರವಾದುದು. ಮತಾಂತರಕ್ಕೆ ಒಳಗಾದಾಗಲೂ ತನ್ನ ಕುಲಮೂಲದ ಸಾಂಸ್ಕೃತಿಕ ಸಾಮಾಜಿಕ ಕಾಳಜಿಯನ್ನು ಗೌರವಸಂಪನ್ನ ಪ್ರತ್ಯಯವಾಗಿ ಗಣಿಸಿ ಮೆರೆದಿರುವ ರೇವಣ್ಣನ ನಡೆ ಸಂಸ್ಕೃತೀಕರಣಕ್ಕೆ ಭಿನ್ನವಾದ ನಡೆ. ಮತಾಂತರದ ಮನಸ್ಸು ಎದುರಿಸಿರುವ ಇಲ್ಲಿನ ಸಂದಿಗ್ಧಗಳು, ಇಂಡಿಯಾದಲ್ಲಿ ಅಲಕ್ಷಿತ ಸಮುದಾಯಗಳು ಎದುರಿಸುತ್ತಾ ಬಂದಿರುವ ಸಾಮಾಜಿಕ ಸಾಂಸ್ಕೃತಿಕ ಸ್ಥಿತಿಸ್ವರೂಪವನ್ನು ಸೂಕ್ಷ್ಮವಾಗಿ ವ್ಯಂಜಿಸುತ್ತಿವೆ. ಇಂಥ ಎಷ್ಟೋ ಸಂಘರ್ಷ ಸೂಕ್ಷ್ಮಗಳಿಗೆ ನಮ್ಮ ಲಿಖಿತ ಪರಂಪರೆಯ ಇತಿಹಾಸ ಎದೆ ತೆರೆದಿಲ್ಲ. ಮೌಖಿಕ ಪರಂಪರೆಯ ಮೂಲವನ್ನು ಶೋಧಿಸುವುದರಿಂದ ಶ್ರಮಿಕಮೂಲದ ಸಾಂಸ್ಕೃತಿಕ ಇತಿಹಾಸವನ್ನು ಪುನಾರಚಿಸಬಹುದಾಗಿದೆ. ಈ ಕಾರ್ಯ ತೀರಾ ತುರ್ತಿನದೂ ಆಗಿದೆ.

'ರಾಮಧಾನ್ಯ ಚರಿತೆ' ಸಮುದಾಯನಿಷ್ಠ ಕೃತಿ

ತಮ್ಮ ವ್ಯಕ್ತಿನಿಷ್ಠ ಕೃತಿಗಳಾದ ಕೀರ್ತನೆಗಳಲ್ಲಿ ಕನಕದಾಸರು ಹರಿಸರ್ವೋತ್ತಮ ಭಾವದ ಸಂಸ್ಕೃತೀಕರಣವನ್ನು ಮೆರೆದವರಾಗಿದ್ದರೆ, ತಮ್ಮ ವಸ್ತುನಿಷ್ಠ ಕಾವ್ಯವಾದ ರಾಮಧಾನ್ಯಚರಿತೆ ಯಲ್ಲಿ ಸ್ವಲ್ಪ ಭಿನ್ನಮಾರ್ಗ ಅನುಸರಿಸಿದಂತೆ ನಡೆದಿದ್ದಾರೆ.

ಬಲ್ಲಿದರು ಬಡವರುಗಳೆನ್ನದೆ
ಎಲ್ಲರನು ರಕ್ಷಿಸುವೆ ನಿರ್ದಯ
ನಲ್ಲ ನಾ ನಿನ್ನಂತೆ

ಇದು ಕನಕದಾಸರ ರಾಮಧಾನ್ಯ ಚರಿತೆಯಲ್ಲಿ ರಾಗಿ ಬತ್ತಕ್ಕೆ ಹೇಳುವ ಮಾತು. ಕಣ್ಣು ಕಿವಿ ನೆನಪುಗಳನ್ನು ಉಳ್ಳ ಯಾವುದೇ ಚೇತನವೊಂದು ನಮ್ಮ ಸಾಮಾಜಿಕ ಸಂದರ್ಭದಲ್ಲಿ ಆಶಿಸುವ ವಿವೇಕಪೂರ್ಣ ನಡೆ ಇದು. ಕಲೆಯ ಅಂತಿಮ ಆಶಯವೂ ಈ ವಿವೇಕಪೂರ್ಣ ಸಮಾನತೆಯ ಪ್ರತಿಪಾದನೆಯೇ ಆಗಿದೆ. ಮೇಲಿನ ಮಾತು ವಾಚ್ಯದ ನೆಲೆಯಲ್ಲಿ ಸಮುದಾಯಗಳಲ್ಲಿರುವ ವರ್ಗದೃಷ್ಟಿಯನ್ನು ಹೇಳುವಂತೆ ಕೇಳುತ್ತಿದ್ದರೂ, ಇಡೀ ಕೃತಿಯ ಬಂಧದಲ್ಲಿ ಅನುಭಾವಿಕ ಸತ್ಯ ಕೇವಲ ವರ್ಗದೃಷ್ಟಿಗೆ ಮಾತ್ರ ಸೀಮಿತವಾಗಿ ನಿಲ್ಲದೆ ಸಮಾಜದಲ್ಲಿನ ಎಲ್ಲ ಅಸಮಾನತೆಗಳ ವಿರುದ್ಧದ ದನಿಯಾಗಿ ಮೊಳಗುತ್ತದೆ. ಇದು ರಾಮಧಾನ್ಯ ಚರಿತೆಯ ವಸ್ತುಧ್ವನಿ.

'ರಾಮಧಾನ್ಯ ಚರಿತೆ' ಕನಕದಾಸರು ಬರೆದಿರುವ ರಾಮಾಯಣದ ಕಥೆ. ರಾಮಾಯಣದ ಶಿಷ್ಟ ಪರಂಪರೆಯ ಅರ್ಥ ಸಂಪ್ರದಾಯಕ್ಕೂ ಜನಪದ ಪರಂಪರೆಯ ಅನುಭವ ಮಾರ್ಗಕ್ಕೂ ಹಲವು ವ್ಯತ್ಯಾಸಗಳಿವೆ. ಜನಪದರ ಕಣ್ಣಿನಲ್ಲಿ ರಾಮಾಯಣ ಬಹುಪಾಲು ಸೀತಾಯಣ, ಮಾನವೀಕರಣಗೊಂಡ ಸಾಮಾನ್ಯತಾ ನೆಲೆಯಲ್ಲಿ ಅಲ್ಲಿನ ಪಾತ್ರಗಳ ಕ್ರಿಯೆ ಪ್ರತಿಕ್ರಿಯೆಗಳಿವೆ. ಅಲ್ಲಿಯ ಬದುಕು ಭೂಮಿ ಮೇಲಿನ ಬದುಕಿಗೆ ಅತೀತವಾದುದಲ್ಲ; ಮನುಷ್ಯನ ಸಾಮಾನ್ಯತಾ ಆವರಣದ ಗಡಿ ದಾಟದ್ದು. ಕನಕದಾಸರ ರಾಮಧಾನ್ಯ ಚರಿತೆ ಜನಪದ ಪರಂಪರೆಯ ಆಶಯ ಮೂಲಕ್ಕೆ ಸೇರಿದ ಕಥೆ. ಆದರೆ ಇಲ್ಲಿಯ ಈ ಆಶಯ ಶಿಷ್ಟಸಂಪ್ರದಾಯದ ರಾಮನ ದೈವತ್ವವನ್ನೂ ಗುಣಲಕ್ಷಣಗಳನ್ನೂ ನಿರಾಕರಿಸುವುದಲ್ಲ. ಬದಲಾಗಿ ರಾಮನ ವ್ಯಕ್ತಿತ್ವದಲ್ಲಿ ಅವಮಾನಿತರ ಪರವಾದ ಗುಣಗ್ರಾಹೀ ನಿಲುವಿನ ಜನಪರ ದೃಷ್ಟಿಯ ವಿಶೇಷತೆಯನ್ನೂ ಕಾಣಿಸುವುದೇ ಆಗಿದೆ. ಹೀಗೆ ಕಾಣಿಸುವುದಕ್ಕೆ ಕಲ್ಪಿಸಿಕೊಂಡಿರುವ ಕಥೆ ಮಾತ್ರ ಜನಪದ ಕಥಾ ಮಾದರಿಯ ರೂಪಕಾಕೃತಿಯ ಕಥೆಯಾಗಿದೆ.

ಕನಕದಾಸನ ಬದುಕಿನಲ್ಲಿ ಜರುಗಿರುವ ಅವಮಾನಕಾರಕ ಘಟನೆಗಳನ್ನು ನೆನಪಿಸಿಕೊಂಡರೆ, ಈ ರೂಪಕಾಕೃತಿಯ ಅಂತರ್ಯದಲ್ಲಿ ವ್ಯಂಜಿತವಾಗುತ್ತಿರುವ ಸಂಕಟದ ಸ್ವರೂಪ ಅರ್ಥವಾಗುತ್ತದೆ. ಕನಕದಾಸರ ವೈಯಕ್ತಿಕ ನೆಲೆಯ ಎಲ್ಲ ಸಂಕಟಾನುಭವಗಳು ಈ ರೂಪಕ ವಿಧಾನದಲ್ಲಿ ಸಾರ್ವತ್ರೀಕರಣಗೊಂಡು ಅಲಕ್ಷಿತ ಸಮುದಾಯಗಳ ಒಡಲುರಿಯನ್ನು ಹೇಳುತ್ತಿವೆ. ಸಂಕಟದ ಸಂದರ್ಭದಲ್ಲೂ ಸತ್ವಪರೀಕ್ಷೆಗೆ ಒಳಗಾಗುವ ಹಾಗೂ ಮಾತಿನ ಬಡಬಡಿಕೆಗಿಂತ ಮೌನದ ನೆಲೆಯಲ್ಲಿಯೇ ತನ್ನ ಧಾರಣಶಕ್ತಿಯನ್ನು ಕಾಣಿಸುವ ಗತಿಶೀಲತೆ ಕಂಡುಬರುತ್ತದೆ. ರಾಗಿಯ ವರ್ತನೆಯ ಗುಣವಿಶೇಷತೆಯಲ್ಲಿ ಕನಕದಾಸನ ವ್ಯಕ್ತಿತ್ವದ ಮಿಂಚು ಕಾಣಿಸುವುದಷ್ಟೇ ಅಲ್ಲದೆ, ಇಡೀ ಅಲಕ್ಷಿತ ಮೂಲದ ಬಹುಮುಖೀ ಸಂಸ್ಕೃತಿಗಳ ಜನಸಮುದಾಯದ ಗುಣಶೀಲತೆಯೂ ವ್ಯಂಜಿತವಾಗುತ್ತಿದೆ. ಸಾಮಾನ್ಯನಲ್ಲಿನ ಅಸಾಮಾನ್ಯ ಶಕ್ತಿಯನ್ನು ಮನಗಾಣಿಸುವ ಹಾಗೂ ಅವನನ್ನು ಉನ್ನತೀಕರಿಸುವ ಈ ಕ್ರಿಯೆಗೆ ಆತ ಬಳಸಿರುವ ರೀತಿ ಪುರಾಣೀಕರಣ ಹಾಗೂ ಪ್ರಮಾಣೀಕರಣ ವಿಧಾನ. ಇಲ್ಲಿ ರಾಮಾಯಣದ ಕಥೆಯನ್ನು ನಿರೂಪಿಸುತ್ತಾ ಕಥೆಯೊಳಗಿನ ಕಥೆಯಾಗಿ ಈ ಪ್ರಸಂಗವನ್ನು ಕಲ್ಪಿಸಿರುವುದೇ ಪುರಾಣೀಕರಣ ಹಾಗೂ ಪ್ರಮಾಣೀಕರಣ ತಂತ್ರವಾಗಿದೆ.

'ರಾಮಧಾನ್ಯಚರಿತೆ'ಯ ಉದ್ದೇಶ ಇಡೀ ರಾಮಾಯಣವನ್ನು ಹೇಳುವುದಲ್ಲ; ತಾವು ಕಲ್ಪಿಸಿರುವ ಕಥೆಗೆ ಮಹತ್ವ ಪ್ರಾಪ್ತವಾಗಲು ಅಗತ್ಯವಾದಷ್ಟು ರಾಮಾಯಣ ಕಥೆಯನ್ನು ಕಟ್ಟುವುದು ಮಾತ್ರ. ಕಥೆ ತನ್ನ ತಂತ್ರ ಮತ್ತು ವಿನ್ಯಾಸದಲ್ಲಿ ತುಂಬಾ ಸಂಕೀರ್ಣವಾಗಿದೆ. ವನವಾಸ ಮುಗಿಸಿ ರಾಜ್ಯಭಾರ ವಹಿಸಿಕೊಳ್ಳಲು ರಾಮ ಅಯೋಧ್ಯೆಗೆ ಹಿಂದಿರುಗುತ್ತಿರುವಾಗ ರಾಗಿ ಬತ್ತಗಳ ಜಗಳದ ಘಟನೆ ಜರುಗುವಂತೆ ಕಲ್ಪಿಸಿದೆ. ಹೀಗಾಗಿ ರಾಮಕಥೆಯ ಈ ಭಾಗದ ವಿಸ್ತರಣೆ ಅರ್ಥಪೂರ್ಣವಾಗಿದೆ. ಪರೋಕ್ಷವಾಗಿ ರಾಗಿ ಬತ್ತಗಳ ಜಗಳದ ತೀರ್ಪಿನ ಘನತೆಯನ್ನು ಮನಗಾಣಿಸುವ ಪೂರಕ ವರ್ಣನಾವಿಶೇಷತೆಯೂ ಇದಾಗಿದೆ. ಅಜ್ಞಿ ಕಥೆಯ

ಮಾದರಿಯಲ್ಲಿದ್ದು ಕಳೆದು ಹೋಗಬಹುದಾಗಿದ್ದ ಅರ್ಥಾತ್ ಅವಜ್ಞೆಗೆ ಗುರಿಯಾಗಬಹುದಾಗಿದ್ದ ಈ ಪ್ರಧಾನಕಥೆಗೆ ಪುರಾಣದ ಚೌಕಟ್ಟು ತೀರ ಅಗತ್ಯವೆನ್ನಿಸಿದಂತಿದೆ ಕನಕದಾಸನಿಗೆ. ಏನೆಲ್ಲ ಪ್ರತಿಭೆ ಪಾಂಡಿತ್ಯಗಳಿದ್ದೂ ಮೇಲ್ವರ್ಣದ ಪಂಡಿತ ಮಾನ್ಯರ ತಿರಸ್ಕಾರಕ್ಕೆ ಒಳಗಾಗಿದ್ದ ಕನಕದಾಸರನ್ನು ಆ ಸಮುದಾಯ ಬೆರಗುಗಣ್ಣಿನಿಂದ ನೋಡತೊಡಗಿದ್ದು ಅವರು ವ್ಯಾಸಶಂಖದ ತೀರ್ಥವಾಗಿ ಬಿದ್ದಮೇಲೆಯೇ ಅಲ್ಲವೇ? ನಮ್ಮ ಸಾಂಸ್ಕೃತಿಕ ಚರಿತ್ರೆಯಲ್ಲಿ ಕೋಣಮಂತ್ರ ದೀಕ್ಷೆ ಏನನ್ನು ಹೇಳುತ್ತಿದೆ? ಸಂಸ್ಕೃತೀಕರಣಕ್ಕೆ ಆಶಿಸಿದಂಥ ಕನಕದಾಸರಿಗೆ ವ್ಯಾಸಶಂಖದ ಆಶ್ರಯ ಅನಿವಾರ್ಯವಾಗಿದೆ. ಮೇಲ್ನೋರಿಕೆಗೆ ತೀರ ಸರಳವೆನ್ನುವಂತೆ ಕಾಣುವ 'ರಾಮಧಾನ್ಯ ಚರಿತೆ'ಯಲ್ಲಿ ಅನುಭವ ದ್ರವ್ಯದ ಈ ಎಲ್ಲ ಸೂಕ್ಷ್ಮಗಳು ಕಾಯಜೀವ ಸ್ವರೂಪದಲ್ಲಿ ಜಂಗಮಶೀಲವಾಗಿವೆ. ಪುರಾಣದಲ್ಲಿ ಎಲ್ಲೂ ಇಲ್ಲದ ಈ ಕಲ್ಪಿತ ಪ್ರಸಂಗ ರಾಮನ ವನವಾಸ ಜೀವನದ ಕಷ್ಟಕಾರ್ಪಣ್ಯಗಳ ವಿವರ ವರ್ಣನೆಗೆ ತೊಡಗದೆ ಆಡಳಿತದ ಹೊಣೆಯರಿತ ರಾಮನ ಚಿತ್ರ ನೀಡುತ್ತಿದೆ. ನ್ಯಾಯದೃಷ್ಟಿ ಅವಮಾನಿತ ವರ್ಗದ ಕಡೆಗೆ. ಪರೀಕ್ಷಿಸಿ ಪ್ರಮಾಣಿಸಿ ದೃಢೀಕರಿಸಿ ನೀಡುವ ನ್ಯಾಯ ತೀರ್ಮಾನವಿದು. ರೂಪಕದ ಮೂಲಕ ವಿವೇಕ ಮಾತನಾಡುತ್ತಿದೆ.

ಕನ್ನಡದಲ್ಲಿ ಈ ರೂಪಕಾಕೃತಿಯ ಕಥೆಗೆ ಹಲವು ಜನ ವಿಮರ್ಶಕರು ತಮ್ಮ ಓದಿನ ಅನುಭವಗಳ ನೆಲೆಯಲ್ಲಿ ಹಲವು ಅರ್ಥಪರಂಪರೆಗಳನ್ನು ಬೆಳಸಿದ್ದಾರೆ. ಈ ಅರ್ಥದೃಷ್ಟಿಗಳು ಪರಸ್ಪರ ಪೂರಕಗಳೇ ಹೊರತು ವಿರುದ್ಧಗಳಲ್ಲ. ಇಲ್ಲಿ ಬರುವ ನರೆದಲೆಗ-ವ್ರೀಹಿ ಪಾತ್ರ ಕಲ್ಪನೆ ಕನ್ನಡ-ಸಂಸ್ಕೃತ, ಶೂದ್ರ-ಬ್ರಾಹ್ಮಣ, ಬಡವ-ಬಲ್ಲಿದ ಇತ್ಯಾದಿ ನೆಲೆಗಳ ಅನುಭವ ದ್ರವ್ಯವನ್ನು ಪ್ರತಿಪಾದಿಸುತ್ತದೆಂದು ವಾದಿಸುತ್ತಾರೆ. ಈ ಎಲ್ಲ ವಾದಗಳೂ ಸರಿ. ಕಾರಣ ರೂಪಕ ಪಾತ್ರಗಳು ಏಕಾರ್ಥವನ್ನು ಮೀರಿದ ಆಶಯ ಪ್ರಮಾಣಗಳಾಗಿ ಬೆಳೆದಿವೆ. ಆಶಯ ಪ್ರಮಾಣ ವಾಚ್ಯದ ಗಡಿಗೆರೆ ದಾಟಿದ ನೆಲೆಯಲ್ಲಿ ಕಾಲದ ಸ್ಥಿತ್ಯಂತರಗಳಿಗೆ ತೆರೆದುಕೊಳ್ಳುವ ಸ್ಥಿತಿಸ್ಥಾಪಕ ಸತ್ವಶಕ್ತಿಯಿಂದ ಮಿಂಚಿದೆ. ಅದರಲ್ಲೂ, ಸಾವಿರಾರು ವರ್ಷಗಳಿಂದ ಸಾಂಸ್ಕೃತಿಕ ವಸಾಹತೀಕರಣದ ದಬ್ಬಾಳಿಕೆಗೆ ಒಳಗಾಗಿರುವ ಇಂಡಿಯಾದ ಅಲಕ್ಷಿತ ಸಂಸ್ಕೃತಿಗಳು, ವಸಾಹತೀಕರಣ, ನವ ವಸಾಹತೀಕರಣ ಹಾಗೂ ಮುಕ್ತ ವಾಣಿಜ್ಯೀಕರಣದ ಇಕ್ಕಟ್ಟುಗಳಿಗೆ ಒಳಗಾಗಿರುವ ಪ್ರಸ್ತುತ ಸಂದರ್ಭದಲ್ಲಿ, ಈ ಕಾವ್ಯದ ಓದು ಕೊಡುವ ಅನುಭವ ಪರಂಪರೆ ವಿಸ್ಮಯ ಹುಟ್ಟಿಸುತ್ತದೆ. ಈ ರೂಪಕ ಪಾತ್ರಗಳು ನಡೆಸುವ ತಾರ್ಕಿಕ ಚಲನೆಯ ಅನುಭವ ಗತಿಯ ಜೊತೆ ನಮ್ಮ ಸಮಕಾಲೀನ ಅನುಭವ ವಿವೇಕ ಸಂವಾದಿಸ ತೊಡಗುತ್ತದೆ. ಸಂದರ್ಭವಶದ ಅನುಭವ ಮಾತ್ರವನ್ನು ಕಾಲಾತೀತವೂ ದೇಶಾತೀತವೂ ಆದ ನೆಲೆಯಲ್ಲಿ ಒಡ್ಡಿಕೊಳ್ಳಲು ರೂಪಕವನ್ನು ಆಶ್ರಯಿಸುತ್ತದೆ ವಿವೇಕ. 'ರಾಮಧಾನ್ಯ ಚರಿತೆ'ಯ ರೂಪಕ ಇಂಥ ವಿವೇಕದ ಅದ್ಭುತ ಮಾಟವಾಗಿದೆ.

‘ನಿಸರ್ಗ’ದ ಮರುಓದು

● ಬಾಳಾಸಾಹೇಬ ಲೋಕಾಪೂರ

ಅಣ್ಣಾರಾಯರ ನಿಸರ್ಗ ಕಾದಂಬರಿ ಕನ್ನಡದ ಕೆಲವೇ ಅಪರೂಪದ ಪ್ರಾದೇಶಿಕ ಕಾದಂಬರಿಗಳಲ್ಲಿ ಒಂದು. ಭಾಷೆ, ಪ್ರಾದೇಶಿಕ ವಿವರಗಳು ಮತ್ತು ಒಂದು ಗ್ರಾಮ ಚೌಕಟ್ಟಿನಲ್ಲಿ ನಡೆಯುವ ಅನೇಕ ಸಂಪ್ರದಾಯಗಳು ಮದುವೆ, ಹಬ್ಬ, ಹರಿದಿನ, ಜಾತ್ರೆ ಇತ್ಯಾದಿಗಳ ವಿವರಗಳೊಂದಿಗೆ ಕಾದಂಬರಿ ಸಮೃದ್ಧವಾಗಿದೆ. ಕನ್ನಡದ ಬಹುತೇಕ ಎಲ್ಲ ವಿಮರ್ಶಕರು ಒಂದಿಲ್ಲೊಂದು ಕಡೆ ‘ನಿಸರ್ಗ’ ಕಾದಂಬರಿಯ ವಿವಿಧ ಆಯಾಮಗಳ ಬಗ್ಗೆ ಬರೆದವರೆ ಆಗಿದ್ದಾರೆ. ಆದರೆ ಹೆಚ್ಚಿನವರು ಕಾದಂಬರಿಯಲ್ಲಿ ಮೇಲುನೋಟಕ್ಕೆ ಎದ್ದು ಕಾಣುವ ತಾರಾ ಮತ್ತು ಅನಂತ ಇವರ ನಡುವಿನ ವಿಲೋಮ ಪ್ರೇಮ, ಸಂಯೋಗ, ವಿಯೋಗ, ಹಾಗೂ ಪತನವನ್ನು ಮತ್ತು ಅದು ಅಂತಿಮವಾಗಿ ಹುಟ್ಟಿಸಿದ ದುರಂತದ ಬಗ್ಗೆಯೇ ಬರೆದಿದ್ದಾರೆ. ಪಂಜಾಬಿ ಕಾದಂಬರಿಯ ‘ಜನುಮದ ಜೋಡಿ’ಯ ದುರಂತ ಹಾಗೂ ಶರಶ್ಚಂದ್ರರ ‘ದೇವದಾಸ’ ಕಾದಂಬರಿಯಲ್ಲಿಯ ವಿಫಲ ಪ್ರೇಮದ ದುರಂತ ಕಥಾನಕದೊಂದಿಗೆ ಸಮೀಕರಿಸಿ ಬರೆದಿದ್ದಾರೆ.

ಕಾದಂಬರಿ ಹೊರಬಂದು ಈಗ ಹೆಚ್ಚು ಕಮ್ಮಿ ಐವತ್ತು ವರ್ಷಗಳಾಗಿವೆ. ಈವರೆಗೂ ‘ನಿಸರ್ಗ’ ಕಾದಂಬರಿ ಎಂದರೆ ಪ್ರಾದೇಶಿಕ ವಿವರಗಳ, ಅಪರೂಪದ ಭಾಷಾ ಸಮೃದ್ಧಿಯ, ದುರಂತ ಕತೆ ಹಾಗು ಎರಡು ಜೈನ ಕುಟುಂಬಗಳ ನಡುವಿನ ಈರ್ಷ್ಯೆ ಮತ್ತು ಅಸಹಾಯಕತೆಯ ಚಿತ್ರಣವಾಗಿ ಮಾತ್ರ ನಮ್ಮ ಕಣ್ಣ ಮುಂದೆ ಇದೆ. ಆದರೆ ಕಾದಂಬರಿಯ ಒಳ ಚೌಕಟ್ಟಿನಲ್ಲಿ ಘಟಿಸುವ ಘಟನೆಗಳು ಅವರ ಉದ್ದೇಶ ಬೇರೆಯೇ ಎಂಬುದನ್ನು ಸೂಚಿಸುತ್ತವೆ. ಜೈನರು ಅಹಿಂಸಾವಾದಿಗಳು ಅನೇಕಾಂತವಾದ ಮತ್ತು ಅಪರಿಗ್ರಹಗಳನ್ನು ತಮ್ಮ ಧರ್ಮದ ತಿರುಳು ಹಾಗೂ ಜೀವನ ವಿಧಾನವಾಗಿಸಿಕೊಂಡು ಬದುಕುವವರು. ಆದರೆ ಈ ಕಾದಂಬರಿಯಲ್ಲಿ ಚಿತ್ರಿತಗೊಂಡಿರುವ ಜೈನರು ಎಂಥಹವರು? ತಮ್ಮ ಧರ್ಮಸಿದ್ಧಾಂತಗಳ ಬಗ್ಗೆ ಅವರ ಪ್ರತಿಕ್ರಿಯೆ ಏನು? ಮತ್ತು ಹೇಗೆ? ಇವೆಲ್ಲಕ್ಕು ಉತ್ತರ ಕಾದಂಬರಿಯಲ್ಲಿಯೇ ಸಿಗುತ್ತದೆ. ಶುದ್ಧ ಜೈನ ದೃಷ್ಟಿಕೋನ ಇದ್ದ ಅಣ್ಣಾರಾಯರು ಗ್ರಾಮೀಣ ಪ್ರದೇಶದಲ್ಲಿ ಜೈನ ತತ್ವಕ್ಕೆ ಅನುಗುಣವಾಗಿಯೇ ಬದುಕಿ ಬಾಳಿದವರು.

ಅಣ್ಣಾರಾಯರು ಒಂದು ಕಡೆ ‘ನಿಸರ್ಗ’ ಕಾದಂಬರಿಯ ವಸ್ತು ಕಾಲ್ಪನಿಕ ಅಲ್ಲ.

ತಮ್ಮೂರಿನಲ್ಲಿಯೇ ತಾವು ನೋಡಿದ ದುರಂತ ಕತೆಯ ಕಲಾತ್ಮಕ ರೂಪ ಎಂದಿದ್ದಾರೆ. ಇಡೀ ಕಾದಂಬರಿಯಲ್ಲಿಯ ಧಾರ್ಮಿಕ ಚೌಕಟ್ಟು ಮತ್ತು ಅಲ್ಲಿಯ ಪಾತ್ರಗಳ ಧರ್ಮ ವಿರೋಧಿ ನೀತಿಯನ್ನು ಅವರು ಕಂಡವರೆ ಆಗಿದ್ದರು. ಅದಕ್ಕಾಗಿಯೇ ಈ ಕಾದಂಬರಿಯಲ್ಲಿ ಜೈನರ ಜೀವ ವಿರೋಧಿ ಧೋರಣೆಯನ್ನು ಹಾಗು ಅಪರಿಗ್ರಹದ ವಿರುದ್ಧವಾಗಿ ಸಂಗ್ರಹ ಬುದ್ಧಿಯನ್ನು ಅನಾವರಣಗೊಳಿಸಲು ಇಲ್ಲಿಯ ಪಾತ್ರಗಳನ್ನು ದುಡಿಸಿಕೊಳ್ಳುತ್ತಾರೆ.

ಜೈನ ಧರ್ಮದ ಬಹುತೇಕ ಆಚರಣೆಗಳು ವೇದನಾಮೂಲವಾಗಿವೆ. ಸಲ್ಲೇಖನ, ಕೇಶಲೋಚನ, ವ್ರತ, ಉಪವಾಸ ಹೀಗೆ ಕೆಲವನ್ನು ಹೆಸರಿಸಬಹುದು. ಶರೀರ ವೇದನೆಗಳಿಂದ ಹುಟ್ಟುವ ನಿರ್ಭಾವುಕತೆಯನ್ನು ಧರ್ಮ ಸಂವೇದನೆಯನ್ನಾಗಿಸುವ ಆಚರಣೆಗಳೇ ಲೋಂಪಿಗಳು. ಅದ್ದರಿಂದಲೇ ಮತ್ತೊಂದು ಜೀವಕ್ಕೆ ವೇದನೆಯನ್ನು ಕೊಡದೇ ಇರುವಂತಹ ಅಹಿಂಸೆಯನ್ನು ತಮ್ಮ ಧರ್ಮದ ಮುಖ್ಯ ತತ್ವವನ್ನಾಗಿಸಿಕೊಂಡರು. (ಸ್ವತಃ ಅಣ್ಣಾರಾಯರು ಅಹಿಂಸಾ ವ್ರತಧಾರಿಯಾಗಿದ್ದರು) ಜೈನರೂ ಎಂದಿಗೂ ಜೀವವಿರೋಧಿಗಳಲ್ಲ. ಆದರೆ 'ನಿಸರ್ಗ' ಕಾದಂಬರಿಯ ಮುಖ್ಯ ಪಾತ್ರಗಳೆಲ್ಲಾ ಜೀವವಿರೋಧಿ ಧೋರಣೆಯನ್ನೆ ಅನು ಸರಿಸಿವೆ.

ತಾರಾನ ಅತ್ತೆ ಚಿಮ್ಮವ್ವ ಎಷ್ಟೊಂದು ಜೀವ ವಿರೋಧಿ ಹಿಂಸಾ ಪ್ರವೃತ್ತಿಯವಳು ಎಂದರೆ ತನ್ನ ಮನಸ್ಸಿನ ಹಟಕ್ಕಾಗಿ ತಾರಾ ಐದಾರು ವರ್ಷ ಗಂಡನ ಮನೆಯಲ್ಲಿ ಇದ್ದರೂ ಮಗ ಮತ್ತು ಸೊಸೆಯನ್ನು ಒಂದು ಮಾಡದೆ ತನ್ನ ಹಿಂಸಾಪ್ರವೃತ್ತಿಯನ್ನು ಮೆರೆಯುತ್ತಾಳೆ. ಚೆಗಲೇರ ಭೀಮ ಜೈನ ಧರ್ಮಕ್ಕೆ ವಿರುದ್ಧವಾಗಿ ತನ್ನ ಬೀಗನಾದ ಮಲ್ಲಪ್ಪನ ತೋಟದಲ್ಲಿ ಹುಲ್ಲು ತುಡುಗು ಮಾಡಿ ಸಿಕ್ಕುಬೀಳುತ್ತಾನೆ. ಕೊನೆಗೆ ಅದೇ ಅವಮಾನದ ಸಿಟ್ಟಿನಿಂದ ತಾರಾಳ ಒಗೆತನವನ್ನು ಹರಿಸಿ ಅವಳ ಗಂಡ ಭರಮಣ್ಣನಿಗೆ ಇನ್ನೊಂದು ಮದುವೆ ಮಾಡುವಲ್ಲಿ ಯಶಸ್ವಿಯಾಗುತ್ತಾನೆ. ಅನಂತ ತಾರಾಳನ್ನು ಪ್ರೇಮಿಸುತ್ತಾನೆ. ಸ್ವಂತ ಹೆಂಡತಿಯನ್ನು ವಿನಾ ಕಾರಣ ಧಿಕ್ಕರಿಸುತ್ತಾನೆ. ನಂಬಿ ಬಂದ ಪ್ರೇಯಸಿ ಬಂಗಾರಿಯನ್ನು ಕೈಬಿಡುತ್ತಾನೆ. ಹೀಗೆ ಇಡೀ ಕಾದಂಬರಿಯುದ್ದಕ್ಕೂ ಎಲ್ಲ ಪಾತ್ರಗಳು ತಂತಾವೆ ಬದುಕಿಗೆ ವಿಮುಖವಾಗಿವೆ. ತಾರಾ ಅತ್ಯಂತ ಸಾತ್ವಿಕ ಪಾತ್ರ ಎನಿಸಿದರೂ ತಾನು ಎರಡು ತಿಂಗಳು ಬಸುರಿ ಆಗಿದ್ದವಳು ತನ್ನ ಅನಂತ ಊರು ಬಿಟ್ಟು ಹೋಗಿದ್ದಾನೆ ಎನ್ನುವುದನ್ನು ಕೇಳಿ ನಿಂತಲ್ಲೆ ಗೂಟದ ಮೇಲೆ ಬಿದ್ದು ತನಗೆ ಬೇಡವಾದ ಬಸಿರನ್ನು ಅತ್ಯಂತ ಹಿಂಸಾಮೂಲದಿಂದ ಇಳಿಸಿಕೊಳ್ಳುತ್ತಾಳೆ. ಹೀಗೆ ತಾರಾಳ ಪಾತ್ರ ಕೂಡಾ ಜೈನ ಧರ್ಮದ ಅಹಿಂಸಾ ತತ್ವಕ್ಕೆ ವಿರುದ್ಧವಾಗಿಯೇ ತನ್ನ ಬದುಕನ್ನು ಕಂಡುಕೊಳ್ಳುತ್ತದೆ.

ಅಪರಿಗ್ರಹ ಪ್ರತಿಯೊಬ್ಬ ಜೈನನಾದವನು ಪಾಲಿಸಿಕೊಳ್ಳಬೇಕಾದ ನಿಯಮ. ಅದರ ವಿರುದ್ಧ ಆಶೆಬುರುಕುತನ, ಸಂಗ್ರಾಹ್ಯ ಬುದ್ಧಿ ಮೇಲಿಂದ ಮೇಲೆ ಈ ಕಾದಂಬರಿಯಲ್ಲಿ ಬರುತ್ತವೆ. ತಾರಾ ಮೈ ನೆರೆದಾಗ ಭರಮ ಬಂಗಾರದ ಪೋಚೆ ಬೇಡಿ ಜಗಳ ಕಾಯುವುದು, ಅನಂತನ ಹೆಂಡತಿ ಮೈ ನೆರೆದಾಗ ಅನಂತನ ಅವ್ವ ಸುಂದರಾ ಬಂಗಾರಕ್ಕಾಗಿ ಆಶೆ ಪಡುವುದು,

ಚಿಮ್ಮಪ್ಪ ಗಂಡು ಸಂತಾನವಿಲ್ಲದ ತನ್ನ ಅಣ್ಣ ಮಲ್ಲಪ್ಪನ ಆಸ್ತಿಯನ್ನು ಲಪಟಾಯಿಸಲು ಹಂಚಿಕೆ ಹಾಕುವುದು, ತಾರಾಳನ್ನು ಉಡುಕಿ ಮಾಡಿಕೊಂಡಿದ್ದ ತಿಪ್ಪಣ್ಣ ಆಕೆಯ ಆಸ್ತಿಗಾಗಿ ಹಪಾಹಪಿಸುವುದು. ಇವೆಲ್ಲ ಜೈನರ ತತ್ವವಿರೋಧಿ ನಿಲುವನ್ನು ತಾಳುತ್ತಿರುವ ವಿಪರ್ಯಾಸ ವನ್ನು ಕಾದಂಬರಿ ಅತ್ಯಂತ ನಿಷ್ಠುರವಾಗಿ ತೆರೆದಿಡುತ್ತದೆ. ಧರ್ಮದ ನಂಬಿಕೆಗಳು, ಸಿದ್ಧಾಂತ ಗಳು, ಬಹುಮುಖಿ ಸಮಾಜದ ಸಂಕೀರ್ಣತೆಯೊಳಗೆ ಬದುಕುತ್ತಿರುವ ಜೈನ ಕುಟುಂಬಗಳು ಹೇಗೆ, ಬಿಟ್ಟುಕೊಟ್ಟು, ಸ್ವಾರ್ಥ ಮೆರೆಯುತ್ತಿದ್ದಾರೆ ಎಂಬುದನ್ನು ತೋರಿಸಲು ಅಣ್ಣಾರಾಯರು ಇಲ್ಲಿ ಪ್ರಯತ್ನಿಸಿದ್ದಾರೆ.

ಇಡೀ ಕಾದಂಬರಿಯುದ್ದಕ್ಕೂ ಎಲ್ಲ ಪಾತ್ರಗಳು ಒಂದಿಲ್ಲೊಂದು ಕಳವಳ, ಆತಂಕ, ಆಸೆ, ಹೊಟ್ಟೆಕಿಚ್ಚುಗಳಿಂದ ಅಸುಖಿಯಾಗಿ ಬಳಲುತ್ತವೆ. ಶುದ್ಧ ಜೈನ ದೃಷ್ಟಿಕೋನ ಇಟ್ಟು ಕೊಂಡಿರುವ ಅಣ್ಣಾರಾಯರು, ಜೈನರ ಜೀವವಿರೋಧಿ ನಿಲುವನ್ನು ಖಂಡಿಸುವ ಸಲುವಾಗಿಯೇ ಲಗಮವ್ವನ ಜಾತ್ರೆಯ ಪ್ರಸಂಗವನ್ನು ತರುತ್ತಾರೆ. ದೇವರು ಎಂಬ ವಸ್ತು ಹೊರಜಗತ್ತಿನಲ್ಲಿ ಇಲ್ಲ. ಶುದ್ಧ ಆತ್ಮವೇ ಪರಮಾತ್ಮ. ಎಲ್ಲರೂ ಪರಿಶುದ್ಧತೆಯನ್ನು ಪಾಲಿಸಿದರೆ ಪರಮಾತ್ಮರಾಗಬಹುದು. ನಮ್ಮ ಭಾಗ್ಯವನ್ನು ನಾವೇ ರೂಢಿಸಿಕೊಳ್ಳಬೇಕು, ಭಾಗ್ಯಕೊಡುವ (ವರಕೊಡುವ) ದೇವರು ಮಿಥ್ಯಾ ನಂಬಿಕೆ. ಅನಂತ ಮೊದಮೊದಲು ಮಿಥ್ಯಾ ದೇವರಾದ ಲಗಮವ್ವನ ವರಕೊಡುವಿಕೆಯನ್ನು ಟೀಕಿಸುತ್ತಾನೆ. ಆದರೆ ಕೊನೆಗೆ ಅವನೂ ಕೂಡಾ ಲಗಮವ್ವ ದೇವರಿಗೆ ಕೈ ಮುಗಿಯುವ ಮೂಲಕ ಕ್ಷುದ್ರ (ಮಿಥ್ಯಾ) ದೇವರುಗಳಲ್ಲಿಯ ಜೈನರ ನಂಬಿಕೆಯನ್ನು ಅನಾವರಣಗೊಳಿಸುತ್ತಾನೆ.

ತಾರಾ ಸುಖಿವಾಗಿ ಇರಬೇಕು ಎಂಬ ಕಾರಣಕ್ಕಾಗಿ ರತ್ನವ್ವ 'ಲಗಮವ್ವ' ದೇವರಿಗೆ ರಾತ್ರಿ ಉಡಿತುಂಬುವ ಪ್ರಸಂಗವನ್ನು ಅಣ್ಣಾರಾಯರು ತರುತ್ತಾರೆ. ರಾತ್ರಿ ಊಟ ಜೈನರಿಗೆ ನಿಷಿದ್ಧ. ಹೀಗಾಗಿ ರಾತ್ರಿ ಊಟ ಮಾಡುವ ದೇವರುಗಳು ಮಿಥ್ಯಾದೇವರುಗಳು, ಅಂತಹ ದೇವರು ಕೊಡುವ 'ವರ' ಕೇಡನ್ನ ತರುವಂತಹುದು ಎಂಬುದು ಜೈನರ ನಂಬಿಕೆ. ಆದರೆ ಕಾಲದ ಒತ್ತಡದಲ್ಲಿ ಕೃಷಿಕ ವೃತ್ತಿಯನ್ನು ಅನುಸರಿಸುತ್ತಿರುವ ಜೈನರು ತಮ್ಮ ಶ್ರದ್ಧಾಭಕ್ತಿಗಳನ್ನು ಮಿಥ್ಯಾ ದೇವರುಗಳ ಕಡೆಗೆ ಹರಿಸುತ್ತಿರುವುದು ಹಾಗೂ ಆಚರಣೆಗಳ ಕಡೆಗೆ ಮೊರೆ ಹೋಗುತ್ತಿ ರುವುದನ್ನು ಈ ಕಾದಂಬರಿ ಮೂಲಕ ಚಿತ್ರಿಸುತ್ತಾರೆ.

ತಾರಾಳ ಕಳ್ಳಕುಬುಸ ಮಾಡಿ ರತ್ನಾ ಚಂದೂರಿಗೆ ಹೋಗುವಾಗ ಸಮ ನೆಲಕ್ಕೆ ನೊಗ ಮುರಿದು ಅಪಶಕುನವಾಗುತ್ತದೆ. ತಾರಾ ಸಾಯುವ ಮುನ್ಸೂಚನೆಯನ್ನು ಅಣ್ಣಾರಾಯರು ಈ ಘಟನೆಯ ಮೂಲಕ ಹೇಳಹೊರಟಿದ್ದಾರೆಯೇ? ಅಥವಾ ಸಿದ್ಧಾಂತ ಶಾಸ್ತ್ರವನ್ನು ನಂಬುವ ಜೈನರು ಕೂಡಾ ಶಕುನಾದಿಗಳನ್ನು ನಂಬುವಂತಹ ಸ್ಥಿತಿ ಗ್ರಾಮ ಭಾರತದಲ್ಲಿ ಉಂಟಾಗುತ್ತಿದೆ ಎಂಬುದನ್ನು ತೋರಿಸಲು ಈ ಪ್ರಸಂಗವನ್ನು ಬಳಸಿಕೊಳ್ಳುತ್ತಾರೆಯೊ? ಬಹುಶಃ ಎರಡನೆಯದೆ ಇರಬಹುದು ಎನಿಸುತ್ತದೆ.

ತಾರಾ ತೀರ ನಿತ್ರಾಣಗೊಂಡು ತೇರದಾಳ ದವಾಖಾನೆಯಿಂದ ಚಂದೂರಿಗೆ ತನ್ನನ್ನು

ಕರೆದುಕೊಂಡು ಹೋಗಲು ಬೇಡಿಕೊಳ್ಳುತ್ತಾಳೆ. ಅಲ್ಲಿ ಕೊನೆಯದಾಗಿ ಅನಂತನ ಮುಖ ದರ್ಶನವಾದೀತು ಎಂಬ ಹಂಬಲ ಅವಳದು. ಅವಳ ಇಚ್ಛೆಯಂತೆ ತಿಪ್ಪಣ್ಣ ಗಾಡಿಯನ್ನು ಚಂದೂರಿಗೆ ಹೊಡೆಸುತ್ತಾನೆ. ತಾರಾಳನ್ನು ಹೊತ್ತುಕೊಂಡು ಚಂದೂರ ಕಡೆಗೆ ಹೋಗುವ ಗಾಡಿ 'ಧೂಳೆಬ್ಬಿಸಿ ಸಾಗಿದ ಬಂಡಿಯು ಬಾಲ ಚುಕ್ಕೆಯಂತೆ ದೂರದಿಂದ ಕಾಣುತ್ತಿತ್ತು' ಎಂದು ಅಣ್ಣಾರಾಯರು ಬರೆಯುತ್ತಾರೆ.

ಬಾಲಚುಕ್ಕೆ ಆಶುಭದ ಸಂಕೇತ. ಅಣ್ಣಾರಾಯರು ಸುಮ್ಮನೆ ಇಂತಹ ಉಪಮೆಯನ್ನು ಬಳಸಿಲ್ಲ. ಗಾಡಿ, ಧೂಳು, ಬಾಲಚುಕ್ಕೆ, ಇಲ್ಲಿ ಪ್ರತಿಮೆಗಳಾಗಿ ಬರುತ್ತವೆ. ಯಾವ ಧರ್ಮ ಶಕುನಗಳನ್ನೇ ನಂಬುವದಿಲ್ಲವೋ ಅಲ್ಲಿ ಅಪಶಕುನಕ್ಕೂ ಸ್ಥಾನವಿಲ್ಲ. 'ಜೈನಧರ್ಮ'ದಂತಹ ಶಾಸ್ತ್ರಗ್ರಂಥ ಬರೆದ ಅಣ್ಣಾರಾಯರಿಗೆ ಇದು ತಿಳಿದದ್ದೇ ಆಗಿದೆ. ಹಾಗಾದರೆ ಅವರು ಯಾಕಾಗಿ ಇದನ್ನು ಬಳಸುತ್ತಾರೆ? ಅಣ್ಣಾರಾಯರಿಗೆ ಧರ್ಮ ಹೇಳಬೇಕಾಗಿರಲಿಲ್ಲ. ಜೀವನದ ಕಥೆ ಹೇಳಬೇಕಾಗಿತ್ತು ಎಂಬ ವಾದವನ್ನು ನಾವು ಮಂಡಿಸಬಹುದು. ಆದರೆ ಒಂದು ಜೈನ ಚೌಕಟ್ಟಿನಲ್ಲಿ ಕಥೆ ಹೇಳ"ೇಕಾಗಿರುವ ಲೇಖಕ ಅಲ್ಲಿಯ ತತ್ವ ಸಿದ್ಧಾಂತಗಳನ್ನು ಎಚ್ಚರದಿಂದ ನಿಭಾಯಿಸಬೇಕಾಗುತ್ತದೆ. ಅಂತಹ ನಿಭಾಯಿಸುವ ಸಾಮರ್ಥ್ಯ ಅಣ್ಣಾರಾಯರಿಗೆ ಇತ್ತು.

ಆದ್ದರಿಂದಲೇ ಕಾದಂಬರಿ ಕೇವಲ ತಾರಾ ಮತ್ತು ಅನಂತರ ನಡುವಿನ ದುರಂತ ಕಥಾನಕ ಅಲ್ಲಾ. ಅದು, ಗ್ರಾಮೀಣ ಜೈನ ಸಮುದಾಯಗಳು ಹೇಗೆ ತಮ್ಮ ಧರ್ಮ ವಿಮುಖ ಧೋರಣೆ ಅನುಸರಿಸುತ್ತಿವೆ ಮತ್ತು ಅದರ ಪರಿಣಾಮ ಏನಾಗುತ್ತಿದೆ ಎಂಬುದನ್ನು ವಿವರಿಸುವದಾಗಿದೆ. ಅದಕ್ಕಾಗಿಯೇ ಕಾದಂಬರಿ ಪ್ರಾರಂಭದಿಂದಲೂ ಪತನಮುಖಿ ಚಲನೆಯನ್ನು ಅನುಸರಿಸುತ್ತಾ ಬಂದಿದೆ.

ಒಂದು ಕೃತಿ ಕಾಲಘಟ್ಟದಲ್ಲಿ ವಿಭಿನ್ನ ದೃಷ್ಟಿಕೋನಗಳಿಂದ ಮತ್ತೆ ಮತ್ತೆ ಓದಿಸಿಕೊಳ್ಳುತ್ತಾ, ಹೊಸ ಹೊಸ ಅರ್ಥಗಳನ್ನು ನಮಗೆ ಬಿಟ್ಟು ಕೊಡುತ್ತಾ ಹೋಗುವುದು. ಆ ಕೃತಿಯ ಶಕ್ತಿ ಮತ್ತು ಸಾಮರ್ಥ್ಯಗಳೇ ಆಗಿವೆ. ಆ ನಿಟ್ಟಿನಲ್ಲಿ 'ನಿಸರ್ಗ' ಅಂತಹ ಒಂದು ಶಕ್ತಿಯುತವಾದ ಕಾದಂಬರಿಯಾಗಿದೆ.

●

ಕಂಪ್ಯೂಟರ್ ಮೂಲಕ ಹಸ್ತಪ್ರತಿಗಳ ಪುನಾರಚನೆ ಮತ್ತು ಪ್ರಸರಣ

● ವೀರೇಶ ಬಡಿಗೇರ

ಪಾರಂಪರಿಕ ತಿಳುವಳಿಕೆಗಳು, ಜ್ಞಾನದ ಆಕರ ಸಾಮಗ್ರಿಗಳು ಒಂದೆಡೆ ವಿಸ್ಮೃತಿಗೊಳಗಾಗುತ್ತಿದ್ದರೆ, ಇನ್ನೊಂದೆಡೆ ಪ್ರಪಂಚೀಕರಣದ ಆರ್ಥಿಕ ಮತ್ತು ರಾಜಕೀಯ ಸ್ವರೂಪಿ ಬೆಳವಣಿಗೆಗಳು ಇಂಥ ಭಾಷೆ ಮತ್ತು ಜನಸಮುದಾಯದ ಒಡಲಲ್ಲಿ ತಲ್ಲಣಗಳನ್ನು ಹುಟ್ಟುಹಾಕುತ್ತಿವೆ. ರಾಜಕೀಯ ಹಾಗೂ ಆರ್ಥಿಕವಾದಂತಹ ಒತ್ತಾಸೆಗಳಿರುವ ಇಂಗ್ಲಿಷ್ ಭಾಷೆ ಮತ್ತು ಸಂಸ್ಕೃತಿಯ ಎದುರು ಕನ್ನಡದಂಥ ಭಾಷೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಏದುಸಿರು ಬಿಡಬೇಕಾಗಿದೆ.

ಕನ್ನಡ ಭಾಷೆಯ ಅಸ್ತಿತ್ವದ ಪ್ರಶ್ನೆ ಬಂದಾಗ ಪ್ರಬಲಶಕ್ತಿಯೊಂದಿಗಿನ ಅನುಸಂಧಾನದ ಮಾರ್ಗವನ್ನು ಮಂಡಿಸಲಾಗುತ್ತದೆ. ಸೂಕ್ಷ್ಮವಾಗಿ ಅವಲೋಕಿಸಿದರೆ ಯಾವುದೇ ಭಾಷೆ ಮತ್ತು ಆ ಭಾಷೆಯೊಂದಿಗೆ ಪ್ರವಹಿಸುವ ತಿಳುವಳಿಕೆ ಬರೀ ಯಾಂತ್ರೀಕೃತ ಅಥವಾ ಅಧಿಕಾರ ಕೇಂದ್ರದ ಮುತುವರ್ಜಿಯಿಂದ ಬದುಕಲಾರದು. ಇದರಿಂದ ಅಂಥ ತಿಳುವಳಿಕೆಗಳಿಗೆ ಸ್ವಲ್ಪ ಶಕ್ತಿ ಬರಬಹುದೇ ಹೊರತು ಅದೇ ಅಂತಿಮವಾಗಲಾರದು. ಬಹುಮುಖ್ಯವಾಗಿ ಭಾಷೆ ಅಥವಾ ಆ ಭಾಷೆಯೊಂದಿಗೆ ತೆರೆದುಕೊಳ್ಳುವ ಬರವಣಿಗೆಯೊಂದರ ಉಳಿವಿನ ಪ್ರಶ್ನೆಯಿರುವುದು ಅದು ಎಷ್ಟು ಸಾಮಾಜಿಕವಾಗಿದೆ ಎಂಬುದರಲ್ಲಿ. ತನ್ನ ಎಲ್ಲ ಆಂತರಿಕ ಸಾಧ್ಯತೆಗಳೊಂದಿಗೆ ವರ್ತಮಾನದಲ್ಲಿ ಹೆಚ್ಚು ಹೆಚ್ಚು ಕ್ರಿಯಾಶೀಲವಾಗುವಂತೆ, ಸೂಕ್ಷ್ಮವಾಗುವಂತೆ, ಅರಿವಿನ ವಿಸ್ತಾರಕ್ಕೆ ಸಾಧ್ಯವಾಗುವಂತೆ ಭಾಷೆ ಮತ್ತು ಅದರ ಉತ್ಪನ್ನಗಳನ್ನು ಸಜ್ಜುಗೊಳಿಸಬೇಕಾಗುತ್ತದೆ. ಬರೀ ಭಾಷೆಯೊಂದನ್ನೇ ಸುಧಾರಣೆಯ ಪ್ರಕ್ರಿಯೆಗೆ ಸಜ್ಜುಗೊಳಿಸುವುದು ಬರಡು ಹಸುವಿಗೆ ಹುಲ್ಲು ಮೇಯಿಸಿದಂತಾಗುತ್ತದೆ.

ಕಾಲದ ಗತಿಗೆ ಹೊಂದಿಕೊಳ್ಳುವ ಗುರುತಿಸಿಕೊಳ್ಳುವ ಗತಿಶೀಲಗುಣವನ್ನು ಕನ್ನಡ ಭಾಷೆ ಹೊಂದಿದ್ದರೂ ಅಧಿಕಾರ. ಹಣ ಮತ್ತು ಪ್ರತಿಷ್ಠೆಯಿಂದ ಕೂಡಿದ ಇಂಗ್ಲಿಷ್‌ನ ಯಜಮಾನಿಕೆ ಕನ್ನಡವನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸುತ್ತಿದೆ, ಕೀಳಾಗಿಸುತ್ತಿದೆ. ನಮಗೆಲ್ಲ ತಿಳಿದಿರುವಂತೆ ಇತ್ತೀಚೆಗೆ ಬೆಂಗಳೂರಿನ ಒಂದು ಹೈಟೆಕ್ ವೇದಿಕೆಯಿಂದ ಇನ್‌ಫೋಸಿಸ್ ಮಾಲೀಕರಾದ ನಾರಾಯಣಮೂರ್ತಿಯವರು ಹಾಗೂ ಮಾಜಿ ವಿತ್ತಸಚಿವರಾದ ಡಾ. ಮನಮೋಹನ್ ಸಿಂಗ್ ಅವರು ಕನ್ನಡಕ್ಕೆ ಗತಿಶೀಲತೆಯ ಗುಣವಿಲ್ಲ, ಉನ್ನತ ಶಿಕ್ಷಣ ಮತ್ತು ಸಂಸ್ಕೃತಿಗೆ ಕನ್ನಡದಿಂದ ಏನೂ ಪ್ರಯೋಜನವಿಲ್ಲ, ಅದೊಂದು ನಿರುಪಯುಕ್ತ ಭಾಷೆ ಎನ್ನುವ ಅರ್ಥದಲ್ಲಿ

ಮಾತಾಡಿದ್ದನ್ನು ಪತ್ರಿಕೆಗಳು ವರದಿ ಮಾಡಿದವು. ಈ ಮೂಲಕ ಅವರು ತಮ್ಮ ಬಂಡವಾಳ ಶಾಹಿ ಮನೋಭಾವವನ್ನು ಕನ್ನಡ ವಿರೋಧೀ ಧೋರಣೆಯನ್ನೂ ಪ್ರಕಟಿಸಿದ್ದು ಸ್ಪಷ್ಟವಾಗುತ್ತದೆ. ಉದ್ದೇಶಪೂರಿತ ವಿಸ್ಮೃತಿಯನ್ನು ಹೇರುವ ಇಂಥ ಹಿಕಮತ್ತುಗಳಿಗೆ ಉತ್ತರವಾಗುವಂತೆ ಭಾಷೆ ಮತ್ತು ಬರವಣಿಗೆ ತನ್ನ ಜೀವಜಲದೊಂದಿಗೆ ಆಧುನಿಕವಾಗಬೇಕಾಗಿದೆ ಮತ್ತು ಆ ನಿಟ್ಟಿನಲ್ಲಿ ಪ್ರಾಥಮಿಕ ಪ್ರಯತ್ನಗಳು ನಡೆಯುತ್ತಿರುವುದು ಗಮನಾರ್ಹ. ಅಂತಹ ಗಮನಾರ್ಹ ಸಾಧ್ಯತೆಗಳಲ್ಲಿ "ಕಂಪ್ಯೂಟರ್ ಮತ್ತು ಕನ್ನಡ" ಸಂಬಂಧದ ಚರ್ಚೆಯೂ ಒಂದು.

ಹಸ್ತಪ್ರತಿಗಳಂತಹ ಪಾರಂಪರಿಕ ವಾಚಕಸಾಮಗ್ರಿಗಳ ಆಯುಷ್ಯ ಇನ್ನೇನು ಮುಗಿದೇ ಹೋಯಿತು ಎನ್ನುವ ಆತಂಕದಲ್ಲಿರುವ ಹೊತ್ತಿಗೆ ಕಂಪ್ಯೂಟರಿನಿಂದ ತೆರೆದುಕೊಂಡ ಹೊಸ ಸಾಧ್ಯತೆಗಳು ಹೊಸ ಆಶಾಭಾವನೆಗಳನ್ನು ಜಾಗೃತಗೊಳಿಸಿವೆ. ಪಾರಂಪರಿಕವಾಗಿ ಪವಿತ್ರತೆಯ ಮುಸುಕಿನಲ್ಲಿ ನಿರ್ದಿಷ್ಟ ಸಮುದಾಯದ ಉತ್ಪನ್ನವಾಗಿ ವಿದ್ಯೆ ಮೂಡಿ ಬಂದಿತು. ಮರ, ಕಲ್ಲು, ಲೋಹ, ತಾಳೆಪತ್ರಗಳಂತಹ ಘನವಸ್ತುಗಳ ಮೇಲೆ ಪ್ರಚಲಿತವಿದ್ದ ಬರವಣಿಗೆ ಮುಸ್ಲಿಂ ಆಳ್ವಿಕೆ ಕಾಲಕ್ಕೆ ಪಲ್ಲಟಗೊಂಡಿತು. ಪವಿತ್ರತೆಯ ಹೆಸರಿನಲ್ಲಿ ಖಾಸಗಿಯಾಗಿದ್ದ ತಿಳುವಳಿಕೆ ಈ ಕಾಲದಲ್ಲಾದ ಕಾಗದದ ಆಗಮನದಿಂದ ಸಾರ್ವತ್ರಿಕವಾಯಿತು. ಇಂದು ಕಂಪ್ಯೂಟರ್ ಆಗಮನವಂತೂ ಬರಣಿಗೆಯಲ್ಲಿ ಅಭೂತಪೂರ್ವ ಸಾಧ್ಯತೆಗಳನ್ನು ತೆರೆದಿಟ್ಟಿದೆ. ಅಷ್ಟೇ ಅನಿಶ್ಚಿತತೆಯನ್ನು ಹಡೆದಿಟ್ಟಿದೆ. ಇಲ್ಲಿ ಪವಿತ್ರತೆಯು ಗೌಣವಾಗಿ ಪ್ರತಿಷ್ಠೆ ಪ್ರಧಾನವಾಗುತ್ತಿದೆ. ಪವಿತ್ರ ಪಾತಳಿಯ ಬರವಣಿಗೆಯನ್ನು ಪ್ರತಿಷ್ಠಿತ ಪಾತಳಿಗೆ ಜೋಡಿಸುವ ಕ್ರಮ ಸರಳವಾದದ್ದಲ್ಲ.

ಕನ್ನಡ ಹಸ್ತಪ್ರತಿಗಳ ವಿಷಯದಲ್ಲಿ ಈ ಪ್ರತಿಷ್ಠಿತ ಸಂಸ್ಕೃತಿಯ ಉತ್ಪನ್ನಗಳಾದ ಸ್ಕ್ಯಾನಿಂಗ್, ಟೈಪಿಂಗ್, ಮಾನಿಟರ್ ರೀಡಿಂಗ್, ಓಸಿಆರ್, ಓ-ಮೇಲ್, ಇಂಟರ್‌ನೆಟ್ ನಂತಹ ಅವಕಾಶಗಳು ಮಹತ್ವಪೂರ್ಣ ದಾರಿಯನ್ನು ತೆರೆದಿಟ್ಟಿವೆ. ಇವುಗಳ ಮೂಲಕ ಕನ್ನಡ ಹಸ್ತಪ್ರತಿಗಳನ್ನು ಪುನಾರಚನೆ ಮಾಡುವುದಲ್ಲದೆ ವಿಶ್ವದಾದ್ಯಂತ ವಿನಿಮಯ ಕೂಡ ಮಾಡಬಹುದಾಗಿದೆ. ಬರೀ ಭಂಡಾರದ ಪ್ರದರ್ಶನ ವಸ್ತುಗಳಾಗಿದ್ದ ಹಸ್ತಪ್ರತಿಗಳಿಗೆ ಈಗ ಹೊಸ ಜೀವ ಬಂದಂತಾಗಿದೆ.

ಗ್ರಾಫಿಕ್ ಸಾಫ್ಟ್‌ವೇರ್ ಹಸ್ತಪ್ರತಿಗಳ ಮರುಜೀವಕ್ಕೆ ವರದಾನವಾಗಿದೆ. ಇದರಲ್ಲಿ ಎರಡು ಘಟಕಗಳಿರುತ್ತವೆ. ಒಂದು ಗ್ರಾಫಿಕ್ ಮೋಡ್, ಇದನ್ನು ಹೆಚ್ಚಾಗಿ ರೇಖಾಚಿತ್ರಗಳಿಗೆ ಬಳಸುತ್ತಾರೆ. ಇದು ಹೆಚ್ಚು ವರ್ಣವಿಭಜಕಗಳನ್ನು ಹೊಂದಿರುತ್ತದೆ. ಎರಡು ಟೆಕ್ಸ್ಟ ಮೋಡ್, ಇದಕ್ಕೆ 'SCREEN O' ಎಂದು ಕರೆಯುತ್ತಾರೆ. ಇದು ಕಡಿಮೆ ವರ್ಣವಿಭಜಕ ಹೊಂದಿರುತ್ತದೆ. ಇದನ್ನು ಹೆಚ್ಚಾಗಿ ಅಕ್ಷರಗಳ ಸಂಸ್ಕರಣೆ, ಸಂಯೋಜನೆ, ಮತ್ತು ಬರವಣಿಗೆಗೆ ಬಳಸಲಾಗುತ್ತದೆ. ಸಾಮಾನ್ಯವಾಗಿ ಕಪ್ಪು, ನೀಲಿ, ಹಸಿರು, ಕಂದು, ಬೂದು, ಸಿಯಾನ್, ಹಳದಿ ಮುಂತಾದ ಬಣ್ಣಗಳ ಹಿನ್ನೆಲೆಯಲ್ಲಿ ಇಲ್ಲಿ ಕೆಲಸ ಮಾಡಬಹುದು. ಸಂಸ್ಕರಿತ ಹಸ್ತಪ್ರತಿಯೊಂದರ ಯಥಾವತ್ ಬಣ್ಣದ ಮುದ್ರಣವನ್ನು ಮೂಲಪ್ರತಿಗಿಂತ ಸುಂದರವಾಗಿ ಇದರಲ್ಲಿ ಮುದ್ರಿಸಿಕೊಳ್ಳಬಹುದಾಗಿದೆ. ಅಲ್ಲದೆ 'ಲೈನ್' 'ಡಾಟಾ' ಹೀಗೆ ವಿವಿಧ ರೀತಿಯಲ್ಲಿ ಔಟ್

ಪುಟ್ ಮೂಲಕ ಪ್ರಿಂಟ್ ಮಾಡಿಕೊಳ್ಳಬಹುದಾದ ಸಾಧ್ಯತೆಗಳೂ ಇಲ್ಲಿವೆ.

ಗಣಕಕ್ಕೆ ಉಣಿಸಿದ ಹಸ್ತಪ್ರತಿಯು ಮಾನಿಟರಲ್ಲಿ ಸ್ಫುಟವಾಗಿ ಮೂಡದಿದ್ದಲ್ಲಿ ಅಥವಾ ಅಕ್ಷರಗಳು ತ್ರುಟಿತವಾಗಿದ್ದರೆ ಅಥವಾ ಅಕ್ಷರಗಳೇ ಇಲ್ಲದಿದ್ದಾಗ ಪದ ಸಂಸ್ಕಾರಕಗಳ ಸಹಾಯದಿಂದ ಮೂಲಪ್ರತಿಗೊಪ್ಪುವ ವಿನ್ಯಾಸದಲ್ಲಿ ಸರಿಪಡಿಸಬಹುದಾಗಿದೆ. ಹಸ್ತಪ್ರತಿಯಲ್ಲಿನ ಅನಾವಶ್ಯಕ ಚುಕ್ಕೆಗಳನ್ನು, ಮಸಿಯನ್ನು, ಗಲೀಜನ್ನು ಸ್ವಚ್ಛಮಾಡಬಹುದಲ್ಲದೆ ತ್ರುಟಿತ ಪದಗಳನ್ನು ಸ್ಟೈಲಸ್ ಎನ್ನುವ ಉಪಕರಣದಿಂದ ಸರಿಪಡಿಸಲೂ ಬರುತ್ತದೆ. ಉದಾಹರಣೆಗೆ 'ಕನ್ನಡ' ಎಂಬ ಪದಸಮುಚ್ಚಯದಲ್ಲಿ 'ನ್ನ' ಅಕ್ಷರ 'ಲುಪ್ತ'ವಾಗಿದೆ ಎಂದುಕೊಳ್ಳೋಣ. ಕಂಪ್ಯೂಟರಿಗೆ ಉಣಿಸಿದ ಪ್ರತಿಯಲ್ಲಿ ಈ ಅಕ್ಷರವನ್ನು 'ಸರ್ಚ್' ಮಾಡಲು ಸಂಜ್ಞೆ ಕೊಟ್ಟಾಗ ಅದು ನಿರ್ದಿಷ್ಟ ಜಾಗಕ್ಕೆ ಬೇಕಾಗುವ ನಿರ್ದಿಷ್ಟ ಲಕ್ಷಣವುಳ್ಳ ಅಕ್ಷರವನ್ನು ಆಯ್ಕೆ ಮಾಡಿಕೊಡುತ್ತದೆ. ಒಂದು ವೇಳೆ ಆ ಅಕ್ಷರ ಇಡೀ ಪಠ್ಯದಲ್ಲಿ ಸಿಗದಿದ್ದರೆ 'ಸ್ಟೈಲಸ್' ಎನ್ನುವ ಉಪಕರಣದಿಂದ ತ್ರುಟಿತ ಅಕ್ಷರವನ್ನು ಬರೆದು ಸೇರಿಸಬಹುದಾಗಿದೆ. 'ಸ್ಟೈಲಸ್' ಎನ್ನುವ ಪೆನ್ನಿನಂತಹ ಉಪಕರಣ 'ಗ್ರಾಫಿಕ್' ಹಲಗೆಮೇಲೆ ಚಲಿಸಿದಾಗ ಆ ಎಲೆಕ್ಟ್ರಾನಿಕ್ಸ್ ಲೇಖಣಿಕೆಯ ಚಲನೆಯು ಎಲೆಕ್ಟ್ರಾನಿಕ್ಸ್ ಸಂಕೇತಗಳಾಗಿ ಪರಿವರ್ತನೆಗೊಳ್ಳುತ್ತವೆ. ಆಗ ಗಣಕದ ಪರದೆಯ ಮೇಲೆ ನಮಗೆ ಬೇಕಾದ ಅಕ್ಷರಗಳು, ರೇಖೆಗಳು, ಮೂಡುತ್ತವೆ.

ಈ ರೀತಿಯ ಪದಸಂಸ್ಕಾರಗಳಿಗೆ ಎರಡು ವಿಶೇಷತೆಗಳಿವೆ. ಒಂದು ಸುಲಭವಾಗಿ ದಾಖಲೆಗಳನ್ನು ತಿದ್ದುವ ಹಾಗೂ ವಿವಿಧವಾಗಿ ರೂಪಿಸುವ ಸಾಮರ್ಥ್ಯ. ಇನ್ನೊಂದು ಅಕ್ಷರ ಸಂಯೋಜನೆಯನ್ನು ಪರೀಕ್ಷಿಸಿ ತಿದ್ದುವ ಸೌಲಭ್ಯ. ಇದನ್ನು 'ಸ್ಪೆಲ್ ಚೆಕ್' ಎಂದು ಕರೆಯುತ್ತಾರೆ. ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಪದಗಳನ್ನು ಸೇರಿಸುವ, ಮೂಲ ಪಠ್ಯದಿಂದ ತೆಗೆದು ಆ ಸ್ಥಾನದಲ್ಲಿ ನಮಗೆ ಬೇಕಾದ ಪದಗಳನ್ನು ಸೇರಿಸುವ ಅವಕಾಶ ಇದರಲ್ಲಿದೆ. ಇಂಥ 'ವರ್ಡ್‌ಸ್ಟಾರ್, ವರ್ಡ್ ಪರ್ಫೆಕ್ಟ್ ಹಾಗೂ ವರ್ಡ್' ಮೊದಲಾದ ಪದ ಸಂಸ್ಕರಣ ಪ್ರೋಗ್ರಾಂಗಳು ಇಂದು ಜನಪ್ರಿಯವಾಗುತ್ತಿವೆ. ಅದಲ್ಲದೆ 'ಶ್ರೀಲಿಪಿ', 'ಲೀಪ್ ಆಫೀಸ್', 'ಬ-ಬರಹ', 'ಶಬ್ದರತ್ನ', 'ವರ್ಡ್‌ಲಾರ್ಡ್'ದಂತಹ ಸಂಸ್ಕರಣಾ ಘಟಕಗಳು ಕನ್ನಡಕ್ಕಷ್ಟೇ ಅಲ್ಲ ಭಾರತೀಯ ಭಾಷೆಗಳಿಗೂ ಇಂದು ಅರ್ಥಪೂರ್ಣ ಸಾಮರ್ಥ್ಯವನ್ನು ತಂದುಕೊಟ್ಟಿವೆ. ಈ ರೀತಿ ಎಲೆಕ್ಟ್ರಾನಿಕ್ ಪ್ರಗತಿಯನ್ನು ಜೀರ್ಣಾವಸ್ಥೆಯಲ್ಲಿರುವ ಹಸ್ತಪ್ರತಿಗಳಂತಹ ಹಲವು ಸಾಂಸ್ಕೃತಿಕ ಪರಿಕರಗಳ ಪುನಾರಚನೆಯಲ್ಲಿ ಬುದ್ಧಿವಂತಿಕೆಯಿಂದ ಬಳಸಿಕೊಂಡರೆ ಪ್ರಗತಿಯ ಜೊತೆ ಪಾರಂಪರಿಕ ಸ್ಮೃತಿಗಳನ್ನು ಉಳಿಸಿಕೊಳ್ಳಬಹುದಾಗಿದೆ.

ಓ.ಸಿ.ಆರ್.

ಓ.ಸಿ.ಆರ್. ಅಂದರೆ ಆಪ್ಟಿಕಲ್ ಕ್ಯಾರೆಕ್ಟರ್ ರಿಕಗ್ನೈಸರ್, ಕನ್ನಡದ ಸಂದರ್ಭದಲ್ಲಿ ಇದರ ಅಗತ್ಯ ಜರೂರಿದೆ. ಇದು ಗ್ರಾಫಿಕ್ ಸಾಫ್ಟ್‌ವೇರ್‌ನ ಕೆಲಸಕ್ಕಿಂತ ತುಸು ಭಿನ್ನವಾದದ್ದು. ಇಂಗ್ಲಿಶಿನಲ್ಲಿ ಮಾತ್ರ ಸಾಧ್ಯವಾಗಿದ್ದ ಇದನ್ನು ಆರ್. ಶ್ರೀನಿವಾಸರಾವ್ ಕುಂಟೆ ಮತ್ತು ಆರ್.ಡಿ. ಸ್ಯಾಮುವೆಲ್ ಎನ್ನುವ ಶಿವಮೊಗ್ಗಾದ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರು ಕನ್ನಡಕ್ಕೆ ತರುವ ಪ್ರಯತ್ನ ಮಾಡಿದ್ದಾರೆ.

ಸ್ಕ್ಯಾನರ್ ಮೂಲಕ ಹಸ್ತಪ್ರತಿಯೊಂದನ್ನು ಗಣಕಕ್ಕೆ ಉಣಿಸಿದಾಗ ಅದು ದರ್ಶಕದ ಮೇಲೆ ಮೂಡುವ ಹೊತ್ತಿಗೆ ಶುದ್ಧ ಪ್ರತಿಯಾಗಿರುತ್ತದೆ. ಅಂದರೆ ನಾವು ಬಳಸುವ ಹಲವಾರು ಫಾಂಟ್‌ಗಳಲ್ಲಿ ಟೈಪಿಂಗ್ ಸಹಾಯವಿಲ್ಲದೇ ನೇರವಾಗಿ ಮುದ್ರಿಸಿಕೊಳ್ಳಬಹುದು. ಹೀಗಾಗಬೇಕಾದರೆ ಕನ್ನಡದಲ್ಲಿ ಬಳಕೆಯಾಗುವ ಅಕ್ಷರಗಳ ಎಲ್ಲ ಗುಣಲಕ್ಷಣಗಳನ್ನು ಗಣಕಕ್ಕೆ ಮೊದಲೇ ಅಳವಡಿಸಬೇಕಾಗುತ್ತದೆ. ಇದರಿಂದ ಹಸ್ತಪ್ರತಿಯೊಂದರ ಮುದ್ರಿತ ಸಮಯದ ಹಣ, ವೇಳೆ, ಶ್ರಮ ಎಲ್ಲವೂ ಉಳಿತಾಯವಾಗುತ್ತವೆ.

ಇದುವರೆಗೂ ಸ್ಕ್ಯಾನಿಂಗ್‌ನಲ್ಲಿ ಫೋಟೋಗ್ರಫಿಯಂತೆ ಮೂಲಪ್ರತಿಯ ಯಥಾವತ್ತಾದ ನಕಲನ್ನು ಮಾತ್ರ ನೋಡುವ ಸಾಧ್ಯತೆ ಇತ್ತು. ಓ.ಸಿ.ಆರ್. ಸಹಾಯದಿಂದ ಹಸ್ತಪ್ರತಿಗಳಲ್ಲಿನ ಬರಹವನ್ನು ನಮಗೆ ಬೇಕಾದಂತೆ ಲೇಔಟ್ ಮಾಡಿಕೊಳ್ಳಬಹುದು. ಅಂದರೆ ಗಣಕೀಕೃತ ಪಠ್ಯದಲ್ಲಿನ ಅಕ್ಷರಗಳನ್ನು ಹಿಗ್ಗಿಸುವ ಕುಗ್ಗಿಸುವ, ಬೋಲ್ಡ್ ಮಾಡುವ, ಪ್ಯಾರಾ ಮಾಡಿಕೊಳ್ಳುವ, ತಲೆಬರಹ ಕೊಡುವ ಸೌಲಭ್ಯಗಳು ಸನ್ನಿಹಿತವಾಗಿವೆ. ಇನ್ನೂ ಮುಂದುವರೆದು ನೋಡಿದಾಗ ಸ್ಕ್ಯಾನಿಂಗ್ ಸಹಾಯವಿಲ್ಲದೆಯೇ, ಲಿಖಿತ ಪಠ್ಯದ ಸಹಾಯವಿಲ್ಲದೆ ನೇರವಾಗಿ ಧ್ವನಿಪಾತಳಿಯಿಂದಲೇ ನಮಗೆ ಬೇಕಾದ ಲೇಖನವನ್ನು ಅಥವಾ ಯಾವುದೇ ಪಠ್ಯವೊಂದನ್ನು ಗಣಕದಲ್ಲಿ ಶುದ್ಧ ಪ್ರತಿರೂಪದಲ್ಲಿ ಪಡೆದುಕೊಳ್ಳುವ ಬಗೆಗಳು ರೂಪಗೊಳ್ಳುತ್ತಿವೆ. ಒಂದು ರೀತಿಯಲ್ಲಿ ಪೆನ್ನು ಪೇಪರು ರಹಿತ ಅಷ್ಟೇ ಏಕೆ ಬರವಣಿಗೆ ರಹಿತ ಸಮಾಜ ಸೃಷ್ಟಿಯಾಗುತ್ತಿರುವುದು ರುಜುವಾತಾಗುತ್ತಿದೆ.

ಹಸ್ತಪ್ರತಿಗಳು ಮತ್ತು ಮಾಹಿತಿ ತಂತ್ರಜ್ಞಾನ

ನಮ್ಮ ಹಸ್ತಪ್ರತಿ ಭಂಡಾರದಲ್ಲಿ ಸಾವಿರಗಟ್ಟಲೇ ಹಸ್ತಪ್ರತಿಗಳಿವೆ ಎಂದೂ ಅದು ನಮ್ಮ ಸನಾತನ ಸಂಪತ್ತೆಂದೂ, ಹೆಮ್ಮೆಯಿಂದ ಹೇಳಿಕೊಳ್ಳುವವರುಂಟು. ಇಂದು ಬರೀ ಹೇಳಿಕೊಂಡರೆ ಸಾಲದು. ಜಡಗೊಂಡ ಅಂಥ ಸಾಂಸ್ಕೃತಿಕ ತಿಳುವಳಿಕೆಗಳನ್ನು ಜಾಗೃತಗೊಳಿಸಿ ನಮ್ಮ ಸಂದರ್ಭಕ್ಕೆ ಅಳವಡಿಸಿಕೊಳ್ಳುವುದು ಮತ್ತು ಪರಿಚಲನೆಗೊಳಿಸುವುದು ವಿವೇಕದ ಕ್ರಮ. ಇಂದು ಪಾರಂಪರಿಕ ಸಂರಕ್ಷಣಾ ಶ್ರಮಗಳು ಹಸ್ತಪ್ರತಿಗಳನ್ನು ರಕ್ಷಿಸುವಲ್ಲಿ ಸೋತಿವೆ, ಇದ್ದರೂ ಅವು ಹೆಚ್ಚು ಶ್ರಮ ಮತ್ತು ವೆಚ್ಚ, ವೇಳೆಯನ್ನು ಬಯಸುತ್ತವೆ. ಕಂಪ್ಯೂಟರಿನಲ್ಲಿ ಹೆಚ್ಚಿನ ಶ್ರಮ ಮತ್ತು ವೆಚ್ಚವಿಲ್ಲದೆ ಕಡಿಮೆ ಖರ್ಚಿನಲ್ಲಿ ಕಡಿಮೆ ಜಾಗದಲ್ಲಿ ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಬಹುದಾಗಿದೆ.

ನಮ್ಮ ಬಳಿ ಅಪರೂಪದ ಕಲಾಕೃತಿಗಳಿವೆ. ಇವು ಸಂಸ್ಕೃತಿಯ ಬಹುಮುಖ್ಯ ಆಕರಗಳೆಂದು ತಿಳಿದಿದ್ದೂ ಸಂರಕ್ಷಿಸುವ ಮತ್ತು ಪ್ರಕಟಿಸುವ ಹಂತದಲ್ಲಿ ಹಿಂದಿದ್ದೇವೆ. ಅವುಗಳನ್ನು ಜಾಗತೀಕರಣಗೊಳಿಸುವ ನಿಟ್ಟಿನಲ್ಲಿ ಸೋತಿದ್ದೇವೆ. 'ಎಲೆಕ್ಟ್ರಾನಿಕ್ ಕಾಮರ್ಸ್' ಅಥವಾ 'ಇ-ಮೇಲ್, 'ಇಂಟರ್ ನೆಟ್'ನಂತಹ ನವೀನ ಮಾಧ್ಯಮಗಳು ಇಂಥ ನಿಸ್ಸಹಾಯಕ ಪ್ರವೃತ್ತಿಗಳಿಗೆ ಶಕ್ತಿಯನ್ನು ತಂದುಕೊಡುತ್ತಿವೆ. ಸಂಸ್ಕೃತಿ ಪ್ರಸಾರ ಮಾಧ್ಯಮಗಳಾಗುತ್ತಿವೆ.

ಅಕ್ಷರವೊಂದನ್ನು ಶೇಖರಿಸಲು ನೂರಾರು ರೂಪಾಯಿಗಳು ಬೇಕಾಗಿದ್ದ ಕಾಲದಿಂದ ಹಿಡಿದು ಕೆಲವೇ ರೂಪಾಯಿಗಳಲ್ಲಿ ಸಹಸ್ರಾರು ಅಕ್ಷರಗಳನ್ನು ಶೇಖರಿಸಬಲ್ಲ ಸಿಡಿರಾಂ

ಡಿವಿಡಿಯಂತಹ ಅವಕಾಶಗಳು ಬಾಯ್ತೆರೆದು ನಿಂತಿವೆ. ಇದರಲ್ಲಿ ಹಸ್ತಪ್ರತಿಗಳನ್ನು ಸಮರ್ಪಕವಾಗಿ ಮತ್ತು ಬಹುಕಾಲದ ಪ್ರಯೋಜನಕ್ಕಾಗಿ 'ಡಿಜಿಟಲ್' ರೂಪದಲ್ಲಿ ಶೇಖರಣೆಗೊಳಿಸಬಹುದಾಗಿದೆ. 'ಹೋಂಪೇಜ್', 'ವೆಬ್ ಸೈಟ್', 'ವೆಬ್ ಸರ್ವರ್'ಗಳು ಸಂಗ್ರಹಯೋಗ್ಯ ಸಾಧನಗಳಾಗಿವೆ.

ಹೀಗೆ ವೈಜ್ಞಾನಿಕ ರೀತಿಯಲ್ಲಿ ಸಂಗ್ರಹಿಸಿದಂತೆ ಅಷ್ಟೇ ವೈಜ್ಞಾನಿಕ ರೀತಿಯಲ್ಲಿ ಅದರ ಪರಿಚಲನೆಗೂ ಮನಸ್ಸು ಮಾಡಬೇಕಾಗುತ್ತದೆ. ಇಂಟರ್‌ನೆಟ್‌ನಲ್ಲಿ ಮೋಡಮ್‌ಗಳ ಸಹಾಯದಿಂದ ಇಂಥ ಸಂಗ್ರಹಿತ ಪಠ್ಯಗಳನ್ನು ರವಾನಿಸುವ ಮತ್ತು ಪಡೆದುಕೊಳ್ಳುವ ಕೆಲಸ ಮಾಡಬಹುದು. ನಾವು ಕಳಿಸುವ ವಿಷಯ ಐವತ್ತು ಪುಟಗಳಾಗಿದ್ದರೆ ಅದಕ್ಕೆ ನಾವು ಬಳಸುವ ಮೊಡೆಮ್‌ಗಳ ಮೇಲೆ ಸಮಯ ನಿಗದಿತವಾಗುತ್ತದೆ. ೧.೨ ಕೆಬಿಪಿಎಸ್ ಮೊಡೆಮ್ ೯.೬. ಕೆಬಿಪಿಎಸ್‌ದಾಗಿದ್ದರೆ ಎರಡು ನಿಮಿಷ ಸಾಕು. ಮೊಡೆಮ್ ೨೮.೮. ಕೆಬಿಪಿಎಸ್‌ದಾಗಿದ್ದರೆ ಕೇವಲ ೩೦ ಸೆಕೆಂಡುಗಳು ಸಾಕು ೩೩ ಕೆಬಿಪಿಎಸ್ ಮೊಡೆಮ್ ಇದ್ದರೆ ೧೫ ಸೆಕೆಂಡುಗಳಲ್ಲಿ ವಿಶ್ವದ ಯಾವುದೇ ಮೂಲೆಗೆ ಗಣೀಕೃತ ಪಠ್ಯವನ್ನು ರವಾನಿಸಬಹುದು. ಹೀಗೆ ರವಾನಿಸುವ ವಿಷಯ ನಮಗೆ ಕಾಗದದ ಮೇಲೆ ದಕ್ಕುವುದಿಲ್ಲ ಬದಲಾಗಿ 'ಎಲೆಕ್ಟ್ರಾನಿಕ್ ಫೈಲ್' ರೂಪದಲ್ಲಿ ಸಿಗುತ್ತವೆ. ವಿಡಿಯೋಕಾರ್ಡ್ ಮೂಲಕ ಕಂಪ್ಯೂಟರ್ ನೀಡುವ ವಿದ್ಯುತ್ಕಾಂತೀಯ ಸಂಜ್ಞೆಗಳು ಚಿತ್ರಾಕ್ಷರಗಳಾಗಿ ದರ್ಶಕದ ಮೇಲೆ ಪರಿವರ್ತಿತವಾಗುತ್ತವೆ. ಇದನ್ನು ಔಟ್‌ಪುಟ್ ಮೂಲಕ ಪ್ರತಿಸಿಕೊಳ್ಳಬಹುದು. ಅಮೇರಿಕಾದ 'ನುವೊಮೀಡಿಯಾ' ಎಂಬ ಸಂಸ್ಥೆ ಹೊರ ತಂದಿರುವ 'ಎಲೆಕ್ಟ್ರಾನಿಕ್ ಪುಸ್ತಕ'ದ ಸಹಾಯದಿಂದ ಇಂಟರ್‌ನೆಟ್‌ನಿಂದ ನೇರವಾಗಿಯೂ ಡೌನ್ ಲೋಡ್ ಮಾಡಬಹುದು. ಅಂತರ್ ನಿರ್ಮಿತ ಮೊಡೆಮ್‌ನ್ನು ಹೊಂದಿದ ಈ ಪುಸ್ತಕದಲ್ಲಿ ಒಮ್ಮಲೇ ನಾಲ್ಕುಸಾವಿರ ಪುಟಗಳಷ್ಟು ಮಾಹಿತಿಯನ್ನು ಇಂಟರ್‌ನೆಟ್‌ನಿಂದ ಪುಸ್ತಕದ ಮೆಮೊರಿಗೆ ವರ್ಗಾಯಿಸಬಹುದು. ಅಲ್ಲದೆ ಇದೆ ಸಂಸ್ಥೆಯ ರಾಕೆಟ್ ಈ ಬುಕ್ ೧೮,೦೦೦ ಪುಟಗಳ ೪೫ ಪುಸ್ತಕಗಳನ್ನು ತನ್ನೊಡಲೊಳಗೆ ಇಟ್ಟುಕೊಳ್ಳುವ ಸಾಮರ್ಥ್ಯ ಪಡೆದಿರುವುದು ಗಮನಾರ್ಹ ಅಂಶ.

ಅದೇರೀತಿ 'ಇ-ಮೇಲ್' ಸೌಲಭ್ಯ ಕೂಡ ಮುದ್ರಣದ ಖರ್ಚು ವೆಚ್ಚ ವೇಳೆ ಅಷ್ಟೇ ಅಲ್ಲದೆ ಅಂಚೆವೆಚ್ಚವನ್ನು ರಘರಾಕ್ಸ್‌ದಂತಹ ಕಿರಿಕಿರಿಗಳನ್ನು ಇಲ್ಲವಾಗಿಸಿದೆ. ಬರಹ ಸಾಫ್ಟ್‌ವೇರ್ ಮೂಲಕ ಕನ್ನಡದಲ್ಲಿ ಸಾಧ್ಯವಾಗಿರುವ ಇ-ಮೇಲ್ ಕಡಿಮೆ ವೆಚ್ಚದಲ್ಲಿ ಒಂದೇ ವಿಷಯವನ್ನು ಬಹಳ ಜನರಿಗೆ ಏಕಕಾಲದಲ್ಲಿ ತಲುಪಿಸುವ ಗುರಿಯನ್ನು ಹೊಂದಿದೆ.

ಹೀಗೆ ಬರೀ ಭಾಂಡಾರದ ಸರಕಾದ ಹಸ್ತಪ್ರತಿಗಳನ್ನು ಇಂತಹ ಸಮರ್ಪಕ ಸಾಧನಗಳ ಮೂಲಕ ಎಲ್ಲಿ ಬೇಕೆಂದರಲ್ಲಿ ಕಡಿಮೆ ವೇಳೆ ಮತ್ತು ವೆಚ್ಚದಲ್ಲಿ ತಲುಪಿಸುವ ಕ್ರಮ ಸಾಧ್ಯವಾಗಿದೆ. ತಿಳುವಳಿಕೆ ವಿನಿಮಯವಾದಷ್ಟು ಜೀವಂತವಾಗುಳಿಯುತ್ತದೆ. ಹಾಗೆ ಅದರ ಭಾಷೆ, ಸಂಸ್ಕೃತಿ ಸಮುದಾಯಗಳೂ ಪರಿವರ್ತನೆ ಪ್ರಕ್ರಿಯೆಗೆ ತೆರೆದುಕೊಳ್ಳುತ್ತವೆ.

ಸಾಹಿತ್ಯ ಮತ್ತು ಕಾಮಪ್ರಚೋದನೆ

● ಅನಕೃ

(ಅ.ನ.ಕೃಷ್ಣರಾಯರು (೧೯೦೮-೧೯೭೧) ವೇಶ್ಯಾ ಸಮಸ್ಯೆಯನ್ನು ವಸ್ತು ಮಾಡಿಕೊಂಡು ೧೯೫೦ರ ಸುಮಾರಿನಲ್ಲಿ ಬರೆದ ಕಾದಂಬರಿಗಳು ಭಾರೀ ವಿವಾದವನ್ನು ಸೃಷ್ಟಿಸಿದವು. ಪ್ರಗತಿಶೀಲರನ್ನು ವಿರೋಧಿಸುತ್ತಿದ್ದ 'ಸಂಪ್ರದಾಯವಾದಿ'ಗಳು ಇರಲಿ, ಸ್ವತ: ಪ್ರಗತಿಶೀಲ ಸಂಗಾತಿಗಳಾಗಿದ್ದವರೆ ಇವನ್ನು ಒಪ್ಪಲಿಲ್ಲ. ಮುಖ್ಯ ಆಕ್ಷೇಪ ಎಂದರೆ, ಅವು ಕಾಮ ಪ್ರಚೋದನೆ ಮಾಡುತ್ತವೆ, ಅಶ್ಲೀಲವಾದವು ಎಂಬುದು. ಈ ಟೀಕೆಗಳಿಂದ ಸಿಟ್ಟಿಗೆದ್ದ ಅನಕೃ ತಮ್ಮ ವಿರೋಧಿಗಳಿಗೆ ಕೊಟ್ಟ ಉತ್ತರವೇ 'ಸಾಹಿತ್ಯ ಮತ್ತು ಕಾಮಪ್ರಚೋದನೆ' (೧೯೫೨) ಪುಸ್ತಕ. ಇದರ ಮುನ್ನುಡಿ ಹಾಗೂ ಅಧ್ಯಾಯಗಳ ಕೆಲವು ಭಾಗಗಳನ್ನು ಇಲ್ಲಿ ಕೊಟ್ಟಿದೆ. ಕನ್ನಡ ಸಾಹಿತ್ಯ ಕಂಡ ಈ ಬಿರುಸಿನ ವಾಗ್ವಾದವು ಚಾರಿತ್ರಿಕ ದಾಖಲೆಯಾಗಿದೆ.

ಸಾಹಿತ್ಯದ ಸಾಮಾಜಿಕ ಹೊಣೆಗಾರಿಕೆ ಬಗ್ಗೆ ಕನ್ನಡದಲ್ಲಿ ನಡೆದಿರುವ ವಾಗ್ವಾದಗಳಲ್ಲಿ ಕಾಡಿರುವ ಪ್ರಶ್ನೆ ಎಂದರೆ, ಸಾಹಿತ್ಯಕ್ಕೆ ಹೊಣೆಗಾರಿಕೆ ಇರಬೇಕೋ ಇರಬಾರದೋ ಎಂಬುದಲ್ಲ; ಎಷ್ಟು ಮತ್ತು ಹೇಗೆ ಇರಬೇಕು ಎಂಬುದು. ಅನಕೃ ಒಳಗೊಂಡಂತೆ ಎಲ್ಲ ಪ್ರಗತಿಶೀಲರು ಸಾಹಿತ್ಯದ ಮೇಲೆ 'ಹೊರಲಾರದ ಹೊರೆ'ಯನ್ನು ಹೇರಿದವರೇ. ಇಲ್ಲಿನ ವಾಗ್ವಾದ ಕಾದಂಬರಿಗಳನ್ನು ಕುರಿತು ಎದ್ದಿರುವುದಕ್ಕೂ ಕಾದಂಬರಿ ಬರೆದೇ ಬದುಕಬೇಕಾದ ಸ್ಥಿತಿಯಲ್ಲಿ ಈ ಲೇಖಕರಿದ್ದುದಕ್ಕೂ ಸಂಬಂಧವಿದೆ. ಅಂದರೆ ಇದು ತಾತ್ವಿಕ ಭಿನ್ನಾಭಿಪ್ರಾಯದ ಪ್ರಶ್ನೆಯಾಗಿರದೆ ಲೇಖಕರ ಅಸ್ತಿತ್ವದ ಪ್ರಶ್ನೆ ಕೂಡ ಆಗಿತ್ತು. ಸಾಹಿತ್ಯವು ಜನಪರವಾಗಬೇಕು ಎಂಬ ಪ್ರಶ್ನೆ ತಮ್ಮ ಕೃತಿಗಳನ್ನು ಹೆಚ್ಚು ಜನ ಓದಬೇಕು ಎಂಬ ದನಿಯಲ್ಲಿರುವುದನ್ನು ಗಮನಿಸಬೇಕು.

ನಮ್ಮ ಸಮಾಜದ ಬೇರೆಬೇರೆ ಸ್ತರದ ಜನರು ಇನ್ನೂ ಸಾಹಿತ್ಯ ಪರಿಸರವನ್ನು ಪ್ರವೇಶಿಸಿರದ ಕಾಲದಲ್ಲಿ, ಬ್ರಾಹ್ಮಣ ಮಧ್ಯಮವರ್ಗದ ಲೇಖಕರು (ಇಲ್ಲಿನ ಚರ್ಚೆಯಲ್ಲಿ ಭಾಗ ವಹಿಸಿರುವವರೆಲ್ಲ ಇವರೇ.) ತಮ್ಮ ಓದುಗ ಸಮುದಾಯವನ್ನು ಹೊಟ್ಟೆಪಾಡಿಗಾಗಿ ನಿರ್ಮಿಸಿಕೊಳ್ಳುತ್ತಿದ್ದರು. ಈ ಹಿನ್ನೆಲೆಯಲ್ಲಿ ಇಲ್ಲಿನ ಜಗಳ ಕಂಡರೆ, ಇದರ ಮಿತಿಗಳು ಹೊಳೆಯುತ್ತವೆ. ಪ್ರಗತಿಶೀಲ ಲೇಖಕರು ಸಮಾಜವಾದದತ್ತ ಒಲವು ತೋರಲು ೪೦ರ ದಶಕದಲ್ಲಿ ಎದ್ದ ಅಖಿಲ ಭಾರತೀಯ ಪ್ರಗತಿಶೀಲ ಚಳುವಳಿಯು ಬಾಹ್ಯ ಕಾರಣವಾದರೆ, ಒಳಗಿನ ಕಾರಣ ಅವರ ವರ್ಗದಲ್ಲಿತ್ತು. ಮಾಸ್ತಿ, ಡಿವಿಜಿ, ಕುವೆಂಪು ಅವರಂತೆ ಉನ್ನತ ಸ್ಥಾನಗಳಲ್ಲಿ ಈ ಲೇಖಕರು ಇರಲಿಲ್ಲ. ಸಂಪ್ರದಾಯವಾದಿಗಳ ವಿರುದ್ಧ ಮಾಡುತ್ತಿರುವ

ಈ ಜಗಳದಲ್ಲಿ ವರ್ಗಭೇದದ ಅಂಶವೂ ಇದೆ. ಪ್ರಗತಿಶೀಲರು ವಿರೋಧಿಸುತ್ತಿದ್ದ ಲೇಖಕರು ಆ ಕಾಲದ ಸಾಹಿತ್ಯಕ ರಾಜಕಾರಣದ ಯಜಮಾನರಾಗಿದ್ದರು. ವಿಮರ್ಶೆ ಹಾಗೂ ಪತ್ರಿಕೆಗಳು ಅವರ ಕೈಯಲ್ಲಿದ್ದವು. ಅನಕೃ ಅವರಂತಹ ಪ್ರತಿಷ್ಠೆಯಿಲ್ಲದ ಲೇಖಕರಿಗೆ ಇದ್ದ ಒಂದೇ ಆತ್ಮವಿಶ್ವಾಸ ಓದುಗರದು. ಹೀಗಾಗಿ ಅವರು 'ಜನ ಮೆಚ್ಚಿದ್ದಾರೆ' 'ಜನ ನಿರ್ಧರಿಸುತ್ತಾರೆ' ಎಂಬ ಮಾತನ್ನು ಧೈರ್ಯದಿಂದ ಆಡುತ್ತಾರೆ. ಒಟ್ಟಿನಲ್ಲಿ ಇದು ನೈತಿಕ ನೆಲೆಯಲ್ಲಿ ಅಶ್ಲೀಲತೆಯನ್ನು ವಿರೋಧಿಸುವ ಸಂಪ್ರದಾಯವಾದಿಗಳಿಗೂ ಓದುಗರ ಮಾರುಕಟ್ಟೆಯನ್ನು ಹಿಡಿದಿರುವ ಲೇಖಕರ ನಡುವಿನ ಕದನವೂ ಆಗಿಬಿಟ್ಟಿದೆ.

ಸಮಸ್ಯೆಯೆಂದರೆ, ಅನಕೃ ಯುದ್ಧ ಮಾಡುತ್ತಿರುವುದು ಸಾಹಿತ್ಯಕ ಯಜಮಾನರ ಇಲ್ಲವೆ ಸಂಪ್ರದಾಯವಾದಿಗಳ ವಿರುದ್ಧ ಮಾತ್ರವಲ್ಲ; "ರಷ್ಯಾವಾದಿ" ಎಂದು ತಾವು ಕರೆಯುವ ನಿರಂಜನರಂತಹ ಪ್ರಗತಿಶೀಲ ಸಂಗಾತಿಗಳ ವಿರುದ್ಧ ಕೂಡ; (ತಮ್ಮನ್ನು ಅನಕೃ 'ಭಾರತೀಯವಾದಿ ಪ್ರಗತಿಶೀಲ'ರೆಂದು ಕರೆದುಕೊಂಡಿದ್ದರು.) ಸಂಗಾತಿಗಳೂ ವಿರೋಧಿಗಳೂ ಏಕೀಕರಣಗೊಂಡ ವಿಚಿತ್ರ ಸನ್ನಿವೇಶವಿದು. ಎಷ್ಟೊಂದು ವೈರುಧ್ಯಗಳ ನಡುವೆ ಈ ಜಗಳ ಹುಟ್ಟಿದೆ! ವಾದವೈಖರಿಯಲ್ಲಿ ಮೇಲುನೋಟಕ್ಕೆ ಎದುರಾಳಿಗಳ ಮೇಲೆ ಕೋಪ, ಸೊಲ್ಲಡಗಿಸುವ ವೀರಾವೇಶ, ಗೆದ್ದೆನೆಂಬ ವಿಜೃಂಭಣೆ, ಆಕ್ರಮಣಕಾರಿ ಗುಣ ಇವೆ. ಇದರಿಂದ ಲೇಖನಕ್ಕೆ ತೀಕ್ಷ್ಣತೆ ಬಂದಿದೆ. ತಣ್ಣಗೆ ನೋಡಿದರೆ, ಎದುರಾಳಿಗಳ ಮೇಲಿನ ಆಕ್ರಮಣಕ್ಕಿಂತ ಹೆಚ್ಚಾಗಿ ಅನಕೃ ಆತ್ಮಸಮರ್ಥನೆಗೇ ಶಕ್ತಿ ಖರ್ಚುಮಾಡಿದ್ದಾರೆ. ತನ್ನನ್ನು ಸಮರ್ಥಿಸಿಕೊಳ್ಳಲಾಗದ ಕೀಳರಿಮೆ, ಏಕಾಂಗಿತನ ಅಳಲು, ಸೋಲಿನ ದನಿಯೂ ಇದೆ. ಇದಕ್ಕೆ ಕಾರಣ ವಿಚಾರಗಳ ದೋಷವಲ್ಲ. ಈ ವಿವಾದಕ್ಕೆ ಕಾರಣವಾದ 'ನಗ್ನಸತ್ಯ'ದಂತಹ ಕಾದಂಬರಿಗಳನ್ನು ಸಮರ್ಥಿಸಿಕೊಳ್ಳಬೇಕಾದ ಇಕ್ಕಟ್ಟಿನಲ್ಲಿ ಸಿಲುಕಿರುವುದು. ಒಟ್ಟಿನಲ್ಲಿ ಒಂದು ಮುಖ್ಯ ವಿಷಯ ಕುರಿತ ತಾತ್ವಿಕ ಜಿಜ್ಞಾಸೆಯಾಗಬಹುದಾದ ಕಡೆ ಆಕ್ರೋಶಕಾರಿ ಜಗಳವಾಗಿದೆ.

ಅನಕೃ ಅವರ ಪಾಂಡಿತ್ಯ ತರ್ಕಗಳು ಕುತೂಹಲ ಸೋಜಿಗ ಹುಟ್ಟಿಸುತ್ತವೆ. ಆದರೆ ಅವು ಸತ್ಯ ಹುಡುಕಾಡುತ್ತವೆ ಅನಿಸುವುದಿಲ್ಲ. ಎದುರಾಳಿಗಳ ಬಾಯಿಮುಚ್ಚಿಸುವ ವಾಗಾಡಂಬರದಂತೆ ಕಾಣುವ ಇವರ ಮಿತಿ ಎಂದರೆ, ಗೆಲ್ಲಲು ಮಾಡಿದ ಅತಿಯಾದ ವಾದ. ಸಂಪ್ರದಾಯವಾದಿಗಳ ವಿರುದ್ಧ ಸಮರ ಸಾರಿದರೂ ಕುವೆಂಪು ಅವರ 'ನಿರಂಕುಶ ಮತಿಗಳಾಗಿ' ಲೇಖನದ ಸಾಮುದಾಯಿಕ ಆಯಾಮಗಳು ಯಾಕೆ ದೊರಕುವುದಿಲ್ಲ ಎಂಬ ಪ್ರಶ್ನೆ ಹುಟ್ಟಿದರೆ, ಉತ್ತರ ಇಲ್ಲೇ ಇದೆ. ಸಂ.)

"He who wears his morality but as a garment were better naked. The wind and sun will tear no holes in his skin"- KAHIL GIBRAN

೧

ಕನ್ನಡ ಸಾಹಿತ್ಯದಲ್ಲಿಂದು ಸ್ಪಷ್ಟವಾಗಿ ಎರಡು ಮತಗಳು ಕಂಡು ಬರುತ್ತಿವೆ. ಒಂದು, ಶುದ್ಧಕಲೆಯ ಔಪಾಸಕರ ಗುಂಪು. ಕಲೆಗಾಗಿ ಕಲೆಯೆಂದು ಭಾವಿಸುವ ಇವರು ಕಲೆಗೂ ದೈನಂದಿನ ಸಮಸ್ಯೆಗಳಿಗೂ (ಮಾನವ ಜೀವಿತಕ್ಕೂ) ಏನೂ ಸಂಬಂಧವಿಲ್ಲವೆಂದು

ಭಾವಿಸುತ್ತಾರೆ. ಅಧ್ಯಾತ್ಮ ವಾದ, ಅವ್ಯಕ್ತವಾದ, ಆದರ್ಶವಾದಗಳೇ ಕಲೆಯ ಉಸಿರು ಎಂದು ಈ ಜನ ತಿಳಿಯುತ್ತಾರೆ. ಎರಡು, ಜನತಾಕಲೆಯ ಔಪಾಸಕರ ಗುಂಪು. ಮಾನವತೆಗಾಗಿ ಕಲೆಯೆಂದು ಭಾವಿಸುವವರು ಇವರು. ಮಾನವ ಜೀವಿತದ ಉತ್ಕರ್ಷಕ್ಕೆ ವಿಘಾತವಾಗುವ ಗೌಣ-ಪ್ರಧಾನ ಸಮಸ್ಯೆಗಳನ್ನು ಪೃಥಃಕ್ಕರಿಸಿ, ಲೋಕಜೀವಿಯ ಬಾಳನ್ನು ಹಸನುಮಾಡಬೇಕೆಂದು ಇವರು ಬಯಸುತ್ತಾರೆ.

ವಸ್ತು, ನಿರೂಪಣೆ, ದೃಷ್ಟಿಗಳೆಲ್ಲದರಲ್ಲಿಯೂ ಈ ಎರಡು ಸಂಪ್ರದಾಯವಾದಿಗಳಲ್ಲಿ ಭಿನ್ನಾಭಿಪ್ರಾಯವಿದೆ. ಲೋಕ ಗೋಳಿನ ಸಂತೆ. ಗೋಳು ಮರೆಸಲು ಕಲೆ ನೆರವಾಗಬೇಕು. ಸುಂದರವಾದುದನ್ನು, ಸ್ನಿಗ್ಧವಾದುದನ್ನು, ಸುಭಗವಾದುದನ್ನು ಮನಸ್ಸಿಗೆ ಪ್ರಿಯವಾದ ರೀತಿಯಲ್ಲಿ ಹೇಳಬೇಕು ಎಂದು ಕಲಾವಾದಿಗಳು ಅಭಿಪ್ರಾಯಪಡುತ್ತಾರೆ. ಲೋಕ ಗೋಳಿನ ಸಂತೆಯಲ್ಲ. ಮಾನವನ ದೌಷ್ಟ್ಯ, ದುರಾಶೆ, ಶೋಷಣಪ್ರವೃತ್ತಿ, ಲೋಕವನ್ನು ಗೋಳಿನ ಸಂತೆಯನ್ನಾಗಿ ಮಾಡಿದೆ. ಲೋಕದ ಪ್ರಕೃತ ಪರಿಸ್ಥಿತಿಯನ್ನು ರೂಪಿಸಿರುವ ಪ್ರಮೇಯಗಳನ್ನು ಅನುಲಕ್ಷಿಸದೆ ತಾತ್ಕಾಲಿಕ ಉಪಶಮನ ಮಾಡಿದರೆ ಮೂಲಸಮಸ್ಯೆ ಪರಿಹಾರವಾಗುವುದಿಲ್ಲ. ತಲೆನೋವು ಬಂದಾಗ 'ಆಸ್ಪ್ರೋ' ತೆಗೆದುಕೊಂಡರೆ ತಾತ್ಕಾಲಿಕ ಉಪಶಮನವಾಗಬಹುದು. ಎಲ್ಲಿಯವರೆಗೆ? ಆಸ್ಪ್ರೋ ಪ್ರಭಾವ ದೇಹದ ಮೇಲೆ ಇರುವವರೆಗೆ. ಅದು ತೀರಿದಕೂಡಲೆ ತಲೆನೋವು ಮತ್ತೆ ಸಂಭವಿಸುತ್ತದೆ. ತಲೆನೋವು ಹುಟ್ಟಿರುವ ಮೂಲಕಾರಣ ಕಣ್ಣಿನ ಬೇನೆಯೇ, ಅಜೀರ್ಣವೇ, ಯಕೃತ್ತಿನ ದೋಷವೇ ಎಂದು ನಿಧಾನಮಾಡಿ ಚಿಕಿತ್ಸೆ ಕೈಗೊಂಡಲ್ಲಿ ತಲೆನೋವನ್ನು ಶಾಶ್ವತವಾಗಿ ಪರಿಹರಿಸಬಹುದು. ಇದು ಮಾನವವಾದಿಗಳ ಅಭಿಪ್ರಾಯ. ಮಾನವವಾದವನ್ನೇ ನಾವು ಪ್ರಗತಿಶೀಲತೆಯೆಂದು ಕರೆಯುತ್ತ ಬಂದಿರುವುದು. ಸಾಹಿತ್ಯ ಜೀವನ-ದರ್ಶನ ಮಾಡಿಸುವುದರ ಜತೆಗೆ ಉನ್ನತ ಜೀವನದ ನಿರ್ಮಾಣಕ್ಕೆ ನೆರವಾಗಬೇಕು. ಸಾಹಿತಿಯ ಧ್ಯೇಯ ಲೋಕ ವಿಲಾಸವಲ್ಲ-ಲೋಕವಿಕಾಸ; ಅವನ ಗುರಿ ತಾತ್ಕಾಲಿಕ ಸಂತೋಷವನ್ನುಂಟು ಮಾಡುವುದಲ್ಲ, ಶಾಶ್ವತಾನಂದವನ್ನುಂಟುಮಾಡುವುದು.

ಬೆಂಗಳೂರಿನಲ್ಲಿ ೧೯೪೪ರಲ್ಲಿ ಪ್ರಗತಿಶೀಲ ಲೇಖಕರ ಸಂಘ ಸ್ಥಾಪನೆಯಾಗುವವರೆಗೆ ಮಾನವವಾದದ ಸ್ಥಾನ ಕನ್ನಡ ಸಾಹಿತ್ಯದಲ್ಲಿ ಗೌಣವಾಗಿತ್ತು. ನ-ಣ ವಾದ, ಕನ್ನಡ-ಸಂಸ್ಕೃತ ವಾದ, ಧಾರವಾಡ ಕನ್ನಡದ ಕೇಂದ್ರವೋ, ಬೆಂಗಳೂರು ಕನ್ನಡದ ಕೇಂದ್ರವೋ, ಮಾರ್ಲೆ ದೊಡ್ಡ ಸಾಹಿತಿಯೋ, ಮ್ಯಾಥ್ಯೂ ಅರ್ನಾಲ್ಡ್ ದೊಡ್ಡ ಸಾಹಿತಿಯೋ ಎಂಬ ನಿರರ್ಥಕ ವಾದಗಳಲ್ಲಿ ಮಗ್ನರಾಗಿದ್ದ ಕಲಾವಾದಿಗಳಿಗೆ, ಪ್ರಗತಿಶೀಲರ ಧ್ಯೇಯ ಧೋರಣೆ ದೊಡ್ಡ ಗಂಡಾಂತರವಾಯಿತು. ಇಂಗ್ಲೆಂಡಿನ ಸ್ವಾಮ್ಯ ತಪ್ಪಿಹೋದರೆ, ಭಾರತ ಸ್ವಯೂಥ ಕಲಹದಲ್ಲಿ ನಾಶವಾಗುತ್ತದೆ ಎಂದು ಭಾವಿಸುತ್ತಿದ್ದ ಕಲಾವಾದಿಗಳಿಗೆ, ಮಾನವವಾದಿಗಳ ಸ್ವಾತಂತ್ರ್ಯ ಘೋಷಣೆ ಕರ್ಕಶವಾಗಿ ಕಂಡುಬಂದಿತು. ತಮ್ಮ ನಾಡಿನ ಸ್ವಾತಂತ್ರ್ಯದಷ್ಟೇ ಗಣ್ಯವಾದುದು ಲೋಕದ ಎಲ್ಲ ದಲಿತ ರಾಷ್ಟ್ರಗಳ ಸ್ವಾತಂತ್ರ್ಯವೆಂಬ ಪ್ರಗತಿಶೀಲರ ವಾದ ಕಲಾವಾದಿಗಳಿಗೆ ಅಪ್ರಿಯವಾಯಿತು.

ರಬಕವಿಯಲ್ಲಿ ೧೯೪೪ರಲ್ಲಿ ನಡೆದ ಸಾಹಿತ್ಯಸಮ್ಮೇಳದ ಅಂಗವಾಗಿ ಸೇರಿದ 'ಪ್ರಗತಿಶೀಲ' ಸಾಹಿತ್ಯಗೋಷ್ಠಿ'ಯಲ್ಲಿ ಕಲಾವಾದಿಗಳು ಪ್ರಗತಿಶೀಲರ ಮೇಲೆ ತಮ್ಮ ಧಾಳಿ ಆರಂಭಿಸಿದರು. ಇದಕ್ಕೆ ಕೆಲವು ದಿನಗಳ ಮುಂಚೆ ಧಾರವಾಡದಲ್ಲಿ ಇಂಥಹದೇ ಒಂದು ಗೋಷ್ಠಿ ಸೇರಿ ಪ್ರಗತಿಶೀಲರನ್ನು ಬಗ್ಗು ಬಡಿಯಲು ಹವಣಿಸಿತು. ಎರಡು ಕಡೆಗಳಲ್ಲಿಯೂ ಕಲಾವಾದಿಗಳಿಗೆ ನಿರೀಕ್ಷಿಸಿದ ಜಯ ದೊರೆಯಲಿಲ್ಲ. ರಬಕವಿ ಸಾಹಿತ್ಯ ಸಮ್ಮೇಳನಾಧ್ಯಕ್ಷರೇ ಪ್ರಗತಿಶೀಲರ ಧ್ಯೇಯಧೋರಣೆಗಳನ್ನು ಮೆಚ್ಚಿಕೊಂಡು ಸ್ವಾಗತಿಸಿದರು. ತರುವಾಯ ಬೆಂಗಳೂರಿನ ಸಾಹಿತ್ಯ ಪರಿಷನ್ಮಂದಿರದಲ್ಲಿ ಒಂದು ಚರ್ಚಾಕೂಟವೂ ವ್ಯವಸ್ಥಿತವಾಯಿತು. ಸಾಮಾನ್ಯಜನತೆ ಪ್ರಗತಿಶೀಲರಿಗೆ ಅಭೂತಪೂರ್ವ ಬೆಂಬಲ ನೀಡಿತು. ಊರೂರುಗಳಿಗೆ ಹಳ್ಳಿಹಳ್ಳಿಗಳಿಗೆ ಪ್ರಗತಿಶೀಲರು ಹೋಗಿ ತಮ್ಮ ಪ್ರಣಾಳಿಕೆ ಸಾರಿಬಂದರು. ತಾವೂ ಪ್ರಗತಿಶೀಲರೆಂದು ಹೇಳಿಕೊಳ್ಳುತ್ತಿದ್ದ ಕೆಲವರು, ಪ್ರತಿಗಾಮಿಗಳ ಜತೆ ಸಂಧಾನ ನಡೆಸಿ ಪ್ರಗತಿಶೀಲರ ವಿರುದ್ಧ ಚಳುವಳಿ ಕೈಗೊಂಡರು. ಸಂಪ್ರದಾಯಪ್ರಿಯರು ಪ್ರಗತಿಶೀಲರ ಧ್ಯೇಯವಾದವನ್ನು ಅಪಾರ್ಥಮಾಡಿ ಕೊಳಚೆಗೆಳೆಯಬೇಕಾದ ಕಾರಣವಿರಲಿಲ್ಲ. ಪ್ರಗತಿಶೀಲರ ಮೇಲೆ 'ಅಶ್ಲೀಲ ಸಾಹಿತಿಗಳು, ಅನೀತಿಪರರು, ಪ್ರತಿಫಲಾಪೇಕ್ಷಿಗಳು' ಮೊದಲಾದ ಕೀಳು ಆಪಾದನೆಗಳನ್ನು ಮಾಡಬೇಕಾದ ಅವಶ್ಯಕವಿರಲಿಲ್ಲ. ಎರಡು ಪಕ್ಷಗಳೂ ಗಂಭೀರವಾಗಿ ತಮ್ಮ ವಾದಗಳನ್ನು ಜನತೆಯ ಮುಂದಿಟ್ಟು ಅವರ ನಿರ್ಣಯವನ್ನು ಒಪ್ಪಿಕೊಳ್ಳಬಹುದಾಗಿತ್ತು. ಪ್ರಗತಿಶೀಲರು ಜನತೆಯ ಮುಂದೆ ನಿಂತು ತಮ್ಮ ಧ್ಯೇಯವಾದಕ್ಕೆ ಬೆಂಬಲ ದೊರಕಿಸಿಕೊಳ್ಳುತ್ತಿದ್ದಾಗ, ಕಲಾವಾದಿಗಳು ಪಿಸುಮಾತಿನ ಅಪಪ್ರಚಾರ (Whispering Campaign) ಕೈಗೊಂಡು ಕ್ಲಾಸುರೂಮುಗಳಲ್ಲಿ ಪ್ರಗತಿಶೀಲರನ್ನು ನಿಂದಿಸಿ ತೃಪ್ತಿಪಟ್ಟುಕೊಂಡರು.

ವಾತಾವರಣ ಇಷ್ಟು ಕಲುಷಿತವಾದಾಗ ಜನತೆಯ ಮನಸ್ಸಿನಲ್ಲಿ ವಿನಾ ಕಾರಣ ಸಂದೇಹ ಸಂದಿಗ್ಧಗಳು ಹುಟ್ಟಿಕೊಂಡಾಗ, ಕೆಲಕಾಲ ಪ್ರಗತಿಶೀಲ ಚಳುವಳಿಗೆ ವಿರಾಮ ಕೊಡಬೇಕಾಗಿದ್ದುದು ಅನಿವಾರ್ಯವಾಯಿತು.. ಪ್ರಗತಿಶೀಲ ಲೇಖಕರ ಆರ್ಥಿಕ ಪರಿಸ್ಥಿತಿಯೂ ಕಾರಣವನ್ನೊದಗಿಸಿತು. ಯಾಕೆಂದರೆ ಕಲಾವಾದಿಗಳಂತೆ ಪ್ರಗತಿಶೀಲರು ಸರ್ಕಾರಿ ನೌಕರರಾಗಿ, ಹೈಸ್ಕೂಲು, ಕಾಲೇಜು ಉಪಾಧ್ಯಾಯರಾಗಿರಲಿಲ್ಲ.

ತಾತ್ಕಾಲಿಕ ವಿರಾಮ ಪ್ರತಿಗಾಮಿಗಳಿಗೆ ಪರಮಸಂತೋಷವನ್ನುಂಟು ಮಾಡಿರಬೇಕು. ಪ್ರಗತಿಶೀಲರು ಹೇಳಹೆಸರಿಲ್ಲವಾದರು ಎಂದವರು ವಿಜಯೋತ್ಸಾಹ ತೋರಿದರು. ಆದರೆ ಈ ವೇಳೆಗೆ ಪ್ರಗತಿಶೀಲರ ಧ್ಯೇಯವಾದ ಜನತೆಯ ಮನಸ್ಸಿನಲ್ಲಿ ಬೇರೂರಿದ್ದುದನ್ನು ಮಾತ್ರ ಕಲಾವಾದಿಗಳು ಗಮನಿಸಲಿಲ್ಲ. ಪ್ರಗತಿಶೀಲ ಲೇಖಕರ ಸಂಘ ಹೋಗಬಹುದು, ಪ್ರಗತಿಶೀಲ ಲೇಖಕರೂ ಹೋಗಬಹುದು, ಆದರೆ ಜನತೆಯಷ್ಟೇ ಅನಂತ ಅಮರ ಅವರ ಧ್ಯೇಯವಾದ.

ಪ್ರಗತಿಶೀಲ ಲೇಖಕರ ಸಂಘ ಪ್ರಕಟನೆಯ ಕೆಲಸ ನಿಲ್ಲಿಸಿತು. ಸಂಘ ಪ್ರಕಟನೆಗಳನ್ನು ನಿಲ್ಲಿಸಿದರೂ ಸಂಘದ ಸದಸ್ಯರ ಪ್ರಕಟನೆಗಳು ನಿಲ್ಲಲಿಲ್ಲ. ಸಾಹಿತ್ಯದ ಸತತ ಪ್ರವಾಹವೇ

ಅವರಿಂದ ಆರಂಭವಾಯಿತು. ಕಥೆ, ಕಾದಂಬರಿ, ವಿಮರ್ಶೆ ಹಾಸ್ಯಬರೆಹಗಳು ಪುಂಖಾನುಪುಂಖವಾಗಿ ಪ್ರಕಟವಾದವು. ಸದಸ್ಯರು ವಿದ್ಯಾರ್ಥಿ ಚಟುವಟಿಕೆಗಳು, ಕೂಲಿಗಾರರ ಸಂಘಗಳು, ಶಾಂತಿ ಚಳುವಳಿ, ಇಂಡೋ-ಸೋವಿಯಟ್, ಇಂಡೋ-ಚೀನಾ ಸೊಸೈಟಿಗಳ ಕಾರ್ಯಕ್ರಮಗಳಲ್ಲಿ ಪ್ರಧಾನ ಪಾತ್ರ ವಹಿಸಿತೊಡಗಿದರು; ಕನ್ನಡ ಮಾಧ್ಯಮ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿಗಳ ಪ್ರಸಾರಕರಾಗಿ ಕೆಲಸ ಮಾಡಿದರು. ಅವರ ಚಟುವಟಿಕೆಗಳು ಕಲಾವಾದಿಗಳಲ್ಲಿ ಸಂಪ್ರದಾಯವಾದಿಗಳಲ್ಲಿ ಈರ್ಷೆಯ ಕಿಚ್ಚುರಿಸಿತು. ಸಾರ್ವತ್ರಿಕವಾಗಿ ಜನತೆಯ ಮನಸ್ಸಿನಲ್ಲಿ ಪ್ರಗತಿಶೀಲರ ಕೃತಿಗಳ ಬಗ್ಗೆ ಮೂಡುತ್ತಿದ್ದ ಅಭಿಮಾನವನ್ನು ಕೊನೆಗಾಣಿಸುವುದು ಹೇಗೆ ಎನ್ನುವುದೇ ಪ್ರತಿಗಾಮಿಗಳಿಗೆ ದೊಡ್ಡ ಸಮಸ್ಯೆಯಾಯಿತು. ಆಗವರು ಪ್ರಗತಿಶೀಲರ ಕೃತಿಗಳೆಲ್ಲಾ ಅಶ್ಲೀಲ ಬರವಣಿಗೆಗಳು ಎಂಬ ಹುಯ್ಯಲೆಬ್ಬಿಸಿದರು. ಲೈಂಗಿಕ ಸಮಸ್ಯೆಗಳನ್ನು ಚರ್ಚಿಸದ ಕೃತಿಗಳ ಮೇಲೂ ಈ ಆಪಾದನೆ ಹೊರೆಸಲ್ಪಟ್ಟಿತೆಂದು ಹೇಳಿದಲ್ಲಿ ಓದುಗರಿಗೆ ಆಶ್ಚರ್ಯವಾಗಬಹುದು. ಪ್ರತಿಪಕ್ಷದವರ ವಾದವೈಖರಿ, ತಿಳುವಳಿಕೆಯ ಮಟ್ಟ, ಸಮಾಜಾಭಿಮಾನ, ಸಾಹಿತ್ಯನಿಷ್ಠತೆಗಳೆಲ್ಲವನ್ನೂ ಈ ಗ್ರಂಥದಲ್ಲಿ ವಿಶದವಾಗಿ ಚರ್ಚಿಸಿದ್ದೇನೆ.

ಇಂದು ನಾವು ಸೂರ್ಯನನ್ನು ಗಡಿಯಾರವನ್ನಾಗಿ ಉಪಯೋಗಿಸುತ್ತಿಲ್ಲ; ಪೆಟ್ಟಿಗೆ ಗಾಡಿಯೇ (ಡಮಣಿ) ಪ್ರಯಾಣದ ಆದ್ಯಂತವೆಂದು ಭಾವಿಸುತ್ತಿಲ್ಲ. ಇಂದಿನ ನಮ್ಮ ಅವಶ್ಯಕತೆಗಳಿಗೆ ಫಾವರ್‌ಲೂಬಾ ಕಂಪೆನಿಯ ಗಡಿಯಾರ, ಏರೋಪ್ಲೇನುಗಳೇ ಬೇಕಾಗಿವೆ. ಆಟಂ ಬಾಂಬಿನ ಸಂಶೋಧನೆ, ಧನಪ್ರಮತ್ತ ಅಮೇರಿಕಾದ ರಾಜಕೀಯ ನೋಟ, ಇಡಿಯ ವಿಶ್ವದ ಮುಖವನ್ನೇ ಬದಲಾಯಿಸುತ್ತಿದೆ. ರೇಷನ್ ಪದ್ಧತಿಯೊಂದೇ ನಮ್ಮ ಸಾಮಾಜಿಕ ಜೀವನ, ಆರ್ಷೇಯ ಸಂಪ್ರದಾಯಗಳನ್ನು ಅಲುಗಾಡಿಸಿಬಿಟ್ಟಿತು. ಇನ್ನೂ ನಮ್ಮ ಸಾಹಿತ್ಯ ಪ್ರಾಚೀನ ಸಾಹಿತ್ಯದ ಅನುಕರಣವಾಗಬೇಕೆಂದು ಬಯಸುವುದೂ ನಮ್ಮ ಜೀವನ ಮಧ್ಯಕಾಲದ ಜೀವನದ ಪ್ರತೀಕವಾಗಬೇಕೆಂದು ಹಾರೈಸುವುದು ನಿರರ್ಥಕ. ವಾಯುವೇಗದಲ್ಲಿ ಮುನ್ನಡೆಯುತ್ತಿರುವ ಜೀವನಕ್ಕೆ ಸರಿದೊರೆಯಾಗಿ ನಿಲ್ಲಬೇಕಾದುದು ಸಾಹಿತಿಯ ಕರ್ತವ್ಯ. ಪ್ರಗತಿ ಗಡಿಯಾರದ ಮುಳ್ಳನ್ನು ಯಾರೂ ಹಿಂದಕ್ಕೆ ತಳ್ಳಲು ಸಾಧ್ಯವಿಲ್ಲ.

ಪ್ರಾಚೀನದ ಅನುಕರಣದಿಂದ ನಮ್ಮ ಸಾಹಿತ್ಯ ಕ್ರಿಯಾಶೀಲವಾಗುವುದಿಲ್ಲವೆಂದು ಪ್ರಗತಿಶೀಲರು ಪ್ರತಿಪಾದಿಸಿದಂತೆ ರಷ್ಯಾ, ಇಂಗ್ಲೆಂಡ್, ಅಮೆರಿಕಾ ದೇಶಗಳ ಸಾಹಿತ್ಯಾನುಕರಣದಿಂದ ನಮ್ಮ ಸಾಹಿತ್ಯ ಹಾಗೂ ಜೀವನ ಬೆಳೆಯುವುದಿಲ್ಲವೆಂದು ಒತ್ತಿ ಹೇಳಿದರು. ನಮ್ಮ ಸಾಹಿತ್ಯ ನಮ್ಮ ಸಂಸ್ಕೃತಿಯ, ಜೀವನದ, ಆಶೋತ್ತರಗಳ, ಕಷ್ಟಸುಖಗಳ, ಸೋಲು ಗೆಲುವುಗಳ ಪ್ರತೀಕವಾಗಬೇಕು. ಅನುಭವವೇದ್ಯವಾದ ಕ್ರಿಯಾಶಕ್ತಿ ಅಂಥ ಸಾಹಿತ್ಯವನ್ನು ನಿರ್ಮಿಸಬಲ್ಲುದಲ್ಲದೆ ಪರಸಾಹಿತ್ಯಗಳ ಅನುಕರಣವಲ್ಲವೆಂಬುದನ್ನು ಪ್ರಗತಿಶೀಲರು ಸ್ಥಾಪಿಸಿದರು.

'ಸಾಹಿತ್ಯ, ಕಾಮಪ್ರಚೋದನೆ'ಯೇ ಈ ಗ್ರಂಥದ ವಸ್ತುವಾದರೂ, ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನೂ ಚರ್ಚಿಸಿದ್ದೇನೆ. ಇದರಲ್ಲಿ ನಾನೆತ್ತಿಕೊಂಡಿರುವ ಕೆಲವು ವಿಷಯಗಳ

ಮೇಲೆ ಪ್ರತ್ಯೇಕ ಗ್ರಂಥಗಳನ್ನೇ ಬರೆಯಬೇಕು-ದೃಷ್ಟಾಂತಕ್ಕೆ ಜಗತ್ತಿನಲ್ಲಿ ಸ್ತ್ರೀಯ ವಿಕಾಸ ಧರ್ಮ ಮತ್ತು ಶೀಲ ಪ್ರಶ್ನೆ, ಸಮಾಜದ ಉತ್ಕ್ರಾಂತಿ, ವೇಶ್ಯಾಸಮಸ್ಯೆ ಮತ್ತು ಅದಕ್ಕೆ ಸಂಬಂಧ ಪಟ್ಟ ಇತರ ಸಮಸ್ಯೆಗಳು ಇತ್ಯಾದಿ. ಈಗಾಗಲೇ ಸಾಕಷ್ಟು ದೊಡ್ಡದಾಗಿ ಬೆಳೆದಿರುವ ಗ್ರಂಥ ಮತ್ತಷ್ಟು ದೊಡ್ಡದಾಗುವುದಲ್ಲಾ ಎಂದು ನಾನು ಕೆಲವು ವಿಷಯಗಳನ್ನು ಮೊಟಕುಮಾಡ ಬೇಕಾಯಿತು; ಕೆಲವು ವಿಷಯಗಳನ್ನು ಬಿಟ್ಟುಬಿಡಬೇಕು. ನಾನು ಮಾಡದೆ ಉಳಿಸಿರುವ ಕೆಲಸವನ್ನು ಸೋದರ ಪ್ರಗತಿಶೀಲ ಲೇಖಕರು ಮಾಡುತ್ತಾರೆಂಬ ನಂಬಿಕೆ ನನಗಿದೆ.

ನಮ್ಮ ಸಾಮಾಜಿಕ, ರಾಷ್ಟ್ರೀಯ, ಆರ್ಥಿಕ ಧಾರ್ಮಿಕ ಸಮಸ್ಯೆಗಳನ್ನು ನಾನು ಅನೇಕ ವರ್ಷಗಳಿಂದ ವಿಚಾರಮಾಡುತ್ತಿದ್ದೇನೆ. ವಸ್ತುಸ್ಥಿತಿಯನ್ನು ಸರಿಯಾಗಿ ಅರಿಯಬೇಕೆಂಬ ಶ್ರದ್ಧೆ ಗಾಗಲಿ, ಸಾಧನೆಗಾಗಲಿ ಏನೂ ಕೊರತೆಯಿಲ್ಲ. ಅನೇಕ ಜನರ ಜತೆಯಲ್ಲಿ ಈ ಸಮಸ್ಯೆಗಳನ್ನು ಚರ್ಚಿಸಿದ್ದೇನೆ; ನೂರಾರು ಗ್ರಂಥಗಳನ್ನು ಓದಿ ನೋಡಿದ್ದೇನೆ. ಅದರ ಫಲವೇ 'ಸಾಹಿತ್ಯ ಮತ್ತು ಕಾಮಪ್ರಚೋದನೆ'.

ಕನ್ನಡ ಸಾಹಿತ್ಯಕ್ಕೇ ಕಾದಂಬರಿ ಹೊಸದು. ಇಂದು ಕನ್ನಡದಲ್ಲಿ ಕಾವ್ಯರಚನೆ ಮಾಡ ಬೇಕೆನ್ನುವವರಿಗೆ ಪ್ರಾಚೀನ, ಅರ್ವಾಚೀನ ಕವಿಗಳ ಉತ್ತಮೋತ್ತಮ ಕೃತಿಗಳ ಆದರ್ಶವಿದೆ. ಗದ್ಯಶೈಲಿಗೇ ನಮಗೆ ಪರಂಪರೆಯ ಬಲವಿಲ್ಲ. ಆಧುನಿಕ ವಿಚಾರವಾಹಿನಿಗನುಗುಣವಾಗಿ, ಗದ್ಯಶೈಲಿಯನ್ನು ರೂಪಿಸಿಕೊಳ್ಳಬೇಕಾದ ಕೆಲಸದೊಂದಿಗೆ ಕಾದಂಬರಿಯ ಕಟ್ಟಡವನ್ನು-ಅಸ್ತಿಭಾರದಿಂದ ಆರಂಭಿಸಿ-ನಾವು ಕಟ್ಟಬೇಕಾಗಿದೆ.

"ಕನ್ನಡದಲ್ಲಿ ಕಾವ್ಯಸಂಪತ್ತಿರುವಂತೆ ಕಾದಂಬರಿಯ ಸಂಪತ್ತಿಲ್ಲ. ೧೯೧೫ ಹಿಂದೆ ಕನ್ನಡದಲ್ಲಿ ಕಾದಂಬರಿ ಸಾಹಿತ್ಯವಿರಲಿಲ್ಲ. ೧೯೪೫ರಿಂದ ಈವರೆಗೆ ಕನ್ನಡದಲ್ಲಿ ಕಾದಂಬರಿ ಹೆಚ್ಚಾಗಿ ಬೆಳೆದಿದೆ. ಇಂಗ್ಲೆಂಡ್, ಫ್ರಾನ್ಸ್, ರಷ್ಯಾದೇಶಗಳ ಸಾಹಿತ್ಯ ಕಾದಂಬರಿಯ ವಿಷಯ ದಲ್ಲಿ ಪಡೆದಿರುವ ಪರಂಪರೆಯ ಬೆಂಬಲ ನಮಗಿಲ್ಲ, ಇಂಗ್ಲಿಷರಿಗೆ ಹಾರ್ಡಿ, ಸ್ಕಾಟ್, ಡಿಕೆನ್ಸ್, ಫ್ರೆಂಚರಿಗೆ ವಾಲ್ಟೇರ್, ಬಾಲಜಾಕ್, ಸ್ಟೆಂಡ್ಹಾಲ್, ಜೋಲಾ, ವಿಕ್ಟರ್ ಹ್ಯೂಗೋ, ಫ್ಲಾಬೋ; ರಷ್ಯಾದವರಿಗೆ ಟರ್ಗಿನೀವ್, ಟಾಲ್ ಸ್ಟಾಯ್, ಡಾಸ್ಟೊವಸ್ಕಿ, ಕುಪ್ರಿನ್, ಗಾರ್ಕಿ ಮೊದಲಾದವರ ಅಮರ ಕೃತಿಗಳ ಮೇಲ್ಪಂಕ್ತಿಯಿದೆ. ಇಂಗ್ಲೆಂಡ್, ರಷ್ಯಾ, ಫ್ರಾನ್ಸ್ ಗಳಲ್ಲಿ ಈ ಮಹನೀಯರು ಸಾಕಷ್ಟು ಉಳುಮೆ ಕೆಲಸ (spade work) ಮಾಡಿದ್ದಾರೆ; ಇಂದಿನ ಕಾದಂಬರಿಕಾರ ಬಿತ್ತನೆಗೆ ಹೊರಡಬಹುದು. ನಮಗೆ ಆ ಸೌಕರ್ಯ ಇಲ್ಲ. ನಾವೇ ಉಳುವವರು, ನಾವೇ ಬಿತ್ತುವವರು. ಹೊಸದಾದ ಸ್ವತಂತ್ರ ಮಾರ್ಗಗಳನ್ನು ನಾವು ಆವಿಷ್ಕಾರ ಮಾಡುತ್ತಿದ್ದೇವೆ. ಕಾದಂಬರಿಗೆ ಅವಶ್ಯಕವಾಗುವ ಶೈಲಿಯನ್ನು ರೂಪಿಸಲು ಪ್ರಯತ್ನಿಸುತ್ತಿ ದ್ದೇವೆ. ಮನೋವ್ಯಾಪಾರದ ಬಗೆ ಬಗೆಯ ಭಾವಗಳನ್ನು ವ್ಯಕ್ತಮಾಡಲು ಅವಶ್ಯಕವಾದ ಶಬ್ದಗಳನ್ನು ನಿರ್ಮಾಣಮಾಡುತ್ತಿದ್ದೇವೆ. ಆದರೆ ಈ ಪ್ರಯೋಗಕಾಲದಲ್ಲಿಯೇ ಕನ್ನಡ ಕೆಲವು ಚಿರಸ್ಥಾಯಿಯಾದ ಕೃತಿಗಳನ್ನು ಕೊಟ್ಟಿರುವುದು ಕನ್ನಡದ ಹಿರಿಮೆಯನ್ನು ಎತ್ತಿ ಸಾರುತ್ತದೆ. ಈ ಸಮಯದಲ್ಲಿ ಕನ್ನಡ ಕೃತಿಗಳನ್ನಳೆಯುವವರಲ್ಲಿ ಜ್ಞಾನ ಸಂಪತ್ತು, ಸಾಂತಃಕರಣ,

ಸಹೃದಯತೆ, ವಿಮರ್ಶನ ನೈಪುಣ್ಯ ಇರಬೇಕು. ಕನ್ನಡ ಕೃತಿಗಳನ್ನು ವಿಮರ್ಶೆ ಮಾಡುವವರಲ್ಲಿ ಜವಾಬ್ದಾರಿಯಿರಬೇಕು. ಒಬ್ಬ ಕ್ರಿಯಾಶಾಲಿ ಲೇಖಕನ ಅವಿಶ್ರಾಂತ ಪರಿಶ್ರಮದ ಫಲವನ್ನು ನಾಲ್ಕು ಸಣ್ಣ ಮಾತುಗಳಿಂದ ತೆಗಳುವುದು ಸುಲಭ-ಅದಕ್ಕೆ ಯಾವ ಉತ್ತರವಾದಿತನವು ಬೇಕಿಲ್ಲ. ಲೇಖಕನ ಕೃತಿ ಸರ್ವಾಂಗಸುಂದರವಾಗಿ ಸರ್ವ ಲಕ್ಷಣಯುತವಾಗಿಲ್ಲದೆ ಇರಬಹುದು. ಆದರೆ ಅವನ ಪರಿಶ್ರಮ, ಸಾಧನ, ಸಿದ್ಧಿಯನ್ನು ಅಲ್ಲಗಳೆಯುವುದು ಕಾರ್ಪಣ್ಯದ ಲಕ್ಷಣ".*

ಆಧುನಿಕ ಕನ್ನಡ ಸಾಹಿತ್ಯ ಜನ್ಮತಾಳಿ ಮೂವತ್ತೇಳು ವರ್ಷಗಳಾದರೂ ಅದು ಸಾಕಷ್ಟು ಪ್ರಭಾವಶಾಲಿಯಾಗದಿರುವುದಕ್ಕೆ, ಜನಸಾಮಾನ್ಯರ ಬಳಿ ಸುಳಿಯದಿರುವುದಕ್ಕೆ ಸಾಹಿತ್ಯಭಕ್ತರ, ಔಪಾಸಕರ ಅ-ಪ್ರಾಗತಿಕ ಮನೋಭಾವವೇ ಮೂಲಕಾರಣ. ನಾಡವರಂತೆ ಸಾಹಿತಿಗಳೂ ಹಿಂದಣ ಇತಿಹಾಸ, ಧರ್ಮ, ಸಾಹಿತ್ಯ, ಜೀವನದ ಕನಸು ಕಾಣುತ್ತಿರುವರೇ ವಿನಾ, ಇಂದಿನ ಜೀವನವನ್ನು ಕಟ್ಟಿ-ಬೆಳಸಿ-ಬೆಳಗಿಸುವ ಕಡೆಗೆ ಲಕ್ಷ್ಯವಿಡುತ್ತಿಲ್ಲ. ಪ್ರಾಚೀನ ಪರಂಪರೆ ಭಾರತೀಯರನ್ನು ಪ್ರಾರಬ್ಧದಂತೆ ಕಾಡುತ್ತಿದೆ. ನಮ್ಮ ನಾಡು-ಸಾಹಿತ್ಯ-ನಾಡವರು ಬದುಕ ಬೇಕಾದರೆ, ಮುಂದುವರಿಯಬೇಕಾದರೆ, ನಾವು ಹಿಂದು ಹಿಂದು ನೋಡುವ ಮನೋಭಾವ ತೊರೆಯಬೇಕು. ಪರಂಪರಾಗತ ಸಂಸ್ಕೃತಿಯನ್ನು ಸಂಪೂರ್ಣವಾಗಿ ತೊರೆಯಬೇಕೆಂದು ನನ್ನ ವಾದವಲ್ಲ. ಆ ಸಂಸ್ಕೃತಿಯಿಂದ ನಾವು ಪಡೆಯುವ ಸ್ಫೂರ್ತಿ ಚೇತೋಹಾರಿಯಾಗಿ ಜೀವಂತವಾಗಿರಬೇಕು. ಸತ್ತ ಸಾಮ್ರಾಜ್ಯಗಳ, ಮಠ, ಮತಗಳ, ಕೀರ್ತಿ ಸ್ತುತಿಯಲ್ಲಿ ಕಾಲಹರಣ ಮಾಡುವುದು ನಮ್ಮ ಅವನತಿಯ ಸಂಕೇತವೇ ವಿನಾ ಅಭ್ಯುದಯದ ಅಡಿಗಲ್ಲಲ್ಲ.

೨

ನನ್ನ ಕಾದಂಬರಿ 'ನಗ್ನ ಸತ್ಯ'(೧೯೫೧) ಪ್ರಕಟವಾದ ಕೂಡಲೆ ಕನ್ನಡದ ಹಲವು ಪತ್ರಿಕೆಗಳ ವಿಮರ್ಶೆಗೊಳಗಾಯಿತು. ಆ ವಿಮರ್ಶೆಗಳ ಮೊತ್ತವನ್ನು ಲಕ್ಷ್ಯದಲ್ಲಿಟ್ಟುಕೊಂಡು ನಾನು 'ಶನಿ ಸಂತಾನ'(ಸೆಪ್ಟೆಂಬರ್ ೧೯೫೧) ಕಾದಂಬರಿಯ ಮುನ್ನುಡಿಯಲ್ಲಿ-

"'ನಗ್ನಸತ್ಯ' ಕಾದಂಬರಿಗೆ ಪತ್ರಿಕೆಗಳಲ್ಲಿ ದೊರೆತಿರುವ ವಿಮರ್ಶನ ಪ್ರತಿಕ್ರಿಯೆ ನೋಡಿದರೆ ಜಗತ್ತು ವಿಚಾರದೃಷ್ಟಿಯಲ್ಲಿ ಪ್ರಗತಿಶೀಲವಾದರೂ ನಮ್ಮ ವಿಮರ್ಶಕರು 'ಅಪ್ಪಹಾಕಿದ ಆಲದ ಮರಕ್ಕೆ ನೇಣು ಬಿಗಿದುಕೊಳ್ಳುತ್ತಿರುವುದು' ಕಂಡುಬರುತ್ತದೆ. 'ಪುಸ್ತಕ ಪ್ರಪಂಚ'-'ಪ್ರಜಾವಾಣಿ'-'ಚಿತ್ರಗುಪ್ತ'-'ಕರ್ಮವೀರ' ಪತ್ರಿಕೆಗಳಲ್ಲಿ ಬಂದಿರುವ ವಿಮರ್ಶೆ-ಗ್ರಂಥದ ವಿಮರ್ಶೆಯಲ್ಲ; ಗ್ರಂಥಕರ್ತನ ವಿಮರ್ಶೆ-ನಮ್ಮ ವಿಚಾರದಾರಿದ್ರ್ಯದ ಕುರುಹಾಗಿದೆ. ಅನುಭವ, ಪಾಂಡಿತ್ಯವಿಲ್ಲದೆ, ಸಂಯುಕ್ತ ವಾದಮಾಡುವ ಸಾಮರ್ಥ್ಯವಿಲ್ಲದೆ, ಸಾಹಿತ್ಯದ ಓನಾಮದ ಪರಿಚಯ ಕೂಡಾ ಇಲ್ಲದೆ ವಿಚಾರಶೀಲ, ಕ್ರಿಯಾನಿಷ್ಠ ಲೇಖಕರ ಕೃತಿಗಳನ್ನು ಮನಸ್ಸುಬಂದಂತೆ ತೆಗಳುವ ಪುಂಡತನ ಕೊನೆಗಂಡಲ್ಲದೆ ಕನ್ನಡ ಸಾಹಿತ್ಯ ಪ್ರಗತಿಪಥದಲ್ಲಿ ಸಾಗುವುದು ಸಾಧ್ಯವಿಲ್ಲ. ಕೈಯಲ್ಲಿ ಪತ್ರಿಕೆಯಿದೆಯೆಂದು, ಬರೆದುದು ಅಚ್ಚಾಗುತ್ತದೆಯೆಂದು 'ಅಕ್ಷರ ವ್ಯಭಿಚಾರ' ಮಾಡುವ ವಿಮರ್ಶಕರ ಆಸುರೀವೃತ್ತಿ ಅಡಗಬೇಕು." ಎಂದು ಬರೆದೆ.

* 'ಚಿತ್ರ-ವಿಚಿತ್ರ' - ಮುನ್ನುಡಿ, ಪುಟ xii

'ಶನಿಸಂತಾನ' ಕಾದಂಬರಿ ಹಾಗೂ ಅದರ ಮುನ್ನುಡಿಯ ಮೇಲೆ ಆದ ಪ್ರತಿಕ್ರಿಯೆ ಮತ್ತಷ್ಟು ಉಗ್ರರೂಪ ತಾಳಿತು. 'ಶನಿಸಂತಾನ' ಕಾದಂಬರಿಯನ್ನು, ಅದರ ಲೇಖಕನನ್ನು ತೆಗಳುವುದು ಒಂದು 'ಫ್ಯಾಷನ್' ಆಯಿತು. ಎಂದು ವಿಮರ್ಶೆ ಮಾಡದಿದ್ದ ಪತ್ರಿಕೆಗಳು ವಿಮರ್ಶೆ ಮಾಡಿದವು. ವಿಮರ್ಶೆಗೆ ಪ್ರಕಾಶಕರಿಂದ ಗ್ರಂಥದ ಪ್ರತಿ ಬಾರದಿದ್ದರೂ ಕೆಲವು ಪತ್ರಿಕೆಗಳು ಗ್ರಂಥವನ್ನು ಕೊಂಡು ವಿಮರ್ಶೆ ಮಾಡಿದವು. ಗ್ರಂಥವನ್ನು ಅದರ ಲೇಖಕನನ್ನು ಮನಸ್ವೀ ನಿಂದಿಸಿದುದು ಸಾಲದೆಂದು 'ಪ್ರಗತಿಶೀಲ ಸಾಹಿತ್ಯ ಚಳುವಳಿ'ಯನ್ನು 'ಅಶ್ಲೀಲ ಸಾಹಿತ್ಯ ಚಳುವಳಿ'ಯೆಂದು ದೂಷಿಸಿದವು.

'ಶನಿ ಸಂತಾನ'ವನ್ನು ಖಂಡಿಸಿ ಕರ್ನಾಟಕದ ಕೆಲವು ಭಾಗಗಳಿಂದ ಲೇಖಕನಿಗೆ ಪತ್ರಗಳು ಬಂದವು. ಅವುಗಳಲ್ಲಿ ಕೆಲವು ವಿಮರ್ಶಕರ ಪ್ರಚೋದನೆಯ ಫಲಗಳು; ಕೆಲವು ಓದುಗರಲ್ಲಿ ಸಹಜವಾಗಿ ಮೂಡಿದ ಸಂದೇಹಗಳು. ಈ ಲೇಖಕನ ಕೃತಿಗಳ ಬಗ್ಗೆ ಅಭಿಮಾನ, ಗೌರವ ತಳೆದಿರುವ ಕೆಲವು ಓದುಗರು 'ನಗ್ನಸತ್ಯ'-'ಶನಿ ಸಂತಾನ'ದಂಥ ಕೃತಿಗಳನ್ನು 'ಸಂಧ್ಯಾರಾಗ', 'ಮಂಗಳಸೂತ್ರ', 'ಕಣ್ಣೀರು', 'ತಾಯಿಯ ಕರುಳು' ಬರೆದ ಕೈ ಬರೆಯಬಾರದಾಗಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಎರಡು ಕಾದಂಬರಿಗಳನ್ನು ದುರಭಿಮಾನದಿಂದ, ಮತ್ಸರದಿಂದ, ಸ್ವಭಾವಜಾತ್ಯ ಅಲ್ಪತನದಿಂದ ತೆಗಳಿರುವ ವಿಮರ್ಶಕರಿಗೂ, ಪತ್ರ ಲೇಖಕರಿಗೂ ನಾನು ಉತ್ತರ ಕೊಡಬೇಕಾದ ಅಗತ್ಯವಿಲ್ಲ. ಆದರೆ ಈ ಲೇಖಕನ ಕೃತಿಗಳನ್ನು ವಿಚಾರದ ತಕ್ಕಡಿಯಲ್ಲಿ ತೂಗಿನೋಡಿ, ಒಳಿತು ಕೆಟ್ಟಿತನ್ನು ನಿಷ್ಪಕ್ಷಪಾತ ಬುದ್ಧಿಯಿಂದ ನಿರ್ಣಯಿಸಲಿಚ್ಛಿಸುತ್ತಿರುವ ಓದುಗರಿಗಾಗಿ ನಾನು ಈ ಗ್ರಂಥ ಬರೆಯುತ್ತಿದ್ದೇನೆ.

೧೯೨೪ನೆಯ ಇಸವಿಯಲ್ಲಿ ಈ ಲೇಖಕನ ಮೊದಲನೆಯ ಕೃತಿ 'ಮದುವೆಯೋ-ಮನೆ ಹಾಳೋ' ನಾಟಕ ಪ್ರಕಟವಾಯಿತು. ಪ್ರಕಟವಾಗುವ ಒಂದೆರಡು ವರ್ಷ ಮೊದಲಿನಿಂದಲೂ ಅದು ಕನ್ನಡನಾಡಿನ ಎಲ್ಲ ಭಾಗಗಳಲ್ಲಿಯೂ ಹಲವು ಸಲ ಅಭಿನಯಿಸಲ್ಪಟ್ಟು ಜನತೆಯ ಪ್ರೀತಿ, ಅಭಿಮಾನಗಳನ್ನು ದೊರಕಿಸಿಕೊಂಡಿತು. ನಾಟಕಶಿರೋಮಣಿ ಎ.ವಿ. ವರದಾಚಾರ್ಯರ ಸವಾಲಿಗೆ ಜವಾಬಾಗಿ ಹುಟ್ಟಿಕೊಂಡ ಆ ನಾಟಕ ನಟಶೇಖರ ಟಿ. ರಾಘವಾಚಾರ್ಯರು ಸ್ವಯಂ-ದಿಗ್ದರ್ಶನ ಮಾಡಿ ಪ್ರದರ್ಶಿಸಿದುದಲ್ಲದೆ, ನಾಟಕದಲ್ಲಿ ಬರುವ 'ಚೋರ'ನ ಪಾತ್ರವನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದರು. ಚೋರನ ಬಾಯಲ್ಲಿ ನಾನು ಹಾಕಿರುವ ಮಾತುಗಳಲ್ಲಿ ನಿರೀಕ್ಷಿತವಾಗಿಯೊ ಅನಿರೀಕ್ಷಿತವಾಗಿಯೊ ವರ್ಗ ಸಮಸ್ಯೆಯ ಸಾರಸರ್ವಸ್ವ ಹುದುಗಿದೆ. ನನ್ನ ಮನಸ್ಸಿನಲ್ಲಿ ಅಂದು ಅಣು ಸ್ವರೂಪದಲ್ಲಿ ಹೊಳೆದ ಸತ್ಯ-ಸಾಮ್ಯವಾದದ ತತ್ತ್ವದಂತೆ ಜಗತ್ತು ವ್ಯವಸ್ಥೆಯಾದ ಹೊರತು ಗತ್ಯಂತರವಿಲ್ಲ - ಕಾಲಕಾಲಕ್ಕೆ ಸ್ಪಷ್ಟಗೊಂಡು, ಸಾಮ್ಯವಾದದ ವಿರೋಧಶಕ್ತಿಗಳ ರೀತಿನೀತಿಗಳನ್ನು ಹಲವು ಕೃತಿಗಳಲ್ಲಿ ಬಿಚ್ಚಿ ತೋರಿಸಲು ನನಗೆ ಪ್ರೇರಕವಾಯಿತು. ೧೯೨೪ ರಿಂದ ೧೯೫೧ರವರೆಗೆ- ಈ ಇಪ್ಪತ್ತೆಂಟು ವರ್ಷಗಳು ನಾನು ಮಾಡಿರುವ ದುಡಿಮೆ ಸಾಮ್ಯವಾದದ ಸತತ ಪ್ರವಾಹವಾಗಿದೆಯೆನ್ನಲು ಅಡ್ಡಿಯಿಲ್ಲ.

'ಮದುವೆಯೋ-ಮನೆಹಾಳೋ' ಕೃತಿ ಜನತೆಯ ವಿಶ್ವಾಸವನ್ನು ಅಪಾರವಾಗಿ ಗಳಿಸಿ

ಕೊಂಡರೂ ಸಾಹಿತ್ಯರಂಗದ ನಾಯಕರ ಗಮನಕ್ಕೆ ಬರಲಿಲ್ಲ. ಕೈಲಾಸಂ ಅವರ ಕೃತಿಗಳನ್ನೇ ಕಡೆಗಾಣಿಸುತ್ತಿದ್ದ ಸಾಹಿತ್ಯದೇವತೆಗಳ ಲಕ್ಷ್ಯ, ಹೊಸ ಲೇಖಕನ ಪ್ರಥಮಕೃತಿಯ ಕಡೆಗೆ ಬೀಳಬೇಕೆಂದು ನಿರೀಕ್ಷಿಸುವುದು ತಪ್ಪಾಗಬಹುದು. ೧೯೨೪ ರಿಂದ ೧೯೩೫ರವರೆಗೆ ನಾನು ಎಂಟು ಕೃತಿಗಳನ್ನು ಪ್ರಕಟಿಸಿದೆ. ೧೯೩೫ರಲ್ಲಿ ನನ್ನ 'ಸಂಧ್ಯಾರಾಗ'ದ ಪ್ರಥಮ ಆವೃತ್ತಿ ಪ್ರಕಟವಾಯಿತು. ೧೯೪೪ ರಲ್ಲಿ 'ಸಂಧ್ಯಾರಾಗ' ಎಸ್.ಎಸ್.ಎಲ್.ಸಿ. ತರಗತಿಗೆ ಪಠ್ಯಪುಸ್ತಕವಾಗಿ ಮನೆಮನೆಯಲ್ಲಿ ಮೆರೆದಾಡಿತು. ಎಂದೂ ಕನ್ನಡ ಪುಸ್ತಕಗಳನ್ನು ಕೈಯಿಂದಲೂ ಮುಟ್ಟದಿದ್ದವರೂ 'ಸಂಧ್ಯಾರಾಗ' ಓದಿದ್ದು ಮಾತ್ರವಲ್ಲದೆ, ಕನ್ನಡದಲ್ಲಿಯೂ ಜೀವಾಳವಿದೆಯೆಂಬುದನ್ನರಿತು ಕನ್ನಡ ಪುಸ್ತಕಗಳನ್ನು ಓದಲು ಮೊದಲು ಮಾಡಿದರು. ೧೯೩೫ ರಿಂದ ೧೯೫೧ರ ವರೆಗೆ 'ಸಂಧ್ಯಾರಾಗ'ದ ಐದು ಆವೃತ್ತಿಗಳು ಪ್ರಕಟವಾಗಿವೆ. ೧೩,೦೦೦ ಪ್ರತಿಗಳು ಅಚ್ಚಾಗಿವೆ. ಸುಮಾರು ಎರಡು ಲಕ್ಷ ಜನ ಈ ಗ್ರಂಥವನ್ನು ಓದಿದ್ದಾರೆ. ಲಕ್ಷಾಂತರ ಜನರಿಂದ ಕನ್ನಡದಲ್ಲಿ ಓದಿಸಿಕೊಳ್ಳುವ ಭಾಗ್ಯ ಪಡೆದ ಗ್ರಂಥ 'ಸಂಧ್ಯಾರಾಗ'ವೊಂದೇ ಎಂದರೆ ಅತಿಶಯೋಕ್ತಿಯಲ್ಲ. ಇಷ್ಟು ಜನ ಈ ಗ್ರಂಥವನ್ನು ಓದಿದರೂ ನಮ್ಮ ಸಾಹಿತ್ಯದೇವತೆಗಳಿಗೆ ಓದುವ ಆಸಕ್ತಿ ಹುಟ್ಟಲಿಲ್ಲ. ೧೯೩೪ ರಿಂದ ಈವರೆಗೆ ನಾನು ಹಲವು ಗ್ರಂಥಗಳನ್ನು ಬರೆದಿದ್ದೇನೆ. ಕಾದಂಬರಿ, ಸಣ್ಣಕಥೆ, ನಾಟಕ, ಪ್ರಬಂಧ, ಜೀವನಚರಿತ್ರೆ, ಸಾಹಿತ್ಯವಿಮರ್ಶೆ, ಕಾಲವಿಮರ್ಶೆ, ಸಂಶೋಧಕ ಗ್ರಂಥಗಳು, ಸಂಗ್ರಹಗಳು ಇತ್ಯಾದಿ. ಇವು ಯಾವುವು ನಮ್ಮ ಸಾಹಿತ್ಯದೇವತೆಗಳ ಲಕ್ಷ್ಯ ಸೆಳೆಯಲಿಲ್ಲ. ೧೯೪೪ರಲ್ಲಿ ನಾನೂ ನನ್ನ ಗೆಳೆಯರೂ ಆರಂಭಿಸಿದ 'ಪ್ರಗತಿಶೀಲ ಸಾಹಿತ್ಯ ಚಳುವಳಿ' ಮಾತ್ರ ಇವರ ಲಕ್ಷ್ಯವನ್ನು ಸೆಳೆಯಿತು. ಅಲ್ಲಿಂದ ಇಂದಿನವರೆಗೆ ಒಂದೇ ಸಮನಾಗಿ ನಡೆದಿದೆ ಅಪಪ್ರಚಾರ-ಭರ್ತ್ಸನೆ.

೧೯೪೪ರಿಂದ ನನ್ನ ಮೇಲೆ ಹಾಗೂ ಪ್ರಗತಿಶೀಲ ಲೇಖಕರ ಮೇಲೆ ಇನ್ನೊಂದು ಧಾಳಿ ಆರಂಭವಾಯಿತು. ಇದನ್ನು ಆರಂಭಿಸಿದವರು ಪುರೋಗಾಮಿ ಸಾಹಿತಿಗಳೆಂದು ಕರೆದುಕೊಳ್ಳುತ್ತಿರುವ ಶ್ರೀ ಕುಳಕುಂದ ಶಿವರಾಯರು(ನಿರಂಜನ). ತಾವೇ ಪ್ರಗತಿಶೀಲರೆಂದು ನಾವಲ್ಲವೆಂದು ಹೇಳಿಕೊಂಡು ಇವರು ಪ್ರತಿಗಾಮಿ ಸಾಹಿತಿಗಳನ್ನು ಎತ್ತಿ ಕಟ್ಟಿದರು. ಪ್ರಗತಿಶೀಲ ಸಾಹಿತ್ಯವೆಂದರೆ ಸೋವಿಯಟ್ ಸಾಹಿತ್ಯದ ಅನುವಾದವೆಂದು ಅವರು ಭಾವಿಸಿದ್ದುದೂ, ಶುದ್ಧ ದೇಶಿಯ ಸಾಹಿತ್ಯಸೃಷ್ಟಿಗೆ ನಾವು ಪ್ರಯತ್ನಿಸುತ್ತಿದ್ದುದೂ, ಭಿನ್ನಾಭಿಪ್ರಾಯಕ್ಕೆ ಕಾರಣವಾಯಿತು. ಅಂದಿನಿಂದ ಈ ಶಿವರಾಯರು ಈ ಲೇಖಕನ ಪ್ರತಿಯೊಂದು ಮಾತು, ಲೇಖನ, ಕೃತಿಗೂ ಅಪಾರ್ಥ ಕಲ್ಪಿಸಿ, ಅಪಪ್ರಚಾರ ಮಾಡುವ ಪವಿತ್ರಕಾರ್ಯ(?) ಕೈಗೊಂಡಿದ್ದಾರೆ. ಈಚೆಗೆ 'ಜನಪ್ರಗತಿ' ವಾರಪತ್ರಿಕೆಯಲ್ಲಿ (ಸೆಪ್ಟಂಬರ್ ೨ ಅಕ್ಟೋಬರ್ ೧೪-೧೯೫೧) ಇವರು ಬರೆದ ಅಸತ್ಯಪೂರ್ಣ ಲೇಖನಗಳಿಗೆ ಈ ಲೇಖಕ ಉತ್ತರ ಕೊಟ್ಟುದೂ ಆಯಿತು.

ಸಂಪ್ರದಾಯಪ್ರಿಯರಾದ ಸಾಹಿತಿಗಳೂ, ಶಿವರಾಯರಂಥ ಪ್ರತಿಗಾಮಿಗಳೂ ಒಂದಲ್ಲ ಒಂದುದಿನ ಒಟ್ಟುಗೂಡಿ ಬಹುಮುಖವಾಗಿ ಬೆಳೆಯುತ್ತಿರುವ ಕನ್ನಡ ಸಾಹಿತ್ಯದ ಪ್ರಗತಿಗೆ ಕಂಟಕರಾಗುತ್ತಾರೆನ್ನುವುದು, ಈ ಲೇಖಕನಿಗೆ ಧಾರವಾಡದಲ್ಲಿಯೇ ವ್ಯಕ್ತವಾಯಿತು.

೧೯೪೪ನೆಯ ಇಸವಿ ಡಿಸೆಂಬರ್ ತಿಂಗಳು ವಿದ್ಯಾವರ್ಧಕಸಂಘದ ಅಟ್ಟದ ಮೇಲೆ ಪ್ರೊ. ಜಾಗೀರದಾರರ ಅಧ್ಯಕ್ಷತೆಯಲ್ಲಿ ಶಿವರಾಯರು ಕರೆದಿದ್ದ ಸಭೆ, ಅವರ ಕಾರ್ಯವಿಧಾನ ನೀತಿಪ್ರಿಯತೆಗಳ ದ್ಯೋತಕವಾಗಿತ್ತು.

ಫೆಬ್ರುವರಿ ೧೯೫೨-೨, ೩ ತಾರೀಕುಗಳಲ್ಲಿ 'ಸಾಹಿತಿಗಳ ಸಂಘ ಕರೆದಿದ್ದ ಕತೆ-ಕಾದಂಬರಿಕಾರರ ಸಮ್ಮೇಳನ'ದ ಅಂಗವಾಗಿ ಕೂಡಿಸಿದ್ದ ಸಭೆ, ಧಾರವಾಡದ ಸಭೆಯ ಪ್ರತಿಧ್ವನಿ. ಕತೆಗಾರರ ಸಮ್ಮೇಳನದ ಅಧ್ಯಕ್ಷರಾಗಿ ಧಾರವಾಡದಿಂದ ಬಂದ ಶ್ರೀ ಬೆಟಗೇರಿ ಕೃಷ್ಣಶರ್ಮರು ೨ನೆಯ ತಾರೀಕು ಮಾಡಿದ ಭಾಷಣ, ೩ನೆಯ ತಾರೀಕು ಬೆಳಿಗ್ಗೆ ಕೂಡಿದ್ದ ಸಾಹಿತಿಗಳ ಸಂಘದ ಅಧಿವೇಶನದಲ್ಲಿ ಮಂಡಿಸಲ್ಪಟ್ಟ ನಿರ್ಣಯ, ಇವುಗಳಿಗೆ ಪೂರ್ವಭಾವಿಯಾಗಿ ಸ್ವಾಗತಾಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರ ಭಾಷಣ-ಎಲ್ಲವೂ ಕ್ರಿಯಾತ್ಮಕ ಸಾಹಿತ್ಯದ ಮೇಲೆ ವ್ಯವಸ್ಥಿತವಾಗಿ ನಡೆದ ಧಾಳಿಯೆನ್ನಲು ಅಡ್ಡಿಯಿಲ್ಲ.

ಶ್ರೀ ಮಾಸ್ತಿಯವರ ಭಾಷಣ

> ನಮ್ಮ ಜನಕ್ಕೆ ಇಂದು ಏನು ಬೇಕು ಎಂಬ ಅಂಶವನ್ನು ನಮ್ಮ ಲೇಖಕ, ವಿಮರ್ಶಕ ತಿಳಿಯಬೇಕಾಗಿದೆ. ಇಂಗ್ಲೆಂಡಿನಲ್ಲಿ ಹೇಳುವ ಮಾತನ್ನು ನಾವು ಇಲ್ಲಿ ನಮ್ಮ ಜನಕ್ಕೆ ಹೇಳಿದರೆ ಪ್ರಯೋಜನವಿಲ್ಲ. ನಮ್ಮ ಜನಕ್ಕೆ ಓನಾಮವನ್ನು ನಾವು ಮೊದಲು ಹೇಳಿಕೊಡಬೇಕಾಗಿದೆ. ಆರ್ಥಿಕ, ರಾಜಕೀಯ, ಸಾಮಾಜಿಕ ಮೊದಲಾದ ಅಂಶಗಳ ಬಗ್ಗೆ ಮತ್ತು ಇನ್ನೂ ಅನೇಕ ವಿಷಯಗಳ ಬಗ್ಗೆ ತಿಳುವಳಿಕೆ ಹೇಳಿಕೊಡಬೇಕಾಗಿದೆ. ಹೊರಗಿನ ಸಾಹಿತ್ಯ ಮಾಡುವ ಕೆಲಸ ಇಲ್ಲೂ ಆಗಬೇಕು. ಇಲ್ಲಿ ಆಗಬೇಕಾದ ಕೆಲಸವು ಆಗಬೇಕು. ಈ ಜನರ ಬಾಳು ಹೇಗೆ ಚೆನ್ನಾದೀತು ಎಂಬ ಅಂಶವನ್ನು ನಾವು ಗಮನದಲ್ಲಿಡಬೇಕು. ಇಂಗ್ಲೆಂಡ್, ಅಮೆರಿಕ ಮತ್ತು ರಷ್ಯದ ರೀತಿಯಲ್ಲಿ ಸಾಹಿತ್ಯ ರಚಿಸಬೇಕೆಂಬ ಮನೋಧರ್ಮ ಬೇಡ. ನಮ್ಮ ನಾಡುನುಡಿ, ಜನಪದದ ರೀತಿಯಲ್ಲಿ ಸಾಹಿತ್ಯ ರಚಿಸುವ ಮನೋಧರ್ಮ ಬೆಳೆಯಬೇಕು. (ವಿಶ್ವ ಕರ್ನಾಟಕ:೪-೨-೫೨)

ಆಧುನಿಕ ಕನ್ನಡ ಸಾಹಿತ್ಯ ಬೆಳೆಯುತ್ತಿರುವ ವಿಧಾನವನ್ನರಿಯಲು ಶ್ರೀ ಮಾಸ್ತಿಯವರು ಏನೂ ಪ್ರಯತ್ನಪಟ್ಟಿಲ್ಲವೆನ್ನುವುದು ಅವರ ಭಾಷಣದಿಂದ ವ್ಯಕ್ತವಾಗುತ್ತದೆ. ಆರ್ಥಿಕ, ರಾಜಕೀಯ, ಸಾಮಾಜಿಕ ವಿಷಯಗಳ ಮೇಲೆ ಸಾಹಿತ್ಯ ನಿರ್ಮಾಣವಾಗಬೇಕು ಎಂದು ಉಪದೇಶಿಸುತ್ತಿರುವ ಶ್ರೀ ಮಾಸ್ತಿಯವರು, ಈಗ ನಿರ್ಮಾಣವಾಗಿರುವ ಸಾಹಿತ್ಯವನ್ನು ಗಮನಿಸಿರುವರೆ? ತಮ್ಮ ಉಪದೇಶದ ಒಂದು ಅಂಶವನ್ನಾದರೂ ಕಾರ್ಯರಂಗಕ್ಕೆ ಅವರೇ ತಂದಿರುವರೇ? ಈಚೆಗೆ ಕನ್ನಡದಲ್ಲಿ ಪ್ರಕಟವಾಗಿರುವ ಅ.ನ.ಕೃ., ತ.ರಾ.ಸು, ಚದುರಂಗ, ಬಸವರಾಜ ಕಟ್ಟೀಮನಿ, ಕುಮಾರ ವೆಂಕಣ್ಣ, ಬಿಂದುಮಾಧವ ಕುಲಕರ್ಣಿ ಇವರ ಕಾದಂಬರಿಗಳು ಇಂಗ್ಲೆಂಡ್, ಅಮೆರಿಕ, ರಷ್ಯಾಗಳಲ್ಲಿ ಯಾವ ದೇಶದ ಮನೋಧರ್ಮವನ್ನು ಪ್ರತಿಬಿಂಬಿಸುತ್ತವೆಯೆಂದು ಶ್ರೀ ಮಾಸ್ತಿಯವರು ಹೇಳಬಲ್ಲರೇ? ಈಗಿನ ಲೇಖಕರ ಕೃತಿಗಳನ್ನು ಇಂಗ್ಲೆಂಡ್, ಅಮೆರಿಕ, ರಷ್ಯಾದೇಶದ ಸಾಹಿತ್ಯಗಳ ಪ್ರತೀಕವೆಂದು ಕಡೆಗಾಣಿಸುವುದಲ್ಲದೆ ಬೇರೆ ಯಾವ ಉದ್ದೇಶ ಮಾಸ್ತಿಯವರಿಗೆ ಪ್ರೇರಕವಾಗಿದೆ?

ಶ್ರೀ ಬೆಟಗೇರಿ ಕೃಷ್ಣಶರ್ಮರ ಭಾಷಣ

ಸಣ್ಣಕತೆ ದೊಡ್ಡ ಕಲಾವಿಲಾಸ. ವ್ಯಕ್ತಿಯ ಜೀವನದಲ್ಲಿ ಸಮಾಜದ ಜೀವನದಲ್ಲಿ ಒದಗುವ ಸನ್ನಿವೇಶಗಳನ್ನು ವಿಶ್ಲೇಷಣ ದೃಷ್ಟಿಯಿಂದ ನೋಡುವ ಕಣ್ಣು, ಮನಸ್ಸು ಕತೆಗಾರನಿಗಿರಬೇಕು. ಸಮಾಜಶಾಸ್ತ್ರ, ಮನಃಶಾಸ್ತ್ರಗಳ ಪರಿಚಯ ಅವನಿಗಿರಬೇಕು. ನಾಡ ಜನತೆಯ ನಾಡ ಸಂಸ್ಕೃತಿಯ ನಿಷ್ಣಾತನಾಗಿರಬೇಕು-ಅವನು. ಆದರ್ಶ ಅವಾಸ್ತವವಲ್ಲ. ತಾನು ನಿಂತ ನೆಲೆಗಿಂತ ದೂರ ಕಾಣುವುದು ಆದರ್ಶ. ಇಂದಿನ ಆದರ್ಶ ಎಂಬುದೇ ನಾಳಿನ ಸಂಪ್ರದಾಯ ದಂತೆ ಎಂಬುದನ್ನು ಕತೆಗಾರ ಕಾಣಬೇಕು. ವಾಸ್ತವಿಕತೆಯ ಹೆಸರಿನಲ್ಲಿ ಇಂದು ಹುಟ್ಟುತ್ತಿರುವ ಕನ್ನಡ ಕತೆಗಳು ಅಶ್ಲೀಲ ವಿಚಾರಗಳನ್ನು ತೋಡಿಕೊಳ್ಳಲು ಸಹಕಾರಿಯಾಗಿವೆ. ವಾಸ್ತವವಾಗಿರುವುದನ್ನು ಹೇಳುವುದರಲ್ಲಿ ದೋಷವೇನು ಎಂದು ಅಶ್ಲೀಲ ಸಾಹಿತ್ಯ ರಚನೆಯಾಗುತ್ತಿದೆ. ವಾಸ್ತವಿಕತೆ ಸ್ವಾಗತಿಸುವ ನಾವು ನೈಸರ್ಗಿಕವಾಗಿ ಬೆತ್ತಲೆಯಾಗಿ ಏಕೆ ಇರುವುದಿಲ್ಲ? ಮನೆ ತೋರಿಸಲು ಕರೆದುಕೊಂಡು ಹೋಗುವವರು ತಮ್ಮ ಮನೆಯ ಸುಂದರ ಆವರಣ ಮೊದಲು ತೋರಿಸಬೇಕು. ಮನೆಗೆ ಪ್ರವೇಶ ಮಾಡಿಸಿದೊಡನೆ ಕಕ್ಕಸು ಮನೆಯನ್ನು ಯಾರಾದರು ತೋರಿಸುವರೆ? ಹೊಸದಾಗಿ ಕತೆ ಬರೆಯಲು ತೊಡಗಿರುವ ನಮ್ಮ ತರುಣ ಸಾಹಿತಿಗಳು ಗಂಡು ಹೆಣ್ಣಿನ ಸಮಸ್ಯೆಯನ್ನೂ ಆರ್ಥಿಕ ಸಮಸ್ಯೆಯನ್ನೂ ಕುರಿತ ಕಥೆಗಳನ್ನೇ ಹೆಚ್ಚಾಗಿ ಬರೆಯುತ್ತಿದ್ದಾರೆ. ಈ ಸಮಸ್ಯೆಗಳು ಇಂದಿನವಲ್ಲ. ಆರ್ಷೇಯವಾದುವು. ಅದಕ್ಕೇ ತುಂಬ ಪ್ರಾಧಾನ್ಯತೆ ಕೊಡುವುದು ಸರಿಯಲ್ಲ. ಅಲ್ಲದೆ ಈ ಸಮಸ್ಯೆಗಳನ್ನು ಕುರಿತು ಬರೆಯುವವನಿಗೆ ನಮ್ಮ ದೇಶದ ಜನಜೀವನದ ಪೂರ್ಣಾನುಭವ ಬೇಕು. ಇದರ ಅಭಾವ ನಮ್ಮ ಕಿರಿಯ ಕತೆಗಾರರ ಕಥೆಗಳಲ್ಲಿ ಎದ್ದು ಕಾಣುತ್ತಿದೆ.

ಜನಜೀವನದಿಂದ, ನಿತ್ಯ ಸಮಸ್ಯೆಗಳಿಂದ ಎಷ್ಟು ಗಾವುದದಾಚೆ ನಿಂತು ಶ್ರೀ ಕೃಷ್ಣಶರ್ಮರು ಈ ಮಾತುಗಳನ್ನಾಡಿದ್ದಾರೆಂಬುದು ವಿಚಾರಯೋಗ್ಯವಾಗಿದೆ. ಮನೆ ತೋರಿಸಲು ಕರೆದು ಕೊಂಡು ಹೋಗುವವರು ಮನೆಯ ಸುಂದರ ಆವರಣ ಮೊದಲು ತೋರಿಸಬೇಕು-ಕಕ್ಕಸು ತೋರಿಸಬಾರದು ಎಂದು ಹೇಳುವ ಕೃಷ್ಣಶರ್ಮರು, ಕಕ್ಕಸು ಇಲ್ಲದ ಮನೆಯಲ್ಲಿಯೇ ಇಷ್ಟುದಿನ ಬಾಳುವೆ ಮಾಡಿದ್ದಾರೆಂದು ಭಾವಿಸೋಣವೇ? ಕಾಂಗ್ರೆಸ್ ಅಧಿವೇಶನಗಳಿಗೆ ಬರುತ್ತಿದ್ದ ಮಹಾತ್ಮಜೀಯವರಿಗೆ ವ್ಯವಸ್ಥಾಪಕರು ನಮ್ಮ ಕೃಷ್ಣಶರ್ಮರಂತೆ ಸುಂದರ ವಾತಾವರಣ ತೋರಿಸುತ್ತಿದ್ದರೆ, ಮಹಾತ್ಮಾಜಿ 'ಇವುಗಳು ಇರಲಿ-ಮೊದಲು ಕಕ್ಕಸು ತೋರಿಸಿ' ಎಂದು ಅತ್ತ ಧಾವಿಸಿ, ಕಕ್ಕಸುಗಳ ವ್ಯವಸ್ಥೆ ಸರಿಯಾಗಿದೆಯೋ ಇಲ್ಲವೋ ಎನ್ನುವುದನ್ನು ಪರಾಮರ್ಶಿಸುತ್ತಿದ್ದರು. ಮನೆಯಲ್ಲಿ ಕಕ್ಕಸಿನ ವ್ಯವಸ್ಥೆ ಮೊದಲು ಮಾಡದಿದ್ದರೆ ಪ್ರತಿ ಯೊಂದು ರೂಮೂ ಕಕ್ಕಸಾಗುತ್ತದೆನ್ನುವುದು ಬೆಟಗೇರಿ ಕೃಷ್ಣಶರ್ಮರಿಗೆ ಗೊತ್ತಿಲ್ಲವೇ? ಆರ್ಥಿಕ ಸಮಸ್ಯಗಳಿಗೆ ಪ್ರಾಧಾನ್ಯ ಕೊಡುವುದು ಸರಿಯಲ್ಲ ಎಂದು ಗತಕಾಲದ ಈ ಸಾಹಿತಿಗಳ ಉಪದೇಶ. ನಮ್ಮ ಜೀವನದ ಪ್ರತಿ ಉಸಿರು ಆರ್ಥಿಕ ಸಮಸ್ಯೆಗಳಿಂದ ಕೂಡಿರುವಾಗ ಸಾಹಿತಿ ಇನ್ನೇನು ಬರೆಯಬೇಕು? 'ಕಾಣದ ಕೈ'ಯಂಥ ಅಪಕ್ವ ಅಧ್ಯಾತ್ಮ ಹೇಳಿಕೊಂಡು

ತೃಪ್ತನಾಗಬೇಕೇ? `ಈ ಸಮಸ್ಯೆಗಳು ಇಂದಿನವಲ್ಲ-ತುಂಬ ಆರ್ಷೇಯವಾದುವು' ಎಂದು ಹೇಳಿರುವ ಕೃಷ್ಣಶರ್ಮರು ಪಲಾಯನಸೂತ್ರವಾದದ (Escapism) ಆದ್ಯ ಆಚಾರ್ಯರಾಗಿದ್ದರೆನ್ನುವುದರಲ್ಲಿ ಸಂದೇಹವೇ ಇಲ್ಲ. ಒಂದು ವ್ಯಾಧಿ ಬಹಳ ಹಳೆಯದೆಂದು ಅದಕ್ಕೆ ಚಿಕಿತ್ಸೆ ಮಾಡುವ ಅವಶ್ಯಕವೇ ಇಲ್ಲ. ಈ ಮಾತನ್ನು ಮ್ಯಾಡಾಂ ಕ್ಯೂರಿ, ಡಾ. ಎರ್‌ಲಿಕ್, ಡಾ. ರಾಸ್, ಹ್ಯಾವಲಾಕ್ ಎಲ್ಲಿಸ್ ಮೊದಲಾದ ಮಹಾವ್ಯಕ್ತಿಗಳು ನಂಬಿದ್ದರೆ ವೈದ್ಯಕೀಯ ವಿಜ್ಞಾನ ಇಂದು ಯಾವ ದೆಸೆಯಲ್ಲಿರುತ್ತಿತ್ತೆನ್ನುವುದನ್ನು ಓದುಗರೇ ವಿಚಾರಮಾಡಬಹುದು. ನಮ್ಮ ಜನಜೀವನದ ಪೂರ್ಣಾನುಭವ ಪಡೆದು, ನಮ್ಮ ಸಂಸ್ಕೃತಿಯ ಫಲವಾಗಿ, ನಮ್ಮ ಭವಿಷ್ಯಜೀವನದ ತೋರುಬೆಳಕಾಗಿ ಕೃಷ್ಣಶರ್ಮರ ಕಾದಂಬರಿ ಇದೆಯೆಂದು ಭಾವಿಸೋಣವೇ? ಇಷ್ಟೊಂದು ಅನುಭವ ದೊರಕಿಸಿಕೊಂಡಿರುವ ಕೃಷ್ಣಶರ್ಮರ - ಸಾಮಾಜಿಕ ಕಾದಂಬರಿಕಾರರಾಗಲು ಪ್ರಯತ್ನಿಸಿದ ಕೃಷ್ಣಶರ್ಮರ - ಪ್ರತಿಭೆಯ ಒರತೆಯೇ ಬತ್ತಿಹೋಯಿತು. `ಸುದರ್ಶನ' ಬರೆದ ಮೇಲೆ ಅವರೇಕೆ ಕಾದಂಬರಿಗೆ ಕೈ ಹಾಕಲಿಲ್ಲ? ತಾವು ಮಾಡಲಾಗದುದನ್ನು ಇತರರು ಮಾಡುತ್ತಿದ್ದರೆಂದು ಅಸೂಯೆಪಡಬೇಕೇ? ಇದು ಸಂಸ್ಕೃತಿಯ ಲಕ್ಷಣವೇ? ಇವರು ನಮ್ಮ ಕತೆಗಾರರಿಗೆ ಮಾರ್ಗದರ್ಶನ ಮಾಡುವ ಸಾಹಿತಿಗಳು.

ಈ ಸಮ್ಮೇಳನಗಳ ಕೀರ್ತಿ ಕಳಶವೆಂದರೆ ಫೆಬ್ರುವರಿ ೨ ನೆಯ ತಾರೀಕು `ಸಾಹಿತಿಗಳ ಸಂಘ' ಮಾಡಿದ ನಿರ್ಣಯ.

> ಕನ್ನಡ ಕತೆಗಾರರು ಕಾದಂಬರಿಕಾರರು ಸಾಮಾನ್ಯವಾಗಿ ಬರಹಗಾರರೆಲ್ಲಾ-ಕಾಮೋದ್ದೀಪಕ ಸಾಹಿತ್ಯ ರಚಿಸಿ ನಮ್ಮ ನಾಡಿನ, ದೇಶದ ಸಂತಾನಕ್ಕೆ ಕೆಡಕಾಗುವಂತೆ ಮಾಡಬಾರದೆಂದು ಈ ಕನ್ನಡ ಸಣ್ಣ ಕತೆಗಾರರ ಮತ್ತು ಕಾದಂಬರಿಕಾರರ ಸಮ್ಮೇಳನ ಬರಹಗಾರರಲ್ಲಿ ಮನವಿಮಾಡಿಕೊಳ್ಳುತ್ತದೆ.

ಈ ನಿರ್ಣಯ ಮಂಡಿಸಿದವರು ತಿಪಟೂರಿನ ಶ್ರೀ ವೆಂಕಟಾಚಲ ಅವರು. ಸಮರ್ಥಿಸಿದವರು ಶ್ರೀ ಕುಳಕುಂದ ಶಿವರಾಯರು. ವಿರೋಧಿಸಿದವರು ಕಾದಂಬರಿಕಾರರ ಸಮ್ಮೇಳನದ ಅಧ್ಯಕ್ಷರಾದ ಶ್ರಿ ದೇವುಡು ನರಸಿಂಹ ಶಾಸ್ತ್ರಿಗಳು, ವಿದ್ಯಾಭೂಷಣ ದ.ಕೃ. ಭಾರದ್ವಾಜರು, ಶ್ರಿ ಮತಿಘಟ್ಟ ಕೃಷ್ಣಮೂರ್ತಿ, ಶ್ರೀ ಡಿ.ಎಸ್. ರಾಮು, ಶ್ರೀ ಬಿ.ಎಸ್. ವೆಂಕಟರಾಮ್. ಅಂದಿನ ಸಭೆಯಲ್ಲಿದ್ದವರು ಸುಮಾರು ೨೫ ಜನ. ಕೆಲವು ಸಾಹಿತಿಗಳು, ಕಾಲೇಜ್ ಉಪಾಧ್ಯಾಯರು ತಟಸ್ಥರಾಗಿದ್ದರು. ಉಳಿದವರು ನಿರ್ಣಯ ಅನುಮೋದಿಸಿದರು. ಸಭೆಯಲ್ಲಿ ಈ ನಿರ್ಣಯ ಬರುವ ವಿಷಯ ಸಾಹಿತಿಗಳ ಸಂಘದ ಸದಸ್ಯರಿಗಾಗಲಿ, ಸಾಹಿತಿಗಳಿಗಾಗಲಿ, ಸಾರ್ವಜನಿಕರಿಗಾಗಲಿ ಪತ್ರಿಕೆಗಳ ಮೂಲಕ ತಿಳಿಯಬಂದಿರಲಿಲ್ಲ. ಭಿನ್ನಾಭಿಪ್ರಾಯಕ್ಕೆ ಅವಕಾಶವು ಈ ನಿರ್ಣಯವನ್ನು ಪೂರ್ವಸೂಚನೆ ಕೊಡದೆ, ಅವಸರವಸರವಾಗಿ `ಆಯಿತು' ಎನಿಸಿಕೊಂಡವರ ಉದ್ದೇಶ ಸಾಧುವಾದುದೇ? ಅಂದಿನ ಸಭೆ ಸಾಹಿತಿಗಳ ಸಭೆಯು ಆಗಿರಲಿಲ್ಲ, ಪ್ರಾತಿನಿಧಿಕವು ಆಗಿರಲಿಲ್ಲ. ಇಂದಿನ ಕತೆ ಕಾದಂಬರಿಗಳ ಬೆಳವಣಿಗೆಗೆ ವಿಶೇಷವಾಗಿ ದುಡಿಮೆ ಮಾಡಿರುವ ಲೇಖಕರು ಅಲ್ಲಿ ಇರಲಿಲ್ಲವೆಂಬುದು ಗಮನಿಸಬೇಕಾದ ವಿಷಯ.

ಸಮ್ಮೇಳನದಲ್ಲಿ ನಿರ್ಣಯ ತಂದವರು, ಅವರನ್ನು ಪ್ರೇರೇಪಿಸಿದವರು, 'ಅಶ್ಲೀಲ-ಕಾಮಪ್ರಚೋದಕ' ಶಬ್ದಗಳ ಅರ್ಥ ತಿಳಿಯದೆ ತೊಳಲಾಡಿದರು. ಅವರಾಗಲಿ, ಅವರ ಮಹಾತ್ಕಾರ್ಯವನ್ನು ಸಮರ್ಥಿಸುತ್ತಿರುವ ಪೌರವಾಣಿ, ಪ್ರಜಾವಾಣಿ ಪತ್ರಿಕೆಗಳ ಸಂಪಾದಕರಾಗಲಿ ಅಶ್ಲೀಲ ಕಾಮಪ್ರಚೋದಕ ಸಾಹಿತ್ಯವೆಂದರೇನು ಎಂದು ತಿಳಿಸುವ ಪ್ರಯತ್ನಮಾಡಿಲ್ಲ. ಈ ನಿರ್ಣಯ, ಈ ಪ್ರಧಾನ ಲೇಖನಗಳು ಒಬ್ಬ ವ್ಯಕ್ತಿಯನ್ನು ಅವನ ಒಂದೆರಡು ಕೃತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಾಹಿತ್ಯ ಸಂರಕ್ಷಣೆ, ಜನಾಂಗದ ನೀತಿರಕ್ಷಣೆ, ನಾಡಿನ ಹಿತ ರಕ್ಷಣೆಗಳ ಸೋಗು ಹಾಕಿಕೊಂಡು ಹೊರಟಿರುವುದು ಸ್ವತಃಸ್ಸಿದ್ಧವಾಗಿದೆ. ನೀತಿಪ್ರವಾದಿಗಳಾಗಿ ಹೊರಟಿರುವ ಈ ಸಂಪಾದಕರು ತಮ್ಮ ಪತ್ರಿಕೆಗಳಲ್ಲಿ ಸಿನೀಮಾ ರಾಣಿಯರ ಬೆಡಗು ಬಿನ್ನಾಣ, ವೈಯ್ಯಾರ ವೈಖರಿಗಳನ್ನೂ, ಸಂತಾನ ಪ್ರತಿಬಂಧಕ ಗುಳಿಗೆ, ಲಿಂಗ ಕವಚಗಳ ಜಾಹಿರಾತುಗಳನ್ನೂ ಏಕೆ ಪ್ರಕಟಿಸುತ್ತಿದ್ದಾರೆ? ಬೆಂಗಳೂರು, ಮದರಾಸುಗಳಿಂದ ಸಂಖ್ಯಾತೀತವಾಗಿ ಪ್ರಕಟವಾಗುತ್ತಿರುವ ಹೊಲಸು ಪತ್ರಿಕೆಗಳ ಮೇಲೆ ಯಾವಾಗ ಧ್ವನಿಯೆತ್ತಿದ್ದಾರೆ? ಬೀದಿ ಬೀದಿಗಳ ಗೋಡೆಗಳ ಮೇಲೆ ಮೆರೆದಾಡುವ ಸಿನೀಮಾ ರಾಣಿಯರ ಅರ್ಧನಗ್ನ ಚಿತ್ರಗಳ ಮೇಲೆ, ಮನೆಮನೆಯಲ್ಲಿ ಮೆರೆದಾಡುವ ಹೊಲಸು ಸಿನೀಮಾಗೀತೆಗಳ ಮೇಲೆ, ಯಾವಾಗ ಚಕಾರ ಶಬ್ದವನ್ನೆತ್ತಿದ್ದಾರೆ? ನಮ್ಮ ನಾಡಿನ ಸಾಹಿತ್ಯಕ್ಕೆ, ಜನಜೀವನಕ್ಕೆ, ವಿಚಾರ ಪ್ರಚೋದನೆಗೆ, ಪಾಮರ ಪ್ರಬೋಧನೆಗೆ ಈ ಮಹನೀಯರ ಸೇವೆಯೇನು ನಡೆದಿದೆಯೆನ್ನುವುದನ್ನಾದರೂ ಅಪ್ಪಣೆ ಕೊಡಿಸಲಿ.

'ಪ್ರಜಾವಾಣಿ' ಸಂಪಾದಕರಿಗೆ ತಾವು ಪ್ರತಿಪಾದಿಸುತ್ತಿರುವ ತತ್ತ್ವದ ನಿಲುವಿನ ಬಗ್ಗೆಯೇ ನಂಬಿಕೆಯಿಲ್ಲವೆಂಬುದು ಅವರ ಒಂದು ವಾಕ್ಯದಿಂದ ಸ್ಪಷ್ಟವಾಗುತ್ತದೆ. 'ಬೋಧಕ ಕಥಾವಸ್ತುವಿನ ನಿರೂಪಣೆಯ ಮಧ್ಯದಲ್ಲಿ ಕತೆಯ ಗುರಿಗೆ ನೆರವು ನೀಡುವ ಸತ್ಯಾಂಶ ಚಿತ್ರಕ್ಕೆ ನಿಷೇಧ ಅನುಚಿತವಾದೀತು. ಆದರೆ ಕಾಮಪ್ರಚೋದನೆಯೇ ಗುರಿಯಾಗಿ ಉಳ್ಳ ಸಾಹಿತ್ಯಸೃಷ್ಟಿಗೆ ಉತ್ತೇಜನ ನೀಡುವುದು ಹಾನಿಕರ', ತಾವು ಪ್ರತಿಪಾದಿಸುತ್ತಿರುವ ಈ ತತ್ವದಲ್ಲಿ 'ಪ್ರಜಾವಾಣಿ' ಸಂಪಾದಕರಿಗೆ ನಂಬಿಕೆಯಿದ್ದರೆ, ಅವರು 'ನಗ್ನಸತ್ಯ' 'ಶನಿಸಂತಾನ' ಗ್ರಂಥಗಳ ಮೇಲೆ ಸತತ ಅಪಪ್ರಚಾರ ನಡೆಸುತ್ತಿರಲಿಲ್ಲ.

೧೯೪೪ರಲ್ಲಿ ಆರಂಭವಾದ 'ಪ್ರಗತಿಶೀಲ ಸಾಹಿತ್ಯ ಚಳುವಳಿ'ಯ ಮೇಲೆ ಇದೇ ಬಗೆಯ ಅಪಪ್ರಚಾರ ನಡೆದುದು ಓದುಗರ ನೆನಪಿನಲ್ಲಿರಬಹುದು. ಎಂಟು ವರ್ಷಗಳ ತರುವಾಯ ಆ ಅಪಪ್ರಚಾರವೇ - ಆ ಪ್ರತಿಗಾಮಿತ್ವವೇ ಮರುಕಳಿಸಿ 'ನಗ್ನಸತ್ಯ'-'ಶನಿಸಂತಾನ'(ಮತ್ತು ಇತರ ಪ್ರಗತಿಶೀಲ ಲೇಖಕರ ಕೃತಿಗಳನ್ನು) ವ್ಯಾಜ ಮಾಡಿಕೊಂಡು, ಮತ್ತೆ ಪ್ರಗತಿಶೀಲ ಲೇಖಕರ ಮೇಲೆ ಆಘಾತ ಮಾಡಹೊರಟಿರುವುದು ವಿಷಾದಕರವಾಗಿದೆ.

ಸಾಹಿತ್ಯ ಹಾಗಿರಬೇಕು, ಹೀಗಿರಬೇಕು; ಅದರಲ್ಲಿ ಇಂಥ ವಿಷಯಗಳಿರಬಾರದು, ಇಂಥ ವಿಷಯಗಳಿರಬೇಕು ಎಂದು ಔನ್ಸ್ ಗ್ಲಾಸ್, ಇಂಚುಪಟ್ಟಿ ಹಿಡಿದು ಹೊರಟಿರುವ ಸಾಹಿತಿಗಳಿಂದ, ಈ ಎಂಟು ವರ್ಷಗಳಲ್ಲಿ ಗಣ್ಯವಾದ ಯಾವ ಕೃತಿಯ ನಿರ್ಮಾಣವು ಆಗಿಲ್ಲ.

ಕನ್ನಡ ನಾಡವರ ಹಾಗೂ ಹೊರಗಿನವರ ಗಮನಸೆಳೆಯುವಂಥ ಸಾಹಿತ್ಯ ಸೃಷ್ಟಿಮಾಡಿರುವ (ಮತ್ತು ಮಾಡುತ್ತಿರುವ) ಪ್ರಗತಿಶೀಲ ಲೇಖಕರ ಮೇಲೆ ಅವ್ಯಾಹತವಾಗಿ ನಡೆದಿರುವ ಧಾಳಿ, ಧಾಳಿಕಾರರ ಪ್ರತಿಭಾದಾರಿದ್ರ್ಯವನ್ನೂ, ನೈತಿಕಪತನವನ್ನೂ ಎತ್ತಿ ತೋರುತ್ತಿದೆ.

೩

'ಕನ್ನಡ ಕತೆಗಾರರು, ಕಾದಂಬರಿಕಾರರು ಸಾಮಾನ್ಯವಾಗಿ ಬರಹಗಾರರೆಲ್ಲಾ-ಕಾಮೋದ್ದೀಪಕ ಸಾಹಿತ್ಯ ರಚಿಸಿ ನಮ್ಮ ನಾಡಿನ ಸಂತಾನಕ್ಕೆ ಕೆಡಕಾಗುವಂತೆ ಮಾಡಬಾರದೆಂದು' ಕನ್ನಡ ಕತೆ-ಕಾದಂಬರಿಕಾರರ ಸಮ್ಮೇಳನ ಮನವಿಮಾಡಿಕೊಂಡಿದೆ. ಯಾವ ಬಗೆಯ ಸಾಹಿತ್ಯ ಓದುವುದರಿಂದ ಯಾರಿಗೆ ಕೆಡುಕುಂಟಾತ್ತದೆಯೆಂದು ಮನವಿ ವಿವರಿಸಿಲ್ಲ. ಈ ನಿರ್ಣಯ, ಅದರ ಹಿಂದಿನ ಮನೋಭಾವಗಳಲ್ಲಿರುವ ದೋಷಗಳನ್ನು ಪರಿಶೀಲಿಸಬೇಕು.

೧) ಸಂತಾನವೆಂದರೇನು? ತಾಯಿಯ ಗರ್ಭದಲ್ಲಿರುವ ಪಿಂಡವೇ ಅಥವಾ ಬ್ರಹ್ಮಾಂಡದಲ್ಲಿರುವ ಸಕಲ ಚರಾಚರ ಸೃಷ್ಟಿಯೇ?

೨) ಕಾಮೋದ್ದೀಪಕ ಸಾಹಿತ್ಯವನ್ನು ಓದುವುದರಿಂದ ೮-೧೦ ವರ್ಷದ ಮಗುವಿಗೆ ಕಾಮ ಪ್ರಚೋದನೆಯಾಗುತ್ತದೆಯೇ? ೬೦-೭೦ ವರ್ಷದ ಮುದುಕರಿಗೆ ಕಾಮಪ್ರಚೋದನೆಯಾಗುತ್ತದೆಯೇ? ಯಾವಬಗೆಯ ಸಾಹಿತ್ಯ ಓದುವುದರಿಂದ ಯಾವ ವಯಸ್ಸಿನವರಿಗೆ ಕಾಮ ಪ್ರಚೋದನೆಯಾಗುತ್ತದೆ.

೩) ಜನ್ನನ 'ಯಶೋಧರ ಚರಿತೆ', ಹರಿಹರನ 'ಗಿರಿಜಾಕಲ್ಯಾಣ', ಲಕ್ಷ್ಮೀಶನ 'ಜೈಮಿನಿ ಭಾರತ' ಅನೇಕ ತರಗತಿಗಳಿಗೆ ಪಠ್ಯಪುಸ್ತಕವಾಗಿದ್ದವು. ಅವುಗಳನ್ನೋದಿದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಆಗಿರುವ ಕಾಮ ಪ್ರಚೋದನೆ ಎಂಥದು? ಆ ಕಾಮಪ್ರಚೋದನೆಯಿಂದ ಆಗಿರುವ ಅನರ್ಥಗಳು ಯಾವುವು?

೪) ಕನ್ನಡ ನಾಡಿನಲ್ಲಿ ಕನ್ನಡ ಬಲ್ಲವರು, ಓದುವವರು ಇರುವಂತೆ ಇಂಗ್ಲಿಷ್, ಹಿಂದಿ, ಮರಾಠಿ, ತೆಲುಗು, ತಮಿಳು, ಮಲೆಯಾಳಿ, ಉರ್ದು, ಸಂಸ್ಕೃತ ಭಾಷೆ ಬಲ್ಲವರು, ಓದುವವರು ಇದ್ದಾರೆ. ಆ ಭಾಷಾ ಸಾಹಿತ್ಯಗಳನ್ನೋದಿದವರಿಗೆ ಕಾಮಪ್ರಚೋದನೆಯಾಗುವುದಿಲ್ಲವೇ? ಅಂಥವರ ವಿಷಯ ಕತೆ-ಕಾದಂಬರಿಕಾರರ ಸಮ್ಮೇಳನದವರು ಏನು ಮಾಡಲು ನಿಶ್ಚಯಿಸಿದ್ದಾರೆ?

೫) ಹಿಂದೂ ಮದುವೆಗಳಲ್ಲಿ, ಹಬ್ಬಗಳಲ್ಲಿ ಪಠಿಸಲ್ಪಡುವ ಮಂತ್ರಗಳಲ್ಲಿ ಕಾಮಪ್ರಚೋದನೆ ಅಡಕವಾಗಿದೆಯಲ್ಲಾ-ಬೈಬಲ್ ತುಂಬ ಕಾಮ ಪ್ರಚೋದಕ ವಿಷಯ ನಿರೂಪಣೆ ಇದೆಯಲ್ಲಾ- ರತ್ನಾಕರವರ್ಣಿಯ 'ಭರತೇಶ ವೈಭವ' ಕಾವ್ಯವನ್ನು ಜೈನರು ಮನೆಗಳಲ್ಲಿ ಪಾರಾಯಣ ಮಾಡುವರಲ್ಲಾ-ಇದನ್ನು ತಡೆಗಟ್ಟುವ ಬಗೆ ಹೇಗೆ?

ನ್ಯೂಯಾರ್ಕಿನ ನ್ಯಾಯಸ್ಥಾನಗಳು ಕೆಲವು ಸೂತ್ರಗಳ ಮಾನದಂಡದ ಮೇಲೆ ಗ್ರಂಥದ ಶೀಲಾಶ್ಲೀಲತೆಯನ್ನು ನಿರ್ಣಯಿಸಲೆತ್ನಿಸುತ್ತವೆ:

೧) ಗ್ರಂಥ ಉದ್ರೇಕವನ್ನುಂಟುಮಾಡುತ್ತದೋ? ವಿಕರ್ಷಣೆಯನ್ನುಂಟುಮಾಡುತ್ತದೋ?

೨) ಗ್ರಂಥದ ಉದ್ದೇಶ ನೈತಿಕವಾಗಿದೆಯೇ?

೩) ಗ್ರಂಥ ಜೀವನದ ಸತ್ಯವನ್ನು ಸರಿಯಾಗಿ ನಿರೂಪಿಸುತ್ತದೆಯೇ?

೪) ಗ್ರಂಥಕರ್ತನ ಉದ್ದೇಶ ಸಾಧುವಾದುದೇ?

೫) ಭಾಷೆ ಗಂಭೀರವಾಗಿದೆಯೇ?

ಉದ್ರೇಕಕರವಾದ ಗ್ರಂಥಗಳನ್ನು ವಿಮರ್ಶಿಸುವಾಗ ಮತ್ತೆ ಕೆಲವು ಸೂತ್ರಗಳನ್ನಿಟ್ಟುಕೊಂಡಿವೆ.

೧) ಯಾರನ್ನು ಗ್ರಂಥ ಉದ್ರೇಕಗೊಳಿಸಬಲ್ಲುದು?

ಅ) ಮಗು ಆ) ಮನೋರೋಗಪೀಡಿತ ಇ) ಸಾಧಾರಣ ಮನುಷ್ಯ.

೨) ಉದ್ರೇಕವಾಗುವ ಪರಿಣಾಮವೆಂಥದು?

ಅ) ವಿಷಯಸಂಬಂಧ ಭಾವನೆ ಆ)ಮುಷ್ಠಿಮೈಥುನ ಇ) ಸಂಭೋಗ ತೃಪ್ತಿ

'ಕಾಮ ಪ್ರಚೋದನೆ'-'ಅಶ್ಲೀಲ' ಶಬ್ದಗಳನ್ನು ಸಾಹಿತ್ಯಕೃತಿಗಳಿಗೆ ಅನ್ವಯಿಸುವವರಿಗೆ ನಾನು ಕೆಲವು ಪ್ರಶ್ನೆಗಳನ್ನು ಕೇಳಬೇಕಾಗಿದೆ.

೧) ಗಂಡು ಹೆಣ್ಣಿನ ಸಂಬಂಧವನ್ನು ಸಾಹಿತ್ಯದಲ್ಲಿ ತರುವುದು ಅಶ್ಲೀಲವೇ?

೨) ವೈವಾಹಿಕ ಸಂಭೋಗವನ್ನು ವರ್ಣಿಸುವುದು ಅಶ್ಲೀಲವೋ-ಅವೈವಾಹಿಕ ಸಂಭೋಗವನ್ನು ವರ್ಣಿಸುವುದು ಅಶ್ಲೀಲವೋ?

೩) ಗಂಡು ಹೆಣ್ಣನ್ನು ಮಲಗುವ ಮನೆಯವರೆಗೆ ಕರೆತಂದು ಅಲ್ಲಿ.. ನಕ್ಷತ್ರ ಚಿನ್ಹೆ ಹಾಕಿ ಮುಂದೆ ಹೋಗುವುದು ಕಾಮಪ್ರಚೋದನೆಯನ್ನುಂಟುಮಾಡುತ್ತದೋ, ಮಲಗುವ ಮನೆಯಲ್ಲಿ ನಡೆಯುವುದನ್ನು ವರ್ಣಿಸುವುದರಿಂದ ಕಾಮಪ್ರಚೋದನೆಯಾಗುತ್ತದೆಯೋ?

೪) ವೇಶ್ಯಾಜೀವನವನ್ನು ವರ್ಣಿಸುವುದು ಅಶ್ಲೀಲವೇ?

೫) ವೇಶ್ಯಾಜೀವನವನ್ನು ವರ್ಣಿಸುವಾಗ ಅದನ್ನು ಉದಾತ್ತ ಶೃಂಗಾರವೆಂದು ವರ್ಣಿಸಿದರೆ ಅಶ್ಲೀಲವೋ- ಅದರ ಭೀಭತ್ಸ ಚಿತ್ರವನ್ನು ಇದ್ದಕ್ಕಿದ್ದಂತೆ ವರ್ಣಿಸಿದರೆ ಅಶ್ಲೀಲವೋ?

೬) ತೆರೆಯ ಮರೆಯಲ್ಲಿ ನಡೆಯುವ ವಿಕೃತಕಾಮ, ಅನೈಸರ್ಗಿಕ ಶೃಂಗಾರ ವಿವರಿಸಿದರೆ ಅಶ್ಲೀಲವೇ?

೭) ಗುಪ್ತಾಂಗರೋಗಗಳು, ಅವುಗಳಿಂದ ವ್ಯಕ್ತಿಗೆ, ರಾಷ್ಟ್ರಕ್ಕೆ ಆಗುತ್ತಿರುವ ಹಾನಿಯನ್ನು ವಿವರಿಸಿದರೆ ಅಶ್ಲೀಲವೇ?

೮) ವಿವೇಚನಾರಹಿತ ಆಚರಣೆಗಳು, ಮೂಢನಂಬಿಕೆಯಿಂದ ಪ್ರೇರಿತವಾದ ಮತಪ್ರಕ್ರಿಯೆಗಳನ್ನು ವರ್ಣಿಸಿದರೆ ಅಶ್ಲೀಲವೆ?

೯) ಜೀವಶಾಸ್ತ್ರ, ಪ್ರಾಣಿಶಾಸ್ತ್ರ, ಮನಃಶಾಸ್ತ್ರಗಳಲ್ಲಿ ವರ್ಣಿಸಲ್ಪಡುವ ಶೃಂಗಾರ, ಮೈಥುನಕ್ರಿಯೆ ಅಶ್ಲೀಲವೋ ಶೀಲವೋ?

ಯಾವ ಸಾಹಿತ್ಯಕೃತಿಯನ್ನೂ ಶೀಲಾಶ್ಲೀಲಗಳ ಮಾನದಂಡದಿಂದ ಅಳೆಯಲು ಸಾಧ್ಯವಿಲ್ಲವೆಂದು ತೋರಿಸಲು ಈ ಪ್ರಶ್ನೆಗಳನ್ನು ರೂಪಿಸಿದ್ದೇನೆ.

ಸಾಹಿತ್ಯದಲ್ಲಿ ಕೆಲವು ಶಬ್ದಗಳನ್ನು ಉಪಯೋಗಿಸಿದರೆ ಅಶ್ಲೀಲವೆಂಬ ವಾದ ಕೆಲವು ವರ್ಷಗಳ ಹಿಂದೆ ಪ್ರತಿಪಾದಿಸಲ್ಪಟ್ಟಿತು. ಶ್ರೀ ಜಿ. ಪಿ. ರಾಜರತ್ನಂ ಅವರು ತಮ್ಮ ಒಂದು ಕೃತಿಯಲ್ಲಿ 'ತಾಯಿಗ್ಗಂಡ' ಎಂಬ ಶಬ್ದವನ್ನುಪಯೋಗಿಸಿದ್ದರು. ಸಂಸ್ಕೃತ ಪಂಡಿತರು ಸಂಸ್ಕೃತ ಮಹಾ ಪಾಠಶಾಲೆಯಲ್ಲಿ (ಶೃಂಗೇರಿಮಠದ) ಪಂಡಿತರತ್ನಂ ಗೋಪಾಲಕೃಷ್ಣಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ವಿಷಯವನ್ನು ಚರ್ಚಿಸಿದರು. ಅಂದಿನ ಸಭೆಗೆ ಹೋಗಿದ್ದ ನಾನು ರಾಜರತ್ನಂ ಅವರ ಪರ ವಾದ ಮಾಡಿದೆ. ನಿರ್ಣಯ ಬಿದ್ದು ಹೋಯಿತು. ಶ್ರೀ ತ.ರಾ.ಸು. ಅವರ ಕೃತಿಗಳ ಮೇಲೆ ಇದೇ ಬಗೆಯ ಅಪಾದನೆ ಬರುತ್ತಲೇ ಇದೆ. ಮಾಮ್, ಹೆಮಿಂಗ್ ವೇ, ನಾರ್ಮನ್ ಮೇಲರ್ ಮೊದಲಾದ ವಿಶ್ವವಿಖ್ಯಾತ ಲೇಖಕರು, ನಿಜಜೀವನದಲ್ಲಿ ಪ್ರಚಾರದಲ್ಲಿರುವ ಯಾವ ಶಬ್ದವು ಅಯೋಗ್ಯವೆಂದು ಭಾವಿಸದೆ ಉಪಯೋಗಿಸುತ್ತ ಬಂದಿದ್ದಾರೆ. ಜನಸಾಮಾನ್ಯ 'ಶಬ್ದಮಣಿದರ್ಪಣ' ಉರುಹೊಡೆದು ಸಂಭಾಷಣೆ ನಡೆಸುತ್ತಿಲ್ಲವಷ್ಟೇ! ಅವರ ಮಾತುಕತೆಯಲ್ಲಿ ನೂರಾರು ಅಶ್ಲೀಲವೆನಿಸುವ ಶಬ್ದಗಳು ಉಪಯೋಗಿಸಲ್ಪಡುತ್ತವೆ. ಜನಸಾಮಾನ್ಯರ ಜೀವನವನ್ನು ನಿರೂಪಿಸುವಾಗ ಅವರ ಭಾಷೆಯನ್ನೇ ಉಪಯೋಗಿಸದಿದ್ದರೆ ಕೃತಿ ಕೃತಕವಾಗುತ್ತದೆ. ಇಂದು 'ಬೋಳೀಮಗನೆ, ಸೂಳೇಮಗನೆ, ಅವರವ್ವನ, ಭಾಡ್ಯೋ' ಶಬ್ದಗಳು ಧಾರಾಳ ಪ್ರಯೋಗಕ್ಕೊಳಗಾಗಿ ತಮ್ಮ ಖಾರವನ್ನೇ ಕಳೆದುಕೊಂಡಿವೆ.

ಜೀವನಕ್ಕೆ ಅಳವಟ್ಟ ಪ್ರತಿಯೊಂದು ಕ್ರಿಯೆಯೂ, ಅನುಭವವೂ, ವಿಚಾರವೂ ಸಾಹಿತ್ಯದ ವಸ್ತುವಾಗಬಲ್ಲದೆಂದು ಸಾಹಿತ್ಯದ ನಿಜಸ್ವರೂಪ ಬಲ್ಲವರೆಲ್ಲರ ಅಭಿಪ್ರಾಯ. ಕಲೆಯನ್ನೂ ನೀತಿಯನ್ನೂ ಬೆರಸಿ, ನೀತಿಯ ಮಾನದಂಡದಿಂದ ಕಲೆಯನ್ನಳೆಯುವುದು ಎಷ್ಟು ಹಾಸ್ಯಾಸ್ಪದ ವೆನ್ನುವುದನ್ನು ಅಮೇರಿಕೆಯ ಪ್ರಸಿದ್ಧ ವಿಮರ್ಶಕರಾದ ಜೋಯೆಲ್ ಇಲಿಯಾಸ್ ಸ್ಪಿಂಗಾರ್ನ್ ಚೆನ್ನಾಗಿ ವಿವರಿಸಿದ್ದಾರೆ.

> ನಮ್ಮಲ್ಲಿ ಅನೇಕರು ಕಲೆ ಮತ್ತು ನೀತಿಯನ್ನು ಬೆರಸುತ್ತಾರೆ. ಕಾವ್ಯ ನೀತಿಮಯವಾಗದೆ, ಅನೀತಿಮಯವಾಗಿದೆ ಎನ್ನುವುದು ಈಕ್ವಿಲೇಟರಲ್ ತ್ರಿಕೋಣ ನೀತಿಮಯವಾಗಿದೆ, ಐಸಾಸಿಲೀಸ್ ತ್ರಿಕೋಣ ಅನೀತಿಮಯವಾಗಿದೆ ಎಂದು ಹೇಳಿದಂತಾಗುತ್ತದೆ. ವಸ್ತುವಿಗೆ ಅನುಗುಣವಾಗದ ಮಾನದಂಡದಿಂದ ಅದನ್ನು ಅಳೆಯುವುದರ ಅವಿವೇಕವನ್ನು ನಾವು ಗ್ರಹಿಸಬೇಕು. ಊಟದ ಮೇಜಿನ ಮುಂದೆ ಈ ಬಗೆಯ ಸಂಭಾಷಣೆಯಾದರೆ ಹೇಗಿರುತ್ತದೆ ನೋಡಿ. ಈ ಕಾಲಿಫ್ಲವರನ್ನು ಅಂತರರಾಷ್ಟ್ರೀಯ ನ್ಯಾಯದ ಪ್ರಕಾರ ತಯಾರಿಸಿದ್ದರೆ ಅದು ಹೆಚ್ಚು ರುಚಿಕರವಾಗುತ್ತಿತ್ತು. ನಮ್ಮ ಅಡಿಗೆಯವನ ಪಾಕ ಏತಕ್ಕೆ ಚೆನ್ನಾಗಿರುತ್ತದೆ ಗೊತ್ತೇನು? ಅವನು ಸುಳ್ಳು ಹೇಳಿಲ್ಲ ಮತ್ತು ಯಾವ ಹೆಂಗಸನ್ನೂ ಕೆಡಿಸಿಲ್ಲ. ಈ ಬಗೆಯ ವಾದ ಎಷ್ಟು ಸಮಂಜಸವಾಗಿರುತ್ತದೆಂಬುದನ್ನು ಯೋಚಿಸಬಹುದು. ಇಂಜನಿಯರ್ ಕಟ್ಟುವ ಸೇತುವೆಯನ್ನಾಗಲಿ ವಿಜ್ಞಾನಿಯ ಸಂಶೋಧನೆಗಳನ್ನಾಗಲಿ ನಾವು ಪರೀಕ್ಷಿಸುವಾಗ ಅವರ ನೀತಿಯನ್ನು ಕುರಿತು ವಿಚಾರ ಮಾಡುವುದಿಲ್ಲ. ಅದಕ್ಕೆ ಪ್ರತಿಷೇಧವಾಗಿ ಸತ್ಯಶೋಧನೆಯಲ್ಲಿ ನೀತಿಯನ್ನು ನಿರ್ಲಕ್ಷಿಸುವುದು ವಿಜ್ಞಾನಿಯ ನೈತಿಕಧರ್ಮವೆಂದು

ಹೇಳುತ್ತೇವೆ. ಮಾನವನಾಗಿ ಅವನನ್ನು ನೈತಿಕ ಮಾನದಂಡದಿಂದ ಅಳೆಯುವುದು. ಆದರೆ ಅವನ ನಿರ್ಣಯಗಳನ್ನು ವಿಜ್ಞಾನದ ಮಾನದಂಡದಿಂದಲೇ ಅಳೆಯಬೇಕಾಗುತ್ತದೆ. ಸೌಂದರ್ಯದ ಜಗತ್ತು ಈ ಮಾನದಂಡಗಳಿಂದ ಬಹಳ ದೂರ. ಆಕೆ ಸತ್ಯವನ್ನೂ ಅರಸುವುದಿಲ್ಲ, ನೀತಿಯನ್ನೂ ಬೋಧಿಸುವುದಿಲ್ಲ. ಆಕೆಯ ಕಾಲ್ಪನಿಕ ಸೃಷ್ಟಿಗೆ ವಾಸ್ತವತೆಯ ಸೋಗು ಹಾಕಿರುವುದಿಲ್ಲ. ಆದ್ದರಿಂದ ವಾಸ್ತವತೆಯ ಮಾನದಂಡದಿಂದ ಅದನ್ನು ಅಳೆಯಲಾಗುವುದಿಲ್ಲ. ಕಲೆಯೆಂದರೆ ಭಾವ ವಿಕಾಸ. ಕವಿಗಳು ಈ ಭಾವೋಚ್ಚಾರಣೆಯ ಸಾಮರ್ಥ್ಯದಿಂದ ತಮ್ಮ ಸ್ಥಾನವನ್ನು ನಿರ್ದೇಶಿಸಿಕೊಳ್ಳುತ್ತಾರೆ. ಅವರು ಸಮರ್ಥಿಸುವ ಆದರ್ಶಗಳು ನಮ್ಮ ಮೆಚ್ಚುಗೆಗೆ ಪಾತ್ರವಾಗದೆ ಹೋಗಬಹುದು. ಆದರೆ ತಪ್ಪು ಅವರದಲ್ಲ, ನಮ್ಮದು. ನೀತಿಗೆ ಪ್ರಾಧಾನ್ಯವಿರುವ ಈ ಜಗತ್ತಿನಲ್ಲಿ ಉತ್ತಮ ನೈತಿಕ ಸೌಧವನ್ನು ಕಟ್ಟಲು ಯೋಗ್ಯವಸ್ತುವನ್ನು ಕೊಡದಿರುವುದು ನಮ್ಮ ತಪ್ಪು. ಕಲೆ ಮತ್ತು ನೀತಿಯನ್ನು ವಿಭಾಗಿಸುವುದು ನೀತಿಯನ್ನು ನಿರ್ನಾಮಗೊಳಿಸುವುದಕ್ಕಲ್ಲ-ಭವ್ಯಗೊಳಿಸುವುದಕ್ಕೆ. ಅದು ಸ್ವತಂತ್ರವಾಗಿ ಆಳಲು ಹೆಚ್ಚಿನ ಶಕ್ತಿ ಮತ್ತು ಸ್ವಾತಂತ್ರ್ಯವನ್ನು ಈ ವಿಭಜನೆ ದೊರಕಿಸುತ್ತದೆ.

ಕಾಮಪ್ರಚೋದನೆ ಶಬ್ದವೇ ಸಾಹಿತ್ಯ, ಕಲಾ ಪ್ರಪಂಚಕ್ಕೆ ಸೇರಿದ್ದಲ್ಲ. ಅದರ ಸಂಬಂಧ ವೈದ್ಯ ಪ್ರಪಂಚದ್ದು. ಹಾಗೆ ಅಶ್ಲೀಲ ಶಬ್ದದ ಸಂಬಂಧ ನೀತಿಶಾಸ್ತ್ರದ್ದು. ಒಂದು ಶಾಸ್ತ್ರದ ಪಾರಿಭಾಷಿಕ ಶಬ್ದಗಳನ್ನು ಇನ್ನೊಂದು ಶಾಸ್ತ್ರಕ್ಕೆ-ಕಲೆಗೆ ಉಪಯೋಗಿಸಿದರೆ ಅನರ್ಥವಾಗುತ್ತದೆ.

೪

ಪ್ರಗತಿಶೀಲ ಸಾಹಿತ್ಯವಾದ ಹುಟ್ಟಿದಂದಿನಿಂದ ಅದರ ವಿಮರ್ಶಕರು ಪ್ರಗತಿಶೀಲತೆಗೂ, ಅಶ್ಲೀಲಕ್ಕೂ ತಾಳೆಹಾಕುತ್ತ ಬಂದಿದ್ದಾರೆ. ಪ್ರಗತಿಶೀಲ ಸಾಹಿತ್ಯವಾದ ಕೆಲವು ನಿಷ್ಕೃಷ್ಟ ಸೂತ್ರಗಳನ್ನು ಹಿಡಿದು ಹೊರಟಿತು. ಅದರ ಧ್ಯೇಯ ಧೋರಣೆ ಸಂಪ್ರದಾಯಪ್ರಿಯರಿಗೆ, ಬಂಡವಾಳಶಾಹಿಯ ಅಭಿಮಾನಿಗಳಿಗೆ, ನಿರ್ಜೀವ ಅಧ್ಯಾತ್ಮವಾದಗಳಿಗೆ ಅಪ್ರಿಯವಾದುದೇನೂ ಆಶ್ಚರ್ಯವಲ್ಲ. ತಮ್ಮ ಗ್ರಂಥ ಪ್ರಸಾರಕ್ಕೆ ಕೆಲವು ಲೇಖಕರು ಹಾಕಿರುವ ಸೋಗೇ ಪ್ರಗತಿಶೀಲವಾದವೆಂದು ಪ್ರೊ. ಜಾಗಿರದಾರರು(ಈಗ ಶ್ರೀ ರಂಗಾಚಾರ್ಯರು). ಶ್ರೀ ಕುಳಕುಂದ ಶಿವರಾಯರು, ಪ್ರೊ. ವಿ. ಕೃ ಗೋಕಾಕರೂ ವಾದಿಸಿದರು. ಪ್ರೊ. ಜಾಗಿರದಾರರು 'ಪ್ರಗತಿಶೀಲ'ರನ್ನು 'ಪ್ರಗತಿಚೀಲ'ರೆಂದು ಪರಿಹಾಸ್ಯ ಮಾಡಿದರು. ಇದೇ ವಾದವನ್ನೇ ಇಂದು 'ಪ್ರಜಾವಾಣಿ', 'ಪೌರವಾಣಿ' ಸಂಪಾದಕರು ಮಂಡಿಸುತ್ತಿದ್ದಾರೆ. ಪ್ರಗತಿಶೀಲರು ಮಂಡಿಸಿದ ವಾದ, ಸಾಹಿತ್ಯಕೃತಿಗಳಲ್ಲಿ ಅವರು ತೋರಿದ ಪ್ರತಿಭೆ ಕನ್ನಡ ಜನತೆಗೆ ಪ್ರಿಯವಾಯಿತು. ಕನ್ನಡ ಜನ ಅವರ ಗ್ರಂಥಗಳನ್ನು ಹೆಚ್ಚು ಸಂಖ್ಯೆಯಲ್ಲಿ ಓದಲಾರಂಭಿಸಿದರು ಎಂಬ ತಿಳಿತತ್ವ ಪ್ರಗತಿಶೀಲ ಸಾಹಿತ್ಯ ವಿರೋಧಿಗಳಿಗೆ ಹೊಳೆಯದಿರುವುದು ಆಶ್ಚರ್ಯಕರವಾಗಿದೆ.

ನನ್ನ ಈ ಗ್ರಂಥ ವಿವೇಚನಾಪೂರ್ಣ ಜೀವನದ ಪ್ರಣಾಳಿಕೆ ಎಂದು ಧಾರಾಳವಾಗಿ ಹೇಳಬಲ್ಲೆ. ಗಿಣಿಪಾಠ ಒಪ್ಪಿಸಿದಂತೆ ಹಿಂದಿನವರೋ ಅವರಿವರೋ ಹೇಳಿದ ಮಾತುಗಳನ್ನೇ

ಅದು ಸತ್ಯವಾದುದಾಗಿರಲಿ, ಕಂಟಕಪ್ರಾಯವಾದುದಾಗಿರಲಿ ಒಪ್ಪಿಸುತ್ತ ಬರುವುದು ಬುದ್ಧಿಜೀವಿಯಾದ ಮಾನವನಿಗೆ ತಕ್ಕುದಲ್ಲ. ಈ ಸೂತ್ರವನ್ನೇ ಸಾಹಿತ್ಯ-ಅಶ್ಲೀಲ, ಕಾಮ ಪ್ರಚೋದನೆಗಳಿಗೆ ಅನ್ವಯಿಸಿ ನೋಡಬೇಕೆಂದು ನಾನು ವಾದಮಾಡಿದ್ದೇನೆ. ಸಾಹಿತ್ಯದಿಂದ ಕಾಮಪ್ರಚೋದನೆಯನ್ನು(ಅವರು ಅರ್ಥಮಾಡಿಕೊಂಡಿರುವ ರೀತಿಯಲ್ಲಿ) ಕಿತ್ತು ಹಾಕಬೇಕೆಂದು ವಾದಮಾಡುವ ಸಾಹಿತಿಗಳೂ ಅವರ ಶ್ರುತಿಗೆ ದನಿಗೊಡುವ ವಿಮರ್ಶಕರೂ, ನಿರ್ಣಯಮಾಡುವ 'ಕನ್ನಡ ಸಾಹಿತಿಗಳ ಸಂಘ'ದ ಪ್ರತಿಗಾಮಿಗಳೂ ಸಾಹಿತ್ಯದ ವಿಶ್ವ ವ್ಯಾಪಕತೆಗೆ, ಸರ್ವತೋಮುಖ ವಿಕಾಸಕ್ಕೆ ಅಡ್ಡಿಯಾಗುತ್ತಿದ್ದಾರೆಂಬುದನ್ನು ಮರೆಯಬಾರದು.

ಇದು ಬೇಕು-ಅದು ಬೇಡ ಎನ್ನುವುದಾಗಲಿ, ಇದು ಶೀಲ-ಅದು ಅಶ್ಲೀಲವೆನ್ನುವುದಾಗಲಿ ಇಂದಿನ ಸಾಹಿತಿಯ, ಸಾಹಿತ್ಯಪ್ರೇಮಿಯ ಕೆಲಸವಲ್ಲ. ಕನ್ನಡದ ಬೆಳೆಯನ್ನು-ಅದು ಏನೇ ಆಗಿರಲಿ ಹೆಚ್ಚಿಸಬೇಕಾದುದು ನಮ್ಮೆಲ್ಲರ ಕರ್ತವ್ಯ. ಜಳ್ಳನ್ನು ತೂರಿ ಕಾಳನ್ನು ಉಳಿಸಿಕೊಳ್ಳಬೇಕಾದುದು ಮುಂದಿನ ಪೀಳಿಗೆಯವರ ಕೆಲಸ. ಜರಡಿಯಾಡುವ ಕೆಲಸವನ್ನು ಕಾಲವೇ ನಿರ್ವಹಿಸುವಾಗ ನಾವು ತೊಂದರೆಪಟ್ಟುಕೊಳ್ಳಬೇಕಾದ ಅಗತ್ಯ ಇಲ್ಲ. ಸಾಹಿತ್ಯದ ಉದ್ದೇಶ 'ಜೀವನ-ದರ್ಶನ'ವೆಂದು ಉಪದೇಶಮಾಡುವ ಸಾಹಿತಿಗಳು ಇನ್ನಾದರು ತಮ್ಮ ಮಾತನ್ನು ತಾವೇ ನಂಬಬೇಕು. ಜೀವನ ದರ್ಶನ ಮಾಡಿಸುವ ಸಾಹಿತ್ಯವನ್ನು ನಾನು ರಚಿಸಲಿಲ್ಲವಲ್ಲಾ ಎಂಬ ಕೊರಗಿಗೆ ಇತರರ ಕೃತಿಗಳನ್ನು ಅಶ್ಲೀಲವೆಂದು ಹೀಯಾಳಿಸುವ ಅಲ್ಪತನ ಸಮಾಧಾನ ಕೊಡಬಲ್ಲದೇ?

ಕನ್ನಡ ಸಾಹಿತ್ಯದ ತೂಕ-ಬಣ್ಣ ಹೆಚ್ಚಬೇಕಾದರೆ ಸಾಹಿತಿಗಳ, ವಿಮರ್ಶಕರ ತೂಕ-ಬಣ್ಣವೂ ಆಳೆಯುವ ಪ್ರವೃತ್ತಿ ತೋರುವ ಸಾಹಿತಿಗಳು ತಮ್ಮ ಜೀವನವನ್ನೇ ಅಳೆದು ನೋಡಿಕೊಳ್ಳುವ 'ಆತ್ಮ ಶೋಧಕ'ರಾಗಬೇಕು. ದೊಡ್ಡ ಬಾಳು, ದೊಡ್ಡ ಮನಸ್ಸು, ದೊಡ್ಡ ದೃಷ್ಟಿಯುಳ್ಳ ವ್ಯಕ್ತಿಯಿಂದಲೇ ಅಲ್ಲವೇ ದೊಡ್ಡ ಸಾಹಿತ್ಯ ನಿರ್ಮಾಣವಾಗಬೇಕು. ಕನ್ನಡ ಸಾಹಿತಿಗಳೆಲ್ಲರೂ ದೊಡ್ಡವರಾಗಬೇಕೆಂಬುದೇ ನನ್ನ ಹೆಬ್ಬಯಕೆ. ನಮ್ಮ ಸಾಹಿತಿಗಳು ನನ್ನ ಕನಸನ್ನು ನನಸು ಮಾಡುವರೇ?

●

'ಸ್ಪೀಕಿಂಗ್ ಆಫ್ ಶಿವ'ದ ಪ್ರಸ್ತಾವನೆ

ಮೂಲ: ಎ.ಕೆ. ರಾಮಾನುಜನ್
ಅನು: ಚಂದ್ರಶೇಖರ ನಂಗಲಿ

(ಎ ಕೆ ರಾಮಾನುಜನ್ ಅವರು ಜಾನಪದ ವಿದ್ವಾಂಸ ಎಂದೇ ಹೆಸರಾಗಿದ್ದಾರೆ. ಆದರೆ ಅವರು ಕನ್ನಡದ ಅನೇಕ ಪ್ರಕಾರದ ಸಾಹಿತ್ಯಗಳ ಮೇಲೆ ಕೆಲಸಮಾಡಿದವರು. ಜಾವಳಿಗಳ ಮೇಲೆ ಅವರ ಪುಸ್ತಕವಿದೆ. ವಚನಗಳ ಮೇಲೆ ಅವರ ಚಿಂತನೆಯಿದೆ. ಒಂದೇ ವಿಶೇಷತೆ ಅಥವಾ ದೂರು ಎಂದರೆ, ಅವರು ತಮ್ಮೆಲ್ಲ ಕೆಲಸವನ್ನು ಇಂಗ್ಲೀಷಿನಲ್ಲಿ ಮಾಡಿದರು. ಚಿಕಾಗೋ ವಿಶ್ವವಿದ್ಯಾಲಯದಲ್ಲಿ ದಕ್ಷಿಣಭಾರತೀಯ ಅಧ್ಯಯನವಿಭಾಗದಲ್ಲಿ ಪ್ರಾಧ್ಯಾಪಕ ರಾಗಿದ್ದ ಅವರು ತಮಿಳು ಕನ್ನಡ ಸಾಹಿತ್ಯಗಳನ್ನು ಬಳಸಿಕೊಂಡು ಅನೇಕ ಅನುವಾದಗಳನ್ನು ಪ್ರಕಟಿಸಿದರು. ಅವು ಅಮೆರಿಕನ್ ಅಥವಾ ಇಂಗ್ಲಿಷ್ ಓದುಗರ ಜಗತ್ತಿನ ಆವಶ್ಯಕತೆಗಳನ್ನು ಮನಸ್ಸಲ್ಲಿಟ್ಟುಕೊಂಡು ಮಾಡಿದ ಕೆಲಸಗಳು. ಇದು ಅವರ ಬರೆಹದ ಸೈದ್ಧಾಂತಿಕತೆಯನ್ನು ರೂಪಿಸಿದ ಪ್ರಮುಖ ಸಂಗತಿ. ಅವರ ಚಿಂತನೆಯಲ್ಲಿರುವ ಸೈದ್ಧಾಂತಿಕತೆ ದೃಷ್ಟಿಕೋನ ಕುರಿತು ಅನೇಕ ಪ್ರಶ್ನೆಗಳನ್ನು ನಾವು ಎತ್ತಬಹುದು. ಅವುಗಳ ಚಾರಿತ್ರಿಕ ಮಿತಿಗಳನ್ನು ತೋರಿಸಬಹುದು. ಅದಕ್ಕೆ ಮೊದಲು ಕನ್ನಡದ ಕರ್ನಾಟಕದ ಆಕರಗಳನ್ನು ಬಳಸಿಕೊಂಡಿ ರುವ ಮಾಡಲಾಗಿರುವ ಈ ಕೆಲಸಗಳನ್ನು ಅವು ಹೇಗಿವೆ ಎಂದು ನೋಡಬೇಕಾಗಿದೆ. ಅದರಲ್ಲೂ ಇಂತಹ ಅನುವಾದಗಳಿಗೆ ರಾಮಾನುಜನ್ ಬರೆದಿರುವ ಪ್ರಸ್ತಾವನೆಗಳು ಚಾರಿತ್ರಿಕ ಕಾರಣಕ್ಕಾಗಿ ಮುಖ್ಯವಾಗಿವೆ. ಇವು ಇಂಗ್ಲಿಷಿನಲ್ಲಿರುವ ಕಾರಣದಿಂದಲೇ ಕನ್ನಡದ ಓದುಗರು ಅನೇಕ ಸಲ ಇವುಗಳ ಜತೆಗೆ ವಾಗ್ವಾದ ಬೆಳೆಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಕನ್ನಡದ ಆಕರಗಳನ್ನು ಬಳಸಿಕೊಂಡು ಅನ್ಯಭಾಷೆಗಳಲ್ಲಿ ರಾಮಾನುಜನ್ ಹಾಗೂ ಅವ ರಂತಹ ಅನೇಕರು ಮಾಡಿರುವ ಬರೆಹಗಳನ್ನು ಅನುವಾದಿಸಿಕೊಂಡು ಚರ್ಚೆಮಾಡುವುದು ಉಪಯುಕ್ತವಾದುದು. ಈ ಉದ್ದೇಶವನ್ನು ನಿಭಾಯಿಸುತ್ತಿರುವ 'ಕನ್ನಡ ಅಧ್ಯಯನ'ದ 'ಕನ್ನಡಿ' ವಿಭಾಗಕ್ಕಾಗಿ, ರಾಮಾನುಜನ್ನರ ಪ್ರಸಿದ್ಧ ಕೃತಿ 'ಸ್ಪೀಕಿಂಗ್ ಆಫ್ ಶಿವ'ದ ದೀರ್ಘ ಪ್ರಸ್ತಾವನೆಯನ್ನು ಇಲ್ಲಿ ಕೊಡಲಾಗಿದೆ. ರಾಮಾನುಜನ್ ಅವರ ಸಾಹಿತ್ಯಕಸಂವೇದನೆ, ತೀಕ್ಷ್ಣವಾದ ಒಳನೋಟ, ಸಮಾಜಶಾಸ್ತ್ರೀಯ ಮನಸ್ಸು, ಜನಪರ ನಿಲುವು, ರಚನಾವಾದಿ ದೃಷ್ಟಿಕೋನ ಅನ್ಯಭಾಷಿಕರಿಗೆ ಮಂಡಿಸುವಾಗ ಬದಲಾಗುವ ಆದ್ಯತೆಗಳು -ಇವೆಲ್ಲವನ್ನು ಇದು ಒಳಗೊಂಡಿದೆ. ಸಂ.)

ದೇಹ ಮತ್ತು ದೇವಾಲಯ

ಉಳ್ಳವರು ಶಿವಾಲಯವ ಮಾಡಿಹರು
ನಾನೇನ ಮಾಡುವೆ? ಬಡವನಯ್ಯಾ।

ಎನ್ನ ಕಾಲೇ ಕಂಬ, ದೇಹವೇ ದೇಗುಲ |
ಶಿರವೇ ಹೊನ್ನ ಕಳಸವಯ್ಯ
ಕೂಡಲ ಸಂಗಮದೇವ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ

ಬಸವಣ್ಣನ ನಾಯಕತ್ವದಲ್ಲಿ ಪ್ರಕಟಗೊಂಡ ಮಧ್ಯಕಾಲೀನ ಧಾರ್ಮಿಕ ಚಳುವಳಿಯು ವೀರಶೈವ ಧರ್ಮವೆಂದು ಹೆಸರಾಯಿತಲ್ಲದೆ, ಅದರ ಸಂವಾದಗಳಾದ ವಚನಗಳು ಕನ್ನಡ ಸಂಸ್ಕೃತಿಯ ಬಹುಮುಖ್ಯ ಪಠ್ಯಗಳೆನಿಸಿಕೊಂಡಿವೆ. ಸಮಗ್ರವೂ ಅಸಾಧಾರಣವೂ ಆದ ವಚನ ಸಾಹಿತ್ಯವೆಂಬ ಧಾರ್ಮಿಕ ಭಾವಗೀತಾತ್ಮಕ ಶರೀರವನ್ನು ಅತ್ಯಂತ ಸಮರ್ಥವಾಗಿ ಪ್ರತಿನಿಧಿಸುವ ಏಕಮಾತ್ರ ವಚನವೊಂದನ್ನು ಆಯ್ದುಕೊಡಿರೆಂದು ಕೇಳಿದರೆ ಪ್ರಾಯಶಃ ಮೇಲೆ ಪ್ರಸ್ತಾಪಿಸಿರುವ ಬಸವಣ್ಣನ ವಚನವನ್ನೇ ಆಯ್ದುಕೊಳ್ಳುತ್ತಾರೆಂಬ ವಿಶ್ವಾಸ ನನಗಿದೆ. ವೀರಶೈವ ಧರ್ಮವೆಂದು ಕರೆಯಲ್ಪಟ್ಟ ಬಂಡಾಯ ಅಥವಾ ಪ್ರತಿಭಟನಾತ್ಮಕ (=ಪ್ರಾಟೆಸ್ಟಂಟ್) ಚಳುವಳಿಯ ಹಲವು ವೈಶಿಷ್ಟ್ಯಗಳು, ಬಹುಮುಖಿ ಆಶಯಗಳು ಮತ್ತು ವೈರುಧ್ಯಗಳನ್ನು ಮೇಲಿನ ವಚನವು ಬಹುಸಮರ್ಥವಾಗಿ ನಾಟ್ಯೀಕರಿಸಿದೆ.

ಉದಾಹರಣೆಗೆ, ಸಾಂಪ್ರದಾಯಿಕ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಭಾರತೀಯ ದೇವಾಲಯಗಳು ಮನುಷ್ಯ ಶರೀರದ ವಾಸ್ತುಪ್ರತಿಮೆಗಳಾಗಿವೆ. ದೇವಾಲಯ ನಿರ್ಮಾಣದ ಆಚರಣೆಗಳು ಕ್ಷೇತ್ರಕಾರ್ಯದ ಅಗೆತ ಮತ್ತು ಬೀಜ ಕುಂಡದ ಸ್ಥಾಪನೆಗಳಿಂದ ಮೊದಲಾಗುತ್ತವೆ. ನೆಲದಿಂದ ಮೇಲೇಳುವ ದೇವಾಲಯವು ಮನುಷ್ಯನ ಹುಟ್ಟಿನಂತೆಯೇ ಕ್ಷೇತ್ರ-ಬೀಜ ಸಂಬಂಧವನ್ನು ಹೋಲುತ್ತದೆ. ಆದ್ದರಿಂದಲೇ ಮನುಷ್ಯನ ಅಂಗಾಂಗಗಳ ಹೆಸರುಗಳನ್ನೇ ದೇವಾಲಯದ ವಿವಿಧ ಭಾಗಗಳಿಗೆ ಇಡಲಾಗಿದೆ. ದೇವಾಲಯದ ಇಕ್ಕೆಲಗಳನ್ನು ಅಥವಾ ಉಭಯ ಪಾರ್ಶ್ವಗಳನ್ನು 'ಹಸ್ತ'ವೆಂದೂ, ಆಧಾರಸ್ತಂಭಗಳನ್ನು 'ಪಾದ'ವೆಂದೂ, ದೇವಾಲಯದ ಗೋಪುರ ಅಥವಾ ನೆತ್ತಿಯನ್ನು 'ಶಿಖರ'ವೆಂದೂ ಕರೆಯಲಾಗಿದೆ. ದೇವರಿರುವ ಸ್ಥಳ ತೀರ ಒಳಗಿನದಾಗಿದ್ದು ಕತ್ತಲೆಯಿಂದ ಕೂಡಿರುವ ಪವಿತ್ರತಮ 'ಗರ್ಭಗೃಹ'ವಾಗಿದೆ. ಹೀಗೆ, ಪರಿಶೀಲಿಸಿ ನೋಡಿದರೆ ನಮ್ಮ ದೇವಾಲಯಗಳಲ್ಲಿನ ಗಾರೆ ಮತ್ತು ಕಲ್ಲುಗಳ ರಚನೆಯು ಮೂಲತಃ ವಾಸ್ತುಸಂದೇಶಹಾರಿಗಳಾಗಿದ್ದು, ಮನುಷ್ಯಶರೀರದ ಪುರಾತನ ಬ್ಲೂಪ್ರಿಂಟುಗಳಂತಿವೆ.[೧]

ಆದರೆ, ಚರಿತ್ರೆಯ ಚಕ್ರ ಚಲನೆಯಲ್ಲಿ ಕ್ರಮೇಣ ಮನುಷ್ಯ ರೂಪಕವು ಅಳಿಸಿಹೋಯಿತು. ದೇವಾಲಯದ ಮೂಲ ಮಾದರಿ ಮತ್ತು ಮೂಲಾರ್ಥಗಳು ಮುಳುಗಿಹೋದವು. ದೇವಾಲಯವು ನಿಂತು ನಾರುತ್ತಿರುವ 'ಸ್ಥಾವರ'ವಾಗಿ ಪರಿಣಮಿಸಿದ್ದಲ್ಲದೆ, 'ಜಂಗಮ'ವಾದ ಮೂಲ ಮಾತೃಕೆಗಳು ಮರವೆಗೆ ಸಂದವು. ಬಸವಣ್ಣನ ವಚನವು ಎಲ್ಲ ದೇವಾಲಯಗಳ ಮೂಲ ಮಾತೃಕೆಗೆ ಹಿಂದಿರುಗಲು ಕೊಟ್ಟ ಕರೆಯಾಗಿರುವಂತೆಯೇ ದೇಹದ ಪ್ರಾಮುಖ್ಯತೆಯನ್ನು ಪ್ರತಿಪಾದಿಸುವ, ಭೌತಿಕ ಪ್ರತೀಕವಾಗಿದೆ.

ವಚನಗಳು ಹೇಗೋ ಹಾಗೆಯೇ ಸಂತರ ಬದುಕಿನ ಐತಿಹ್ಯಗಳು ಕೂಡ ಇಂಥ ರೂಪಾಂತರಗಳ ಚಕ್ರವನ್ನೇ ಸಂಕೇತಿಸುತ್ತವೆ: ದೇವಾಲಯದೊಳಗೆ ದೇಹ, ದೇಹದೊಳಗೆ ದೇವಾಲಯ, ದೇವಾಲಯವೇ ದೇಹ, ದೇಹವೇ ದೇವಾಲಯವೆಂಬ ಸಾರೂಪ್ಯಗಳ ವರ್ತುಲಕ್ಕೆಡೆ ಕೊಟ್ಟಿವೆ. ಸಂತನೆನಿಸಿದ ಘಂಟಾಕರ್ಣನ ಐತಿಹ್ಯವು ಇದಕ್ಕೊಂದು ವಿಶಿಷ್ಟ ಉದಾಹರಣೆ. ಈತನಿಗೆ ಶಿವನೇ ಸರ್ವಶಕ್ತ ದೇವರೆಂದು ಮನವರಿಕೆಯಾದಾಗ ತನ್ನನ್ನೇ ತಾನು ಶಿವನಿಗೆ ಸಮರ್ಪಿಸಿಕೊಳ್ಳುತ್ತಾನೆ. ಆತನ ದೇಹವು ಶಿವಾಲಯದ ಹೊಸಿಲಾಗುತ್ತದೆ, ಕೈ ಕಾಲುಗಳು ದ್ವಾರಬಂಧವಾಗುತ್ತವೆ, ತಲೆ ಗುಡಿಯ ಗಂಟೆಯಾಗುತ್ತದೆ.

ಬಸವಣ್ಣನ ವಚನವು ‘ಮಾಡುವ’ ಮತ್ತು ‘ಆಗುವ’ ನೆಲೆಗಳೆರಡರ ಸ್ಪಷ್ಟವಿಂಗಡನೆಯಾಗಿದೆ. ದೇವಾಲಯಗಳನ್ನು ಮಾತ್ರ ನಿರ್ಮಾಣ ‘ಮಾಡುವ’[೨] ಉಳ್ಳವರಿಗೆ ಸ್ವತಃ ತಾವೇ ದೇವಾಲಯ ‘ಆಗುವ’ ಬಗೆ ತಿಳಿಯದು. ಅವರು ಯಾವುದನ್ನು ‘ಮಾಡುವ’ರೋ ಅದು ಮರ್ತ್ಯವೆನ್ನಬಹುದಾದ ವಾಸ್ತುಸಂಗತಿಯೇ ಹೊರತು ಅಮರ್ತ್ಯವೆನ್ನಬಹುದಾದ ’ಆಗುವ’ ಸತ್ಯದ ಕಾಣ್ಕೆಯಲ್ಲ.

ಸ್ಥಗಿತ-ಚಲನಶೀಲ, ಸ್ಥಾವರ-ಜಂಗಮವೆಂಬ ಈ ವಿರುದ್ಧ ವಿಚಾರವು ವೀರಶೈವ ಧರ್ಮದ ಹೃದಯವಾಗಿದೆ. ಸ್ಥಾವರ ಅಥವಾ ಸ್ಥಗಿತವೆಂಬ ಸಂಸ್ಕೃತ ಶಬ್ದವು ತನ್ನ ಜ್ಞಾತಿ ಶಾಖೆಯಾದ ಇಂಡೋ-ಯುರೋಪಿಯನ್ ಮೂಲಕ್ಕೆ ಸೇರಿದ ಇಂಗ್ಲೀಷ್ ಶಬ್ದಗಳಾದ Stand, State, Estate, Stature, Static, Status ಮುಂತಾದ ಸಂವಾದಿ ಶಬ್ದಗಳ ಅರ್ಥಸಾಹಚರ್ಯೆಯನ್ನು ಒಳಗೊಂಡಿದೆ. ‘ಜಂಗಮ’ವೆಂಬ ಸಂಸ್ಕೃತ ಶಬ್ದವು ಇಂಗ್ಲೀಷಿನ go ಎಂಬ ಜ್ಞಾತಿ ಶಬ್ದಕ್ಕೆ ಸಂವಾದಿಯಾಗಿದೆ. ‘ಸ್ಥಾವರ’ವೆಂದರೆ ನಿಂತದ್ದು, ಖಾಸಗಿ ಆಸ್ತಿಯ ಭಾಗ, ಅಚೇತನವಾದ ವಸ್ತು ಎಂದರ್ಥ. ‘ಜಂಗಮ’ವೆಂದರೆ ಹರಿಯುವುದು, ಹರಿಯಬಲ್ಲದ್ದು, ಆಗು-ಹೋಗಿನ ಯಾವುದೇ ವಿಚಾರವಾಗುತ್ತದೆ. ವೀರಶೈವ ಧರ್ಮದ ಪ್ರಕಾರ ಜಂಗಮನೆಂದರೆ ಪರಿವ್ರಾಜಕ, ಒಂದೆಡೆ ನೆಲೆ ನಿಲ್ಲದೆ ಊರಿಂದೂರಿಗೆ ಚಲಿಸುವಂಥವನ್ನು, ಭೌತಿಕ ಸವಲತ್ತುಗಳಿಂದ ಕೂಡಿದ ಪ್ರಪಂಚ ಮತ್ತು ಸಂಸಾರವನ್ನು ಪರಿತ್ಯಜಿಸಿದವನು. ಭಕ್ತರ ಪಾಲಿಗೆ ಶಿವನ ಪ್ರತಿನಿಧಿ ಮತ್ತು ಸಾಕ್ಷಾತ್ ಶಿವನ ಅವತಾರವೆಂದೇ ಹೆಸರಾದವನು. ‘ಸ್ಥಾವರ’ವೆಂದರೆ ಯಾವುದೇ ಸ್ಥಗಿತ ಸಂಕೇತ ಅಥವಾ ಶಿವನಮೂರ್ತಿ, ಶಿವಾಲಯ ಅಥವಾ ಪೂಜಿಸಲ್ಪಡುವ ಶಿವಲಿಂಗ ಸ್ಥಾವರ-ಜಂಗಮಗಳೆಂಬ ಜೋಡಿ ಶಬ್ದಗಳು ದೇವರು ಮತ್ತು ಪೂಜಾಪದ್ಧತಿಗಳಿಗೆ ಸಂಬಂಧಿಸಿದಂತೆ ಪರಸ್ಪರ ತದ್ವಿರುದ್ಧ ಪರಿಕಲ್ಪನೆಗಳ ವೈದೃಶ್ಯಬಿಂಬಗಳಾಗಿವೆ. ಬಸವಣ್ಣನ ಪ್ರಸ್ತಾಪಿತ ವಚನವು ಶುಷ್ಕ ಸಂಕೇತಗಳಿಂದ ಮೂಲ ಮಾತೃಕೆಯತ್ತ, ದೇವಾಲಯದ ವೈಭವದಲ್ಲಿ ಕಳೆದುಹೋಗಿರುವ ದೇಹಭಾವದ ಮೂಲ ನೆನಪುಗಳತ್ತ ಕರೆದೊಯ್ಯುತ್ತದೆ. ಪ್ರಸ್ತುತ, ಉಳ್ಳವರ ಪಾಲಾಗಿರುವ ಶಿಲೀಕೃತ ‘ಸ್ಥಾವರ’ ದೇವಾಲಯವು ನಿಂತು ನಾರುತ್ತಿದೆಯೆಂಬುದನ್ನು ಸೂಚಿಸುತ್ತಲೇ, ಬಡವರ ಪಾಲಿಗೆ ಬಂದ ಜೀವಂತವೂ ಚಲನಶೀಲವೂ ಆದ ‘ಜಂಗಮ’ ತತ್ತ್ವವನ್ನು ಎತ್ತಿ ಹಿಡಿದಿದೆ.

ಈ ವಚನವ ಆರಂಭದಲ್ಲೇ ದೇವಾಲಯಗಳು ಉಳ್ಳವರ ಪಾಲಾಗಿರುವುದನ್ನು ಸೂಚಿಸಲಾಗಿದೆ. ಮಧ್ಯಕಾಲೀನ ಅವಧಿಯಲ್ಲಿ ದಕ್ಷಿಣ ಭಾರತೀಯ ದೇವಸ್ಥಾನಗಳು ವಿಶೇಷವಾಗಿ ಅರಮನೆಗಳ ಭವ್ಯವಾದ ಶಿಖರಸ್ಥಾನಗಳಾಗಿದ್ದವು. ರಾಜಾಶ್ರಯ ಮತ್ತು ದಾನದತ್ತಿಗಳಿಂದ ಸಂಪದ್ಭರಿತವೂ ಶಕ್ತಿಸಂಪನ್ನವೂ ಆಗಿದ್ದ ಈ ದೇವಾಲಯಗಳಲ್ಲಿ ಆಭರಣಗಳಿಂದ ಝಗಝಗಿಸುವ ದೇವತಾಮೂರ್ತಿಗಳೂ ಮತ್ತು ಕುಸುರಿಗೆತ್ತನೆಯ ಸ್ತಂಭಗಳು ಸರ್ವ ಸಾಮಾನ್ಯವಾದ ಸಂಗತಿಗಳಾಗಿದ್ದವು. ಬಡವರಿಂದ ಮತ್ತು ಬಡವರಿಗಾಗಿ ಆರಂಭವಾದ ವೀರಶೈವ ಚಳುವಳಿಯೂ ಮೂಲತಃ ಸಾಮಾಜಿಕ ಪುನರುತ್ಥಾನವಾಗಿದ್ದು, ಕೆಳಜಾತಿ ಮತ್ತು ಹೊರಜಾತಿಗಳಿಗೆ ಸೇರಿದ ಬಡ ಜನರು-ಉಳ್ಳವರು ಮತ್ತು ಪಟ್ಟಭದ್ರರ ವಿರುದ್ಧ, ನಿರಕ್ಷರ ಸಮುದಾಯವು-ಸಾಕ್ಷರ ಪಂಡಿತ ಮಾನ್ಯರ ವಿರುದ್ಧ, ರಕ್ತ ಮತ್ತು ಮಾಂಸಗಳು-ಪಾಷಾಣದ (=ಕಲ್ಲು) ವಿರುದ್ಧ ಸಂಘಟಿಸಿದ ಅಪ್ರತಿಮ ಹೋರಾಟವಾಗಿದೆ.

ಮೇಲಿನ ವಚನವು ಇಂಥ ಸಂಘರ್ಷಗಳನ್ನೆಲ್ಲ ಕ್ರಿಯಾಮಥನಕ್ಕೊಳಪಡಿಸಿದೆ. ಮೊದಲೆರಡು ಸಾಲುಗಳು 'ದೇವಾಲಯ ನಿರ್ಮಾಣ'ದ ಬಗ್ಗೆ ಮಾತನಾಡುತ್ತವೆ. 'ಅವರು' ಮತ್ತು 'ನಾನು' ಇಲ್ಲಿನ ವಿರುದ್ಧ ಧ್ರುವಗಳಾಗಿದ್ದು 'ಬಡವ'ನು ಮಾಡುವಾತನಲ್ಲ ಅಥವಾ ನೀಡುವಾತನಲ್ಲ. ನಂತರದ ಎರಡು ಸಾಲುಗಳಲ್ಲಿ ದೇಹ ಮತ್ತು ದೇವಾಲಯಗಳ ನಡುವಣ ಸಾರೂಪ್ಯ ಸಂಬಂಧಗಳನ್ನು ಸಂಯೋಜಿಸುತ್ತಾ ಹತಾಶೆಗೆ ಎಡೆಗೊಡದಂತೆ ದೃಢ ದನಿಯಲ್ಲಿ ಬಡವನ ಕಾಲುಗಳೇ ಕಂಬಗಳು, ದೇಹವೇ ದೇವಾಲಯ, ಶಿರವೇ ಕಳಸ; ಅದರಲ್ಲೂ ಬಂಡಾಯ ಮಾರ್ಗದ ಹೊಸ ಹೊನ್ನಕಳಸವೆಂದು ಪ್ರತಿಪಾದಿಸಲಾಗಿದೆ. 'ಮಾಡುವ' ನೆಲೆಯಿಂದ ಆರಂಭವಾಗುವ ವಚನವು 'ಆಗುವ' ಕಡೆಗೆ ಮುನ್ನಡೆಯುತ್ತದೆ. ಕೊನೆಯೆರಡು ಸಾಲುಗಳಲ್ಲಿ ವೈದೃಶ್ಯಗಳನ್ನು ಖಚಿತಗೊಳಿಸುತ್ತಾ ವಿಶ್ವಾತ್ಮಕ ಚೈತನ್ಯದೊಂದಿಗೆ ತನ್ನನ್ನು ದೃಢವಾಗಿ ಗುರುತಿಸಿಕೊಳ್ಳಲಾಗಿದೆ. ಮನುಷ್ಯನು 'ಮಾಡುವ' ಎಲ್ಲ ಬಗೆಯ ನಿರ್ಮಾಣಗಳು ಕಟ್ಟಕಡೆಗೆ ಉದುರಿಬೀಳುವುದಾಗಿದ್ದು ಇಂದು ನಿಂತದ್ದು ನಾಳೆ ಮಣ್ಣಾಗಿ ಹೋಗುತ್ತದೆ. ಆದರೆ ಜೀವಂತ-ಚಲನಶೀಲ 'ಜಂಗಮ' ತತ್ವವು ನಿತ್ಯ ಸತ್ಯವಾಗಿದ್ದು ಅನಂತಾನಂತವಾಗಿದೆ.

ವಚನದ ಮೊದಲ ವಾಕ್ಯದಲ್ಲೆ ಸ್ಪಷ್ಟವಾಗಿ ಬಳಕೆಯಾಗಿರುವ ಭೂತಕಾಲ ಸೂಚಕ ಪ್ರತ್ಯಯವು' ಚರಿತ್ರೆಯ ಕಾಲ-ದೇಶಗಳಲ್ಲಿ ನಿರ್ಮಾಣವಾಗುತ್ತಾ ಬಂದಿರುವ ದೇವಾಲಯಗಳಿಗೊಂದು ಧ್ವನಿರೂಪವಾಗಿದೆ. ಮುಂದುವರಿದಂತೆ ವಚನದಲ್ಲಿರುವ ಸಾರೂಪ್ಯಸಂಬಂಧಗಳ ಸಂಯೋಜನೆಯಲ್ಲಿ ಕಾಲಸೂಚಕ ಪ್ರತ್ಯಯಗಳಾಗಲಿ ಅಥವಾ ಕ್ರಿಯಾಪದಗಳಾಗಲಿ ಕನ್ನಡಮೂಲದಲ್ಲಿ ಬಳಕೆಯಾಗಿಲ್ಲ. ಆದರೂ ಇಂಗ್ಲೀಷ್ ಅನುವಾದದಲ್ಲಿ to be ಎಂಬ ಕ್ರಿಯಾರ್ಥವನ್ನು ಭಾವ ಸಮೀಕರಣದಲ್ಲಿ ಬಳಸಲಾಗಿದೆ. ಅಲ್ಲದೆ, ಕನ್ನಡ ಮೂಲದ My legs themselves pillars ಎಂಬುದಕ್ಕೆ ಇಂಗ್ಲೀಷಿನಲ್ಲಿ My legs are pillars ಎಂದು ಅನುವಾದಿಸಲಾಗಿದೆ. ವಚನದಲ್ಲಿರುವ ವಿರುದ್ಧ ಧ್ರುವಗಳು ಸುಸ್ಪಷ್ಟವಾಗಿದ್ದು ನಿರ್ಣಾಯಕವಾಗಿ ಪ್ರಕಟಗೊಂಡಿದೆ:

ಉಳ್ಳವರು	:	ಬಡವ
ದೇವಾಲಯ	:	ದೇಹ
ಮಾಡು	:	ಆಗು
ಸ್ಥಗಿತ	:	ಚಲನಶೀಲ
ಸ್ಥಾವರ	:	ಜಂಗಮ

ಸ್ಥಾವರ-ಜಂಗಮವೆಂಬ ವೈದೃಶ್ಯವನ್ನು ಕೇವಲ ವ್ಯಕ್ತಿ ಮತ್ತು ವಸ್ತುವಿಚಾರಗಳ ನಡುವಣ ವಿರುದ್ಧ ಭಾವಗಳೆಂದು ತಿಳಿಯಬಾರದು. ವೀರಶೈವದ ಸಾಂಕೇತಿಕ ತ್ರಿವಳಿಗಳಾದ ಗುರು-ಲಿಂಗ-ಜಂಗಮ ತತ್ವವು ಕ್ರಮವಾಗಿ ೧. ಆಧ್ಯಾತ್ಮಿಕ ಗುರು ೨. ದ್ರವ್ಯ ಲಿಂಗ ೩. ಪರಿವ್ರಾಜಕರನ್ನು ಬಿಂಬಿಸುತ್ತದೆ. ಇವು ತೋರಿಕೆಗೆ ಮೂರಾಗಿದ್ದರೂ ಭಾವಿಸಿದರೆ ಒಂದೇ ಆಗಿವೆ. ಬಸವಣ್ಣನು ಇನ್ನೊಂದು ವಚನದಲ್ಲಿ ಆತ್ಮಶುದ್ಧಿಯುಳ್ಳ ನಿಜಶರಣನಿಗೆ ಸ್ಥಾವರ-ಜಂಗಮಗಳೊಂದೇ ಎಂದು ಸಾರಿದ್ದಾನೆ. ಒಂದು ವೇಳೆ ಶಿವಶರಣನೊಬ್ಬನು ಅಭಿಮಾನದಿಂದ ಶಿಲಾರೂಪದ 'ಸ್ಥಾವರ' ಲಿಂಗಕ್ಕೆ ಸಲ್ಲಿಸುವ ಬಾಹ್ಯಪೂಜೆಯನ್ನು ಮನುಷ್ಯರೂಪದ 'ಜಂಗಮ' ಸೇವೆಗೆಂದು ಭಾವಿಸಿದಲ್ಲಿ, ಅದು ಗುಣಾತ್ಮಕ ಅವಜ್ಞತೆಯೆಂದು ಪರಿಗಣಿತವಾಗುತ್ತದೆ.

ವಚನದ ಕೊನೆಯಲ್ಲಿರುವ 'ಜಂಗಮಕ್ಕೆ' ಎಂಬ ನಿರ್ಲಿಂಗವಾಚಕ 'ತಟಸ್ಥ' ಶಬ್ದದ ಪ್ರಯೋಗವು ಅಮೂರ್ತ ಚಿಂತನೆಗೆ ಕಾರಣವಾಗುವುದಲ್ಲದೆ, ನಿರ್ದಿಷ್ಟವೆನ್ನಬಹುದಾದ ಜೀವನ್ಮರಣದ ಜಂಗಮಾವಸ್ಥೆಯಿಂದ, ವಿಮರ್ಶಾತ್ಮಕವೆನ್ನಬಹುದಾದ ಅಮರ್ತ್ಯ ತತ್ವದ ಎತ್ತರಕ್ಕೇರಿಸಿಬಿಡುತ್ತದೆ. ಆದರೂ ಜಂಗಮವೆಂಬ ಶಬ್ದಕ್ಕೆ 'ಪವಿತ್ರ ವ್ಯಕ್ತಿ'ಯೆಂಬ ಸಹಜವಾದ ಅರ್ಥ ಸಾಹಚರ್ಯದೊಂದಿಗೆ 'ಜೀವಂತ' ಮತ್ತು 'ಯಾವಜ್ಜೀವಂತ'ವೆಂಬರ್ಥಗಳೂ ಇದ್ದೇ ಇರುತ್ತವೆ.

ವಚನಗಳು ಮತ್ತು ಹಿಂದೂಧರ್ಮ

ಮಾನವಶಾಸ್ತ್ರಜ್ಞರಾದ ರಾಬರ್ಟ್‌ರೆಡ್ ಫೀಲ್ಡ್ ಮತ್ತ ಮಿಲ್ಟನ್ ಸಿಂಗರ್ ಮತ್ತಿತರರು ಭಾರತೀಯ ನಾಗರಿಕತೆಗೆ ಸಂಬಂಧಿಸಿ 'ಹಿರಿಯ' ಮತ್ತು 'ಕಿರಿಯ' ಪರಂಪರೆಗಳ ಬಗ್ಗೆ ಮಾತನಾಡಿದ್ದಾರೆ. ಇದಕ್ಕೆ ಪೂರಕವಾಗಿ ಇತರರು ಪ್ರಯೋಗಿಸಿರುವ ದ್ವಂದ್ವಾತ್ಮಕ ಪರಿಭಾಷೆಗಳಿವು: ಶಿಕ್ಷಿತ-ಅಶಿಕ್ಷಿತ, ಅಭಿಜಾತ-ಜಾನಪದ, ಉನ್ನತ-ಅವನತ, ವಿಶ್ವಸ್ಥ-ಪ್ರಾಂತೀಯ, ಯಜಮಾನರು-ರೈತಾಪಿಗಳು, ಪುರೋಹಿತರು-ಲೌಕಿಕರು. ಈ ದ್ವಂದ್ವಾತ್ಮಕ ಸಮುಚ್ಚಯಗಳೆಲ್ಲಕ್ಕೆ ಸಂವಾದಿಯಾಗಿ ಸ್ಥಳೀಯ ಭಾರತೀಯ ಪರಂಪರೆಯಲ್ಲಿ 'ಮಾರ್ಗ' ಮತ್ತು 'ದೇಸಿ'ಗಳೆಂಬ ಪರಿಭಾಷೆಗಳಿವೆ. ಇಂಥ ಹಲವಾರು ದ್ವಂದ್ವಾತ್ಮಕ ಪರಿಭಾಷೆಗಳು ಪರಿಚಿತವಾದ ಉಭಯ ವೈರುಧ್ಯಗಳ ವಿಭಿನ್ನ ನೆಲೆಗಳನ್ನು ಸಮರ್ಥವಾಗಿ ಹಿಡಿಯಬಲ್ಲುವಾದರೂ ಯಾವುದೊಂದು ಪರಿಭಾಷೆಯೂ ತೃಪ್ತಿಕರ ಅಥವಾ ಖಚಿತವಾದುದೆಂದು ಹೇಳಲಾಗದು. ಸೌಲಭ್ಯಾಕಾಂಕ್ಷೆಯಿಂದ ನಾನಿಲ್ಲಿ 'ಹಿರಿಯ' ಮತ್ತು 'ಕಿರಿಯ'

ಪರಂಪರೆಗಳೆಂಬ ಪರಿಭಾಷೆಗಳನ್ನೆ ಬಳಸುತ್ತಿದ್ದೇನೆ. ಈ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಅಂತಸ್ಥ ಅಭಿಪ್ರಾಯ ಮತ್ತು ಉಭಯ ವೈರುಧ್ಯಗಳು ಮುಂದೆ ಪ್ರಕಟಗೊಂಡಿವೆ:

ಭಾರತದೇಶದ 'ಹಿರಿಯ' ಪರಂಪರೆಯು ಅಂತರ್‌ಪ್ರಾಂತೀಯ ಮತ್ತು ಭಾರತ ವ್ಯಾಪಿಯಾದುದು. ಸಂಸ್ಕೃತ ಭಾಷೆ ಇದರ ವಾಹಕ. 'ಕಿರಿಯ' ಪರಂಪರೆಯು ಹಲವು ಪ್ರಾಂತೀಯ ಪರಂಪರೆಗಳನ್ನೊಳಗೊಂಡಿದ್ದು ಪ್ರಾದೇಶಿಕ ಭಾಷೆಗಳನ್ನು ಆಧರಿಸಿರುತ್ತದೆ. ಇಲ್ಲಿ ನೆನಪಿಡಬೇಕಾದ ವಿಚಾರವೆಂದರೆ, ಹಲವು ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತಿಗಳು (=ತಮಿಳು) ತಮ್ಮದೇ ಆದ ಸುದೀರ್ಘ ಪರಂಪರೆಗಳನ್ನು ಹೊಂದಿದ್ದು, ಚಾರಿತ್ರಿಕವಾಗಿ ಪ್ರಾಚೀನ-ಆಧುನಿಕ, ಅಭಿಜಾತ-ಜಾನಪದ, ಉನ್ನತ-ಅವನತಗಳೆಂಬ ಕ್ರಮಾಗತ ವಿಭಜಗೊಳಪಡಬಲ್ಲವು. ಪ್ರಾದೇಶಿಕ ಭಾಷೆಗಳು ಲಕ್ಷಣಬದ್ಧವಾದ 'ಉನ್ನತ'ಶೈಲಿಯ ಪ್ರಮಾಣಭಾಷೆ ಮತ್ತು ಲಕ್ಷಣಾತೀತ ತೋಂಡಿ ನೆಲೆಯ ಅವನತ ಉಪಭಾಷೆಗಳನ್ನೂ ಒಳಗೊಂಡಿರುತ್ತವೆ. ಈ ಬಗೆಯ ತೋಂಡಿ ಉಪಭಾಷೆಗಳು ಸಾಮಾಜಿಕ ಅಥವಾ ಅಂತರ್ ಪ್ರಾದೇಶಿಕ ನೆಲೆಯದ್ದಾಗಿರಬಹುದು. ಹಾಗೆಯೇ ಭಾಷಿಕ ಬಿಂಬಗಳಾದ ಸಾಂಸ್ಕೃತಿಕ ಪರಂಪರೆಗಳು ಕೂಡ ಸಾಮಾಜಿಕವೂ ಪ್ರಾದೇಶಿಕವೂ ಆದ ವಿಶಿಷ್ಟ ಅಂತರ್ ಸಂಸ್ಕೃತಿಗಳಾಗಿ ಪ್ರಕಟಗೊಳ್ಳುತ್ತಿರುತ್ತವೆ. ಹಾಗೆ ನೋಡಿದರೆ 'ಹಿರಿಯ' ಪರಂಪರೆಯು ಕೂಡ ಹಲವೊಮ್ಮೆ ನಿರ್ವಚನಕ್ಕೆ ಒಳಗಾದಂತೆ ಏಕಶಿಲಾಕೃತಿಯ ರಚನೆಯಲ್ಲ. 'ಹಿರಿಯ' ಪರಂಪರೆಗಳು ಮತ್ತು ಬಗೆ ಬಗೆಯ ಪ್ರಾದೇಶಿಕ 'ಕಿರಿಯ' ಪರಂಪರೆಗಳನ್ನು ಕುರಿತು ಸ್ಥೂಲ ವಿವರಣೆಗಳನ್ನು ನೀಡುವವರು, ಇವೆರಡು ಖಚಿತವಾದ ವಿಂಗಡನೆಗಳೋ ಎಂಬಂತೆ ಇಂದೂ ಮಾತನಾಡುವುದುಂಟು. ಆದರೆ ಪರಂಪರೆಗಳೆಂದೂ ಒಳಗೆ ಹೋಗಲು ದಾರಿಗಳಿಲ್ಲದ ರಕ್ಷಣಾ ಕವಚಗಳಂತೆ ದುರ್ ಉಲ್ಲಂಘ್ಯವಾದವುಗಳಲ್ಲ! ಅವು ಒಂದರೊಳಗೊಂದು ಪ್ರವಹಿಸುವಂಥವು, ರಸಾಯನ ಶಾಸ್ತ್ರದ ಪರಿಭಾಷೆಯಾದ 'ಸಂಚಲನೆ'ಯಂತೆ (=Osmosis) ಒಂದರೊಳಗೊಂದು ಕರಗುತ್ತಾ ಒಟ್ಟು ಪ್ರಮಾಣಾತ್ಮಕ ವ್ಯತ್ಯಾಸಗಳಿಗೆ ಕಾರಣವಾಗುವಂತಹವು. ಇದು ಎಷ್ಟೋ ವೇಳೆ ಪ್ರತ್ಯೇಕಿಸಲಾಗದ ಮೂಲ ಧಾತುಗಳಂತಿದ್ದು ಒಂದರೊಳಗೊಂದು ಸಂಪೂರ್ಣವಾಗಿ ಸೇರಿಕೊಂಡುಬಿಟ್ಟಿರುತ್ತವೆ.

'ಮಹಾಭಾರತ'ದಂಥ ಸಂಸ್ಕೃತ ಮಹಾಕಾವ್ಯವು ತನ್ನ ವಿಶ್ವಕೋಶಾತ್ಮಕ ಪರಿಧಿಯಲ್ಲಿ ಬಹುತೇಕ ಜಾನಪದ ದ್ರವ್ಯಗಳನ್ನು ಒಳಗೊಂಡಿದ್ದು ಕತೆ, ನಂಬಿಕೆ, ಗಾದೆಮಾತುಗಳನ್ನು ಜನಪದ ಮೂಲಗಳಿಂದ ಸ್ಪಷ್ಟವಾಗಿ ಎತ್ತಿಕೊಂಡಿದೆ, ಅಲ್ಲದೆ ಅವುಗಳನ್ನು ನವೀಕರಿಸುತ್ತಾ, ಸಂಸ್ಕೃತೀಕರಿಸುತ್ತಾ ಸಂಸ್ಕೃತ ಭಾಷೆಯ ಕಲಾ ನೈಪುಣ್ಯದ ನಿತ್ಯ ನೂತನತೆಯನ್ನು ಮೆರೆದಿದೆ. ಆದರೆ, ಸುಸಂಬದ್ಧ ವಿಚಾರವೆಂದರೆ ಭಾರತದಂಥ ತೋಂಡಿ ಸಂಸ್ಕೃತಿಯಲ್ಲಿ ಸಂಸ್ಕೃತ ಮಹಾಭಾರತವೇ ಮೌಖಿಕವಾದ ಜಾನಪದ ಪರಂಪರೆಗಳೆಡೆ ಹಿಂದಿರುಗಿ ಬಂದಿದೆಯಲ್ಲದೆ, ರೂಪಾಂತರಕ್ಕೊಳಗಾದ ಮೂಲಧಾತುಗಳನ್ನು 'ಕಿರಿಯ' ಪರಂಪರೆಗಳಿಗೆ ಕೊಡುಗೆಯಾಗಿ ನೀಡಿದ್ದು ಮರುಪ್ರಸಾರ ಮತ್ತು ಮರುದರ್ಶನಗಳಿಗೆ ಎಡೆಗೊಟ್ಟಿದೆ. 'ಅರ್ಥಾಂತರಗಳ'

ಮಹಾಪ್ರಸ್ಥಾನದಲ್ಲಿ ಸಂಸ್ಕೃತದಿಂದ ಪ್ರಾದೇಶಿಕ ಭಾಷೆಗಳಿಗೆ 'ಅರ್ಥಾಂತರ'ಗೊಳ್ಳುತ್ತಾ, ಪ್ರಾದೇಶಿಕ ಕವಿಯೊಬ್ಬ ಅರ್ಕಗೊಳಿಸುವ ಸಮೃದ್ಧವಾದ ಸ್ಥಳೀಯ ಪರಂಪರೆಗಳಲ್ಲಿ ಸಾಗಿ ಬಂದಿದೆ. ಇಲ್ಲೆಲ್ಲ ಭಾರತವ್ಯಾಪಿ 'ಹಿರಿಮೆ'ಯನ್ನು ಪ್ರಾದೇಶಿಕ 'ಕಿರಿಮೆ'ಯೊಳಕ್ಕೂ ಪ್ರಾದೇಶಿಕ 'ಹಿರಿಮೆ'ಯನ್ನು ಪ್ರಾದೇಶಿಕ 'ಕಿರಿಯ' ಪರಂಪರೆಗಳ ಒಳಕ್ಕೂ ಸಂಯೋಜನೆ ಮಾಡಲಾಗಿದೆ. ಹೀಗೆ ಕೊಳು-ಕೊಡುಗೆಗಳ ಅನೇಕಾನೇಕ ವರ್ತುಲಗಳು ನಿರಂತರ ಚಲನೆಯಲ್ಲಿದೆ. ಇಂಥ ಅಂತರ್ ಪ್ರಕ್ರಿಯೆ ಮತ್ತು ವಿಚಾರ ವಿನಿಮಯಗಳನ್ನು ಕೆಳಕಂಡ ಐತಿಹ್ಯದ ಅದಲು-ಬದಲು ತಲೆಗಳ ಪ್ರಸಂಗವು ಬಹು ಚೆನ್ನಾಗಿ ಪ್ರಕಟಗೊಳಿಸಿದೆ.

> ಋಷಿಪತ್ನಿ ಮಾರಿಯಮ್ಮ ತನ್ನ ಗಂಡನಿಂದ ಮರಣದಂಡನೆಗೊಳಗಾಗಿರುತ್ತಾಳೆ. ಶಿರಚ್ಛೇದನದ ವೇಳೆ ಅವಳು ಹೊರಜಾತಿಯ ಹೆಣ್ಣು ಎಲ್ಲಮ್ಮ ತೋರಿದ ಅನುಕಂಪೆಗಾಗಿ ಅಪ್ಪಿಕೊಂಡು ಬಿಡುತ್ತಾಳೆ. ಆ ಗಲಭೆಯಲ್ಲಿ ಇಬ್ಬರು ಹೊರಜಾತಿಯ ಹೆಣ್ಣುಗಳು ಮತ್ತು ಬ್ರಾಹ್ಮಣನೊಬ್ಬ ತಮ್ಮ ತಲೆಗಳನ್ನು ಕಳೆದುಕೊಳ್ಳುತ್ತಾರೆ. ನಂತರ ಋಷಿಯು ಮರುಕ ತೋರುತ್ತಾ ಅವರನ್ನು ಕ್ಷಮಿಸಿ, ತನ್ನ ದಿವ್ಯ ಶಕ್ತಿಯಿಂದ ತಲೆಗಳನ್ನು ಮರಳಿ ಜೋಡಿಸಲು ಆಜ್ಞಾಪಿಸುತ್ತಾನೆ. ಆದರೆ ತಪ್ಪಿನಿಂದಾಗಿ ತಲೆಗಳು ಅದಲು ಬದಲಾಗುತ್ತವೆ. ಮಾರಿಯಮ್ಮನಿಗೆ(=ಬ್ರಾಹ್ಮಣನ ತಲೆ ಮತ್ತು ಹೊರಜಾತಿಯ ದೇಹದೊಂದಿಗೆ) ಮೇಕೆಗಳು ಮತ್ತು ಕೋಳಿಗಳು ಬಲಿಯಾದರೆ ಕೋಣ ಬಲಿ ನಿಷಿದ್ಧವಾಗಿರುತ್ತದೆ. ಎಲ್ಲಮ್ಮನಿಗೆ (=ಹೊರಜಾತಿಯ ತಲೆ ಮತ್ತು ಬ್ರಾಹ್ಮಣ ದೇಹದೊಂದಿಗೆ) ಮೇಕೆ ಮತ್ತು ಕುರಿಗಳಿಗೆ ಬದಲಾಗಿ ಕೋಣಗಳು ಬಲಿಯಾಗುತ್ತವೆ.

ವೈಟ್ ಹೆಡ್ ವಿರಚಿತ 'ವಿಲೇಜ್ ಗಾಡ್ಸ್ ಆಫ್ ಸೌಥ್ ಇಂಡಿಯಾ' ಗ್ರಂಥ ಪ್ರಕಾರ, ಈ ಐತಿಹ್ಯವು ಬಹುಶಃ ಆರ್ಯ ಸಂಸ್ಕೃತಿಯು ಮೊದಲಬಾರಿಗೆ ದಕ್ಷಿಣ ಭಾರತಕ್ಕೆ ಅಡಿಯಿರಿಸಿದ ಸಂದರ್ಭದಲ್ಲಿ ಪ್ರಕಟಗೊಂಡಿದ್ದು, ಆರ್ಯ ಮತ್ತು ದ್ರಾವಿಡ ಗುಂಪುಗಳ ಸಂಸರ್ಗವನ್ನು ಪ್ರತಿನಿಧಿಸುತ್ತದೆ. ಅಂತೆಯೇ 'ಹಿರಿಯ' ಮತ್ತು 'ಕಿರಿಯ' ಪರಂಪರೆಗಳ ಅದಲು-ಬದಲು ಪ್ರಕ್ರಿಯೆಯ ಸಮರ್ಥ ಪ್ರತೀಕವೂ ಆಗಿದೆ.

ಹಿಂದೂಧರ್ಮದ 'ಹಿರಿಯ' ಮತ್ತು 'ಕಿರಿಯ' ಪರಂಪರೆಗಳಲ್ಲಿನ ಹಲವು ಬಗೆಯ ಸಮಾನಾಂತರ ಉಪಭಾಗಗಳನ್ನು ಅನಾವರಣಗೊಳಿಸುವ ಉದ್ದೇಶದಿಂದ ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಈ ದೃಷ್ಟಿಯಿಂದ ನಾವು ಪರಿಗಣಿಸಬಹುದಾದ ತಾಕ್ಷಣಿಕವಾದ ನಾಲ್ಕು ಬಗೆಯ ಶಿರೋಭಾಗಗಳಿವು: (ಅ) ಸಾಮಾಜಿಕ ಸಂಸ್ಥೆ (ಆ) ಪಠ್ಯ (ಇ) ಅನುಷ್ಠಾನ(ಈ) ಪುರಾಣಾಖ್ಯಾನ. ಇದನ್ನೇ 'ಹಿರಿಯ' ಪರಂಪರೆಗಳಿಗೆ ಅನ್ವಯಿಸಿ ಹೇಳುವುದಾದರೆ, (ಅ) ಜಾತಿಪದ್ಧತಿ (ಆ) ವೇದಗಳು (ಇ) ವೈದಿಕ ಆಚರಣೆಗಳು (ಈ) ಭಾರತವ್ಯಾಪಿ ದೇವಗಡಣದ ವಿಷ್ಣು, ಶಿವ, ಇಂದ್ರ ಇತ್ಯಾದಿಗಳಾಗುತ್ತವೆ.

'ಹಿರಿಯ' ಪರಂಪರೆಯ ಈ ನಾಲ್ಕು ಶಿರೋಭಾಗಗಳಿಗೆ ಸಮಾನಾಂತರವಾಗಿ 'ಕಿರಿಯ' ಪರಂಪರೆಗಳಲ್ಲೂ 'ಚತುರ್ಮುಖಿ' ನೆಲೆಗಳನ್ನು ಗುರುತಿಸಬಹುದು: ೧. ವೈದಿಕ ಪಠ್ಯಗಳಿಗೆ ಬದಲಾಗಿ ಮೌಖಿಕ ಪುರಾಣಗಳು, ಸಾಧುಸಂತರ ಐತಿಹ್ಯಗಳು, ಉಪಾಖ್ಯಾನಗಳು, ಮಂತ್ರ

ತಂತ್ರಾದಿ ಅತಿಮಾನುಷ ಪದ್ಧತಿಗಳು, ಆಯಾ ಪ್ರಾದೇಶಿಕ ಭಾಷೆಗಳಲ್ಲಿ ವಿರಚಿತವಾಗಿರುತ್ತವೆ. ಬಹುತೇಕ ಸ್ಥಳೀಯ ಪರಂಪರೆಗಳಿಗೆ ಸೇರಿದ ಇವುಗಳು ಹಲವೆಡೆಗಳಲ್ಲಿ ಕಾಣ ಸಿಗುವಂತೆ ಸಂಸ್ಕೃತದಲ್ಲಿ ಪುನರ್‌ಲಿಖಿತಗೊಂಡು ಪ್ರತಿಷ್ಠೆಯನ್ನು ಪಡೆದಿರುವುದಲ್ಲದೆ, ಭಾರತವ್ಯಾಪಿ ಯಾದ ಹಂದರವೊಂದರಲ್ಲಿ ವಿಲೀನಗೊಂಡಿರುತ್ತವೆ. ೨. ವೈದಿಕ ಆಚರಣೆಗಳಿಗೆ ಸಮಾನಾಂತರ ವಾಗಿ ಪ್ರತಿಯೊಂದು ಹಳ್ಳಿಯೂ ತನ್ನದೇ ಆದ ನಿರ್ದಿಷ್ಟ ವಿಧಗಳೆನ್ನಬಹುದಾದ 'ಸಾಂಸ್ಕೃತಿಕ ಅನುಷ್ಠಾನ'ಗಳಾದ ಸ್ಥಳೀಯ ಪ್ರಾಣಿಬಲಿಗಳು, ಮಾಂತ್ರಿಕ ಆಚರಣೆಗಳು, ಜಾಗರಣೆಗಳು, ಜಾತ್ರೆಗಳು, ಪರಿಷೆಗಳನ್ನೊಳಗೊಂಡಿರುತ್ತವೆ. ೩. 'ಕಿರಿಯ' ಪರಂಪರೆಗಳಿಗೆ ಸೇರಿದ 'ಸಾಮಾಜಿಕ ಸಂಸ್ಥೆ' ಎಂದರೆ ಸ್ಥಳೀಯ ಪಂಗಡಗಳು ಮತ್ತು ವಿವಿಧ ಬುಡಕಟ್ಟುಗಳು. ೪. ಪುರಾಣಾಖ್ಯಾನಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ ದೇವರು ದೆಯ್ಯಗಳು, ಪೂಜೆಗೊಳಗಾಗುವ ಕಲ್ಲುಗಳು, ಮರಗಳು, ಮೂರುದಾರಿಗಳು, ಮತ್ತು ನದಿಗಳೆಡೆಗಳಲ್ಲಿ ಸುತ್ತಾಡಬೇಕಾಗುತ್ತದೆ (ಮುಂದೆ ಕೊಟ್ಟಿರುವ ರೇಖಾತ್ಮಕ ಚಿತ್ರದ ಪಟ್ಟಿಕೆಯನ್ನು ಗಮನಿಸಿ.)

ವಚನಗಳೆಂದರೆ ಭಕ್ತಿಕವಿತೆಗಳೇ ಸರಿ! ದೇವರನ್ನು ಕುರಿತು ಸ್ವಂತದ್ದೆನ್ನಬಹುದಾದ ಭಕ್ತಿ ಕವಿತೆಗಳಿವು; ನಿಜಮುದಯದ ನಿರ್ದಿಷ್ಟ ರೂಪಗಳೂ ಹೌದು. ವಚನಕಾರರು ತಿರಸ್ಕರಿಸುವುದು ಕೇವಲ 'ಹಿರಿಯ' ಪರಂಪರೆಗಳ ವೈದಿಕ ಧರ್ಮವನ್ನು ಮಾತ್ರವಲ್ಲ, 'ಕಿರಿಯ' ಸ್ಥಳೀಯ ಪರಂಪರೆಗಳು ಕೂಡ ಅವರ ಕಟುವಿಮರ್ಶೆಗೊಳಪಟ್ಟಿವೆ. ಪವಿತ್ರಪಠ್ಯಗಳೆಂದು ಪರಿಗಣಿಸಿ ಲ್ಪಟ್ಟ ವೇದಗಳನ್ನೆಂತೋ ಅಂತೆಯೇ 'ಕಿರಿಯ' ಪರಂಪರೆಗೆ ಸೇರಿದ ದಂತಕಥೆಗಳು, ಸ್ಥಳೀಯ ದೇವರು ದೆಯ್ಯಗಳು ಮತ್ತು ಮಾರಿ-ಮಸಣಿ ಮುಂತಾದ ಅಮ್ಮಗಳು -ಇವೆಲ್ಲವುಗಳನ್ನು ಸಮಗ್ರದೃಷ್ಟಿಯಿಂದ ಕಂಡು ಧಿಕ್ಕರಿಸಿದ್ದಾರೆ. ಸಾಂಪ್ರದಾಯಿಕ ಆಚರಣೆಗಳಲ್ಲಿ ಮಗ್ನರಾಗಿ ದೇವರಿಂದ ದೂರವಾಗಿರುವ ಸ್ತೋತ್ರಪಾಠಕರು ಮತ್ತು ಅಷ್ಟವಿಧಾರ್ಚನೆಯ ಸಾಲಿನಲ್ಲೆ, ಜನಪದರ ಮೌಢ್ಯತೆಯನ್ನು ಬಿಂಬಿಸುವ ಪ್ರಾಣಿಬಲಿಯಲ್ಲಿ ನಿರತರಾದವರ ಕ್ರೂರ ಕರ್ಮವನ್ನು ಅಣಕವಾಡಿರುವ ಬಗೆಗೆ ಮುಂದಿನ ವಚನಗಳನ್ನು ಪರಿಶೀಲಿಸಿ:

> ಜಡೆ ತಲೆವಾಗಿದರೇನು? ಗುರುಭಕ್ತನಾಗಬಲ್ಲುದೆ?
> ಇಕ್ಕುಳ ಕೈ ಮುಗಿದರೇನು? ಭೃತ್ಯಾಚಾರಿಯಾಗಬಲ್ಲುದೆ?
> ಗಿಳಿಯೋದಿದರೇನು? ಲಿಂಗವೇದಿಯಾಗಬಲ್ಲುದೆ?
> ಕೂಡಲಸಂಗನ ಶರಣರು ಬಂದಬರವ, ನಿಂದನಿಲವ
> ಅನಂಗಸಂಗಿಗಳೆತ್ತ ಬಲ್ಲರು?
>
> ಹಬ್ಬಕ್ಕೆ ತಂದ ಹರಕೆಯ ಕುರಿ
> ತೋರಣಕ್ಕೆ ತಂದ ತಳಿರ ಮೇಯಿತ್ತು।
> ಕೊಂದಹರೆಂಬುದನರಿಯದೆ ಬೆಂದೊಡಲ ಹೊರೆಯ ಹೋಯಿತ್ತು।
> ಅಂದಂದೆ ಹುಟ್ಟಿತ್ತು, ಅಂದಂದೆ ಹೊಂದಿತ್ತು
> ಕೊಂದವರುಳಿದರೆ ಕೂಡಲಸಂಗಮದೇವ?

ಸಾಮಾನ್ಯವಾಗಿ, ಧರ್ಮಗಳು ಕೆಲವೊಂದು ಗಳಿಗೆ-ದಿನಗಳು ಮತ್ತು ಸ್ಥಳಗಳನ್ನು ವಿಶೇಷವಾಗಿ ಪರಿಗಣಿಸಿ, ಪವಿತ್ರವಾದವುಗಳೆಂಬ ಮುದ್ರೆಯನ್ನೊತ್ತಿಬಿಟ್ಟಿರುತ್ತವೆ. ಅನೇಕಾನೇಕ ಆಚರಣೆಗಳು ಮತ್ತು ಆರಾಧನೋತ್ಸವಗಳು ಪೂರ್ವನಿರ್ಧಾರಿತ ಗಳಿಗೆ-ದಿನಗಳಲ್ಲೆ ಅನುಷ್ಠಾನಗೊಳ್ಳುವಂತೆಯೇ, ಸುಪ್ರಸಿದ್ಧವಾದ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸುವ ಸಲುವಾಗಿಯೇ ತೀರ್ಥಯಾತ್ರೆಗಳು ಯೋಜಿಸಲ್ಪಟ್ಟಿರುತ್ತವೆ. 'ಕಾಲ'ದ ದೃಷ್ಟಿಯಿಂದ ಪವಿತ್ರವಾದ ಪಂಚಾಂಗ ಮತ್ತು 'ದೇಶ' ದೃಷ್ಟಿಯಿಂದ ಪವಿತ್ರವಾದ ನಕ್ಷೆಗಳನ್ನಿಲ್ಲಿ ಮನಗಾಣಬಹುದು. ವಾರಣಾಸಿ (=ಕಾಶಿ)ಯಲ್ಲಿ ಪ್ರಾಣತ್ಯಾಗ ಮಾಡಿದವನು ಪರಮಪಾಪಿಯಾಗಿದ್ದರೂ ಸರಿ, ನೇರವಾಗಿ ಸ್ವರ್ಗವನ್ನು ಸೇರಿಕೊಳ್ಳುತ್ತಾನೆಂಬ ನಂಬಿಕೆ ಬಲವಾಗಿದೆ. ಕೆಳಕಂಡ ವಚನವು ಇಂಥ ಎಲ್ಲ ಪವಿತ್ರತಮ ಕಾಲ ಮತ್ತು ಪವಿತ್ರತಮ ಸ್ಥಳಗಳನ್ನು ಮೀರಿದ ಭಕ್ತನೊಬ್ಬನ ಉಲ್ಲಂಘನೆಯನ್ನು ಸ್ಪಷ್ಟವಾಗಿ ಪ್ರತಿನಿಧಿಸುತ್ತದೆ:

ಅಚ್ಚ ಶಿವೈಕ್ಯಂಗೆ
ಹೊತ್ತಾರೆ-ಅಮವಾಸೆ-ಮಟಮಧ್ಯಾಹ್ನ-ಸಂಕ್ರಾತಿ
ಮತ್ತೆ ಅಸ್ತಮಾನ-ಹುಣ್ಣಿಮೆ ಎಂಬವಿಲ್ಲ
ಭಕ್ತನ ಮನೆಯಂಗಣವೆ ವಾರಣಾಸಿ ಕಾಣಾ ರಾಮನಾಥ

ಸಾಂಪ್ರದಾಯಿಕವಾದ ವೈರುಧ್ಯಗಳನ್ನೆಲ್ಲ ಪ್ರತಿಭಟಿಸುವ ದಾಸಿಮಯ್ಯನು ತೋರಿಕೆಯ ವ್ಯತ್ಯಾಸವೆನ್ನಬಹುದಾದ ಗಂಡು-ಹೆಣ್ಣುಗಳೆಂಬ ಭೇದವನ್ನೂ ನಿರಾಕರಿಸಿಬಿಡುತ್ತಾನೆ:

ಮೊಲೆ-ಮುಡಿ ಬಂದರೆ ಹೆಣ್ಣೆಂಬರು
ಗಡ್ಡ-ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು
ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥ

ಭಾರತದ ಇನ್ನಿತರ ಭಕ್ತಿಚಳುವಳಿಗಳ ಮಾದರಿಯಲ್ಲೇ ಮುಂದುವರಿದ ವೀರಶೈವ ಶರಣರು ಹಿಂದೂಧರ್ಮದ ಇನ್ನಿತರ ಶಾಖೆಗಳ ಆಚಾರ್ಯರಂತೆ 'ಧರ್ಮ'ವೆಂಬುದನ್ನು ಜನ್ಮದತ್ತ ಹಕ್ಕು ಅಥವಾ ವಂಶಪಾರಂಪರ್ಯ ಆಸ್ತಿಯೆಂಬಂತೆ ಪರಿಗಣಿಸಿದವರಲ್ಲ. ಒಬ್ಬ ಸಂಪ್ರದಾಯವಾದಿ ಹಿಂದೂವಿನ ನಂಬಿಕೆಯ ಪ್ರಕಾರ ಹಿಂದೂವೊಬ್ಬ ಜನಿಸುತ್ತಾನೆಯೇ ಹೊರತು ರೂಪಿಸಲ್ಪಟ್ಟವನಲ್ಲ. ಇಂಥದೊಂದು ನಂಬಿಕೆಯಿರುವಾಗ ಹಿಂದೂಧರ್ಮಕ್ಕೆ ಮತಾಂತರಗೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಒಂದು ಜಾತಿ ಅಥವಾ ಧರ್ಮದಲ್ಲಿ ಹುಟ್ಟುವಿಕೆಯು ಆಯಾ ಮನುಷ್ಯನ ಆಯ್ಕೆ ಮತ್ತು ಬದಲಾವಣೆಗೆ ಹೇಗೆ ಒಳಪಡುವುದಿಲ್ಲವೋ, ಹಾಗೆಯೇ ಅದನ್ನು ಯಾರೂ ಮಾರ್ಪಡಿಸಲು ಸಾಧ್ಯವಿಲ್ಲವೆಂಬ ದೃಷ್ಟಿಯಿದು. ಆದರೆ, ಯಾವನಾದರೊಬ್ಬ ತನ್ನ ನಂಬಿಕೆಗನುಗುಣವಾಗಿ ಜೀವನಶೈಲಿ ಮತ್ತು ವಸ್ತುವಿಷಯಗಳ ನೆಲೆಯಲ್ಲೇ ಗುಣಾತ್ಮಕತೆಯನ್ನು ಸಾಧಿಸಿದಲ್ಲಿ, ಆಗ ಮಾತ್ರ ಆತನ ನಂಬಿಕೆಗಳಿಗೆ ಆಯ್ಕೆ ಮತ್ತು ಬದಲಾವಣೆಗಳ ಅವಕಾಶವಿರುತ್ತದೆ. ನಂತರ ಅವನು ಪರಿವರ್ತನೆಗೆ ಅರ್ಹ ಮತ್ತು ಪರಿವರ್ತನೆಗೊಳ್ಳಬಹುದು. ಜೊತೆಗೆ ಈ ಎಲ್ಲ ಆಚಾರ್ಯರುಗಳ ನಂಬಿಕೆಯೇನೆಂದರೆ,

ಆತ ಕೂಡ ತನ್ನ ದೇವರನ್ನೆ ನಿಜವಾದ ದೇವರೆಂದೂ ಏಕಮೇವ ಸತ್ಯವೆಂದೂ ತಿಳಿಯಬಹುದು. ತಪ್ಪಿ ನಡೆಯುವವನನ್ನು ಸರಿದಾರಿಗೆ ತರುವ ಮತ್ತು ಕತ್ತಲೆಯಲ್ಲಿರುವವನಿಗೆ ಬೆಳಕು ತೋರುವ ಇಂಥ ಕಾರ್ಯವು ಅತ್ಯವಶ್ಯವಾದುದೆಂದೂ ಪ್ರತಿಪಾದಿಸಲಾಗಿದೆ. ಒಟ್ಟಿನಲ್ಲಿ ಧರ್ಮಪ್ರಚಾರಕ ಸಮಿತಿಗಳು ಹುಟ್ಟಬಹುದು; ಭಕ್ತಿ ಪಂಥಗಳು ಪರಿವರ್ತನೆಗೊಳ್ಳಬಹುದು; ಆದರೆ ಅಭಿಜಾತ ಹಿಂದೂ ಧರ್ಮವು ಹಾಗಲ್ಲವೆಂದೇ ತಿಳಿಯಬೇಕು. ಬೆಳಗಿನ ವಚನಗಳೆನ್ನ ಬಹುದಾದ ವೀರಶೈವ ಕಾವ್ಯದ ಕೆಲವು ಭಾಗಗಳು ಸಾಕ್ಷಾತ್ ಜ್ಯೋತಿರ್ಲಿಂಗಗಳೇ ಆಗಿದ್ದು, ನಿಜ-ದರ್ಶನ ಮತ್ತು ನಿಜ-ವಚನಗಳ ಮೂಲಕ ತಮಂಧದಲ್ಲಿ ಅದ್ದಿ ಹೋಗಿರುವ ಜಗತ್ತಿಗೆ ನವಚೈತನ್ಯದಾಯಕ ಶಕ್ತಿಸತ್ವಗಳಾಗಿವೆ. ಸರ್ವಚೇತನವಾದ ಮತ್ತು ಬಹುದೇವತಾವಾದಗಳಿಂದ ತುಂಬಿಹೋಗಿದ್ದ ಸಾಂಸ್ಕೃತಿಕ ವಾತಾವರಣವನ್ನು ವಚನಕಾರರ ಏಕದೇವತಾವಾದವು ಹೊಡೆದುರುಳಿಸಿದೆ:[೪]

ಅರಗು ತಿಂದರೆ ಕರಗುವ ದೈವವ
ಉರಿಯ ಕಂಡರೆ ಮುರುಟುವ ದೈವವ
ಎಂತು ಸರಿಯೆಂಬೆನಯ್ಯ
ಅವಸರ ಬಂದರೆ ಮಾರುವ
ದೈವವನೆಂತು ಸರಿಯೆಂಬೆನಯ್ಯ
ಅಂಜಿಕೆಯಾದರೆ ಹೂಳುವ
ದೈವವನೆಂತು ಸರಿಯೆಂಬೆನಯ್ಯ
ಸಹಜಭಾವ ನಿಜೈಕ್ಯ
ಕೂಡಲಸಂಗಮದೇವನೊಬ್ಬನೇ ದೇವ

ಮಡಕೆ ದೈವ, ಮೊರ ದೈವ
ಬೀದಿಯ ಕಲ್ಲು ದೈವ
ಹಣಿಗೆ ದೈವ, ಬಿಲ್ಲನಾರಿ ದೈವ-ಕಾಣಿರೊ
ಕೊಳಗದೈವ, ಗಿಣ್ಣಿಲು ದೈವ-ಕಾಣಿರೋ
ದೈವ ದೈವವೆಂದು ಕಾಲಿಡಲಿಂಬಿಲ್ಲ
ದೇವನೊಬ್ಬನೆ ಕೂಡಲಸಂಗಮದೇವ

ತೀವ್ರಗಾಮಿಯೆನ್ನಬಹುದಾದ ಭಕ್ತಿ ಹೃದಯದಿಂದ ಮೂಡಿದ 'ಧರ್ಮಯುದ್ಧ' ರೀತಿಯ ಒಲವು ನಿಲುವುಗಳು[೫] ಎರಡಲಗಿನ ಖಡ್ಗದಂತಿದ್ದು ಉಭಯಲಿಂಗಿಯಾಗುವುದನ್ನು ಮನಗಾಣಲು ವಚನಗಳಲ್ಲೆ ಉದಾಹರಣೆಯಿದೆ:

ಎಲೆ ಗಂಡುಗೂಸೆ ನೀ ಕೇಳಾ
ನಿನಗೊಬ್ಬಗೆಂದುಟ್ಟೆ ಗಂಡುಡುಗೆಯನು:
ಮತ್ತೊಮ್ಮೆಯಾನು ಗಂಡಪ್ಪೆನಯ್ಯ
ಮತ್ತೊಮ್ಮೆಯಾನು ಹೆಣ್ಣಪ್ಪೆನಯ್ಯ

ಕೂಡಲ ಸಂಗಮದೇವ,
ನಿಮಗೆ ವೀರನಪ್ಪೆ, ನಿಮ್ಮ ಶರಣರಿಗೆ ವಧುವಪ್ಪೆ

'ಮಧ್ಯವರ್ತಿಗಳಿಲ್ಲದ ಕಾಣ್ಕೆ'

ಬೇರೆಡೆಗಳಲ್ಲಿ ಮತ್ತು ಭಾರತದ ಭಕ್ತಿಪರಂಪರೆಗಳಂತೆಯೇ ವಚನಕಾರರು ಕೂಡ 'ಹಿರಿಯ' ಮತ್ತು 'ಕಿರಿಯ' ಪರಂಪರೆಗಳನ್ನು ಕನಿಷ್ಠವಾಗಿ ಕಂಡು ಅತ್ಯುಗ್ರ ರೀತಿಯಲ್ಲಿ ತಿಸ್ಕರಿಸುವುದೇಕೆ? ಈ ಬಗ್ಗೆ ನನಗೆ ಅನಿಸುವುದೇನೆಂದರೆ 'ಹಿರಿಯ' ಮತ್ತು 'ಕಿರಿಯ' ಪರಂಪರೆಗಳೆರಡೂ ಪರಸ್ಪರ ಒಂದಾಗಿ ನಾನು ಆಗಲೇ ವಿವರಿಸಿದ ಪ್ರಕಾರ, ಶಾಬ್ದಿಕವಾದ ಎಲ್ಲ ಅರ್ಥಗಳ ಸಹಿತ 'ವ್ಯವಸ್ಥೆ'ಯೊಂದನ್ನು ಸಂರಚಿಸಿಕೊಂಡಿರುತ್ತವೆ. ಈ ಸಂರಚನೆಗಳು ಸಾಮಾಜಿಕ ದೃಷ್ಟಿಯಿಂದ ಸುವ್ಯವಸ್ಥಿತವಾದ, ಸದೃಢವಾದ, ಸುರಕ್ಷಿತವಾದ ಸ್ಥಾವರಗಳು. ಮತ್ತೊಂದು ದೃಷ್ಟಿಯಲ್ಲಿ ಮನುಷ್ಯನಿಗೋಸ್ಕರ ಇಡೀ ವಿಶ್ವವನ್ನು ವ್ಯವಸ್ಥೀಕರಿಸಲು ಅಥವಾ ಸ್ಥಿರೀಕರಿಸಲು ಎಳಸುವ ಮನುಷ್ಯ ಪ್ರಯತ್ನದ ಪೂರ್ವ ಯೋಜನೆಗನುಗುಣವಾಗಿ ಇಂಥ ಪರಂಪರೆಗಳು ಪ್ರಕಟಗೊಂಡಿರುತ್ತವೆ. ವಿಶ್ವವನ್ನು ಅಧೀನ ಮಾಡಿಕೊಳ್ಳುವ ಮತ್ತು ಭವಿಷ್ಯವಾಣಿಯ ವ್ಯಾಪ್ತಿಗೊಳಪಡಿಸುವ ಆಕಾಂಕ್ಷೆಯೂ ಇಂಥ ಪರಂಪರೆಗಳ ಆಶಯವಾಗಿರುತ್ತದೆ. ಪ್ರತಿಯೊಂದು ನಿಯಾಮಕ ಆಚರಣೆ ಅಥವಾ ಮಾಂತ್ರಿಕ ಕ್ರಿಯೆಗಳು ಪರಿಣಾಮಕಾರಕವಾದವುಗಳೆಂಬ ನಂಬಿಕೆಯಿರುತ್ತದೆ. ಇದನ್ನು 'ಫಲಶೃತಿ' ಎಂಬ ಸ್ಪಷ್ಟವಾದ ಬಾಯಿಮಾತಿನಿಂದ ಸೂಚಿಸಲಾಗಿದೆ.[೬]

ಆಚರಣೆಗಳು, ಅತಿಮಾನುಷ ಕ್ರಿಯೆಗಳು, ಪವಿತ್ರ ಕ್ಷೇತ್ರ ಮತ್ತು ಪವಿತ್ರಕಾಲಗಳು, ತೀರ್ಥಯಾತ್ರೆ ಮತ್ತು ದೇವಾಲಯ ಪ್ರದಕ್ಷಿಣೆಗಳು, ಮೀಸಲು ಕಾಣಿಕೆ ಮತ್ತು ಪೂಜಾರಿಗಳು, ಪ್ರಾರ್ಥನೆ ಮತ್ತು ಹರಕೆಗಳು ಮುಂತಾದ ಎಲ್ಲ ಬಗೆಯ 'ಮಾಡುವ' ಮತ್ತು 'ನೀಡುವ' ಸಕಲ ಅನುಷ್ಠಾನಗಳು ಫಲಾಪೇಕ್ಷೆಯಿಂದ ಕೂಡಿದ್ದು, ನಿಸರ್ಗನಿರ್ಮಿತ ವಿಶ್ವವನ್ನು ತನಗೆ ಬೇಕಾದಂತೆ ದುಡಿಸಿಕೊಳ್ಳುವುದರೊಂದಿಗೆ, ಒಬ್ಬನ ಉದ್ದೇಶಗಳಿಗೋಸ್ಕರ, ಒಬ್ಬನ ಆತ್ಮ ಅಥವಾ ಚರ್ಮ ಸಂರಕ್ಷಣೆಯನ್ನು ಎಚ್ಚರಿಕೆಯಿಂದ ಮಾಡುವುದಾಗಿದೆ. ಆಧ್ಯಾತ್ಮಿಕವಾದ ಮೋಕ್ಷ ಸಾಧನೆಯೂ ಅಭಿವೃದ್ಧಿಯ ತತ್ವದಂತೆ ಮಾರುಕಟ್ಟೆಯ ದರವಾಗುವುದನ್ನಿಲ್ಲಿ ಗಮನಿಸಬೇಕು. ಮೋಕ್ಷವೆಂಬುದು ಇಚ್ಛೆಯುಳ್ಳವನು ಕೊಂಡುಕೊಳ್ಳುವ, ಅದಲು ಬದಲು ಮಾಡಿಕೊಳ್ಳುವ ವ್ಯವಹಾರವಾಗಿಬಿಡುತ್ತದೆ. ಪರಿಣಾಮವಾಗಿ, ಹಿರಿಯ ಮತ್ತು ಕಿರಿಯ ಪರಂಪರೆಗಳೆರಡೂ ನಿಸರ್ಗ ನಿರ್ಮಿತ ವಿಶ್ವವನ್ನು ಸಂಘಟಿಸುತ್ತಾ, ವರ್ಗೀಕರಿಸುತ್ತಾ ಸಾಮಾನ್ಯ ದರಪಟ್ಟಿಯೊಂದನ್ನು ಬಿಡುಗಡೆ ಮಾಡಿಬಿಡುತ್ತವೆ.

ಆದರೆ ಇಂಥ ಚೌಕಾಯಿಷಿ ವ್ಯವಹಾರಗಳು, ಅಧೀನ ನೆಲೆಗಳು, ಮತ್ತು ಮೂರ್ಖತಮ ಭವಿಷ್ಯವಾಣಿಗಳ ಪ್ರಮಾದವನ್ನು ವಚನಕಾರರು ಚೆನ್ನಾಗಿ ಬಲ್ಲವರು. ನಿಸರ್ಗ ನಿರ್ಮಿತ ವಿಶ್ವವು ಮಾನವನ ಗ್ರಹಿಕೆಗೆ ಮೀರಿದ್ದಾಗಿರುವುದರಿಂದ ಅಂಥ ಎಲ್ಲ ಬಗೆಯ ಪೂರ್ವ ಯೋಜನೆಗಳು, ಕೃತಕವೂ ಅಜ್ಞಾನವಶವೂ ನಿಕೃಷ್ಟವಾದವುಗಳೂ ಆಗಿವೆ.

ಹೀಗೆ ಯುಗಮಾತ್ರಿಯಾದ ಮೂಢನಂಬಿಕೆಗಳು, ಸಾಮಾಜಿಕ ಸಂಪ್ರದಾಯಗಳು ಮತ್ತು ಅತಿಮಾನುಷ ಪದ್ಧತಿಗಳು, ವಿಗ್ರಹಪೂಜೆ, ಜಾತಿಪದ್ಧತಿ, ಯಜ್ಞ ಸಂಬಂಧಿ ವೈದಿಕ ಆಚರಣೆಗಳು, ಕುರಿ ಮತ್ತು ಮೇಕೆಗಳ 'ಸ್ವಕೀಯ' ಬಲಿಪೂಜೆಗಳು ಮುಂತಾದವುಗಳೆಲ್ಲವನ್ನು ವಚನಕಾರರು ತೀವ್ರವಾಗಿ ಪ್ರಶ್ನಿಸಿ ವಿಡಂಬಿಸಿದ್ದಾರೆ.

ವಚನಕಾರರ ಚಿಂತನೆ ಎಷ್ಟು ಮುಂದುವರೆದಿದೆಯೆಂದರೆ, ಒಬ್ಬ ವ್ಯಕ್ತಿ ತನ್ನ ಸತ್ಕ್ರಿಯಾಚರಣೆಗಳಿಂದ ಸ್ವರ್ಗ ಸೇರಿಕೊಳ್ಳುವ ವಿಚಾರವನ್ನೂ ತಿರಸ್ಕರಿಸಿ ಬಿಡುತ್ತಾರೆ. ಸಜ್ಜನತೆ, ಸದ್ಗುಣಸಂಪನ್ನತೆ, ಸತ್ಕ್ರಿಯಾಚರಣೆ, ಸನ್ಮಾರ್ಗ ಪ್ರವೃತ್ತಿಗಳು ದೇವರ ಬಳಿಗೆ ಗ್ಯಾರಂಟಿಯಾಗಿ ಕರೆದೊಯ್ಯಲಾರವು. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ 'ಮಾಡುವ' ಮತ್ತು 'ನೀಡುವ' ಸಮಸ್ತ ಕಾರ್ಯಗಳು ಉಳ್ಳವರ ಪಾಲಿನದಾಗಿದ್ದು, ಇವು ಸುಸ್ಪಷ್ಟವಾಗಿ 'ಆಗುವ' ಮತ್ತು 'ಅರಿಯುವ' ಕ್ರಿಯೆಗಳಿಗೆ (=ತರ್ಕಬದ್ಧವಲ್ಲದ ಅರ್ಥಗಳಲ್ಲಿ) ವಿರುದ್ಧವಾಗಿರುತ್ತದೆ:

ಅನ್ನವನಿಕ್ಕಿ ನನ್ನಿಯ ನುಡಿದು
ಅರವಟ್ಟಿಗೆಯನಿಕ್ಕಿ ಕೆರೆಯ ಕಟ್ಟಿಸಿದಡೆ
ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ
ಶಿವನ ನಿಜವು ಸಾಧ್ಯವಾಗದು
ಗುಹೇಶ್ವರನರಿದ ಶರಣಂಗೆ ಆವ ಫಲವೂ ಇಲ್ಲ

ದೇವರಿಗೆ ಸಂಬಂಧಪಟ್ಟ ಸಮಸ್ತ ನೈಜ ಅನುಭವಗಳು 'ಕೃಪಾ' ಕಟಾಕ್ಷವಿದ್ದಂತೆ. ಈ ಭಗವತ್ ಕೃಪೆಯನ್ನು ಬಯಸಿದಾಗ ಕರೆಯಲು, ಮತ್ತೆಮತ್ತೆ ಆವಾಹನೆ ಮಾಡಿಕೊಳ್ಳಲು, ಅಥವಾ ಆಜ್ಞಾಪಿಸಲು ಸಾಧ್ಯವಿಲ್ಲ. ವಚನಗಳು 'ಅನುಭವ' (experience) ಮತ್ತು 'ಅನುಭಾವ' (the experience) ನಡುವೆ ಸ್ಪಷ್ಟವಾದ ವ್ಯತ್ಯಾಸವನ್ನು ಪಾಲಿಸುತ್ತವೆ. ಕೊನೆ ಕೊನೆಗೆ, ಇದೊಂದು ನಿಜಾನ್ವೇಷಣೆಯಾಗಿದ್ದು ಮಧ್ಯವರ್ತಿಗಳಿಲ್ಲದ ಕಾಣ್ಕೆ, ಅನಿರ್ಬಂಧಿತ ಕ್ರಿಯೆ, ಪೂರ್ವನಿರ್ಧಾರಿತವಲ್ಲದ 'ವಿಶಿಷ್ಟ ಅನುಭವ' ಮಾತ್ರವಾಗಿರುತ್ತದೆ. ಸುವ್ಯವಸ್ಥಿತವಾದ ಜಗತ್ತಿನಲ್ಲಿ ಜೀವಿಸುವವನು 'ಶ್ರುತಿ' (recieved) ಮತ್ತು 'ಸ್ಮೃತಿ'ಗಳ (remembered) ಮೂಲಕ ಚರಿತ್ರೆಯಲ್ಲಿ, ಕಾಲಖಂಡಗಳಲ್ಲಿ, ಕ್ಷೇಪೆಗಳಲ್ಲಿ ಬದುಕುತ್ತಿರುತ್ತಾನೆ. ಆದರೆ 'ವಿಶಿಷ್ಟವಾದ ಅನುಭವ'ದ ಪ್ರಶ್ನೆ ಬಂದಾಗ, ಅದೊಂದು ಬಿರುಗಾಳಿಯಾಗಿದ್ದು ಅಂಥ ಎಲ್ಲ ಬಗೆಯ ಹೊಟ್ಟು ಮತ್ತು ಹೊದಿಕೆಗಳನ್ನು ತೂರಿಬಿಡುತ್ತದೆ. ಮರೆಯಲಾಗದಂತೆ ಜನ ಬಳಕೆಯಲ್ಲಿದ್ದು ಅವಕಾಶವಾದಿ ತತ್ವವನ್ನು ಸಾರುತ್ತಿರುವ ಸುಪ್ರಸಿದ್ಧವಾದ ಗಾದೆಮಾತನ್ನೊಳಗೊಂಡ (=ಗಾಳಿ ಬಂದಾಗ ತೂರಿಕೊಳ್ಳಿ) ಅಂಬಿಗರ ಚೌಡಯ್ಯನ ವಚನ ಹೀಗಿದೆ:

ಗಾಳಿಯ ಹಡೆದಲ್ಲಿ ತೂರಿಕೊಳ್ಳಿರಯ್ಯ
ಗಾಳಿ ನಿನ್ನಧೀನವಲ್ಲವಯ್ಯಾ
ನಾಳೆ ತೂರಿಹೆನೆಂದಡೆ ಇಲ್ಲವಯ್ಯಾ

ಶಿವಶರಣ ಎಂಬುದೊಂದು ಗಾಳಿಯ ಹಡೆದಲ್ಲಿ
ಬೇಗ ತೂರೆಂದ ಅಂಬಿಗರ ಚೌಡಯ್ಯ

ಅನುಭಾವಿಯಂತೆ ತೋರಿಸಿಕೊಳ್ಳುವ ಅವಕಾಶವಾದಿಯೊಬ್ಬ ಮಾತ್ರ ಇಂಥದೊಂದು ಗಳಿಗೆಗಾಗಿ ಕಾಯಬಲ್ಲ. ಅವಕಾಶದ ಗಾಳಿ ಬೀಸುತ್ತಿದ್ದಂತೆಯೇ ಇದನ್ನು ತನ್ನದಾಗಿಸಿಕೊಳ್ಳಲು ಆತ ಸದಾ ಹೊಂಚುತ್ತಿರುತ್ತಾನೆ. ಭಗವಂತನ ಕರುಣೆಯನ್ನೂ ಕಡೆಗಣಿಸಿಬಿಡುವ ಸ್ವಾರ್ಥ ದೃಷ್ಟಿಯ ಪ್ರಾರ್ಥನೆಗಳು ಅಥವಾ ಹರಕೆಗಳು- ನಿಯಮಗಳು-ಆಚರಣೆಗಳು-ಮಾಂತ್ರಿಕ ಜಗತ್ತು ಅಥವಾ ಬಲಿಪೂಜೆಯ ದಾನ ಧರ್ಮಗಳೆಲ್ಲ ಅಂಥ ಭಕ್ತರ ಪಾಲಿಗೆ ಬಲು ಹಿರಿದಾಗಿರುತ್ತವೆ.[೬] ಆದರೆ, 'ಅನುಭಾವ' ಜಗತ್ತಿನಲ್ಲಿ ಭಕ್ತನಿಗೆ ಯಾವುದೇ ಫಲಾಪೇಕ್ಷೆಯಿರುವುದಿಲ್ಲ. ಅವನ ಮನಸ್ಸೊಂದು 'ಇಲ್ಲಮೆ'ಗಳಿಂದ ತುಂಬಿದ ಕೊಡ. ಯಾರಾದರೊಬ್ಬರಿಗಾಗಿ ಅಥವಾ ಏನಾದರೊಂದಕ್ಕಾಗಿ ಭಗವಂತನಿಂದಲೇ ದೂರವಾಗುವ ಅಥವಾ ಪ್ರತ್ಯೇಕಿತನಾಗುವ ಬಗೆ ಇಲ್ಲಿರುತ್ತದೆ. ಭಕ್ತನಾದವನು ಭಗವಂತನೊಂದಿಗಿದ್ದಾಗಲೂ ಆತ ಭಗವನ್ನಾಮ ಸ್ಮರಣೆಯಿಲ್ಲದೆ ಇರಲಾರ! ಇಂಥ ಪ್ರವೃತ್ತಿಗಳ ಹಿಂದೆ ಕಂಡು ಬರುವಂತೆ, ಶಿಲೀಕೃತ ರಚನೆಗಳ (=petrification) ಬಗೆಗಿನ ಉಗ್ರಪ್ರತಿಭಟನೆಯು ಕೇವಲ ಸಮಕಾಲೀನ ಹಿಂದೂ ಪದ್ಧತಿಗಳ ಬಗೆಗಿನ ಪ್ರತಿಭಟನೆ ಮಾತ್ರವಾಗಿರದೆ, ಮೂಲ ಮಾತೃಕೆಯ ಅನುಭವಕ್ಕೆ ಹಿಂದಿರುಗಲು ಕೊಟ್ಟ ಕರೆಯಾಗಿದೆ ಎಂಬುದನ್ನಿಲ್ಲಿ ಮರೆಯಾಬಾರದು. ಯೂರೋಪಿನ ಪ್ರಾಟೆಸ್ಟಂಟ್‌ರಂತೆ ವೀರಶೈವರು ಕೂಡ ಪ್ರಾಚೀನ ಪರಂಪರೆಗಳ ಮೂಲಭಾವದ ಸ್ಫೂರ್ತಿಯಿಂದ ದೂರ ಸಿಡಿಯದೆ, ತಾವು ಮನಗಂಡಂತೆ ನೈಜ ಮತ್ತು ಪ್ರಸ್ತುತವೆನಿಸಿದ ಅನುಭವಕ್ಕೆ ಬದ್ಧರಾಗಿದ್ದರು.

ಪ್ರತಿಭಟನೆಯು ಮುಂದುವರಿಕೆಯನ್ನು ತುಂಡರಿಸುವುದಿಲ್ಲ. ತಾಕ್ಷಣಿಕ ಪರಿಸರದೊಂದಿಗೆ ಸ್ಥಾಪಿಸಿಕೊಳ್ಳುವ ಮಾನಸಿಕ ದೂರದ ಮನಃಸ್ಥಿತಿಯೆಂದರೆ, ಉನ್ನತ ಆದರ್ಶಗಳ ಮುಂದುವರಿಕೆಯೆಂದೇ ಅರ್ಥ. ಹೀಗೆ ಪ್ರತಿದ್ವಂದ್ವಿಯೊಬ್ಬನ ಆದರ್ಶಗಳ ಹೆಸರಿನಲ್ಲೂ ಪ್ರತಿಭಟನೆಯು ಎಡೆಪಡೆಯಬಲ್ಲುದು.

'ವಚನಾದರ್ಶಗಳು' ವೀರಶೈವ ಸಮಾಜದಲ್ಲಿ ಸಮಗ್ರವಾಗಿ ಅನುಷ್ಠಾನಗೊಂಡಿಲ್ಲವೆಂಬುದನ್ನಿಲ್ಲಿ ಮರೆಯಬಾರದು. ಆದರ್ಶಗಳು ಸಾಕ್ಷಾತ್ಕಾರಗೊಳ್ಳುವ ಬಗೆಯಲ್ಲಿ ದೇವರುಗಳೆಂಬ ಮಾಯಾ ಬಜಾರು ಮತ್ತು ಮನುಷ್ಯ ಬಜಾರುಗಳ ರೀತಿ-ನೀತಿಗಳು ಸಂಕೀರ್ಣವಾದ ಸಂಬಂಧವನ್ನು ಹೊಂದಿರುತ್ತವೆ. ನಾವಿಲ್ಲಿ ಸಮಕಾಲೀನ ಲಿಂಗಾಯತ ಸಮಾಜದ ಮಾನವ ಶಾಸ್ತ್ರೀಯ ನೆಲೆಯಿಂದ[೭] ಚಿಂತನೆಗೆ ತೊಡಗದೆ, ವಚನಗಳೆಂಬ ಪಠ್ಯಗಳನ್ನು ನಿರ್ದಿಷ್ಟ ಸಂದರ್ಭವೊಂದರಲ್ಲಿಟ್ಟು ವರ್ಣಿಸಬೇಕೆಂಬ ಉಮೇದಿಗೊಳಗಾಗದೆ ಮುಕ್ತವಾಗಿರಬೇಕಾಗುತ್ತದೆ.

ಇದುವರೆಗೆ ನಿರೂಪಿಸಿದ ವಿಚಾರಧಾರೆಯನ್ನು ಕೆಳಗಿನ ಪಟ್ಟಿಕೆಯಲ್ಲಿ ಸಾರಾಂಶೀಕರಿಸಲಾಗಿದೆ. ಪಟ್ಟಿಕೆಯಲ್ಲಿರುವ 'ಚುಕ್ಕಿ' ರೇಖೆಗಳು ಒಂದರೊಳಗೊಂದು ಸಮಾವೇಶಗೊಳ್ಳಲು ನೆರವಾಗುವ ಸೂಕ್ಷ್ಮ ತಂತುಗಳ ಜಾಲವನ್ನು ಸೂಚಿಸುತ್ತದೆ.

ಹಿಂದೂ ಧರ್ಮ

ರಚನೆ | ಪ್ರತಿರಚನೆ

ವ್ಯವಸ್ಥೆ : ಸಾಂಸ್ಥಿಕಧರ್ಮ			ಬಂಡಾಯ: ಆತ್ಮಧರ್ಮ
	ಹಿರಿಯ ಪರಂಪರೆ	ಕಿರಿಯ ಪರಂಪರೆ	
ಪಠ್ಯ	ವೇದಗಳು ಇತ್ಯಾದಿ	ಸ್ಥಳೀಯ ಪುರಾಣಗಳು ಇತ್ಯಾದಿ	
ಅನುಷ್ಠಾನ	ವೈದಿಕ ಆಚರಣೆಗಳು	ಸ್ಥಳೀಯ ಬಲಿಪೂಜೆಗಳು	Vs.. ಭಕ್ತಿ
ಸಾಮಾಜಿಕ ಸಂಸ್ಥೆ	ಜಾತಿಪದ್ಧತಿ	ಬುಡಕಟ್ಟುಗಳು ಮತ್ತು ಪಂಗಡಗಳು	
ಪುರಾಣಾಖ್ಯಾನ	ಭಾರತವ್ಯಾಪಿ ದೇವತೆಗಳು	ಪ್ರಾದೇಶಿಕ ದೇವತೆಗಳು	

ವಿಕ್ಟರ್ ಟರ್ನರ್‌ನ 'The Ritual Process' ಎಂಬ ಕೃತಿಯಿಂದ 'ರಚನೆ' ಮತ್ತು 'ವಿರುದ್ಧರಚನೆ' (Structur-antistructure) ಗಳೆಂಬ ಪರಿಭಾಷೆಗಳನ್ನು ಎತ್ತಿಕೊಂಡಿರುವ ನಾನು, ವಿರುದ್ಧರಚನೆ ಮತ್ತು 'ಎದುರುರಚನೆ'ಗಳ (counter Structure) ನಡುವೆ ಸ್ಪಷ್ಟ ವ್ಯತ್ಯಾಸವನ್ನು ಪಾಲಿಸಲು ಇಚ್ಛಿಸುತ್ತೇನೆ. 'ರಚನೆ'ಗೆ ವಿರುದ್ಧವಾದ 'ಪ್ರತಿರಚನೆ'ಯು (Anti-Structure) 'ರಚನೆ'ಯೆಂಬ ಪರಿಕಲ್ಪನೆಯನ್ನೇ ತಿರಸ್ಕರಿಸುವ ಆದರ್ಶವನ್ನಿಟ್ಟುಕೊಂಡಿದೆ. ಈ ಭಕ್ತಿಪಂಥಗಳು 'ವಿರುದ್ಧರಚನೆ'ಗಳನ್ನು ಉಗ್ಗಡಿಸುತ್ತಿರುವಾಗಲೂ, ವರ್ತನೆಗಳು ಮತ್ತು ನಂಬಿಕೆಗಳ ವಿಷಯದಲ್ಲಿ ತಮ್ಮದೇ ಸ್ವಂತ ರಚನೆಗಳನ್ನು ಅವಶ್ಯವೆಂಬಂತೆ ಬೆಳೆಸಿಕೊಂಡುಬಿಟ್ಟಿವೆ. ಕೆಲವೊಮ್ಮೆ ತಾವು ನಿರ್ಲಕ್ಷಿಸುವ ಅಥವಾ ತಿರಸ್ಕರಿಸುವ ಅಧಿಕ ರಚನೆಗಳಿಂದ (Very structure) ಮೂಲಧಾತುಗಳನ್ನು ಸ್ವಲ್ಪಮಟ್ಟಿಗಾದರೂ ಆಯ್ಕೆಮಾಡಿಕೊಂಡಿದ್ದು, ಮತ್ತೆ ಮತ್ತೆ ಅವುಗಳತ್ತ ದೃಷ್ಟಿಹಾಯಿಸಲು ಪ್ರೇರೇಪಿಸುತ್ತಾರೆ. ವೀರಶೈವರು ತಮ್ಮ ಸಮಾಜದಲ್ಲಿ ಬೆಳೆಸಿದ್ದು ಪೂರ್ಣ ಪ್ರಮಾಣದ 'ಸಾಮುದಾಯಿಕ ಸಮತ್ವ' (communitas) ಭಾವವನ್ನಲ್ಲ. ಬದಲಿಗೆ, ಹುಟ್ಟು ಮತ್ತು ಕಾಯಕವನ್ನು ಆಧಾರವಾಗಿಟ್ಟುಕೊಳ್ಳದ ಧಾರ್ಮಿಕ ಸಿದ್ಧಿಯ ಗುರುಗಳು, ಹಿರಿಯರು ಮತ್ತು

ನವಶಿಷ್ಯರನ್ನೊಳಗೊಂಡ ಮೂರುಸ್ತರಗಳ ವಿಭಾಗೀಯ ಪದ್ಧತಿಯನ್ನು ಪುರಸ್ಕರಿಸಿದ್ದಾರೆ. (ಅಕ್ಕಮಹಾದೇವಿಯ ವಚನಗಳು ಇಂಥ ಧಾರ್ಮಿಕ ಪದ್ಧತಿಯ ವಿವರಗಳನ್ನೊಳಗೊಂಡಿವೆ) ಪ್ರತಿಯೊಂದು ಸಾಮಾಜಿಕ ವರ್ಗ, ಜಾತಿ ಮತ್ತು ವೃತ್ತಿಗಳು, ಸ್ಪೃಶ್ಯರು ಮತ್ತು ಅಸ್ಪೃಶ್ಯರು, ಮಡಿವಾಳರು, ಅಂಬಿಗರು, ಚಮ್ಮಾರರು ಮಾತ್ರವಲ್ಲದೆ, ರಾಜರಿಂದ ಹಿಡಿದು ಸಚಿವರು, ಶ್ರಮಜೀವಿಗಳವರೆಗೆ ಸಮಾಜದ ಎಲ್ಲ ನೆಲೆಗಳಿದ ಶಿವಶರಣರು ಮೂಡಿಬಂದಿದ್ದಾರೆ. ಇಂಥದೊಂದು ವರ್ಗಗೋಪುರದ ಪತನ ಹಾಗೂ ಹೊಸ ಅಲೆಯ ಶರಣರು ಮತ್ತು ಶರಣರಾಗುವವರ ವೃತ್ತಿಗಳು ಎಷ್ಟೇ ಅಲ್ಪಕಾಲಿಕವಾಗಿರಲಿ, ವೀರಶೈವರ ಉದ್ಘೋಷಗಳಾದ 'ಕಾಯಕವೇ ಕೈಲಾಸ' (ಬಸವಣ್ಣ), 'ಕಾಯಕವೇ ನಾಕ', 'ಕಾಯಕವೆಂದರೆ ದೇವಲೋಕ ದೊಳಗು' -ಎಂದು ಮುಂತಾಗಿ ಸಾರುತ್ತವೆ. 'ಕಾಯಕ'ವೆಂದರೆ(=ಪೂಜಾ ಕಾಯಕ) ಆಚರಣಾ ಕಾರ್ಯ ಅಥವಾ ಪೂಜಾಕಾರ್ಯ ಎಂಬರ್ಥವಿದೆಯಾದರೂ ವಚನಗಳಲ್ಲಿ ಮಾತ್ರ ಶ್ರಮ ಜೀವನ, ದುಡಿಮೆ ಎಂಬರ್ಥದಲ್ಲಿಯೇ ಸ್ವೀಕರಿಸಬೇಕಾಗಿದೆ. ಇದರ ಜೊತೆಗೆ, ವೀರಶೈವರ ಹೊಸ ಸಮಾಜದಲ್ಲಿ ರೂಢಿವಶವಾದ ಸಾಮಾಜಿಕ ಸಂಬಂಧಗಳ ಬಹುಮುಖಿ ಅಂತರ್ ಜಾಲದ ಬದಲಿಗೆ, ಒಬ್ಬರು ಮತ್ತೊಬ್ಬರೊಂದಿಗೆ-ಗುರುವಿನೊಂದಿಗೆ-ವಿಶೇಷವಾಗಿ ದೇವ ರೊಂದಿಗೆ ಸ್ಥಾಪಿಸಿಕೊಳ್ಳುವ ದ್ವಂದ್ವಮಾನ ಸಂಬಂಧಗಳ ನೆಲೆಯನ್ನೂ ನಾವು ನೋಡ ಬಹುದು. ಇಂಥ ದ್ವಂದ್ವಮಾನತೆಯು ಆತ್ಮೀಯ ಸಂಬಂಧಗಳ ಜೊತೆಗೂ ಸಂಕೇತಿಸಲ್ಪಟ್ಟಿರು ತ್ತವೆ; ನಲ್ಲ-ನಲ್ಲೆ, ತಂದೆ-ಮಗ, ತಾಯಿ-ಮಗು, ಹಾದರಗಿತ್ತಿ-ಹಾದರಿಗ, ಸ್ವಾಮಿ-ಸೇವಕ.

ಭಕ್ತಿಯಲ್ಲಿ ಹಲವಾರು ಬಗೆಗಳಿವೆಯಾದರೂ ನಾನಿಲ್ಲಿ ಕೇವಲ ವಚನಗಳನ್ನಾಧರಿಸಿ ಮಾತನಾಡುತ್ತಿದ್ದೇನೆ. ಔತ್ತರೇಯ ಪರಂಪರೆಗಳಲ್ಲಿ ಕಬೀರದಾಸರ ದೋಹೆಗಳು ವಚನಗಳಿಗೆ ಸಮಾನಾಂತರ ಉದಾಹರಣೆಗಳಾಗಿ ತೋರುತ್ತವೆ. ಒಟ್ಟಿನಲ್ಲಿ 'ಹಿರಿಯ' ಮತ್ತು 'ಕಿರಿಯ' ಪರಂಪರೆಗಳು ಒಂದರೊಳಗೊಂದು ಹೊಕ್ಕು ಹರಿಯುತ್ತಾ, ರಸಾಯನಶಾಸ್ತ್ರದ ಪರಿಭಾಷೆ ಯಾದ 'ಸಂಚಲನೆ'ಯನ್ನು (Osmosisi) ನೆನಪಿಸುತ್ತವೆ. ಮೇಲಿನ ಪಟ್ಟಿಕೆಯಲ್ಲಿ ವಿವಸಿರುವಂತೆ ವಚನ ಚಳುವಳಿಯು ಹಿಂದೂಮತದ 'ಸಾಂಸ್ಥಿಕ ಧರ್ಮ'- 'ವ್ಯವಸ್ಥೆ' ಅಥವಾ 'ರಚನೆ'ಗಳನ್ನು ಪರಸ್ಪರ ಸಂಯೋಜಿಸಿ ನೋಡುತ್ತದೆ. ವಿರುದ್ಧ ರಚನೆಯಾದ ಭಕ್ತಿಯು ಆರಂಭಗೊಳ್ಳುವುದೇ ಇಂಥದೊಂದು ವ್ಯವಸ್ಥೆಯನ್ನು ನಿರ್ಲಕ್ಷಿಸುವ ಮತ್ತು ತನ್ನನ್ನು ಸಮರ್ಥಿ ಸಿಕೊಳ್ಳುವುದರ ಮೂಲಕ. ಆದರೆ ಕಾಲಗತಿಯ ಚಕ್ರ ಚಲನೆಯಲ್ಲಿ ಇಂಥ ದೇಸೀದಂಗೆಗಳು ಮರೀಯ ತೆಕ್ಕೆಗೊಳಗಾದವು, ಇದಕ್ಕನುಗುಣವಾಗಿ ದೇವಾಲಯಗಳು ಭವ್ಯವಾಗಿ ಎದ್ದು ನಿಂತವು, ಸಂಸ್ಕೃತದಲ್ಲಿ ಸಾಧುಸಂತರ ಮಹಿಮೆಗಳನ್ನು ಬಿತ್ತರಿಸಲಾಯ್ತು. ಕೇವಲ ಸ್ಥಳೀಯ ಐತಿಹ್ಯ ಮತ್ತು ಆಚರಣೆಗಳು ಮಾತ್ರವಲ್ಲದೆ ವಿಸ್ತೃತವಾದ ಮತಧರ್ಮಶಾಸ್ತ್ರವೊಂದು ಏಕರೂಪಾತ್ಮಕ ನೆಲೆಯಲ್ಲಿ ವಿಸ್ತರಿಸಿಕೊಳ್ಳುತ್ತಾ, ನಾನಾವಿಧವಾದ ಹಿರಿಯ ಪರಂಪರೆಯ ಅಂಶಗಳು ವಚನಗಳು ಸುತ್ತ ಬೆಳೆಯತೊಡಗಿದವು. ಇದರಿಂದಾಗಿಯೇ ಹೊಸ ಜಾತಿಯೊಂದರ ಸ್ಥಾಪಕರ ಮತ್ತು ಧರ್ಮಾಧಿಕಾರದ ಪ್ರಭಾವಳಿಯೊಂದು ಇಂಥ 'ನವಧಾರ್ಮಿಕವಾದಿ

ಪಂಥ'ಗಳಿಂದ (new egalitarian movements) ಪೂರ್ವಾನ್ವಯವಾಗಿ ಪ್ರಕಟಗೊಂಡಿತು.

ವೀರಶೈವರು ತಮ್ಮ ಕಾಲದ ಹಿಂದೂಧರ್ಮದ ವಿರುದ್ಧ ತಿರುಗಿ ಬಿದ್ದ ಬಂಡಾಯಗಾರರು ಮಾತ್ರವಾಗಿರದೆ ಹಿಂದೂಧರ್ಮದ ಪ್ರಬಲ ಪ್ರತಿಸ್ಪರ್ಧಿಯಾಗಿದ್ದ ಜೈನಧರ್ಮದ ವಿರುದ್ಧವೂ ತಿರುಗಿಬಿದ್ದವರಾಗಿದ್ದಾರೆ. ಬಸವಣ್ಣನ ಮತ್ತು ದಾಸಿಮಯ್ಯನ ಜೀವನವು ಹಿಂದೂಧರ್ಮ ಮತ್ತು ಜೈನಧರ್ಮಗಳಿಗೆ ವಿರುದ್ಧವಾಗಿ ನಡೆಸಿದ ಅವಿರತ ಹೋರಾಟವಾಗಿದೆ. ಅಂದು ರಾಜಕೀಯವಾಗಿ ಶಕ್ತಿವಂತರಾಗಿದ್ದ ಜೈನರು ಆ ಪ್ರದೇಶದಲ್ಲಿ ಪ್ರತಿಷ್ಠೆಯನ್ನು ಪಡೆದಿದ್ದರು. ತಾತ್ವಿಕವಾಗಿ ಹೇಳುವುದಾದರೆ ಜೈನರ ಕರ್ಮಸಿದ್ಧಾಂತವು ನಿರುಪಾಧಿಕವಾದುದು; ವ್ಯಕ್ತಿಯು ಕಾರ್ಯ-ಕಾರಣ ಸಂಬಂಧದ ಸರಪಳಿಯಿಂದ ತಪ್ಪಿಸಿಕೊಳ್ಳುವ ಪ್ರಶ್ನೆಯೇ ಇರಲಿಲ್ಲವಾಗಿ ಭಗವಾನರ ಕೃಪಾಕಟಾಕ್ಷದ ಮಾತು ದೂರವೇ ಉಳಿಯಿತು. ಇಂಥ ನಿಷ್ಠುರ ನಿರುಪಾಧಿಕ ತತ್ವವನ್ನೊಪ್ಪದ ಶಿವಶರಣರು ಜೈನದೃಷ್ಟಿಯ 'ಕೃಪೆ'ಯನ್ನು ಭಕ್ತಿತತ್ವದ ಮೂಲಕ ಛಿದ್ರಿಸಿದ್ದಾರೆ. ಆದರೂ ಹಿಂಸಾತ್ಮಕ ಬಲಿಪೂಜೆಗಳು ಮತ್ತು ಸಾಂಪ್ರದಾಯಿಕ ಆಚರಣೆಗಳ ವಿಷಯದಲ್ಲಿ ಜೈನ ಮತ್ತು ಬೌದ್ಧದರ್ಶನಗಳೊಂದಿಗೆ ಸಹಮತವುಳ್ಳವರಾಗಿದ್ದು (ದಸರೇಶ್ವರ) ಅಹಿಂಸೆಯ ಅಖಿಲ ಜೀವಾತ್ಮಕ ನೆಲೆಯನ್ನು ಎತ್ತಿ ಹಿಡಿದಿದ್ದಾರೆ. ಸಾಮಾನ್ಯವಾಗಿ ಶೈವ ಸಿದ್ಧಾಂತ ಮತ್ತು ವೀರಶೈವ ಮೀಮಾಂಸೆಯನ್ನು ಬಹುಮಟ್ಟಿಗೆ ಸಮರ್ಪಕವಾಗಿ ವರ್ಣಿಸಿರುವ ಪ್ರಕಾರ, ಅದು ಹಿಂದೂಧರ್ಮದ ಒಳಗಣ ಬಂಡಾಯವಾಗಿದ್ದರೆ, ಜೈನ ಮತ್ತು ಬೌದ್ಧದರ್ಶನ ಗಳು ಹೊರಗಣ ಬಂಡಾಯವಾಗಿದೆ. (ನಂದಿಮಠ.ಪು.೫೩). ಕೆಲವು ವೀರಶೈವ(ಉಗ್ರ)ರು ಹಿಂದೂಧರ್ಮದೊಂದಿಗೆ ಎಲ್ಲ ಸಂಬಂಧಗಳನ್ನು ಕಡಿದುಕೊಂಡಂತೆ ಮಾತನಾಡುತ್ತಾರೆ.

ವಚನ ವಿನ್ಯಾಸ ಮತ್ತು ತೋಂಡಿ ಕಾವ್ಯಮೀಮಾಂಸೆ

ಸಂಸ್ಕೃತ ಧಾರ್ಮಿಕ ಪಠ್ಯಗಳನ್ನು 'ಶ್ರುತಿ' ಮತ್ತು 'ಸ್ಮೃತಿ'ಗಳೆಂದು ಕರೆಯುವುದುಂಟು. ಹೆಸರೇ ಸೂಚಿಸುವಂತೆ ಯಾವುದನ್ನು ಕೇಳಿದ್ದೇವೆಯೋ ಅದು 'ಶ್ರುತಿ', ಯಾವುದು ನೆನಪಿನಲ್ಲಿ ದೆಯೋ ಅದು 'ಸ್ಮೃತಿ'. ಶಿವಶರಣರು ತಮ್ಮ ರಚನೆಗಳನ್ನು 'ವಚನ'(=ನುಡಿ)ಗಳೆಂದು ಕರೆದಿದ್ದಾರೆ. ಯಾವುದನ್ನು ನುಡಿಯುತ್ತಿರುವೆವೋ ಅದೇ 'ವಚನ'ವೆಂಬುದನ್ನಿಲ್ಲಿ ಗ್ರಹಿಸಬೇಕು. ಸಕ್ರಿಯ ಸಮವಾದಗಳಾದ ವಚನಗಳು ಶ್ರುತಿ ಮತ್ತು ಸ್ಮೃತಿಗಳೆರಡರ ವಿರುದ್ಧ ಇದೀಗ ನುಡಿಯುವುದು ಮತ್ತು ಪ್ರಕಟಗೊಳ್ಳುವುದಾಗಿದೆ. ಅಂದರೆ, ಶ್ರುತಿ-ಸ್ಮೃತಿಗಳು ಭೂತಕಾಲಕ್ಕೆ ಸೇರಿದ್ದಾಗಿದ್ದರೆ, ವಚನಗಳು ವರ್ತಮಾನ ಕಾಲಕ್ಕೆ ಸೇರಿವೆ. ಶರಣರ ಪಾಲಿಗೆ ಧರ್ಮವೆನ್ನುವುದು ನೋಡಬೇಕಾದ ಆಟ, ಪಡೆಯಬೇಕಾದ ಸಂದರ್ಶನ ಅಥವಾ ಬಳಕೆಯ ವಸ್ತುವಾಗಿರಲಿಲ್ಲ. ಅವರಿಗೆ ಅದೊಂದು ಹೊಚ್ಚಹೊಸ ಅನುಭವ; ಆಗುವಿಕೆಗೆ ಸಂಬಂಧಿಸಿದ್ದು. ಈ ವೈಶಿಷ್ಟ್ಯವು ವಚನಗಳ ಭಾಷೆ ಮತ್ತು ರೂಪಗಳನ್ನು ಗಮನಿಸಿದರೆ ಮೇಲುನೋಟಕ್ಕೆ ವ್ಯಕ್ತಗೊಳ್ಳುತ್ತದೆ. ಸಂಸ್ಕೃತದಿಂದ ಸ್ವೀಕರಿಸಿದ ಛಂದೋರೂಪಗಳು ಮತ್ತು ಸ್ಥಳೀಯ ದ್ರಾವಿಡ ಛಂದೋಗತಿಗಳಿಂದ ಮಧ್ಯಕಾಲೀನ ಕನ್ನಡವು ಸಮೃದ್ಧವಾಗಿದ್ದರೂ, ವಚನಗಳಲ್ಲಿ ಮಾತ್ರ ಯಾವುದೇ ಛಂದೋಬದ್ಧ ಪಂಕ್ತಿ ಅಥವಾ ಚರಣವು ಬಳಕೆಯಾಗಿಲ್ಲ.[೨೦]

ಶರಣರು ಇಂಥ ಯಾವುದೇ ಸಿದ್ಧ ಮಾದರಿಗಳನ್ನು ಅನುಸರಿಸಿಲ್ಲ. ಬಸವಣ್ಣನ ನುಡಿಯಿದು:

ತಾಳಮಾನವ ಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವ,
ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ

ಇದು ಅವನೇ ಹಾಡಿಕೊಂಡದ್ದಲ್ಲ; ಅವನ ಮೂಲಕ ಸ್ವತಃ ದೇವರೇ ಹಾಡಿದ್ದು. ಇದಕ್ಕಾಗಿ ಉದ್ದೇಶಿಸಿದ ಸಾಧನವು 'ಮಾಡಿದ್ದಲ್ಲ; ಬದಲಿಗೆ 'ಒಂದೇ ಆಗಿರುವುದು'. ದೇಹವು ದೇವಾಲಯ ಹೇಗೋ ಹಾಗೆಯೇ 'ದಂಡಿಗೆ'ಯೂ ಆಗಬಲ್ಲುದು:

ಎನ್ನಕಾಯವ ದಂಡಿಗೆಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಬೆರಲ ಕಡ್ಡಿಯ ಮಾಡಯ್ಯ
ಬತ್ತೀಸ ರಾಗವ ಹಾಡಯ್ಯ
ಉರದಲೊತ್ತಿ ಬಾಜಿಸು ಕೂಡಲಸಂಗಮದೇವ

ವಚನಗಳು ಪೂರ್ವಧ್ಯಾನಿತ ಕಲಾಸಿದ್ಧಿಯ ಪರಿಣಾಮಗಳೆನ್ನಬಹುದಾದ 'ಸ್ಥಾವರ' ರೂಪಗಳ ನಿರಾಕರಣೆಯಾಗಿರುವುದನ್ನಿಲ್ಲಿ ಗ್ರಹಿಸಬೇಕು. ದೇವರಿಗಾಗಿ ಹೊರಹೊಮ್ಮಿದ ಜೀವನಾದವೆನ್ನ ಬಹುದಾದ ವಚನಗಳು 'ನಿರರ್ಗಳ ನಿನಾದ'ಗಳು ಮಾತ್ರವಲ್ಲ; ಇವು ನಿರರ್ಗಳತೆಗಾಗಿ ತುಡಿಯುತ್ತಿರುವ ನಿನಾದಗಳು ಕೂಡ.

ಸಾಂಪ್ರದಾಯಿಕವಾದ ಛಂದೋಗತಿಗಳು ಅಥವಾ ತಾಳಮಾನಗಳೂ ಯಾಂತ್ರಿಕವಾದ ಆಚರಣೆಯ ಲಯಗಳಂತಿದ್ದು, ಕಲಿಕೆಯ-ನಿರಾಸಕ್ತಿಯ-ಜೀವರಾಹಿತ್ಯದ ಭಾವನೆಯನ್ನು ಹುಟ್ಟು ಹಾಕುತ್ತಿರುತ್ತವೆ; ಇಂಥ ಸ್ಥಿತಿಯಿಂದ ಪಾರಾಗಬೇಕಾದರೆ ಕವಿತೆಯೊಂದು ಬಹು ಚೆನ್ನಾಗಿ ಸುಸಾಂಗತ್ಯಗೊಳ್ಳುವುದರ ಮೂಲಕ ಜೀವಂತಿಕೆಯನ್ನು ಉಳಿಸಿಕೊಳ್ಳಬೇಕಾಗುತ್ತದೆ. ಸ್ಥಾವರ-ಜಂಗಮಗಳೆಂಬ ಪರಿಭಾಷೆ ಸಾಹಿತ್ಯಕ್ಕೂ ಬಹುಚೆನ್ನಾಗಿ ಒಪ್ಪುತ್ತದೆ. ಸಾಹಿತ್ಯಕ್ಷೇತ್ರ ದಲ್ಲಿ ಕೂಡ 'ಸ್ಥಾವರ'ವಾದದ್ದು ಅಲ್ಪಾಯುವಾಗಿದ್ದರೆ, 'ಜಂಗಮ'ವಾದದ್ದು ಚಿರಾಯುವಾಗಿ ರುತ್ತದೆ. ಅಭಿಜಾತ-ರಮ್ಯ, ಆಲಂಕಾರಿಕ-ನೈಜ, ವೈಯಕ್ತಿಕ-(ಅ)ವೈಯಕ್ತಿಕ, ಛಂದ-ಮುಕ್ತಛಂದಗಳೆಂಬ ಪತಾಕೆಗಳಡಿ ಯೂರೋಪಿನಲ್ಲಿ ನಡೆದ ಕುರುಕ್ಷೇತ್ರಗಳೇ, ಭಾರತೀಯ ಸಾಹಿತ್ಯದ ಪ್ರಕಾರಗಳಲ್ಲೊಂದಾದ 'ವಚನ'ಗಳಲ್ಲೂ ಕಂಡುಬರುತ್ತದೆ.

'ನಿರರ್ಗಳತೆ'ಯ ತತ್ವದಲ್ಲೂ (Spontaneity) ತನ್ನದೇ ಆದ ಕಲಾತ್ಮಕ ರಚನೆಯಿರುವು ದನ್ನು ಉಪೇಕ್ಷಿಸಲಾಗದು. ಮುಕ್ತಛಂದವು ನೈಜವಾಗಿ ಮುಕ್ತವಾಗಿರುವುದಿಲ್ಲ. ವಿವಿಧ ರಚನಾಪದ್ಧತಿಗಳ ಆಧಾರವಿಲ್ಲದ 'ನಿರರ್ಗಳತೆ'ಯನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಮುಕ್ತವಾಗಿ ಕಾಣುವ ಪದ್ಯರಚನೆಗಳಲ್ಲೂ ಬಗೆಬಗೆಯ ಸರಣಿಗಳ ನೇಯ್ಗೆ, ನಾದಲಯಗಳು,

ಮತ್ತು ಅರ್ಥದ ಅನುರಣನಗಳು ಇದ್ದೇ ಇರುತ್ತವೆ. ಎಂ. ಚಿದಾನಂದಮೂರ್ತಿಯವರು ಪ್ರತಿಪಾದಿಸಿರುವಂತೆ[೨೧] ಮೇಲು ನೋಟಕ್ಕೆ ಛಂದೋರಹಿತವಾಗಿ ತೋರುವ ವಚನಗಳು ಕೂಡ ತ್ರಿಪದಿ ಛಂದಸ್ಸನ್ನು ಆಧಾರವಾಗಿಟ್ಟುಕೊಂಡಿರುವುದು ಸೋಜಿಗವೇನಲ್ಲ. ತೋಂಡಿ ಪರಂಪರೆಯಲ್ಲಿ ಜನಪ್ರಿಯವಾದ ಮೂರುಸಾಲಿನ ಪದ್ಯರೂಪವಾಗಿರುವ 'ತ್ರಿಪದಿ'ಯು ಜನಪದಗೀತೆ ಮತ್ತು ಮುಕ್ತಕಗಳೆರಡರಲ್ಲೂ ವ್ಯಾಪಕವಾಗಿ ಬಳಕೆಯಲ್ಲಿದೆ.

ಪಾರ್ರಿ ಮತ್ತು ಲಾರ್ಡ್ ರೀತಿಯ ವಿದ್ವಾಂಸರು ಜನಪದ ಮಹಾಕಾವ್ಯಗಳಲ್ಲಿರುವ ಮೌಖಿಕ ಪದ್ಯ-ನಿರ್ಮಾಣ ತಂತ್ರಗಳನ್ನು ಅಧ್ಯಯನ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಚುಟುಕು ರಚನೆಗಳ ಬಗ್ಗೆಯೂ ಅವರು ಕೊಂಚ ಗಮನ ಹರಿಸಿದ್ದಾರೆ. 'ವೀರೋಚಿತ'(heroic) ಮೌಖಿಕ ಕಾವ್ಯ ಪದ್ಧತಿಯನ್ನು ಲಕ್ಷಿಸಿ, ಅವರು ಪ್ರಸ್ತಾಪಿಸಿರುವ ಹಲವಾರು ವಿಶಿಷ್ಟಾಂಶಗಳು ವಚನಗಳಲ್ಲೂ ಪ್ರಕಟಗೊಂಡಿವೆ: ನಿರ್ದಿಷ್ಟ ರೀತಿಯ ಸಂಚಿತ ಆಶಯಗಳು ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುವುದರೊಂದಿಗೆ ವಿಚಾರಗಳು ಮತ್ತು ನುಡಿಗಟ್ಟುಗಳು ಆವರ್ತನೆಗಳು, ಚಕ್ರಗತಿಯ ಭಾವಾಭಿವ್ಯಕ್ತಿಗಳು ಅಥವಾ ಕವಿತಾ ಸರಣಿಗಳನ್ನು ವಚನಗಳಲ್ಲಿ ಮನಗಾಣಬಹುದು. ಆದರೆ, ಮೌಖಿಕವಾದ 'ಅಲೆಮಾರಿ' (=bardic) ಪರಂಪರೆಗಳಲ್ಲಾಗಲಿ ಅಥವಾ ಮುಕ್ತಕ-ಭಾವಗೀತೆಯಂಥ ಕಾವ್ಯ ಪ್ರಕಾರಗಳಲ್ಲಾಗಲಿ ಕಂಡುಬರುವ ವಿಶಿಷ್ಟಾಂಶಗಳೆನ್ನಬಹುದಾದ ವಿಸ್ತಾರವಾದ ಸೂತ್ರಬದ್ಧ ರಚನೆಗಳು, ಖಚಿತದೃಷ್ಟಿಯುಳ್ಳ ಪರ್ಯಾಯ ಕ್ರಮಗಳು, ದತ್ತವಾಗಿ ಬಂದ ಛಂದೋಶೈಲಿಗಳು ಸಾಮಾನ್ಯವಾಗಿ ವಚನಗಳಲ್ಲಿ ಗೈರು ಹಾಜರಾಗಿವೆ.

ಏನೇ ಇರಲಿ, ವಚನಕಾರರು ನಿತ್ಯನೂತನ ನುಡಿಗಟ್ಟುಗಳು, ಗಾದೆಮಾತುಗಳು ಮತ್ತು ಕಾಲಾನುಸಾರಿಯಾದ ಪವಿತ್ರ ತೀರ್ಥಕ್ಷೇತ್ರಗಳನ್ನು ಯಥೋಚಿತವಾಗಿ ವಚನಗಳಲ್ಲಿ ಪ್ರಸ್ತಾಪಿಸಿದ್ದಾರೆ. ಇಂಥ ನಿತ್ಯನೂತನ ಸಂಚಯವನ್ನು ಅವರು ದಾಕ್ಷಿಣಾತ್ಯ ಮತ್ತು ಔತ್ತರೇಯ ಸಂತರು-ಉಪನಿಷತ್ತುಗಳು-ಜಾನಪದವೇ ಮುಂತಾದ ಮೂಲಗಳಿಂದ ಪಡೆದಿದ್ದಾರೆ. ಅಲ್ಲದೆ, ಪ್ರಾಚೀನ ಮತ್ತು ಅಖಿಲ ಭಾರತಕ್ಕೆ ಸೇರಿದ ಸಂಕೇತ ಶಾಸ್ತ್ರವೆಂಬ ಮಾನಸ ಸರೋವರದಿಂದ ಅಲಂಕಾರಗಳು ಸಂಕೇತಗಳು-ವೈರುಧ್ಯಗಳನ್ನು ಎತ್ತಿಕೊಂಡಿದ್ದಾರೆ. ವಚನಕಾರರನ್ನು ನೆನಪಿಸುವ ಭಕ್ತಿಪಂಥದ ಸಂತರುಗಳನ್ನು 'ಪೂರ್ಣದೃಷ್ಟಿಯ ಮಹಾನ್ ಚಿಂತಕ'ರೆಂದು (Great Integrators) ಕರೆಯಲಾಗಿದೆ.[೨೨] ಸಾಮಾಜಿಕ ಶ್ರೇಣಿಯಲ್ಲಿ ಮೇಲುಸ್ತರವನ್ನು ಕೆಳಸ್ತರಕ್ಕೂ, ಕುಲೀನರಾದ ದೀಕ್ಷಿತರಿಗೆ ಮೀಸಲಾಗಿದ್ದನ್ನು ಬೀದಿ ಜನರಿಗೂ, ಪ್ರಾಚೀನವಾದ ಗಹನ ವಿಚಾರಗಳನ್ನು ಸಮಕಾಲೀನವಾದ ಜೀವಂತ ಅನುಭವಗಳ ನೆಲೆಗೂ ಸ್ಥಿತ್ಯಂತರಗೊಳಿಸಿರುವ ವಚನಕಾರರು, ತನ್ಮೂಲಕ ದೈನಂದಿನ ಸಂಕೇತಗಳನ್ನು ಕಾಲಾತೀತವಾದ ಯಾನಕ್ಕೆ ಅಣಿಗೊಳಿಸಿರುವುದೊಂದು ವಿಶೇಷವಾಗಿದೆ.

ವಚನಕಾರರು ತಾವು ಹುಟ್ಟಿದ ಪ್ರಾಂತಗಳಲ್ಲಿ ಮಾತ್ರವಲ್ಲದೆ ಬೇರೆ ಬೇರೆ ಪ್ರಾಂತಗಳಲ್ಲೆಲ್ಲಾ ಸಂಚರಿಸಿದ್ದಾರೆ. ಅನ್ಯಪ್ರಾಂತಗಳಲ್ಲಿರುವ 'ಜ್ಞಾತಿ' ಶರಣರೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದಾರಲ್ಲದೆ, ಗುರುಗಳಿಗೆ ಸಂಬಂಧಿಸಿ ತರ್ಕಬದ್ಧ ವಂಶವೃಕ್ಷವನ್ನೂ

ಹೇಳುತ್ತಾರೆ. ವೀರಶೈವ ಶರಣರು ತಮಿಳುನಾಡಿನ ೬೩ ಪುರಾತನರನ್ನು ತಮ್ಮ ಪೂರ್ವಾಧಿಕಾರಿಗಳೆಂದು ಹೆಸರಿಸಿದ್ದಾರೆ. ದಕ್ಷಿಣ ಭಾರತಕ್ಕೆ ಸೇರಿದ ತಮಿಳು-ಕನ್ನಡ-ತೆಲುಗು ದೇಶದ ಶರಣರನ್ನು ಒಗ್ಗೂಡಿಸಿರುವ ಶೈವತತ್ವವು, ಅತಿದೂರದ ಕಾಶ್ಮೀರವನ್ನೂ ದಕ್ಷಿಣ ಭಾರತದೊಂದಿಗೆ ಹೆಣೆದುಕೊಳ್ಳುವಂತೆ ಮಾಡಿದೆ. ಹಿಂದಿ ಪ್ರಾಂತದ ಕಬೀರ್ ಮತ್ತು ಬಂಗಾಳದ ಚೈತನ್ಯ ಇವರಿಬ್ಬರು ದಾಕ್ಷಿಣಾತ್ಯ ಪೂರ್ವಿಕರಿಂದ ಸ್ಫೂರ್ತಿ ಪಡೆದಿದ್ದಾರೆ. ಕಾಲಾನುಕ್ರಮಣಿಕೆಯನ್ನು ಲಕ್ಷಿಸಿ ಹೇಳುವುದಾದರೆ ಕ್ರಿ.ಶ. ೭ನೇ ಶತಮಾನದಿಂದಾರಂಭಿಸಿ ಯುಗಯಾತ್ರಿಯಾಗಿ ಇಡೀ ಭರತಖಂಡದಾದ್ಯಂತ ಬೇರೆ ಬೇರೆ ಪ್ರಾಂತಗಳಲ್ಲಿ, ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಗೊಂಡ ಭಕ್ತಿ ಚಳುವಳಿಗಳು ತಮಿಳು-ಕನ್ನಡ-ಮರಾಠಿ-ಗುಜರಾತಿ-ಹಿಂದಿ-ಬೆಂಗಾಲಿ-ಅಸ್ಸಾಮಿ-ಪಂಜಾಬಿಗಳಲ್ಲಿ (ಸ್ಥೂಲವಾಗಿ ಇದೇ ಅನುಕ್ರಮದಲ್ಲಿ) ಮೂಡಿಬಂದಿವೆ. ಅಧಿಕ ವಿದ್ಯುತ್ ಪ್ರವಾಹವನ್ನು ನಿಯಂತ್ರಿಸಬಲ್ಲ ತಂತಿಗಳಂತಿರುವ ಭಕ್ತಿಪಂಥವು ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ, ಒಂದು ಶತಮಾನದಿಂದ ಮತ್ತೊಂದು ಶತಮಾನಕ್ಕೆ ಹಬ್ಬಿಕೊಳ್ಳುತ್ತಾ, ಸ್ಥಳೀಯವಾಗಿ ಮಾತನಾಡುವ ಭಾಷೆಗಳಲ್ಲಿ ಸಂವಾದ ನಡೆಸುತ್ತಾ, ಅಂತರ್ ಪ್ರಾಂತೀಯವಾಗಿರುವಂತೆಯೇ ಏಕಕಾಲಕ್ಕೆ ವಿಶ್ವಸ್ಥವೂ ಪ್ರಾದೇಶಿಕವೂ ಆಗಿದೆ. ಇದರ ಜೊತೆಗೆ ನವೀನವಾದ ನಗರೀಯ ಭಕ್ತಿ ಬಳಗಗಳು ತಮ್ಮ ಸಂಕೀರ್ತನೆಗಳಲ್ಲಿ ಹಲವು ಶತಮಾನಗಳ ಮತ್ತು ಹಲವು ಭಾಷೆಗಳ ಹಾಡುಗಳನ್ನು ಸಮಾವೇಶಗೊಳಿಸಿಕೊಂಡಿರುತ್ತವೆ.

ಈ ದೃಷ್ಟಿಯಿಂದ ಕೆಳಗಿನ ಮಾತುಗಳನ್ನು ಪರಿಶೀಲಿಸಿದರೆ ಸೋಜಿಗವೆನಿಸುವುದಿಲ್ಲ:

> ...ಉಪನಿಷತ್ತುಗಳ ಕಾಲದಿಂದ ನೋಡಿದರೂ ಬಹುದೊಡ್ಡ ಪ್ರಮಾಣದಲ್ಲಿ ಉಪಮೆಗಳು ಮತ್ತು ಸಾದೃಶ್ಯಗಳು(ಸಾರ್ವಜನಿಕರಿಗೆ) ಬಿಟ್ಟಿಯಾಗಿ ದುಡಿಯುತ್ತಾ ಬಂದಿವೆ: ಬೀಜ-ವೃಕ್ಷ, ಸಮುದ್ರ-ನದಿಗಳು, ಜೇಡ-ಒಡಲ ನೂಲಿನ ಜಾಲ, ಸೂತ್ರ-ಮಣಿಗಳು, ಹಾಸು-ಹೊಕ್ಕು, ತೊರೆ-ನಾವೆ, ರಥ-ಸಾರಥಿ, ರಾಜ-ಪ್ರಜೆಗಳು, ಮಗು-ಮಗುವಿನಾಟಗಳು, ರಂಗ ಸ್ಥಳ-ಅಭಿನಯ, ಸೂತ್ರದ ಬೊಂಬೆ-ಸೂತ್ರಧಾರ, ಕನಸು-ನೃತ್ಯ-ಲೀಲೆ - ವಿ. ರಾಘವನ್[೧೪]

ಕೆಲವು ಉದಾಹರಣೆಗಳನ್ನು ಗಮನಿಸೋಣ: ಮಹಾದೇವಿಯಕ್ಕನ ವಚನದಲ್ಲಿ 'ಜೇಡ-ಒಡಲನೂಲಿನ ಜಾಲ'ವನ್ನು ಹೋಲುವ ತೆರಣೆಯ ಹುಳು ಮತ್ತು ನೂಲುಗೂಡಿನ ಪ್ರಸಕ್ತಿಯಿದ್ದರೆ, ಮತ್ತೊಂದು ವಚನದಲ್ಲಿ ಸೂತ್ರದ ಬೊಂಬೆಯ ನಿದರ್ಶನವಿದೆ. ಬಸವಣ್ಣನ ವಚನದಲ್ಲಿ ಸಂಸಾರ ಸಾಗರ, ಕೋಡಗ ಚಿತ್ರ ನದಿ ಮತ್ತು ಸಮುದ್ರದ ಉಲ್ಲೇಖಗಳಿವೆ.

ಅಂದಮಾತ್ರಕ್ಕೆ ವಚನಕಾರರು ಪೂರ್ವಸಿದ್ಧ ಉಪಮೆಗಳು ಮತ್ತು ಸಾದೃಶ್ಯಗಳನ್ನೇ ನೇರವಾಗಿ ಎತ್ತಿಕೊಂಡಿದ್ದಾರೆಂದು ಊಹಿಸಿಕೊಳ್ಳಬಾರದು. ಉಪಾಂಗಗಳು ಸಮಾನವೆನ್ನಬಹುದಾದರೂ, ಅವುಗಳ ನಿಯೋಗ ಮತ್ತು ವ್ಯಂಗ್ಯಾರ್ಥಗಳು ಅನೇಕವೇಳೆ ಬೆರಗು ಹುಟ್ಟಿಸುವಂತಿದ್ದು ಬೇರೆಯೇ ಆಗಿವೆ. ಖಚಿತ ನಿದರ್ಶನವೊಂದನ್ನು ನೀಡುವುದಾದರೆ, ಒಡಲನೂಲಿನಿಂದ ಜಾಲವನ್ನು ನೇಯುವ ಕೀಟರೂಪಕವು ಅತಿ ಪ್ರಾಚೀನವಾದುದು. 'ಬೃಹದಾರಣ್ಯಕ ಉಪನಿಷತ್ತು' ಸೃಷ್ಟಿಕರ್ತನಾದ ಬ್ರಹ್ಮನನ್ನು ಕೀಟಾತ್ಮಕ ವರ್ಣನೆಯಿಂದಲೇ ನಿರೂಪಿಸುತ್ತದೆ:

"ಜೇಡನು ಹೇಗೆ ತನ್ನೊಡಲ ನೂಲಿನಿಂದ ಜಾಲವನ್ನು ನೇಯುತ್ತದೆಯೋ ಹಾಗೆಯೇ ಸೃಷ್ಟಿಕರ್ತನು ಸಕಲಜೀವರಾಶಿಗಳು, ಎಲ್ಲ ಜಗತ್ತುಗಳು, ಎಲ್ಲ ದೇವರುಗಳು ಮತ್ತು ಸಂಭಾವ್ಯ ಜೀವಿಗಳೆಲ್ಲವನ್ನು ವಿವಿಧ ದಿಕ್ಕುಗಳಿಗೆ ಬಿಗಿದು ಕಟ್ಟಿ ನೆಯ್ದು ಆಳುತ್ತಿದ್ದಾನೆ."[16]

ಇದಕ್ಕನುಗುಣವಾದ ಮಹಾದೇವಿಯಕ್ಕನ ವಚನವು ಹೀಗಿದೆ:

ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
ತನ್ನ ನೂಲು ತನ್ನನೇ ಸುತ್ತಿ ಸುತ್ತಿ ಸಾವ ತೆರನಂತೆ
ಮನ ಬಂದುದನು ಬಯಸಿ ಬೇವುತ್ತಿದ್ದೇನಯ್ಯಾ
ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋರಾ ಚೆನ್ನಮಲ್ಲಿಕಾರ್ಜುನ

ಇವೆರಡರ ಮುಖ್ಯದನಿಗಳಲ್ಲಿ ಬೆರಗು ಹುಟ್ಟಿಸುವ ವ್ಯತ್ಯಾಸಗಳಿರುವುದನ್ನು ಗಮನಿಸಿ. ಉಪನಿಷತ್ತಿನ ವಚನದಲ್ಲಿರುವ ತಣ್ಣನೆಯ ದನಿಗೂ ಮತ್ತು ಶಿವಶರಣೆಯೊಬ್ಬಳು ತನ್ನ ವಿಮೋಚನೆಗಾಗಿ ಮಾಡುತ್ತಿರುವ ಹೃದಯ ನಿವೇದನೆಯ ಕರೆಗೂ ಬಹುದೊಡ್ಡ ಅಂತರವಿದೆ. ಸಂಸ್ಕೃತದ ಅಭಿಜಾತ ಪಠ್ಯವು 'ವಸ್ತು'ವನ್ನು, ವಿಶ್ವದ ಸೃಷ್ಟಿಕರ್ತನನ್ನು ವರ್ಣಿಸುತ್ತಿದ್ದರೆ, ಕನ್ನಡದ ವಚನವು 'ವ್ಯಕ್ತಿ'ಯನ್ನು ಅರ್ಥಾತ್ ಅವಳನ್ನು ಕುರಿತು ಅವಳ ಭಾವನೆಗಳೇನೆಂಬುದನ್ನು ಹೇಳುತ್ತಿದೆ. ಒಂದರಲ್ಲಿ, ಸೃಷ್ಟಿರಚನೆ ಮತ್ತು ರಚನಾತೀತ ಸೃಷ್ಟಿಕರ್ತನ ವರ್ಣನೆಯಿದ್ದರೆ, ಮತ್ತೊಂದರಲ್ಲಿ ಸ್ವಯಂ ನಿರ್ಮಿತ ಗೂಡಿನ ಪಂಜರ ಮತ್ತು ಸ್ವಯಂವಿರಚಿತ ಭ್ರಮೆಗಳ ವರ್ಣನೆಯಿದೆ. ಉಪನಿಷತ್ತಿನ ವಚನವು ಜಗತ್ತುಗಳ ಜನನ, ಭವ್ಯತೆ, ಅತ್ಯದ್ಭುತ-ಅತಿಮಾನುಷ ನೆಲೆಗಳನ್ನು ಹೇಳುತ್ತಿದ್ದರೆ, ಕನ್ನಡದ ವಚನವು ಸಾವು, ಕ್ಷುದ್ರತೆ, ಕರುಣಾಜನಕ ಮೊರೆಯಿಂದ ಕೂಡಿದ್ದು ಎಲ್ಲ ನಿಟ್ಟಿನಿಂದಲೂ ಮಾನವೀಯವಾಗಿ ಕಾಣುತ್ತದೆ.

ಇದಕ್ಕೆ ಮುಂಚೆ ಉಲ್ಲೇಖಿಸಿರುವ ಬಸವಣ್ಣನ ವಚನವು "ಆನು ಒಲಿದಂತೆ ಹಾಡುವೆ"- ಎಂದು ಘೋಷಿಸುವುದರ ಮೂಲಕ, ಪದ್ಯ ನಿರ್ಮಾಣದ ಸಾಂಪ್ರದಾಯಿಕ ಮಾದರಿಗಳನ್ನು ಸ್ಪಷ್ಟವಾಗಿ ನಿರಾಕರಿಸಿಬಿಟ್ಟಿದೆ. ಧಾರ್ಮಿಕ ಕ್ಷೇತ್ರದಲ್ಲಿ 'ಪ್ರತಿರಚನೆ'ಯು 'ಎದುರು ರಚನೆ'ಗೆ ಎಡೆಕೊಟ್ಟಂತೆಯೇ, ಸಾಹಿತ್ಯ ಕ್ಷೇತ್ರದಲ್ಲಿ ವಚನಗಳು ವಿಶಿಷ್ಟರಚನೆಗೆ ಕಾರಣವಾಗಿದೆ. ವಚನಗಳ ಛಂದಸ್ಸು ಅಕ್ಷರಾತ್ಮಕವಾದುದಲ್ಲ; ವಾಕ್ಯಾತ್ಮಕವಾದುದು. ಅವುಗಳ ನಿಯತ ಕ್ರಮಗಳು ಮತ್ತು ಆವರ್ತನೆಯ ಅಂಗಗಳು ಸಾಮಾನ್ಯವಾಗಿ ಶಾಬ್ದಿಕ ನೆಲೆಗೆ ಸೇರಿದ್ದಾಗಿರದೆ ವಾಕ್ಯಾಂಗ ಮತ್ತು ವಾಗರ್ಥಗಳ ನೆಲೆಗೆ ಸೇರಿರುತ್ತವೆ. ಮೌಖಿಕ ಕಾವ್ಯದ ಮೂಲಾಂಶಗಳು ವಚನಗಳ ಕಾವ್ಯಮೀಮಾಂಸೆಯೆಂದರೆ 'ಮೌಖಿಕ ಕಾವ್ಯ ಮೀಮಾಂಸೆ'ಯೆಂದೇ ತಿಳಿಯಬೇಕಾಗಿದೆ.

"ಮೌಖಿಕನೆಲೆಯ 'ಕಾವ್ಯಾತ್ಮಕಸೂತ್ರ'ವೆನ್ನಬಹುದಾದ 'ವ್ಯಾಕರಣಾತ್ಮಕ ಸದೃಶತೆ'ಯು (Grammatical parallelism)[17] ಅಸಂಖ್ಯಾತ ಜನಪದ ಮಾದರಿಗಳಿಗೆ ಅನ್ವಯಿಸುವ ಪರಿಕಲ್ಪನೆಯಾಗಿದೆ" - ಎಂದು ರೋಮನ್ ಜಾಕೋಬ್‌ಸನ್ ಅಭಿಪ್ರಾಯಪಟ್ಟಿದ್ದಾರೆ. ವೈದಿಕ-ಚೀನೀಯ-ಫಿನ್ನಿಷ್ ಮತ್ತು ಮುಖ್ಯವಾಗಿ ಹೀಬ್ರೂ ಕೃತಿಗಳಲ್ಲಿರುವ 'ವ್ಯಾಕರಣಾತ್ಮಕ

ಸದೃಶತೆ’ಗಳ ಬಗ್ಗೆಯೂ ಅವರು ಉಲ್ಲೇಖಿಸಿದ್ದಾರೆ. ಇಂಥ ತಾಂತ್ರಿಕ ಸಂಗತಿಗಳ ವಿಶ್ಲೇಷಣೆ ನಡೆಸುವುದಕ್ಕೆ ಇಲ್ಲಿ ಅವಕಾಶವಿಲ್ಲ. ಆದರೂ ವಚನಕಾವ್ಯ ಮತ್ತು ನಿಯೋಗಗಳಿಗೆ ಸಂಬಂಧಿಸಿ ಕೆಲವೊಂದು ಪ್ರಮುಖ ಮೇಳನಗಳು ಮತ್ತು ಮಾದರಿಗಳನ್ನಿಲ್ಲಿ ಸೂಚಿಸುವುದು ಆವಶ್ಯಕವಾಗಿದೆ. ‘ಸರಳವಾಗಿ ಕಾಣುವ ಕವಿತೆ’ಯೆನ್ನಬಹುದಾದ ಕೆಳಕಂಡ ವಚನವು ಬಗೆಬಗೆಯ ಮೇಳನಗಳನ್ನೊಳಗೊಂಡಿದೆ:

೧. ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?
೨. ಹೊಸ್ತಿಲಲ್ಲಿ ಹುಲ್ಲು ಹುಟ್ಟಿ,
೩. ಮನೆಯೊಳಗೆ ರಜ ತುಂಬಿ,
೪. ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
೫. ತನುವೊಳಗೆ ಹುಸಿತುಂಬಿ,
೬. ಮನದೊಳಗೆ ವಿಷಯತುಂಬಿ,
೭. ಮನೆಯೊಳಗೆ ಮನೆಯೊಡೆಯನಿಲ್ಲಾ,
೮. ಕೂಡಲ ಸಂಗಮ ದೇವಾ[೧೭]

ಈ ವಚನದಲ್ಲಿರುವ ಎಲ್ಲ ಬಗೆಯ ಮೇಳನಗಳ ಸಹಜ ಮತ್ತು ಗರ್ಭೀಕೃತ ಅನುವಾದಕ್ಕೆ ಇಂಗ್ಲಿಷ್ ವಾಕ್ಯರಚನೆಯಲ್ಲಿ ಅವಕಾಶವಿಲ್ಲವಾಗಿದೆ. ಅಕ್ಷರಶಃ ಅನುವಾದವು ನೈಜವಾದ ಶಾಬ್ದಿಕ ಅನುಗಮನ ಮತ್ತು ಅಪಗಮನ (= word repetitions and departures) ಗಳನ್ನೊಳಗೊಂಡಂತೆ ಕೆಲವೊಂದು ಮೇಳನಗಳನ್ನು ಸೂಚಿಸಬಲ್ಲುದು:

	A	B	C	D
೧. I	ಮನೆಯೊಳಗೆ	ಮನೆಯೊಡೆಯ	ನಿದ್ದಾನೋ	ಇಲ್ಲವೋ?
	a	b	c	
೨. II	ಹೊಸ್ತಿಲಲ್ಲಿ	ಹುಲ್ಲು	ಹುಟ್ಟಿ,	
	a	b	c	
೩. II	ಮನೆಯೊಳಗೆ	ರಜ	ತುಂಬಿ	
	A	B	C	D
೪. I	ಮನೆಯೊಳಗೆ	ಮನೆಯೊಡೆಯ	ನಿದ್ದಾನೋ	ಇಲ್ಲವೋ
	a	b	c	
೫. II	ತನುವಿನೊಳಗೆ	ಹುಸಿ	ತುಂಬಿ,	
	a	b	c	
೬. II	ಮನದೊಳಗೆ	ವಿಷಯ ತುಂಬಿ		
	A	B	C	
೭. I	ಮನೆಯೊಳಗೆ	ಮನೆಯೊಡೆಯ	ನಿಲ್ಲಾ	
೮. III	ಕೂಡಲ ಸಂಗಮದೇವಾ			

ಈ ವಚನದಲ್ಲಿರುವ ವ್ಯಾಕರಣಾತ್ಮಕ ಸದೃಶ ರಚನೆಗಳನ್ನು ಇಂಗ್ಲಿಷಿನ ದೊಡ್ಡಕ್ಷರ ಮತ್ತು ಸಣ್ಣಕ್ಷರಗಳ (A,B,C, a,b,c.) ಛಂದೋಬದ್ಧವಾದ ಸದೃಶ ರಚನೆಗಳನ್ನು ರೋಮನ್ ಅಂಕೆಗಳಲ್ಲೂ (I II III) ತೋರಿಸಲಾಗಿದೆ. ಇಲ್ಲಿನ ೧ ಮತ್ತು ೪ನೇ ಸಾಲುಗಳು ಪುನರುಕ್ತಿಗಳಾಗಿವೆ. ೨ ಮತ್ತು ೩ನೇ ಸಾಲುಗಳಲ್ಲಿ ಒಂದೇ ವಿಧವಾದ ನುಡಿವಿನ್ಯಾಸವಿದೆ. ವಾಕ್ಯರಚನೆಯು ಸಮಾನವಾಗಿದ್ದರೂ ನುಡಿಯ ಗತಿಯಲ್ಲಿ ಬೇರೆ ಬೇರೆ ಪದಗಳನ್ನು ಸಂಯೋಜಿಸಲಾಗಿದೆ. ೫ ಮತ್ತು ೬ನೇ ಸಾಲುಗಳು ೨ ಮತ್ತು ೩ನೇ ಸಾಲುಗಳ ರೀತಿಯಲ್ಲೇ ಇದ್ದು ಅದೇ ರೀತಿಯ ವಾಕ್ಯರಚನೆಯನ್ನು ಹೊಂದಿದ್ದರೂ, ಸಂಪೂರ್ಣವಾಗಿ ವಿಭಿನ್ನವಾದ ಅರ್ಥವಲಯಗಳಿಗೆ ಸೇರಿದ ಪದಗಳನ್ನು ಆಯ್ದುಕೊಂಡಿವೆ: ತನು ಮತ್ತು ಮನ. ಆದ್ದರಿಂದ, ಸಮಾನ ವಾಕ್ಯ ವಿನ್ಯಾಸವುಳ್ಳ ೨, ೩ ಮತ್ತು ೫, ೬ನೇ ಸಾಲುಗಳು ಸದೃಶ ತತ್ವವನ್ನು ಅನುಸರಿಸಿ ರೂಪಾಕಾತ್ಮಕ ಪ್ರಮಾಣವೊಂದನ್ನು ಸೃಜಿಸಿಕೊಂಡಿವೆ.

೭ನೇ ಸಾಲು 'ಮನೆಯೊಳಗೆ ಮನಯೊಡೆಯನಿಲ್ಲಾ' - ಎಂಬುದು ೧ ಮತ್ತು ೪ನೇ ಸಾಲಿನ ಪದಸಂಯೋಜನೆಯನ್ನು ವ್ಯತ್ಯಾಸ ಸಹಿತ ನೆನಪಿಸುತ್ತದೆ. ೧ ಮತ್ತು ೪ನೇ ಸಾಲುಗಳಲ್ಲಿರುವ ಪ್ರಶ್ನೆಗಳಿಗೆ ೭ನೇ ಸಾಲು ಉತ್ತರ ಕೊಡುತ್ತಿದೆ.

ಕೊನೆಯ ಸಾಲು 'ಕೂಡಲಸಂಗಮದೇವಾ' ಎಂಬುದು ಬಸವಣ್ಣನ ಎಲ್ಲ ವಚನಗಳ ಅಂಕಿತನಾಮವಾಗಿದೆ. ಕವಿತಾ ಶರೀರದ ದೃಷ್ಟಿಯಿಂದ ಸದೃಶ ರಚನಾತತ್ವಕ್ಕೆ ದಕ್ಕದ ಕೊನೆಯ ಸಾಲು 'ಏಕೈಕ'ವಾಗಿರುವಂತೆಯೇ, ಪ್ರತಿಯೊಂದು ಬಸವಣ್ಣನ ವಚನದ ಕೊನೆಯಲ್ಲಿ ಪುನರುಕ್ತಗೊಳ್ಳುತ್ತಲೇ ಇರುತ್ತದೆ. ಈ ಅಂಕಿತವು ಆಯಾ ಶರಣರ ಸಕಲ ವಚನಗಳನ್ನು ಒಗ್ಗೂಡಿಸುವ ಚಕ್ರದ ಕಡೆಗೀಲಿನಂತಿದ್ದು ಪರಿಣಾಮ ರಮಣೀಯವಾಗಿದೆ. ಅಲ್ಲದೆ ಈ ಅಂಕಿತವು ಪ್ರತಿವಚನದಲ್ಲಿ ಪುನರುಕ್ತಿಯಾಗುತ್ತಿದ್ದರೂ, ಎಲ್ಲ ಕಡೆಗಳಲ್ಲಿ ಏಕರೂಪಾತ್ಮಕ ಉಚ್ಚಾರಣಾ ವೈಶಿಷ್ಟ್ಯವಾಗಿ ತೋರುವುದಿಲ್ಲ. ಮೇಲಿನ ವಚನದಲ್ಲಿರುವ ಬಹುಮುಖಿ ವಿನ್ಯಾಸಗಳಿವು: 'ಮನೆಯೊಡೆಯ' ಮತ್ತು 'ವಿಶ್ವದೊಡೆಯ'ರಿಬ್ಬರನ್ನೂ ಏಕಕಾಲಕ್ಕೆ ಉದ್ದೇಶಿಸಿರುವ ಈ ವಚನವು ಭಕ್ತನ ಹೃದಯದಲ್ಲಿ ಭಗವಂತನ ಗೈರುಹಾಜರಿಯನ್ನೂ ಹೇಳುತ್ತಿದೆ. ಯಾವುದೇ ಸದೃಶಾತ್ಮಕ ಪಠ್ಯ'ಗಳಲ್ಲಿ ಕಂಡು ಬರುವಂತೆ (= ವೈದಿಕ ಸಂಸ್ಕೃತ, ಚೀನೀಯ, ರಷಿಯನ್, ಬಿಬ್ಲಿಕಲ್ ಹೀಬ್ರೂ) 'ಸಾಂದರ್ಭಿಕ ವಿಶಿಷ್ಟತೆಯ ಏಕೈಕ ಸಾಲು' (= the occasional isolated single lines)[೭] ಇಡೀ ಪಠ್ಯ ಅಥವಾ ಚರಣದ ಆರಂಭ ಮತ್ತು ಅಂತ್ಯಗಳನ್ನು ತೋರಿಸುವ ಕೈದೀವಿಗೆಯಾಗಿದೆ.

ಆದರೆ, ಪುನರುಕ್ತಿಗಳು ಅಥವಾ ಸದೃಶತೆಗಳು ಯಾವುದೇ ಪಠ್ಯದಲ್ಲಿ ಕ್ರಮೇಣ ತಾರಸ್ಥಾಯಿಗೇರಲು ನೆರವಾಗುತ್ತವೆ. ಮೇಲಿನ ವಚನದಲ್ಲಿ ಪುನರುಕ್ತಿಯ ವಿನ್ಯಾಸಗಳು ಭಗವಂತನ ನಿರಾಕರಣೆಯ ಶಿಖರಕ್ಕೆ ಕರೆದೊಯ್ಯಲು ಸಮರ್ಥವಾಗಿ ಬಳಕೆಯಾಗಿವೆ. "ಮಡಕೆ ದೈವ, ಮೊರದೈವ, ಬೀದಿಯ ಕಲ್ಲು ದೈವ"... ಎಂಬ ಬಸವಣ್ಣನ ವಚನದಲ್ಲಿ ಪುನರುಕ್ತಿಯ ವಿನ್ಯಾಸಗಳು ರೇಜಿಗೆಯನ್ನುಂಟುಮಾಡುವ ಪಟ್ಟಿಯಂತೆ ಬೆಳೆಯುತ್ತಾ ಕೊನೆಗೆ ಮನವ

ನಿರ್ಣಯವೊಂದನ್ನು ದೃಢವಾಗಿ ಮುಂದಿಡುತ್ತದೆ: "ದೇವನೊಬ್ಬನೆ ಕೂಡಲ ಸಂಗಮದೇವಾ". ಕೆಲವೊಮ್ಮೆ ತಿರುಗುಮುರುಗಾದ ಸದೃಶತೆಗಳೂ -ಕ್ರಮವ್ಯತ್ಯಯ-ತಲೆಹಾಕಿಧೆ:

> ಹಾವಾಡಿಗನು ಮೂಕೊರತಿಯು ತನ್ನ ಮಗನ ಮದುವೆಗೆ
> ಶಕುನವ ನೋಡ ಹೋಗುವಾಗ
> ಇದಿರಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು
> ಶಕುನ ಹೊಲ್ಲವೆಂಬ ಚದುರನ ನೋಡಾ...

ಇಲ್ಲಿರುವ ಕ್ರಮ ವ್ಯತ್ಯಯವು 'ಕನ್ನಡಿಯ ಪರಿಣಾಮ'ದ ರೀತಿಯಲ್ಲಿ ಅಂತರಂಗ ಮತ್ತು ಬಹಿರಂಗದ ಮುಖಾಮುಖಿಯನ್ನು ಪ್ರತಿನಿಧೀಕರಿಸಿದೆ.

ಮಹಾದೇವಿಯಕ್ಕನ ('ಎಚ್ಚರಗರಿದೋರದಂತಿರಬೇಕು' ಎಂಬ) ವಚನದಲ್ಲಿರುವ ಮೂರು ಕೇಂದ್ರ ಪ್ರತಿಮೆಗಳು ಸದೃಶ ರಚನೆಗಳಾಗಿದ್ದು, ಪ್ರತಿಯೊಂದೂ ಮತ್ತೊಂದಕ್ಕೆ ರೂಪಕವಾಗುತ್ತಾ ಅವೆಲ್ಲವೂ ಚೆನ್ನಮಲ್ಲಿಕಾರ್ಜುನನ ಪರಿಪೂರ್ಣ ಪ್ರೇಮವನ್ನು ಒಟ್ಟಿಗೆ ಧ್ವನಿಸಬಲ್ಲ ವರ್ಣನೆಯಾಗಿದೆ. ಆದರೆ, ವಿಭಿನ್ನ ಅರ್ಥವಲಯಗಳಿಂದ ಎತ್ತಿಕೊಂಡ ಆ ಮೂರು ಪ್ರತಿಮೆಗಳು (ಬಾಣ, ಅಪ್ಪುಗೆ, ಬೆಸುಗೆ) ಪ್ರಗತಿದಾಯಕವಾಗಿದ್ದು, ಪ್ರೇಮದ ಮೂರು ಹಂತಗಳಾಗಿರುವಂತೆಯೇ ಪ್ರೇಮದ ಕ್ರಿಯೆಯೂ ಆಗಿದೆ.

ಪದ ಮತ್ತು ವಿನ್ಯಾಸದ ಪುನರುಕ್ತಿಗಳು, ವೈದೃಶ್ಯಮೂಲ ಪುನರುಕ್ತಿಗಳು, ನಿರ್ಣಯದ ಶಿಖರಕ್ಕೊಯ್ಯುವ ಗತಿಶೀಲ ಸಂಯೋಜನೆಗಳೂ ಅಥವಾ ಕ್ರಮವ್ಯತ್ಯಯಗಳೂ-ಮೌಖಿಕ ಸಂವಾದಗಳ ತಂತ್ರೋಪಾಯಗಳಾಗಿವೆ. ಇವು ಒಂದೇ ವಾಕ್ಯಾತ್ಮಕ ಆವರಣಗಳಲ್ಲಿ ಕಾಣಿಸಿಕೊಂಡಾಗ ತಮ್ಮೊಂದಿಗೆ ಜಂಟಿ ವೈರುಧ್ಯಗಳು ಅಥವಾ ಶಬ್ದ ಸಾಂಗತ್ಯಗಳನ್ನು ಬಹುಸಂಖ್ಯೆಯಲ್ಲಿ ಹೊತ್ತೊಯ್ಯುತ್ತವೆ. ಒಂದು ಮತ್ತೊಂದನ್ನು ಬೆಂಬಲಿಸುತ್ತಾ ಅಥವಾ ನಿರಾಕರಿಸುತ್ತಾ, ಪ್ರಾಸ ಅಥವಾ ಅನುಪ್ರಾಸಗಳಲ್ಲಿ (=ಅಂಗ-ಲಿಂಗ) ಜೊತೆ ಜೊತೆಯಾಗಿದ್ದುಬಿಡುತ್ತವೆ.

ಆರಂಭದಲ್ಲೆ ತೋರಿಸಿಕೊಟ್ಟಿರುವಂತೆ ಬಸವಣ್ಣನ ('ಉಳ್ಳವರು ಶಿವಾಲಯ ಮಾಡುವರು') ವಚನವೂ ತನ್ನ ಸುತ್ತ ವಿರುದ್ಧಭಾವಗಳ ಬಗೆಬಗೆಯ ದ್ವಂದ್ವಗಳನ್ನು ಕಟ್ಟಿಕೊಂಡಿದೆ.: ದೇಹ-ದೇಗುಲ, ಸ್ಥಾವರ-ಜಂಗಮ, ಇದೇ ರೀತಿಯ ಇನ್ನಿತರ ದ್ವಂದ್ವಭಾವಗಳೆಂದರೆ ಕಾಯ-ಮನ, ಪಶು-ಪಶುಪತಿ, ಭಕ್ತ-ಭವಿ, ಅನ್ಯದೈವ- ಶಿವ ಇತ್ಯಾದಿ.

ತೋಂಡಿಯ ಮೂಲನೆಲೆಗಳು ಮತ್ತು ಗುಣಾಂಶಗಳನ್ನುಳ್ಳ ಈ ಬಗೆಯ ಕಾವ್ಯದ ಅನುಸಂಧಾನ ಮತ್ತು ಪ್ರತಿಷ್ಠಾಪನೆಗಳು ಎಂದೂ ಸೋಲನ್ನೇ ಕಾಣದ ವೀರ್ಯವತ್ತಾದ ಧಾಟಿಯ ನುಡಿಗಳು, ವಿಧಿ ನಿಷೇಧಗಳು, ಮಾರ್ಗದರ್ಶನಗಳು, ಎಚ್ಚರಿಕೆಗಳು, ವ್ಯಾಜ್ಯಗಳು, ಶಾಪನೆಗಳು, ಪ್ರಶ್ನೋತ್ತರಗಳು, ಪ್ರಮಾಣವಚನಗಳು, ಸಂಬೋಧನೆಗಳು, ಕರೆ-ಮೊರೆಗಳೂ, ಸಲ್ಲಾಪಗಳು - ಇವುಗಳಿಂದ ತುಂಬಿ ಹೋಗಿರುತ್ತವೆ. ಹಾಗೂ ಅನಂತಾನಂತವಾಗಿರುವ ಶಿವನಿಗೆ ಮತ್ತೆ ಮತ್ತೆ ಸಲ್ಲಿಸಿದ ಪ್ರಾರ್ಥನೆಗಳೂ ಆಗಿರುತ್ತವೆ.

ಭಾಷಿಕ ದೃಷ್ಟಿಯಿಂದ ಪರಿಶೀಲಿಸಿದರೂ, ವಚನಕಾರರು ಮೊದಲಬಾರಿಗೆ ಸದಾ

ಬದಲಾಗುವ, ಸ್ಥಳೀಯವಾಗಿ ಮಾತನಾಡುವ, ಅಪ್ರತಿಷ್ಠಿತ ಉಪಭಾಷೆಗಳನ್ನು ತಂತಮ್ಮ ಜನ್ಮಸ್ಥಳದ ಹಿನ್ನೆಲೆಗನುಗುಣವಾಗಿ ಕಾವ್ಯದಲ್ಲಿ ಬಳಸಿ ತೋರಿಸಿದ್ದಾರೆ. ಇದೇ ಕಾಲದಲ್ಲಿ ಶರಣರ ಸಮಕಾಲೀನ ಶಿಷ್ಟಕವಿಗಳನೇಕರು ಉನ್ನತವಾದ ಶೈಲೀಕೃತ ಹಳಗನ್ನಡ ಭಾಷೆಯನ್ನು ಕಾವ್ಯರಚನೆಗೆ ಬಳಸುತ್ತಿದ್ದುದನ್ನು ಸ್ಮರಿಸಿದರೆ 'ಭಾಷಿಕ ಜಂಗಮರು ಮತ್ತು ಸ್ಥಾವರರು' ಎಂದು ನೋಡುವಂತಾಗುತ್ತದೆ. ನೈಜಸಂಗತಿಯೆಂದರೆ, ವಚನಗಳು ಮತ್ತು ಶಾಸನಗಳು ಮಧ್ಯಕಾಲೀನ ಕನ್ನಡನಾಡಿನ ಉಪಭಾಷಿಕ ನುಡಿಯ ಅತಿಪ್ರಮುಖ ಸಾಕ್ಷಿಗಳಾಗಿವೆ. ತಮ್ಮ ನೇರ ನಡೆ ಮತ್ತು ತುರ್ತು ಕಾರಣಗಳಿಂದ ಪ್ರತಿಷ್ಠಿತ ಮೇಲುವರ್ಗದ ಕಲಿತಮಾತು ಮತ್ತು ಶೈಲೀಕೃತ ಛಂದೋಬದ್ಧ ಸಾಹಿತ್ಯಕ ಪ್ರಭೇದಗಳನ್ನು ವಚನಕಾರರು ಹೇಗೆ ತಿರಸ್ಕರಿಸಿದ್ದಾರೆಂದರೆ ಯಾಂತ್ರಿಕವಾದ ಆಚರಣೆಗಳು ಮತ್ತು ಜನ ಸಂಪ್ರದಾಯಗಳಂತೆ ಪರಿಗಣಿಸಿ ಧಿಕ್ಕರಿಸಿದ್ದಾರೆ. ಶರಣರು ನುಡಿದ ನಿರ್ಗ್ರಾಂಥಿಕ ನೆಲೆಯ ಕಾವ್ಯದಲ್ಲಿ ಹೊಚ್ಚ ಹೊಸದಾದ ನವೀನ ಪ್ರತಿಮಾವಳಿಗಳು, ಲಯಗಳು ಮತ್ತು ನುಡಿಗಟ್ಟುಗಳು ತುಂಬಿ ಹೋಗಿವೆ. ಶರಣರ ಈ ಸ್ವಾತಂತ್ರ್ಯವನ್ನು ಮೀರಿಸುವಂತೆ, ಕಾವ್ಯ ರಚಿಸುವುದರಲ್ಲಿ ಆಧುನಿಕ ಕನ್ನಡ ಲೇಖಕರು ಇದುವರೆಗೆ ಗೆಲುವು ಕಂಡಿಲ್ಲವೆಂದು ಹೇಳಲೇಬೇಕಾಗಿದೆ.

ವಚನಗಳ ಸಾಮಾನ್ಯಭಾಷೆಯಲ್ಲಿ ಸಂಸ್ಕೃತಪದಗಳನ್ನಾಗಲಿ ಅಥವಾ ಸಂಸ್ಕೃತ ಉದ್ಧರಣಗಳನ್ನಾಗಲಿ ತೆಗೆದುಹಾಕಿಲ್ಲ. ಬದಲಿಗೆ ವಚನಕಾರರು ಉಜ್ವಲ ಮತ್ತು ಸಂಕೀರ್ಣ ಪರಿಣಾಮಗಳಿಗಾಗಿ ಸಾದೃಶ್ಯ ಮತ್ತು ವೈದೃಶ್ಯ ವಿಧಾನಗಳನ್ನನುಸರಿಸಿ ಸಂಸ್ಕೃತವನ್ನು ಸ್ಥಳೀಯ ಗತಿಶೀಲ ಕನ್ನಡದೊಂದಿಗೆ ಸಂಯೋಜಿಸಿ ಮುಖಾಮುಖಿಯಾಗಿಸಿದ್ದಾರೆ. ಉದಾಹರಣೆಗೆ, ಮಹಾದೇವಿಯಕ್ಕನ ಈ ವಚನವನ್ನು ಗಮನಿಸಿ:

> ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
> ತನ್ನ ನೂಲು ತನ್ನನೆ ಸುತ್ತಿ ಸುತ್ತಿ ಸಾವ ತೆರನಂತೆ...

ಮೇಲಿನ ಕನ್ನಡ ವಾಕ್ಯಾಂಶದಲ್ಲಿ 'ಸ್ನೇಹ'ವೆಂಬ ಒಂದೇ ಒಂದು ಸಂಸ್ಕೃತಜನ್ಯ ಪದವು ಪ್ರಯೋಗವಾಗಿದ್ದು ಸಾಮಾನ್ಯ ಬಳಕೆಯಲ್ಲಿ ಗೆಳೆತನ, ಒಲವು, ಆತ್ಮೀಯತೆಗಳೆಂಬ ಅರ್ಥಗಳಿವೆ. ಆದರೆ, ಪದ ನಿಷ್ಪತ್ತಿಯ ಪ್ರಕಾರ 'ಅಂಟುಪದಾರ್ಥ'ವೆಂಬರ್ಥವೂ ಇದೆ. 'ಒಲವು' ಮತ್ತು 'ಅಂಟು' ಎಂಬ ಎರಡು ಅರ್ಥಗಳು ಇಲ್ಲಿ ಹೊಂದಿಕೊಳ್ಳುತ್ತವೆ. (=ಗ್ರೀಕ್-ಲ್ಯಾಟಿನ್ ಮತ್ತು ಶೇಕ್ಸ್‌ಪಿಯರ್‌ನ ಆಂಗ್ಲೋಸ್ಯಾಕ್ಸನ್ ಸಂಬಂಧದಲ್ಲೂ ಇದೇ ಬಗೆಯ ಪ್ರಯೋಗಗಳಿವೆ) ಹುಳುವಿನ ಒಡಲಿನಿಂದ ಹುಟ್ಟಿ ಅಂಟುತ್ತ ಸುತ್ತಿಕೊಳ್ಳುವ ನೂಲು ಪಾಶವಾಗುವುದು ಮತ್ತು ಗಾಢವಾಗಿ ಅಂಟುತ್ತಾ ಸುತ್ತಿಕೊಳ್ಳುವ ಮನುಷ್ಯ ಸಂಬಂಧಗಳು ಪಾಶವಾಗುವುದು- ಹೀಗೆ ಎರಡೂ ಕ್ರಿಯೆಗಳನ್ನು 'ಸ್ನೇಹ'ವೆಂಬ ಒಂದೇ ಶಬ್ದ ಸಮರ್ಥವಾಗಿ ಸೂಚಿಸಿಬಿಡುತ್ತದೆ. ಇದಲ್ಲದೆ, ಯಾವುದೇ ವಚನವನ್ನು ನೋಡಿದರೂ ಸಂಸ್ಕೃತದ ಬಳಕೆಯೇ ಒಂದು ಸಂಕೇತದಂತೆ, ಅಮೂರ್ತಭಾವದ ಸಂಕೇತದಂತೆ ಗೋಚರಿಸುತ್ತದೆ. ಉದಾಹರಣೆಗೆ, ಚೆನ್ನಮಲ್ಲಿಕಾರ್ಜುನ 'ಚೆನ್ನ' ಎಂದರೆ 'ಒಲವಿನ' ಎಂಬರ್ಥ ಕೊಡುವ ಕನ್ನಡ ಪದ; 'ಮಲ್ಲಿಕಾರ್ಜುನ'

ಎಂಬುದು ಸಂಸ್ಕೃತ ಪದ. ಕನ್ನಡವು ಹೇಗೆ ಪಾರದರ್ಶಕವೋ ಹಾಗೆಯೇ ಸಂಸ್ಕೃತ ಕೂಡ. ಸಂಸ್ಕೃತವು ಎಂದೂ ಅಪಾರದರ್ಶಕ ಅಥವಾ ದೂರದ ಬಂಧುವಾಗಿರಲಿಲ್ಲ. ಕನ್ನಡ-ಸಂಸ್ಕೃತಗಳ ಬಾಂಧವ್ಯ ದ್ವಂದ್ವಮಾನವಾಗಿರುವುದನ್ನು 'ಸ್ನೇಹ'ದ ವಿಷಯದಲ್ಲಿ ಆಗಲೇ ಗಮನಿಸಿದ್ದಾಗಿದೆ. ಇದನ್ನು 'ಶಬ್ದಕೋಶಾತ್ಮಕ ಸುಧಾರಣೆ' ಎನ್ನುತ್ತಾರೆ. ಭಾಷಿಕವಾಗಿಯೂ 'ದೇವಾಲಯ'ದಲ್ಲಿ 'ದೇಹ'ವು ಚಲಿಸುತ್ತಿದೆ. ಸಂಸ್ಕೃತದ ಹೆಸರುಗಳಿಗೆ ಸಂಬಂಧಿಸಿದ ನಿಷ್ಪತ್ತಿಗಳು ಮೇಲ್ಮುಖಿ ನೆಲೆಗಳಿಂದ ಎಂದಿಗೂ ದೂರಸಿಡಿದು ಹೋಗಿರಲಿಲ್ಲ. ಇವು ಕೆಲವೊಮ್ಮೆ ಕಾವ್ಯದಲ್ಲೂ ಭಾಗವಹಿಸಿರುವುದುಂಟು. 'ಗುಹೇಶ್ವರ' ಎಂದರೆ 'ಗುಹೆಗಳ ದೊರೆ': ಇದು ಅಲ್ಲಮನಿಗೆ ಸೂಕ್ತವಾದ ಅಂಕಿತನಾಮ. ಅವನ ಆತ್ಮೀಯ ಪ್ರತಿಮೆಗಳೆಂದರೆ ಕತ್ತಲೆ ಮತ್ತು ಬೆಳಕು. 'ಮಲ್ಲಿಕಾರ್ಜುನ' ಎಂದರೆ 'ಬಿಳಿಯ ಮಲ್ಲಿಗೆಯ ದೊರೆ' ಇದು ಪ್ರೀತಿಯೇ ರೂಪಕವಾಗಿರುವ ಮತ್ತು ದೊರೆಯ ಸೌಂದರ್ಯಕ್ಕೆ ಸದಾ ಮರುಳಾಗಿರುವ ಮಹಾದೇವಿಯಕ್ಕನಿಗೆ ಸೂಕ್ತವಾಗಿದೆ. 'ರಾಮನಾಥ'ನೆಂದರೆ ಸಾಕ್ಷಾತ್ ಶಿವ, ರಾಮನಿಂದ ಪೂಜಿಸಲ್ಪಟ್ಟ ಶಿವ (=ರಾಮೇಶ್ವರ). ಅನ್ಯದೈವಕ್ಕೆಳಸದ, ಸಕಲೇಂದ್ರಿಯಗಳು ಶಿವನಿಗೆ ಮೀಸಲಾದ ದಾಸಿಮಯ್ಯನಿಗಿದು ಉಚಿತವಾದ ಅಂಕಿತವಾಗಿದೆ. ತನ್ನ ಜಲಪ್ರತಿಮೆ ಮತ್ತು ಸಾಮಾಜಿಕ ಅಸಮಾನತೆಗಳನ್ನು ಮುಳುಗಿಸಿಬಿಡುವ ಆಶಯಗಳನ್ನು ಬಿಂಬಿಸುವ ಬಸವಣ್ಣನ 'ಕೂಡಲಸಂಗಮ ದೇವಾ' ಎಂದರೆ 'ಬೆರೆವ ನದಿಗಳ ದೊರೆ'. ವಿಶೇಷವೆಂದರೆ 'ಕೂಡಲ ಸಂಗಮ' ಎಂಬುದು ದ್ವಿರುಕ್ತಿ ಕೂಡ. 'ಕೂಡಲು' ಎಂದರೆ ನದಿಯೊಳಗೆ ನದಿ ಬೆರೆಯುವುದು; 'ಸಂಗಮ'ವೆಂದರೂ ಅದೇ ಅರ್ಥ. ವಚನ ಕಾವ್ಯದಲ್ಲಿ ಪ್ರಯೋಗವಾಗಿರುವ ಇಂಥ ಸೂಕ್ಷ್ಮಗ್ರಾಹಿ ಪದನಿಷ್ಪತ್ತಿಗಳಿಗಿರುವ ಒಂದು ಕಾರಣವೆಂದರೆ, ಯಥೋಚಿತವಾದ ಅಂಕಿತ ನಾಮಗಳನ್ನು ಇಂಗ್ಲೀಷಿಗೆ ಅಕ್ಷರಶಃ ಅನುವಾದಿಸುವುದು. ಜೊತೆಗೆ, ನಿಯತವಾದ ಆವರ್ತನೆಯ ಸೂತ್ರಕ್ಕೆ ತಕ್ಕಂತೆ ಪ್ರಕಟಗೊಳ್ಳುವ ಅತ್ಯಂತ ವಿಶಿಷ್ಟವಾದ ಅಂಕಿತನಾಮಗಳ ಮುಗ್ಧಮೋಹಕ ಪಲ್ಲವಿಯ ಗುಣ ಮತ್ತು ಕಾರ್ಯವನ್ನು ಅರಿಯಲು ಪದನಿಷ್ಪತ್ತಿಗಳನ್ನು ಭರವಸೆಯಿಂದ ಬಳಸಿಕೊಳ್ಳುವ ಇಂಗಿತಜ್ಞಾನವೂ ಇಲ್ಲಿದೆ.

ಗುಪ್ತಭಾಷೆ (=ಸಂಧ್ಯಾಭಾಷೆ)

ಭಾರತವ್ಯಾಪಿಯಾಗಿ ಜನಮನದಲ್ಲಿ ಸಂಚಯಗೊಂಡಿರುವ ಪರಿಚಿತ ಅಲಂಕಾರಗಳು, ದೈನಂದಿನ ಅನುಭವಗಳ ಆತ್ಮೀಯ ಪ್ರತಿಮೆಗಳು, ಮರ್ತ್ಯವೆನ್ನಬಹುದಾದ ಗ್ರಹಿಕೆ ಮತ್ತು ನುಡಿಗಟ್ಟುಗಳು ಹೇಗೋ ಹಾಗೆಯೇ, ಗಹನವೂ ನಿಗೂಢವೂ ಆದ ಸಾಂಕೇತಿಕ ಜಗತ್ತಿನಲ್ಲೂ ವಚನಗಳ ಅಭಿವ್ಯಕ್ತಿಯು ಹರಿದಾಡಿದೆ. ಕವಿತೆಗಿಂತಲೂ ಹೆಚ್ಚು ಒಗಟುಗಳ ಹಾಗಿರುವ, ಕೆಲವೊಮ್ಮೆ ಸಮಗ್ರವಾದ ರಹಸ್ಯ ಪದಕೋಶವೊಂದರಿಂದ ಕೀಲಿಗೈಗಳನ್ನು ಪಡೆದುಕೊಳ್ಳಲೇ ಬೇಕಾದ ನಿಗೂಢ ವಚನಗಳನ್ನೇ 'ಬೆಡಗಿನ ವಚನಗಳು' ಎನ್ನುತ್ತಾರೆ. ಈ ರಹಸ್ಯ ಪದಕೋಶವನ್ನು ಭಾರತೀಯ ಯೌಗಿಕ ಮನಃಶಾಸ್ತ್ರ ಮತ್ತು ತಂತ್ರಶಾಸ್ತ್ರಗಳ ನೆಲೆಯಿಂದ ಸ್ವೀಕರಿಸಲಾಗಿದ್ದು, ಸಂಕೇತಗಳು ಮತ್ತು ಸಂಕಲ್ಪನೆಗಳ ಸಾಮಾನ್ಯ ಸರೋವರವನ್ನೇ ನಿರ್ಮಾಣ

ಮಾಡಲಾಗಿದೆ. ವಚನಕಾರರ ಪೈಕಿ ಅಲ್ಲಮಪ್ರಭು ಹೆಚ್ಚು ಆಧ್ಯಾತ್ಮಿಕನಾಗಿ ಕಾಣಿಸುತ್ತಾನಲ್ಲದೆ ಅತಿ ಹೆಚ್ಚು ಪ್ರಮಾಣದಲ್ಲಿ ಬೆಡಗಿನ ವಚನಗಳನ್ನು ನುಡಿದಿದ್ದಾನೆ. ಕೆಲವನ್ನು ಇಲ್ಲಿ ಸೇರಿಸಿಕೊಂಡಿದ್ದೇನೆ. ಉದಾಹರಣೆಗೆ, ಅಲ್ಲಮನ

ಇರುಳಿನ ಮುಖ ಹಗಲೆಂದರಿಯರು
ಹಗಲಿನ ಮುಖ ಇರುಳೆಂದರಿಯರು
ಇರುಳಿನ ಮುಖದೊಳಗೊಂದು
ನವರತ್ನದ ಖಂಡಿತ ಹಾರವಡಗಿತ್ತು
ಹಗಲಿನ ಮುಖದೊಳಗೊಂದು
ನವಚಿತ್ರ ಪತ್ರದ ವೃಕ್ಷವಡಗಿತ್ತು
ರತ್ನದ ಹಾರವ ವೃಕ್ಷಕ್ಕಾಹಾರವನಿಕ್ಕಿದಡೆ
ಗುಹೇಶ್ವರಲಿಂಗದಲ್ಲಿ ಪ್ರಾಣಲಿಂಗಕ್ಕೆ ಸುಖವಾಯಿತ್ತು

ಈ ವಚನದ ಪ್ರತಿಮಾ ವೈರುಧ್ಯಗಳು ಸರ್ರಿಯಲಿಸ್ಟ್ ಪಂಥದ ಉಜ್ವಲತೆಯನ್ನು ಒಳಗೊಂಡಿವೆ. ಕಲಿತ ವೀರಶೈವರಿಗೆ ಈ ವಚನದ ಅರ್ಥ ಕೆಳಗಿನಂತಿರುತ್ತದೆ:

> ಇರುಳು ಮತ್ತು ಹಗಲು ಸುಸ್ಪಷ್ಟವಾಗಿ ಅಜ್ಞಾನ ಮತ್ತು ಎಚ್ಚರವನ್ನು ಹೇಳುತ್ತಿದೆ. (ಪೂರ್ವ ಗೃಹೀತ) ಅರಿವಿಲ್ಲದ ಅನುಭವದಲ್ಲಿಯೇ ನಾವು ಜ್ಞಾನವೆಂಬ ರತ್ನಗಳನ್ನು, ಒಂಬತ್ತು ಲಿಂಗಗಳೆಂಬ ಹಾರವನ್ನು ಕಾಣಲು ಸಾಧ್ಯ. ಅದೇ ಎಚ್ಚರದಲ್ಲಿಯೇ ತಾರತಮ್ಯಜ್ಞಾನ (=ವೃಕ್ಷ) ವನ್ನು ಜಾಗ್ರತೆಯಾಗಿ ಪೋಷಿಸಿಕೊಳ್ಳಬೇಕು (ಪೂರ್ವಗೃಹೀತ) ಅರಿವಿಲ್ಲದ ಅನುಭವ ಮಾತ್ರದಿಂದ ಹುಟ್ಟುವ ಜ್ಞಾನವು ಒಳಗಣ ಎಚ್ಚರವಾಗಿ ಪೋಷಣೆ ಪಡೆದಾಗ ಪ್ರಾಣಲಿಂಗಕ್ಕೆ ನಿಜಸುಖ ಪ್ರಾಪ್ತಿಯಾಗುತ್ತದೆ.

ಇಂಥ ಕತ್ತಲೆಯ, ಗೂಢಸಂಕೇತ-ಕೀಲಿಗಳ ಬಹುಮುಖೀ ಭಾಷೆಯು(=ಸಂಧ್ಯಾಭಾಷಾ ಅಥವಾ Intentional language) ಯೋಗ ಮತ್ತು ತಂತ್ರಮಾರ್ಗದ ವಿದ್ವಾಂಸರಿಂದ ವಿಶೇಷ ಚರ್ಚೆಗೊಳಗಾಗಿದೆ.[೨೯] ಒಗಟು ಮತ್ತು ಮುಂಡಿಗೆಗಳ ಮಾದರಿಯನ್ನು ವೇದಗಳ ಕಾಲದಿಂದಲೂ ಬಳಸಿದ್ದಾರೆ. ಸಂಪ್ರದಾಯ ವಿರುದ್ಧವಾದ ಗುಪ್ತಪಂಥಗಳಲ್ಲಿ ಈ ಬಗೆಯ ಗೂಢ ಸಂಹಿತೆಯನ್ನು ಬಳಸುತ್ತಿದ್ದ ಕಾರಣವೇನೆಂದರೆ, ರಹಸ್ಯಬೋಧನೆಗಳನ್ನು ಅಪಾತ್ರರು ಮತ್ತು ಅನ್ಯರಿಂದ ಅಡಗಿಸಿಡಬೇಕೆಂಬ ಉದ್ದೇಶ. ಆದರೆ, ವಿಚಾರವಾದಿ ಬೌದ್ಧಿಕತೆಯನ್ನು ಮುರಿದು ಪಾರದರ್ಶಕವಾಗಿ ಕತ್ತಲೆಯಲ್ಲೂ ನೋಡಬೇಕೆಂದೆ, ಒಗಟು ಮತ್ತು ವೈರುಧ್ಯಗಳನ್ನು ಕೂಡ ಸಾಮಾನ್ಯಭಾಷೆಯ ಸಾಮಾನ್ಯ ಅನುಭವಗಳಿಗಾಗಿ ತೆರೆದಿಡಲಾಗಿತ್ತು. (ಕೆಲವೆಡೆಗಳಲ್ಲಿ ಇದು ಬರಿಯ ಬೌದ್ಧಿಕ ಕಸರತ್ತುಗಳ ಮಟ್ಟಕ್ಕೆ ಇಳಿದುಬಿಟ್ಟಿರುವುದುಂಟು). ಇದೊಂದು ರೀತಿಯಲ್ಲಿ "ಭಾಷೆಯನ್ನು ಮುರಿದು ಹಾಕಿ, ಮರಳಿಕಟ್ಟುವ ಪ್ರಕ್ರಿಯೆ" ಆಗಿದ್ದು, ಇಂದಿಗೂ ನಮ್ಮಲ್ಲೇ ಇರುವ ದ್ವಂದ್ವಾರ್ಥಗಳು-ಅನುರೂಪತೆ ಮತ್ತು ಸಾದೃಶ್ಯಗಳ ಜಗತ್ತಿನಲ್ಲಿ ಮನಗಾಣಬಹುದಾಗಿದೆ.[೩೦]

ಸಾದೃಶ್ಯ ತಂತ್ರೋಪಾಯಗಳು ವಚನಗಳಿಗೆ ಬಹು ಪ್ರಿಯವಾದುದು: ಸವಿಸ್ತಾರ

ರೂಪಕಗಳು, ಒಂದು ಇಡೀ ಸಾಂಕೇತಿಕ ಸನ್ನಿವೇಶವನ್ನು ಬಿಂಬಿಸಬಲ್ಲ ಉಪಮೆಯು ತನ್ನ ಒಟ್ಟು ವಿನ್ಯಾಸದಲ್ಲಿ ಸಾದೃಶ್ಯದ ಒಂದು ಭಾಗವನ್ನು ಮರ್ದನ ಮಾಡುವ ಬಗೆಗೆ ಬಸವಣ್ಣನ ವಚನದಲ್ಲೇ ಉದಾಹರಣೆಯಿದೆ. ವಿಸ್ತರಿಸಿಕೊಳ್ಳುತ್ತಾ ಸಾಗುವ ಸಾದೃಶ್ಯವೊಂದರ ಚಲನಶೀಲ ಬಳಕೆಗಾಗಿ ಮಹಾದೇವಿಯಕ್ಕನ ವಚನದಲ್ಲಿರುವ ಚೆನ್ನಮಲ್ಲಿಕಾರ್ಜುನನ ಒಲವನ್ನು ಗಮನಿಸಬಹುದು. ಒಲವಿನ ಎಲ್ಲ ಹಂತಗಳು ಕ್ರಮೇಣ ರೂಪಕವಾಗುತ್ತಾ ಆಧ್ಯಾತ್ಮಿಕ ಕೂಟ ಮತ್ತು ಮಾನಸಿಕ ದೂರವೊಂದನ್ನು ಸ್ಥಾಪಿಸುವುದಕ್ಕೂ ಇದು ಉದಾಹರಣೆಯಾಗುತ್ತದೆ:

ಅತ್ತೆ ಮಾಯೆ ಮಾವ ಸಂಸಾರಿ
ಮೂವರು ಮೈದುನರು ಹುಲಿಯಂಥವದಿರು
ನಾಲ್ವರು ನಗೆವೆಣ್ಣು ಕೇಳು ಕೆಳದಿ
ಐವರು ಭಾವದಿರನೊಯ್ವ ದೈವವಿಲ್ಲ
ಆರು ಪ್ರಜೆಯತ್ತಿಗೆಯರ ಮೀರಲಾರೆನು
ತಾಯೆ ಹೇಳುವಡೆ ಏಳು ಪ್ರಜೆ ತೊತ್ತಿರ ಕಾಹು
ಕರ್ಮವೆಂಬ ಗಂಡನ ಬಾಯ ಟೊಣೆದು
ಹಾದರವನಾಡುವೆನು ಹರನ ಕೂಡೆ
ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವದ ಕಲಿತೆನು ಶಿವನೊಡನೆ;
ಕರಚೆಲುವ ಶ್ರೀಶೈಲ ಚನ್ನಮಲ್ಲಿಕಾರ್ಜುನನ
ಸಜ್ಜನದ ಗಂಡನ ಮಾಡಿಕೊಂಬೆ

ಮಹಾದೇವಿಯಕ್ಕನ ಈ ವಚನವು ಸುಸ್ಪಷ್ಟವಾಗಿ ಭಾರತೀಯ ಪ್ರಣಯ ಕಾವ್ಯದ(=ಸಂಸ್ಕೃತ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವುಳ್ಳ[೨೦]) ಸಂಪ್ರದಾಯಗಳಿಗೆ ಋಣಿಯಾಗಿದೆ. ಅಭಿಸಾರಿಕೆಯೊಬ್ಬಳು ತನ್ನ ಮನೆಯವರು ಮತ್ತು ಎಲ್ಲ ಬಂಧುಗಳ ಕಣ್ತಪ್ಪಿಸಿ, ತನ್ನ ನಲ್ಲನನ್ನು ಕೂಡಿಕೊಳ್ಳಲು ಕದ್ದೋಡುವುದೊಂದು ಕೇಂದ್ರೀಯ ಪ್ರತಿಮೆಯಾಗಿದೆ. ‘ಅಲಿಗರಿ’ಯೆನ್ನಬಹುದಾದ ಈ ವಿಧಾನವು ನಾನಾವಿಧವಾದ ಅಮೂರ್ತ ಭಾವಗಳಿಗೂ ಕುಟುಂಬದ ನಾನಾ ಸದಸ್ಯರಿಗೂ ನಡುವೆ ಒಂದಕ್ಕೊಂದರಂತೆ ಸಮೀಕರಿಸುತ್ತಾ ಸಾಗುತ್ತದೆ: ‘ಮಾಯೆ’ಯನ್ನು ಅತ್ತೆಗೂ ಸಂಸಾರಿಯನ್ನು ಮಾವನಿಗೂ ಸಮೀಕರಿಸಲಾಗಿದೆ. ಕೆಲವೊಂದು ಸಮೀಕರಣಗಳು ಸೂಚ್ಯವಾಗಿದ್ದು ತಾತ್ವಿಕ ಸಂಕಲ್ಪನೆಗಳ ಸಾಮಾನ್ಯ ಹಿನ್ನೆಲೆಯಿಂದ ಪಡೆದುಕೊಳ್ಳಲಾಗಿದೆ. ಉದಾಹರಣೆಗೆ, ಮೂವರು ಮೈದುನರೆಂದರೆ, ಸತ್ವ-ರಜ-ತಮವೆಂಬ ತ್ರಿಗುಣಗಳಾಗಿದ್ದು ಅಂತಿಮವೆನ್ನಬಹುದಾದ ಈ ಮೂರು ಉಪವಿಭಾಗಗಳು ಮೂಲ ಪ್ರಕೃತಿಯಂತಿದ್ದು ಎಲ್ಲ ನಿರ್ದಿಷ್ಟ ವಿವರಗಳನ್ನು ಯಥಾವತ್ತಾಗಿ ಗ್ರಹಿಸುತ್ತವೆ. ಎಲ್ಲಿಯವರೆಗೆ ವ್ಯಕ್ತಿಯು ಪ್ರಕೃತಿಯ ಒಂದು ಭಾಗವಾಗಿರುತ್ತಾನೋ, ಅಲ್ಲಿಯವರೆಗೆ ಈ ಮೂರರಿಂದ ತಪ್ಪಿಸಿಕೊಳ್ಳಲು ಅಸಾಧ್ಯವಾಗಿದ್ದು, ಹುಲಿಯ ಹೆದರಿಕೆಯಲ್ಲಿ ಹೇಗೋ ಹಾಗೆ ಕಾಲ

ಹಾಕಬೇಕಾಗಿರುತ್ತದೆ. ಗಂಡನೆಂದರೆ 'ಕರ್ಮ'ವಾಗಿದ್ದು ಗತಕಾಲಕ್ಕೆ ಸೇರಿದ 'ಅಹಂ'ನ ಹಲವು ಜನ್ಮಗಳನ್ನು ಸೂಚಿಸುತ್ತದೆ. ಅತ್ತಿಗೆಯರು ಕೂಡ ಇಲ್ಲಿ 'ವಕ್ರ'ವನ್ನು ಬಂಧನದಂತೆ ಸುತ್ತುವರೆದಿದ್ದು ಸ್ಪಷ್ಟವಾಗಿ ಕಾಣುವಂತೆ 'ವಾಸನಾ'ಮೂಲವಾದ ಗತಕರ್ಮದ ಸಹಚರಿಗಳಾಗಿದ್ದಾರೆ. ದಯಾಮಯಳಾದ ನಂಬಿಕಸ್ತ ಸಖಿಯಂತಿರುವ ಮನಸ್ಸು ಏಕಾಂತದಲ್ಲಿ ಆಕೆಯ ದೊರೆ ಚೆನ್ನಮಲ್ಲಿಕಾರ್ಜುನ ದೇವರನ್ನು ಸಂಧಿಸಲು ನೆರವಾಗುತ್ತಾ ಬಂದಿದೆ.

ಗಮನಿಸಬೇಕಾದ ಸಂಗತಿಯೆಂದರೆ, ಇಲ್ಲಿ ಉಲ್ಲೇಖಿತವಾಗಿರುವ ಎಲ್ಲ ರೀತಿಯ ಸಂಬಂಧಗಳು 'ಮದುವೆ'ಯ ದ್ವಾರಾ 'ವಿರಚಿತ'ವಾಗಿವೆ. ಮೆಟ್ಟಿದ ಮನೆಯಲ್ಲಿರುವವರೆಲ್ಲರೂ ಆಕೆಯನ್ನು ಮೆಟ್ಟುವಂತವರೇ ಆಗಿದ್ದು ಸಾಮಾಜಿಕ ಕಟ್ಟುಪಾಡುಗಳ ಸಂಕೇತವಾಗಿದ್ದಾರೆ.[20] ಈ ಹೆಣ್ಣಿನ ಜನ್ಮಜಾತ ಬಂಧುಗಳಾರೂ ಆ ಮನೆಯಲ್ಲಿಲ್ಲ. (ದಕ್ಷಿಣಭಾರತಕ್ಕೆ ಸೇರಿದ ಈ ಪ್ರಾಂತದ ಕುಟುಂಬಗಳಲ್ಲಿ ಅತ್ತೆಯು ಸಾಮಾನ್ಯವಾಗಿ 'ಸೋದರತ್ತೆ'ಯಾಗಿದ್ದು ಪಿತೃಮೂಲ ರಕ್ತ ಸಂಬಂಧವನ್ನು ಸೂಚಿಸುತ್ತಾಳೆ. ಇದರಿಂದ ವ್ಯಕ್ತವಾಗುವ ವಿಚಾರವೆಂದರೆ ಮದುವೆಯ ವಿಧ್ಯುಕ್ತ ಆಚರಣೆಯ ಮೂಲಕ ರಕ್ತ ಸಂಬಂಧವನ್ನು ಕೂಡ ಸಾಮಾಜಿಕ ಕಟ್ಟುಪಾಡುಗಳಿಗೊಳಪಡಿಸುವ ವಿಧಾನವೊಂದನ್ನಿಲ್ಲಿ ಗುರುತಿಸಬಹುದಾಗಿದೆ.) ಮದುವೆಯ ವಿಧ್ಯುಕ್ತ ಜಾಲ ಮತ್ತು ಕೌಟುಂಬಿಕವಾದ ಹೊಸ ಸಂಬಂಧಗಳು ಅವಳನ್ನು ಬಂಧಿಯನ್ನಾಗಿ ಮಾಡಿವೆ. ಇದು ಕಯ್ಯಾರೆ ಮಾಡಿಕೊಂಡದ್ದೇ ವಿನಾ ಹುಟ್ಟಿನಿಂದ ಆಗಿದ್ದಲ್ಲ. ಆದ್ದರಿಂದಲೇ ಈ ವಚನದಲ್ಲಿರುವ ಸಾಮಾಜಿಕವಾದ ಕಟ್ಟುಪಾಡುಗಳು ಅಂತಿಮವಾಗಿ ಹಾದರದ ತುದಿಶಿಖರಕ್ಕೆ ಕರೆದೊಯ್ದುಬಿಡುತ್ತದೆ. ಪರಿಣಾಮವಾಗಿ ಚೆನ್ನಮಲ್ಲಿಕಾರ್ಜುನ ದೇವರು ಇಲ್ಲಿ 'ಹಾದರಿಗ'ನಾಗಿ ಕಾಣಿಸಿಕೊಳ್ಳುತ್ತಾನೆ. 'ಹಾದರ'ವೆಂಬ ಅಶ್ಲೀಲ ಕನ್ನಡ ಶಬ್ದವನ್ನಿಲ್ಲಿ ಉದ್ದೇಶಪೂರ್ವಕವಾಗಿ ಬಳಸಲಾಗಿದೆ. ಇಡೀ ವಚನವು ಆಡುವ ಮಾತಿನಲ್ಲೇ ಇರುವುದರ ಜೊತೆಗೆ ವೀರ್ಯವತ್ತಾದ ಶೈಲಿಯನ್ನು ಹೊಂದಿದ್ದು ಹಾದರದ ಕಡೆ ನಿರ್ಭಿಢೆಯಿಂದ ಚಲಿಸುತ್ತದೆ. ಭಾಷಿಕವೆನ್ನಬಹುದಾದ ಆಘಾತದ ಮೂಲಕ ಆಕೆಯ ರಾಗಭಾವಕ್ಕೆ ವಿದ್ಯುದಾಲಿಂಗನ ಉಂಟಾಗಿದೆಯಲ್ಲದೆ, ಸ್ಥಾಪಿತವಾಗಿರುವ ಕಟ್ಟುಪಾಡುಗಳೆಂಬ ಇಡೀ ಚೌಕಟ್ಟು ಕಿತ್ತುಹೋಗಿದೆ. ಪಾತಿವ್ರತ್ಯದ ಪೂರ್ವಕಲ್ಪನೆಗಳನ್ನೆಲ್ಲ ನಿಷ್ಠುರವಾಗಿ ತಿರಸ್ಕರಿಸಿಬಿಡುವ ಮಹಾದೇವಿಯಕ್ಕ, ಒಂದು ಹಂತದಲ್ಲಿ ಉಟ್ಟ ಬಟ್ಟೆಯನ್ನೆಲ್ಲ ಕಿತ್ತೆಸೆದಿದ್ದಾಳೆಂಬ ಗ್ರಹಿಕೆಗೆ ಕಾರಣವಾಗಿದೆ. ಇದೊಂದು ರೀತಿಯಲ್ಲಿ ಆಕೆಯನ್ನು ಸಲ್ಲದ ಶಿಷ್ಟಾಚಾರಗಳಿಂದ ಸುತ್ತುವರೆದ ಸಮಾಜಕ್ಕೆ ತೋರಿದ ಪ್ರತಿಭಟನೆಯೂ ಆಗಿದೆ.

'ದೇವರ ಜೊತೆಗಿನ ಪ್ರೀತಿ'ಯೆಂದರೆ ಬೇಷರತ್ತಾಗಿ ಎಲ್ಲವನ್ನು ಬಿಟ್ಟುಕೊಡುವ ದೃಷ್ಟಿಕೋನ ಮಾತ್ರವಲ್ಲವೆಂಬುದನ್ನಿಲ್ಲಿ ವಿಶೇಷವಾಗಿ ಗಮನಿಸಬೇಕು. ದೇವರ ಜೊತೆಗಿನ ಅನುಸಂಧಾನವೆಂದರೆ ಅದು ಅತ್ಯವಶ್ಯಕವಾಗಿ 'ಪ್ರತಿರಚನೆ', ಕಟ್ಟುಪಾಡುಗಳಿಲ್ಲದ 'ಪ್ರತಿಸಂಸ್ಕೃತಿ'ಯ ಸಂಬಂಧ, ಮನುಷ್ಯ ವಿರಚಿತ ನಿರ್ಮಾಣ ಮತ್ತು ಆಗು-ಹೋಗುಗಳನ್ನು ಮೀರುವುದು ಎಂದರ್ಥ. ಇಂಥ ಕ್ರಿಯೆಯಲ್ಲಿ ಸಹಜೀವನದ ಸುರಕ್ಷೆ ಮತ್ತು ನಿರೀಕ್ಷೆಗಳೆಲ್ಲಾ

ಮುರಿಯಲ್ಪಟ್ಟು ಸರ್ವಸಾಮಾನ್ಯವಾದ ಪೂರ್ವಕಲ್ಪಿತ ಮೌಲ್ಯನಿಷ್ಠೆಗಳನ್ನು ಅತಿಕ್ರಮಿಸಲಾಗಿರುತ್ತದೆ. ಈಕೆಯ ಹೃದಯದಿಂದ ಮೂಡಿಬಂದ ಭಾವನೆಗಳು-ಕಲ್ಪನೆಗಳು ಸಂಕೀರ್ಣವಾದ ರೂಪಕಾತ್ಮಕ ಶೈಲಿಯಿಂದ ಮನಸೆಳೆಯುತ್ತದೆ. ಇಲ್ಲಿ ದೊರೆಯು 'ಅನೈತಿಕ ಪ್ರೇಮಿ'ಯಾಗಿದ್ದು ಕರ್ಮಜಗತ್ತು ಮತ್ತು ಮಾಮೂಲಿ ಸಂಬಂಧಗಳನ್ನು ಮುರಿದು ಹಾಕುವವನು. ಗಂಡನ ಕುಟುಂಬವೆಂದರೆ ಅತ್ಯವಶ್ಯಕವಾಗಿ ಅತಿಕ್ರಮಿಸಲೇಬೇಕಾದ ಸಂಗತಿಯಾಗಿದ್ದು 'ದೇವರ ಜೊತೆಗಿನ ಸಂವಾದ'ಕ್ಕೆ ತದ್ವಿರುದ್ಧವಾಗಿದೆ.

ಇಂಥ ವಚನಗಳು ಒಂದು ಅನ್ಯೋಕ್ತಿಯಂತಿದ್ದು ಯಾವುದೇ ಕೀಲಿಗೈಗಳ ನೆರವನ್ನು ನಿರಾಕರಿಸುತ್ತಿರುತ್ತವೆ. ಕೆಲವೊಮ್ಮೆ ನಿರ್ಮಮತೆಯ ಮುಕ್ತ ದೃಷ್ಟಿಕೋನಕ್ಕಾಗಿ ವಚನಕಾರರಲ್ಲಿರುವ ತೀವ್ರ ದಾಹವು ಅನುಕರಣೀಯವಾಗಿದೆ. ಭಾಷೆ-ತರ್ಕ-ರೂಪಕಾದಿ ವಿಷಯಗಳ ಪ್ರಶ್ನೆ ಬಂದಾಗ ವಚನಕಾರರು ಮೇಲುನೋಟಕ್ಕೆ ಸಾಂಪ್ರದಾಯಿಕ ರೂಪಕದಿಂದ[೨೨] ಆರಂಭ ಮಾಡಿದರೂ ಅಂತ್ಯದಲ್ಲಿ ಅದನ್ನು ಮೀರಿಬಿಡುತ್ತಾರೆ:

> ನಿಮ್ಮ ತೇಜವು ನೋಡಲೆಂದು ಹೆರಸಾರಿ ನೋಡುತ್ತಿರಲು
> ಶತಕೋಟಿ ಸೂರ್ಯರು ಮೂಡಿದಂತೆ ಇರ್ದುದಯ್ಯಾ
> ಮಿಂಚಿನಬಳ್ಳಿಯ ಸಂಚವ ಕಂಡಡೆ
> ಎನಗಿದು ಸೋಜಿಗವಾಯಿತ್ತು
> ಗುಹೇಶ್ವರಾ ನೀನು ಜ್ಯೋತಿಲಿಂಗವಾದಡೆ
> ಉಪಮಿಸಿ ನೋಡಬಲ್ಲವರಿಲ್ಲಯ್ಯಾ

ಉಪಸಂಹಾರ

ವಚನಗಳನ್ನಾಧರಿಸಿ ವೀರಶೈವ ತತ್ವದ ಸಾಮಾನ್ಯ ಲಕ್ಷಣಗಳನ್ನೆಲ್ಲ ವಿವರಿಸುತ್ತಾ ಹೋದರೆ, ಭಾರತದ ಇನ್ನಿತರ ಭಕ್ತಿ ಚಳುವಳಿಯ ನೆಲೆಗಳನ್ನು ಕೂಡ ವಿವರಿಸಿದಂತಾಗುತ್ತದೆ: ಗುರುವಿನ ಮಹಿಮಾತಿಶಯದ ಪ್ರತಿಪಾದನೆ, ಸಜ್ಜನ ಶರಣದ ವೈಭವೀಕರಣ, ಮೀಸಲು ದೃಷ್ಟಿಯ ಆರಾಧನೆ, ಹಿರಿಯ ಮತ್ತು ಕಿರಿಯ ಪರಂಪರೆಗಳೆರಡರ ತಿರಸ್ಕೃತಿ, ಸಂತರ ಅಲೆಮಾರಿ ಬದುಕು, ಪ್ರಾಂತವಾರು ಭಾಷೆಗಳಲ್ಲಿರುವ ಚಿರಪರಿಚಿತ ಧಾರ್ಮಿಕ ವಿಚಾರಗಳು ಮತ್ತು ಸಂಕೇತಗಳು, ಕೆಲವೊಂದು ನಿಶ್ಚಿತ ನಿಗೂಢ ಪದ್ಧತಿಗಳು,... ಮುಂತಾದ ಈ ವಿಶಿಷ್ಟ ಲಕ್ಷಣಗಳು ಭಾರತದ ಇನ್ನಿತರ ಭಕ್ತಿ ಚಳುವಳಿಗಳೊಂದಿಗೆ ವಚನ ಚಳುವಳಿಯು ಹಂಚಿಕೊಂಡ ಸುವಿಚಾರ ಸರಣಿಯಾಗಿದೆ. ಇಂಥದೊಂದು ವಿಚಾರ ವಿನಿಮಯದಿಂದಾಗಿ, ನೈಜವಾದ ರೀತಿಯಲ್ಲಿ 'ಭಕ್ತಿಯೆಂಬ ಮತ್ತೊಂದು ಭಾರತವ್ಯಾಪಿ ಪರಂಪರೆಯು ಪ್ರಾದೇಶಿಕ ವ್ಯತ್ಯಾಸಗಳೊಂದಿಗೆ ಪ್ರಕಟಗೊಂಡಂತಾಗಿದೆ.

ಭಾರತೀಯ 'ಅಭಿಜಾತ'(=ಸಂಸ್ಕೃತ ಮತ್ತು ಪ್ರಾದೇಶಿಕ ಭಾಷೆಗಳಲ್ಲಿರುವಂತೆ) ಮತ್ತು 'ಜಾನಪದ' ಸಾಹಿತ್ಯದಲ್ಲಿ ಪ್ರತಿಷ್ಠಾಪನೆಗೊಂಡಿರುವ ಬಹುಭಾಷಿಕ ಸಂಪ್ರದಾಯಗಳು, 'ದತ್ತ'ವಾಗಿರುವ ಕಥಾಪಾತ್ರಗಳು, ವಿವೃತವಾದ ಛಂದೋಬದ್ಧ ರಚನೆಗಳು, ವಾಹಕವಾಗಿ

ಪರಿಣಮಿಸಿ ಸಾಹಿತ್ಯಕ ಅಭಿವ್ಯಕ್ತಿಯನ್ನು 'ನಿರ್‌ವ್ಯಕ್ತೀಕರಣ'ಕ್ಕೊಳಪಡಿಸಿಬಿಟ್ಟಿದ್ದುವು. ಸಾಹಿತ್ಯದ ಆದರ್ಶವೇ 'ಅವೈಯಕ್ತಿಕ' (Impersonal) ಆಗಿತ್ತು. ಆದರೆ ವಚನಗಳು 'ವೈಯಕ್ತಿಕ ಭಾವ ಸಾಹಿತ್ಯ'ವಾಗಿದ್ದು ಅನೇಕ ಅರ್ಥಗಳಲ್ಲಿ 'ವೈಯಕ್ತಿಕ'ವೇ ಆಗಿದೆ:

ಅ) ಬಹುಮಂದಿ ವಚನಕಾರರು ನೈಜ ವ್ಯಕ್ತಿಗಳ ನೈಜ ಸಂಘರ್ಷಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ಪ್ರಾಚೀನ ಸಾಹಿತ್ಯವಲ್ಲಿ ವರ್ಣಿಸಿರುವುದಕ್ಕಿಂತ ಮಿಗಿಲಾಗಿ ಜೀವನದ ಎಲ್ಲ ಸೂಕ್ಷ್ಮಗಳನ್ನು ಪ್ರತಿನಿಧೀಕರಿಸಿದ್ದಾರೆ. ಉದಾಹರಣೆಗೆ, ಬಸವಣ್ಣ ತನ್ನ ವಚನವೊಂದರಲ್ಲಿ ತಾನು ಭವಿ ಬಿಜ್ಜಳನ ಬಳಿ ಭಂಡಾರಿಯಾಗಿರುವುದರಿಂದ ರಾಜಸೇವಾಸಕ್ತನಾಗಿ, ದೈವದ್ರೋಹಿಯಾಗಿದ್ದಾನೆಂದು ತನ್ನವರಿಂದಲೇ ಟೀಕೆಗೊಳಗಾಗಿರುವುದನ್ನು ಸ್ವತಃ ಪ್ರಸ್ತಾಪಿಸಿದ್ದಾನೆ.

ಆ) ವಚನಕಾರರು ಮಾತನಾಡಿರುವುದು ಕಥಾಂತರ್ಗತ ಪಾತ್ರಗಳು ಅಥವಾ ಮುಖವಾಡಗಳ ಮೂಲಕ ಅಲ್ಲ. ಸ್ಥಳೀಯ ಉಪಭಾಷೆ ಮತ್ತು ನುಡಿಗಟ್ಟು, ಮಾತನಾಡುವ ಭಾಷೆಯ ಧಾಟಿಗಳು, ಮತ್ತು ವೈಯಕ್ತಿಕ ಸಂವಾದಗಳು ಅಥವಾ ಕರೆ-ಮೊರೆಗಳ ಮೂಲಕ ನೇರವಾಗಿ ಉತ್ತಮ ಪುರುಷ ನಿರೂಪಣೆಯುಳ್ಳ ಕವಿಯ ಸ್ವಕೀಯ ಪ್ರಜ್ಞೆಯೊಂದಿಗೆ ವಚನಗಳು ಮೂಡಿಬಂದಿವೆ.

ಇ) 'ದತ್ತ'ವೆನ್ನಬಹುದಾದ ಸಾಂಪ್ರದಾಯಿಕ ಭಕ್ತಿತತ್ವವನ್ನನುಸರಿಸಿಯೂ ಆಳವಾಗಿರುವ ಗಾಢಪ್ರೀತಿಯ ಸಂಬಂಧಗಳ ಮೂಲಕ ವಚನಗಳು ಮೂಡಿಬಂದಿವೆ. ಭಕ್ತಿಯ ರತಿ ಮತ್ತು ವಿಕಲತೆಗಳು ನಲ್ಲ-ನಲ್ಲೆಯರ ಪ್ರಣಯಭಾವ, ಹಾದರಗಿತ್ತಿ-ಹಾದರಿಗನ ಸಂಬಂಧ (=ಮಹಾದೇವಿಯಕ್ಕ) ತಾಯಿ-ಮಗು, ತಂದೆ-ಮಗನ ವಾತ್ಸಲ್ಯಭಾವ, ಸ್ವಾಮಿ-ಸೇವಕ ಭಾವಗಳಲ್ಲಿ ಕಾಣಿಸಿಕೊಂಡಿವೆ.

ಈ) ವೈದಿಕ ಸ್ತೋತ್ರಗಳೂ ಮುಂತಾದ ಭಾರತೀಯ ಧಾರ್ಮಿಕ ಸಾಹಿತ್ಯಗಳೊಂದಿಗೆ ಹೋಲಿಸಿ ನೋಡಿದರೆ, ವಚನಗಳು ಭಕ್ತನ ಮನಃಸ್ಥಿತಿಯನ್ನು ನೇರವಾಗಿ ಹೇಳಿಕೊಳ್ಳುತ್ತವೆ. ಹಾಗೂ ಬಾಹ್ಯಪೂಜೆಯ ವಸ್ತುವಿಷಯಕ್ಕಿಂತಲೂ ವ್ಯಕ್ತಿ ವಿಷಯವನ್ನು ಕೇಂದ್ರೀಕರಿಸಿದ ಸೂಚನೆಗಳ ಮೂಲಕವೇ ದೈವಪ್ರಕಟನೆಯ ಭಾವನಿರೂಪಣೆಯಿದೆ.

ಇದಲ್ಲದೆ, ಯೂರೋಪಿನ ಪ್ರಾಟೆಸ್ಟಂಟ್ ಚಳುವಳಿಗಳಿಗೆ ಹೋಲಿಸಿದಲ್ಲಿ ವೀರಶೈವಾದಿ ಭಕ್ತಿಪಂಥಗಳು 'ಭಾರತೀಯ ಸಂವಾದಿ'ಗಳೆನಿಸುತ್ತವೆ. ನಾನಿಲ್ಲಿ ಇವೆರಡರ ಸಮಾನಾಂತರ ವಿಚಾರ ಸರಣಿಗಳನ್ನು ಕೆಳಕಂಡಂತೆ ಸೂಚಿಸಿದ್ದೇನೆ: ನೇರವಾದ-ವೈಯಕ್ತಿಕವಾದ-ಮೂಲ ಅನುಭವದ ಹೆಸರಿನಲ್ಲಿ ಅರ್ಥಹೀನ ಸಾಮಾಜಿಕ ವ್ಯವಸ್ಥೆಗಳು, ದೇವಾಲಯಗಳು, ಆಚರಣೆಗಳು ಮಧ್ಯವರ್ತಿಗಳಾದ ಪುರೋಹಿತಶಾಹಿಗಳ ವಿರುದ್ಧ ಪ್ರತಿಭಟನೆ, ಕೆಳಸ್ತರದ ಜನಗಳಿಗಾಗಿ ಧಾರ್ಮಿಕ ಚಳುವಳಿ, ಎಲ್ಲ ಜಾತಿ ಮತ್ತು ವೃತ್ತಿಗಳಿಗೆ ಸೇರಿದ ಶರಣರನ್ನು ಒಳಗೊಳ್ಳುವುದು, ಪ್ರಾಂತೀಯ ಅವನತ ಉಪಭಾಷೆಗಳಲ್ಲಿ ಸಂವಾದ ಮಾಡುವುದು, ಪ್ರಥಮ ಬಾರಿಗೆ ದುರವಗಾಹಿ ಸಂಸ್ಕೃತ ಪಠ್ಯಗಳನ್ನು ಅಧಿಕೃತವಾದ ಪ್ರಾದೇಶಿಕ ಅಭಿವ್ಯಕ್ತಿ ಮತ್ತು

ಅನುವಾದಗಳಲ್ಲಿ ಪುನರ್‌ಸೃಷ್ಟಿಸುವುದು (=ಬೈಬಲ್ ಅನ್ನು ಯೂರೋಪಿನ ಭಾಷೆಗಳಲ್ಲಿ ಅನುವಾದ ಮಾಡಿದಂತೆ), ಆಧ್ಯಾತ್ಮಿಕವಾದ ಆಯ್ಕೆಗಳಿಗೆ ಅವಕಾಶವಿರುವ ಇಚ್ಛಾಧರ್ಮ ವೊಂದರ ಅನುಗ್ರಹಕ್ಕೆ ಪಾತ್ರರನ್ನಾಗಿಸುವುದು, ಜನ್ಮಜಾತ ಸಾಮಾಜಿಕ ವ್ಯವಸ್ಥೆಗೆ ಬದಲಾಗಿ ಆಧ್ಯಾತ್ಮಿಕವಾದ ಅನುಭವದಿಂದ ಹುಟ್ಟಿದ ನೆಲೆಗಳನ್ನು ಅಂಗೀಕರಿಸುವುದು, ಕಾಯಕವೇ ಕೈಲಾಸವೆಂಬ ನಡೆ-ನುಡಿಯ ವೇದಾಂತದ ಮೂಲಕ ಧಾರ್ಮಿಕ ಶುದ್ಧೀಕರಣದ ಸಂಹಿತೆಯನ್ನು ಪ್ರತಿಪಾದಿಸುವುದು, ಉಭಯವೈರುಧ್ಯಗಳಾದ ಏಕದೇವತಾರಾಧನೆ ಮತ್ತು ಸೂಕ್ತಿಸುಭಾಷಿತ್ವ, ಅಸಹಿಷ್ಣುತೆ ಮತ್ತು ಮಾನವತಾವಾದ, ಕಠೋರತೆ ಮತ್ತು ಕೋಮಲತೆಗಳ ಸಮ್ಮಿಶ್ರಣವನ್ನು ಸಾಧಿಸುವುದು.

ಸಕಲ ಜೀವಿಗಳೊಂದಿಗೆ ಕೂಡಿಕೊಳ್ಳುವ ಮತ್ತು ಲೇಸ ಬಯಸುವ ವಚನಗಳಲ್ಲಿನ ಅಭಿವ್ಯಕ್ತಿಯು-ಅಭಿಜಾತ ಹಿಂದೂಧರ್ಮಕ್ಕೆ ಅಪರಿಚಿತವಲ್ಲವಾದರೂ- ಎಂದೂ ಇಲ್ಲದ ಉಜ್ವಲತೆ ಮತ್ತು ಆಗ್ರಹಗಳಿಂದ ಪಶು ಪಕ್ಷಿ ಪ್ರಾಣಿ ಸಹಿತವಾದ ಮಾನವಪ್ರೇಮದ ಪ್ರತಿಪಾದನೆಯನ್ನೊಳಗೊಂಡಿದೆ. ಮನುಷ್ಯ ನಿರ್ಮಿತ ವ್ಯವಸ್ಥೆಗಳೆಲ್ಲವೂ ಮನುಷ್ಯರ ಸಲುವಾಗಿಯೇ ಹೊರತು, ಮನುಷ್ಯರು ವ್ಯವಸ್ಥೆಯ ಸಲುವಾಗಿ ಇಲ್ಲವೆಂಬುದನ್ನು ವಚನ ಸಾಹಿತ್ಯದಲ್ಲಿ ಗಟ್ಟಿಯಾಗಿ ಪ್ರತಿಪಾದಿಸಲಾಗಿದೆ. ಬಸವಣ್ಣನ ವಚನವೊಂದರಲ್ಲಿರುವ ನುಡಿ ಗಳಿವು:

ಕಲ್ಲನಾಗರ ಕಂಡರೆ ಹಾಲನೆರೆ ಎಂಬರು;
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ
ಉಂಬ ಜಂಗಮ ಬಂದರೆ ನಡೆ ಎಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯಾ

ಕನ್ನಡ ಸಂಸ್ಕೃತಿಯ ಗಾದೆಮಾತಾಗಿರುವ ಬಸವಣ್ಣನ ಸುಪ್ರಸಿದ್ಧವಾದ ನುಡಿಯಿದು: "ದಯೆಯಿಲ್ಲದ ಧರ್ಮವಾವುದಯ್ಯಾ?" ಇಂಥ ಮಾನವ ದಯಾಮೃತ ಮತ್ತು ಸಕಲ ಜೀವರಾಶಿಯ ಬಗೆಗಿನ ಪ್ರೀತಿಗೆ ದಸರೇಶ್ವರನೆಂಬ ವಚನಕಾರನ ಉಜ್ವಲ ಉದಾಹರಣೆಯೇ ಇದೆ. ಈತ ಶಿವಪೂಜೆಗಾಗಿ ಗಿಡಗಳಿಂದ ಹೂವುಗಳನ್ನು ಕೂಡ ಕೀಳುತ್ತಿರಲಿಲ್ಲ; ತಾನಾಗಿ ಕೆಳಗೆ ಉದುರಿದ ಹೂಗಳನ್ನು ಮಾತ್ರ ಆಯ್ದುಕೊಳ್ಳುತ್ತಿದ್ದನು:

ನುಡಿವಲ್ಲಿ ಕಿಂಕಲವನರಿದು
ಕರವ ಬೀಸುವಲ್ಲಿ ತುಷಾರ ಕೀಟವನರಿದು,
ಅಡಿಯಿಡುವಲ್ಲಿ ಪೊಡವಿಯಲ್ಲಿ
ಹೊರಹೊಮ್ಮಿದ ಜೀವನ ಚೇತನಾದಿಗಳನರಿದು
ಮತ್ತೆ, ನೀಡುವಲ್ಲಿ ಹಿಡಿವಲ್ಲಿ,
ಮತ್ತೊಂದ ಒಡಗೂಡುವಲ್ಲಿ, ಒಡಗೂಡಿ ಬಿಡುವಲ್ಲಿ
ಸರ್ವದಯಕ್ಕೆ ಪಡಿಪುಚ್ಚವಿಲ್ಲದಿರಬೇಕು
ಇಂತೀ ಸಡಗರದ ಚಿತ್ತ ದಸರೇಶ್ವರಲಿಂಗವನೊಡಗೂಡುವ ಭಕ್ತಿ

ಟಿಪ್ಪಣಿಗಳು

೧. ಕೆಲವು ವ್ಯಾಖ್ಯಾನಕಾರರು ಸಾಂಕೇತಿಕತೆಯನ್ನು ಮತ್ತಷ್ಟು ವಿಸ್ತರಿಸಿದ್ದಾರೆ: ದೇವಾಲಯಕ್ಕೆ ಮೂರು ದ್ವಾರಗಳಿದ್ದರೆ ಅವು ಪ್ರಜ್ಞೆಯ ಮೂರು ಸ್ಥಿತಿ (ನಿದ್ದೆ-ಎಚ್ಚರ-ಕನಸು)ಗಳನ್ನು ಪ್ರತಿನಿಧಿಸುತ್ತವೆ. ಈ ಮೂರರಲ್ಲಿ ಯಾವುದೊಂದರ ಮೂಲಕವಾದರೂ ದೇವರನ್ನು ತಲುಪ ಬಹುದೆಂಬ ನಂಬಿಕೆಯೂ ಇದೆ. ಒಂದು ವೇಳೆ ಐದು ದ್ವಾರಗಳಿದ್ದರೆ ಅವು ಪಂಚೇಂದ್ರಿಯಗಳ ಪ್ರತಿನಿಧೀಕರಣವೆನ್ನುತ್ತಾರೆ.

೨. ಇಂಡೋ-ಯುರೋಪಿಯನ್ ಭಾಷೆಗಳಲ್ಲಿ ಸಾಧ್ಯವಿರುವಂತೆ Making ಮತ್ತು Doing ಕ್ರಿಯೆಗಳ ಮಧ್ಯೆ ಇರುವ ಸ್ಪಷ್ಟ ವಿಂಗಡನೆಯನ್ನು ಕನ್ನಡದಲ್ಲಿ ಹೇಳಲು 'ಮಾಡಲು' ಎಂಬ ಒಂದೇ ಶಬ್ದವಿರುವುದನ್ನಿಲ್ಲಿ ಗಮನಿಸಬೇಕು. (ವಿ.ಸೂ: ಎ.ಕೆ.ರಾಮಾನುಜನ್ ಅವರ ಈ ಅಭಿಪ್ರಾಯ ಒಪ್ಪಲಾಗದು. ಅವರು ಗುರುತಿಸಿರುವ ವಿಂಗಡನೆಗೆ ಅನುಗುಣವಾಗಿ ಕನ್ನಡವಲ್ಲಿ 'ಕಟ್ಟುವುದು' ಮತ್ತು 'ಮಾಡುವುದು' ಎಂಬ ಪದಗಳಿವೆಯಾದರೂ, ಮೂಲ ಲೇಖಕರ ಆಶಯಾನುಸಾರ 'ಮಾಡುವುದು' ಮತ್ತು 'ಆಗುವುದು' ಎಂಬ ವಿಭಿನ್ನ ಕನ್ನಡ ಶಬ್ದಗಳನ್ನಿಲ್ಲಿ ಬಳಸಿದ್ದೇನೆ-ಅನುವಾದಕ)

೩. ಈ ವಚನದ ಒಂದು ಪಾಠಾಂತರದಲ್ಲಿ ಭವಿಷ್ಯಕಾಲ ಸೂಚಕಪ್ರತ್ಯಯವಿದ್ದರೆ, ಉಳಿದೆಡೆಗಳಲ್ಲಿ ಭೂತಕಾಲ ಸೂಚಕ ಪ್ರತ್ಯಯವೇ ಇದೆ.

೪. ಈ ಎಲ್ಲ ಅಭಿಪ್ರಾಯಗಳ ಬೆಳಕಿನಲ್ಲಿ ನೋಡಿದರೆ ಕ್ರೈಸ್ತಧರ್ಮ ಪ್ರಚಾರಕರು ಬಹುಸಂಖ್ಯೆ ಯಲ್ಲಿ ದಕ್ಷಿಣಭಾರತೀಯ ಭಕ್ತಿಪಠ್ಯಗಳು ಮತ್ತು ಪರಂಪರೆಗಳತ್ತ ಆಕರ್ಷಿತರಾದದ್ದು ಅಚ್ಚರಿಯೇನಲ್ಲ. ಅವುಗಳನ್ನು ಅನುವಾದಿಸುವ ಸಂದರ್ಭದಲ್ಲಿ ಭಕ್ತಿಪಂಥದ ಧೋರಣೆಗಳು, ಆದಿ ಕ್ರೈಸ್ತರ ಪ್ರಭಾವದ ಪರಿಣಾಮಗಳೊಂದಿಗೆ ಪರ್ಯಾಲೋಚಿಸಲು ತಕ್ಕ ವಿಚಾರಗಳೆನಿಸಿವೆ. ಜೊತೆಗೆ ಕ್ರೈಸ್ತಪಠ್ಯಗಳು ಮತ್ತು ಸಜೀವ ಚಿತ್ರಗಳು(=ವಿಶೇಷವಾಗಿ ಹೊಸ ಒಡಂಬಡಿಕೆ ಮತ್ತು ಸಂತರ ಸಜೀವ ಚಿತ್ರಗಳು) ಅನೇಕ ಹಿಂದೂಗಳನ್ನು ಆಕರ್ಷಿಸಿದ್ದು ಭಕ್ತಿ ಪಂಥಗಳ ವೈವಿಧ್ಯಗಳಂತೆಯೇ ಮನ ಸೆಳೆದಿದೆ.(ವಿ.ಸೂ: ದಿ. ಎ.ಕೆ. ರಾಮಾನುಜನ್ ಅವರು ಇಲ್ಲಿ ಹೇಳಿರುವ ಮಾತುಗಳು ಪ್ರಶ್ನಾರ್ಹವಾಗಿದೆ. ಯಾವೊಬ್ಬ ಕ್ರೈಸ್ತಧರ್ಮ ಪ್ರಚಾರಕನೂ 'ವಚನಸಾಹಿತ್ಯ'ದ ಸಂಪಾದನೆಯತ್ತ ಗಮನಹರಿಸಿಲ್ಲವೆಂಬ ಸತ್ಯಸಂಗತಿಯನ್ನು ವಿಚಾರ ಮಾಡಿದಲ್ಲಿ ಇದು ಆಕಸ್ಮಿಕವಲ್ಲವೆಂಬುದರ ಜೊತೆಗೆ, ಕ್ರೈಸ್ತಧರ್ಮ ಪ್ರಚಾರಕರು ಬಹುಸಂಖ್ಯೆ ಯಲ್ಲಿ ದಕ್ಷಿಣಭಾರತೀಯ ಭಕ್ತಿಪಠ್ಯಗಳು ಮತ್ತು ಪರಂಪರೆಗಳತ್ತ ಆಕರ್ಷಿತರಾಗಿದ್ದರೆಂಬ ಎ.ಕೆ. ರಾಮಾನುಜನ್ ಅವರ ಸಾಮಾನ್ಯೀಕರಣವು ಛಿದ್ರವಾಗುತ್ತದೆ-ಅನುವಾದಕ)

೫. ವಚನಗಳೂ ಮಾನವ ಜಗತ್ತನ್ನು 'ಭಕ್ತ'(Devotee) ಮತ್ತು 'ಭವಿ' (Worlding) ಎಂದು ವಿಂಗಡಿಸುವುದುಂಟು. ಈ ವಿಭಜನೆ, ದೇವರಲ್ಲಿ ನಂಬಿಕೆಯುಳ್ಳವರು ಮತ್ತು ನಂಬಿಕೆಯಿಲ್ಲ ದವರು-ಕ್ರೈಸ್ತರು ಮತ್ತು ಕ್ರೈಸ್ತೇತರರು-ಯಹೂದಿಗಳು ಮತ್ತು ಯಹೂದ್ಯೇತರರನ್ನು ಹೋಲುತ್ತದೆ ತಮಾಷೆಯಾದ ಐತಿಹ್ಯವೊಂದರ ಪ್ರಕಾರ ಶಿವಶರಣನೊಬ್ಬನು ಸ್ವಯಂ ಪ್ರೇರಣೆಯಿಂದ ಭವಿಗಳನ್ನು ಶೈವರನ್ನಾಗಿ ಬದಲಾಯಿಸುವ ದೀಕ್ಷೆ ತೊಟ್ಟಿರುತ್ತಾನೆ. ಇದಕ್ಕಾಗಿ ತನ್ನೆಲ್ಲ ಶಕ್ತಿ ಸಂಪನ್ನತೆ ಮತ್ತು ನೈಪುಣ್ಯತೆಗಳನ್ನು ಬಳಸುತ್ತಿರುತ್ತಾನೆ. ಲಂಚ ರುಷುವತ್ತುಗಳು, ಪ್ರೀತಿ ಸ್ನೇಹಗಳು, ಬಲಪ್ರಯೋಗ, ಹಿಂಸಾವಿಧಾನಗಳು ಮುಂತಾದವುಗಳ ಮೂಲಕ ಅವರನ್ನು

ತನ್ನೆಡೆಗೆ ಸೆಳೆದುಕೊಂಡು ಅಂಗದಮೇಲೆ ಲಿಂಗ ಸಾಹಿತ್ಯ ಮತ್ತು ಹಣೆಯ ಮೇಲೆ ವಿಭೂತಿಧಾರಣೆ ಮಾಡಿಸುತ್ತಿರುತ್ತಾನೆ. ಒಮ್ಮೆ ಸಾಕ್ಷಾತ್ ಶಿವನೇ ವೇಷಧಾರಿಯಾಗಿ ಇವನನ್ನು ನೋಡಲು ಬರುತ್ತಾನೆ. ಆದರೆ, ಆ ಶಿವಶರಣನು ಶಿವನನ್ನು ಗುರುತಿಸುವುದಿಲ್ಲ; ಬದಲಿಗೆ ಪವಿತ್ರವಾದ ವಿಭೂತಿಯನ್ನು ಶಿವನಮೇಲೆ ಬಲಾತ್ಕಾರವಾಗಿ ಲೇಪಿಸಲು ತನ್ಮೂಲಕ ಶೈವನನ್ನಾಗಿ ಪರಿವರ್ತಿಸಲು ಯತ್ನಿಸುತ್ತಾನೆ. ಇದನ್ನೊಲ್ಲದ ಶಿವನು ಅವನ ಪ್ರಯತ್ನಗಳನ್ನು ನಿರಾಕರಿಸುತ್ತಾನಲ್ಲದೆ, ಆ ಶಿವಶರಣನ ಕಟ್ಟೊತ್ತಾಯಕ್ಕೆ ಬೇಸತ್ತು ತಾನಾರೆಂಬುದನ್ನು ತಿಳಿಯ ಹೇಳಲು ಯತ್ನಿಸುತ್ತಿದ್ದರೂ ಅವನು ಕೇಳಿಸಿಕೊಳ್ಳದೆ ಬಲಾತ್ಕಾರವಾಗಿ ಶಿವನ ಕಾಲ್ಗಳಮೇಲೆ ವಿಭೂತಿಯನ್ನು ಚೆಲ್ಲಿ ಶೈವ ದೀಕ್ಷೆಯನ್ನು ಕೊಟ್ಟುಬಿಡುತ್ತಾನೆ. ಈ ಭಕ್ತರ ಉಪಟಳ ಹೇಗಿದೆಯೆಂದರೆ ಸಾಕ್ಷಾತ್ ಶಿವ ಕೂಡ ಶೈವನಾಗಿಯೇ ಕಾಣಿಸಿಕೊಳ್ಳಬೇಕಾಗುತ್ತದೆ.

೬. 'ಫಲಶ್ರುತಿ'ಯೆಂಬುದು ಧಾರ್ಮಿಕವಾದ ಆಚರಣೆಗಳ ಮೂಲಕ ಪ್ರಾಪ್ತಿಯಾಗುವ ಗುಣಾತ್ಮಕ ಪ್ರತಿಫಲವಾಗಿದೆ. ತೀರ್ಥಯಾತ್ರೆಗಳ ವಿಷಯದಲ್ಲಿ ಸರ್ವಸಾಮಾನ್ಯವಾಗಿರುವ ನಂಬಿಕೆಯೇನೆಂದರೆ" ---ಎಂಬ ಸ್ಥಳಕ್ಕೆ ----ಕಾಲದಲ್ಲಿ ಸಂದರ್ಶಿಸುವುದರೊಂದಿಗೆ ---, --, ----ಎಂಬಿತ್ಯಾದಿ ಅನುಷ್ಠಾನಗಳನ್ನು ಕೈಗೊಂಡಲ್ಲಿ ಅಂಥವರ ಇಷ್ಟಾರ್ಥಗಳು ನೆರವೇರಿ ಕೆಳಕಂಡಂತೆ ಫಲಸಿದ್ಧಿಯಾಗುತ್ತದೆ". ಈ ಪ್ರತಿಫಲಗಳು ಬಹುಮಟ್ಟಿಗೆ ಲೌಕಿಕತೆ ಮತ್ತು ಧಾರ್ಮಿಕತೆಗಳೆರಡನ್ನೂ ಒಳಗೊಂಡಿದ್ದು ರೋಗನಿವಾರಣೆಯಿಂದ ಹಿಡಿದು ಮರುಜನ್ಮದಲ್ಲಿ ಉತ್ಕೃಷ್ಟ ಸ್ಥಾನ-ಮಾನಗಳ ಪ್ರಾಪ್ತಿಯವರೆಗೆ ವಿಸ್ತರಿಸಿಕೊಂಡಿರುತ್ತವೆ. ಅಗೇಹಾನಂದ ಭಾರತಿ: Pilgrimage in the Indian Tradition, in "History of Religions"- Vol. 3, No.1, P. 145

೭. ವೀರಶೈವ ವಚನಕಾರರು ಸಾಮಾನ್ಯವಾಗಿ ಬಾಹ್ಯವಿಧವಾದ ಆಚರಣೆಗಳನ್ನು ತಿರಸ್ಕರಿಸುತ್ತಾ ರಾದರೂ ಕಾಲಕ್ರಮೇಣ ವೀರಶೈವ ಅನುಯಾಯಿಗಳು ತಮ್ಮದೇ ಆದ ವಿಧ್ಯುಕ್ತ ಆಚರಣೆಗಳು ಮತ್ತು ಸಂಕೇತಗಳನ್ನು ಬಳಕೆಗೆ ತಂದಿದ್ದಾರೆ. ಆದರೆ ಜಡ ವೈದಿಕ ನೆಲೆಯ ಕರ್ಮಕಾಂಡದಂತೆ ವಿಸ್ತರಿಸುತ್ತಾ ಬಂದಿಲ್ಲ. ಸಾಂಪ್ರದಾಯಿಕ ವೀರಶೈವ ಧರ್ಮವು ಅಷ್ಟಾವರಣಗಳನ್ನು ಪ್ರತಿಪಾದಿ ಸುತ್ತದೆ. ಕೆಲವು ವಚನಕಾರರು ಇವುಗಳನ್ನು ಪ್ರಸ್ತಾಪಿಸಿದ್ದಾರಾದರೂ, ಸಮಗ್ರದೃಷ್ಟಿಯಲ್ಲಿ ಅಷ್ಟಾವರಣಗಳು ಗೌಣವಾಗುವುದಲ್ಲದೆ ಕೇವಲ ಅಕ್ಷರಾರ್ಥದ ಅನುಸರಣೆಗಳು ಭಕ್ತನೊಬ್ಬ ನನ್ನು ಸೃಷ್ಟಿಸಲಾರವೆಂಬುದನ್ನು ಎಲ್ಲ ವಚನಕಾರರು ಚೆನ್ನಾಗಿ ಬಲ್ಲವರಾಗಿದ್ದರು. ಅಷ್ಟಾ ವರಣಗಳೆಂದರೆ ಇವು:

i) ಗುರು: ಜೀವಾತ್ಮನನ್ನು ಶಿವನೆಡೆಗೊಯ್ಯಬಲ್ಲ ಆಧ್ಯಾತ್ಮಿಕ ಮಾರ್ಗದರ್ಶಿ.

ii) ಲಿಂಗ : ಶಿವನ ಸಂಕೇತ ಮಾತ್ರವಾದ ಕುರುಹು. ಭಕ್ತನೊಬ್ಬನ ಅಂಗದ ಮೇಲೆ ಈ ಲಿಂಗವು ಸದಾ ಸಾಹಿತ್ಯವಾಗಿರಬೇಕು. ಲಿಂಗವೆಂದರೆ ಶಿಶ್ನ ಲಾಂಛನವೆಂಬ ಪ್ರಸ್ತಾಪವನ್ನು ಯಾವೊಂದು ವಚನವೂ ಮಾಡಿಲ್ಲ. ಲಿಂಗವನ್ನು ಸ್ವಯಂ ಶಿವನೆಂದೇ ಬಗೆವರಲ್ಲದೆ ಇದು ಗುರುವಿನಿಂದ ಭಕ್ತನಿಗೆ 'ದತ್ತ'ವಾಗಿ ಬಂದಿರುತ್ತದೆ.

iii) ಜಂಗಮ: ಅಲೆಮಾರಿಯಾದ ಧಾರ್ಮಿಕ ಗುರುವನ್ನೇ 'ಜಂಗಮ'ನೆನ್ನುತ್ತಾರೆ. ಆದರ್ಶಾ ತ್ಮಕವಾಗಿ ಹೇಳುವುದಾದರೆ ಮುಕ್ತನೂ ಶುದ್ಧನೂ ಆಗಿರುವವನೇ ಜಂಗಮ. ವೀರಶೈವರ ಪಾಲಿಗೆ ಈ ಜಂಗಮನೇ ನೆಲದೊಡೆಯ. 'ಲಿಂಗ' ಮತ್ತು 'ಗುರು' ಜಂಗಮನ ಎರಡು

ಮುಖಿಗಳು. ಜಂಗಮವೆಂಬುದು ಸಂತ ಸಮೂಹವೊಂದನ್ನು ಪ್ರತಿನಿಧಿಸುವ ಹೆಸರೂ ಆಗಿರುವುದರಿಂದಲೇ ಪ್ರತಿಯೊಬ್ಬ ವಚನಕಾರನೂ ಜಂಗಮನಿಗಾಗಿ ತಹತಹಿಸುವುದನ್ನು ಮನಗಾಣಬಹುದು.

iv) ಪಾದೋದಕ: ಗುರುವಿನ ಪಾದಗಳಿಂದ ಹರಿದುಬಂದ ಪವಿತ್ರ ತೀರ್ಥವೇ ಪಾದೋದಕ. ಇದನ್ನು ಭಕ್ತಿಯಿಂದ ಪರಿಗ್ರಹಿಸುವ ಭಕ್ತ ಮನೋಧರ್ಮದ ಬಗೆಯಲ್ಲಿ ಪ್ರತಿಯೊಂದು ವಸ್ತುವು ಗುರು-ಲಿಂಗ-ಜಂಗಮರಿಂದಾಗಿ ಪವಿತ್ರವಾಗುವುದೆಂಬ ನಂಬಿಕೆಯಿದೆ.

v) ಪ್ರಸಾದ: ಗುರುವಿಗೆ ಒಪ್ಪಿಸಲ್ಪಟ್ಟು, ಗುರುವಿನ ಸ್ಪರ್ಶಕ್ಕೊಳಗಾದ ಪವಿತ್ರವಾದ ಆಹಾರವೇ ಪ್ರಸಾದವೆನಿಸುವುದು. ಹಿಂದೂಧರ್ಮದ ಪ್ರಕಾರ ಪ್ರಸಾದರೂಪದ ಅನ್ನ ಮತ್ತು ಪಾನಗಳು ಜಾತಿಯಿಂದ ಜಾತಿಗೆ, ಗಂಡಿನಿಂದ ಹೆಣ್ಣಿಗೆ ಬೇರೆ ಬೇರೆಯಾಗಿದ್ದು ಪವಿತ್ರ ಮತ್ತು ಅಪವಿತ್ರ ನೆಲೆಗಳೆಂಬ ತಾರತಮ್ಯಕ್ಕೆಡೆಯಿರುತ್ತದೆ. ಇದಕ್ಕೆ ತದ್ವಿರುದ್ಧ ಆದರ್ಶವ್ರೋ ಎಂಬಂತೆ ಸಹಪಂಕ್ತಿ ಮತ್ತು ಸಹಸಂಗದ ಮೂಲಕ ಭಕ್ತರನ್ನು ಒಗ್ಗೂಡಿಸುವ ಪಾದೋದಕ ಮತ್ತು ಪ್ರಸಾದಗಳು ಯಾವುದೇ ವಿಧವಾದ ಸ್ಥಾನ-ಮಾನಗಳು, ಕುಲ-ಪಂಗಡಗಳು, ವೃತ್ತಿ-ವ್ಯವಹಾರಗಳೆಂಬ ತಾರತಮ್ಯಕ್ಕೆ ಅವಕಾಶ ನೀಡುವುದಿಲ್ಲ. ಇಂಥದೊಂದು ಅನುರೂಪತೆ ಮತ್ತು ಸಮಾನತೆಗಳನ್ನು ಭಕ್ತಿಭಾವನೆಯಿಂದ ಗುರು ಸಾಧಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಮುಖ್ಯಾಂಶವೆಂದರೆ ವೈದಿಕರ ಆಚರಣೆಗಳಲ್ಲಿರುವ 'ಬೆಂಕಿ'ಗೆ ಬದಲಾಗಿ 'ನೀರು' ಪ್ರಧಾನ ದ್ರವ್ಯವಾಗಿ ಆಚರಣೆಯಲ್ಲಿರುವುದು.

vi) ವಿಭೂತಿ: ಇದು ಪವಿತ್ರವಾದ ಬೂದಿ. ಇದನ್ನು ನಿಯಮಗಳಿಗನುಗುಣವಾಗಿ ಮತ್ತು ಪವಿತ್ರವಾದ ಗೀತೆಗಳನ್ನು ಹಾಡಿಕೊಳ್ಳುತ್ತಾ ಶರಣನೊಬ್ಬ ತಾನು ಕಲಿತುಕೊಂಡಂತೆ ತಯಾರಿಸಬೇಕಾಗುತ್ತದೆ. ಬೂದಿಯು ಶಿವ ಸಂಬಂಧಿಯಾಗಿದ್ದು 'ಭಸ್ಮಭೂಷಣ'ನಾದ ಶಿವನ ಒಡಲನ್ನೆಲ್ಲ ಅಲಂಕರಿಸಿರುತ್ತದೆ.

vii) ರುದ್ರಾಕ್ಷಿ: ಶಿವನ ಕಣ್ಣುಗಳೆಂಬ ಬಿರುದಿಗೆ ಪಾತ್ರವಾದ ಬೀಜಗಳಿವು. ಶಿವಭಕ್ತರಿಗೆ ಪವಿತ್ರವಾದ ಈ ಬೀಜಗಳಿಂದ ಕಂಠಹಾರ, ಕೈಗಡಗ, ತೋಳುಬಂದಿಗಳನ್ನಲ್ಲದೆ ಜಪಮಾಲೆಯನ್ನೂ ಮಾಡಿಕೊಳ್ಳುವುದುಂಟು.

viii) ಮಂತ್ರ: 'ಓಂ ನಮಃ ಶಿವಾಯ'ವೆಂಬ ಪಂಚಾಕ್ಷರಿ ಮಂತ್ರವು ಮಂತ್ರಗಳ ಸಾಮ್ರಾಟನೆನಿಸಿಕೊಂಡಿದೆ. ಇದು ವೀರಶೈವರಿಂದ ಅಂಗೀಕರಿಸಲ್ಪಟ್ಟ ಏಕೈಕ ಮಂತ್ರ. "ಎಲ್ಲ ಶೈವರ ಪ್ರಕಾರ ಈ ಪಂಚಾಕ್ಷರಗಳು, ಎಪ್ಪತ್ತುಕೋಟಿ ಇತರ ಮಂತ್ರಗಳನ್ನು ತಂದೊಟ್ಟಿದರೂ ಸರಿದೂಗದ 'ಘನ' ಮಂತ್ರವಾಗಿದೆ."-ಎಸ್.ಸಿ. ನಂದಿಮಠ, A Handbook of Virasaivism, p.63

೮. L. Dumont's Homo Hierarchicus', Chicago, 1970, ಜೊತೆಗೆ ನೋಡಿ: W. McCormack's anthropological appendix.

೯. ಭಕ್ತಿಯಲ್ಲಿ ಸ್ಥೂಲವಾಗಿ 'ಸಗುಣ' ಮತ್ತು 'ನಿರ್ಗುಣ'ಗಳೆಂಬ ಎರಡು ವಿಧಗಳಿವೆ: ನಿರ್ಗುಣ ಭಕ್ತಿಯು ಆತ್ಮಭಕ್ತಿಯಾಗಿದ್ದು ದೇಹ-ಅಂಗ-ಭಾವವಿಲ್ಲದ 'ನಿರ್ಗುಣ' ದೇವರನ್ನು ನಿರುಪಾದಿಕ ನೆಲೆಯಲ್ಲಿಟ್ಟು ನೋಡುತ್ತದೆ. 'ಶಿವ'ನೆಂಬ ಹೆಸರು ಹೊತ್ತಿದ್ದರೂ ಅವನಿಗೆ ಯಾವುದೇ ಪುರಾಣಾಖ್ಯಾನಗಳಿಲ್ಲ; ಅವನು ಶಿವಪುರಾಣದ ಶಿವನಲ್ಲ. ಬಹುದೊಡ್ಡ ಪ್ರಮಾಣ

ದಲ್ಲಿ ಶಿವಶರಣರು ನಿರ್ಗುಣ ಭಕ್ತರಾಗಿದ್ದು ದೇವರನ್ನು ಆತ್ಮನಿಷ್ಠರಾಗಿ ಮತ್ತು ತೀವ್ರಭಾವಗಳೊಂದಿಗೆ ಅನಂತವಾಗಿರುವ ಪರಮಾತ್ಮನೆಂದು ಪರಿಭಾವಿಸಿದ್ದಾರೆ. ಆದರೆ ಸಗುಣಭಕ್ತಿಯು ಕೃಷ್ಣನಂತಹ ನಿರ್ದಿಷ್ಟ ದೇವರನ್ನು ಉದ್ದೇಶಿಸಿದ್ದು ಉಪಾದಿಕವಾಗಿರುತ್ತದೆ. ಶಿವಶರಣೆಯಾದ ಮಹಾದೇವಿಯಕ್ಕನು ಇಂಥ ವ್ಯತ್ಯಾಸಗಳಿಗೊಂದು ಉತ್ತಮ ಉದಾಹರಣೆಯಾಗಿದ್ದಾಳೆ. ಪೂರ್ಣ ಪ್ರಮಾಣದಲ್ಲಿ ಅಲ್ಲವಾದರೂ ಕೊಂಚಮಟ್ಟಿಗೆ, ಆಕೆಯು ಪೌರಾಣಿಕವಾದ ಅಥವಾ ಸಗುಣಶಿವನನ್ನು ಕುರಿತು(ಶಿವನ ಪತ್ನಿಯಾದ ದೇವಿ ಪಾರ್ವತಿ ಅಥವಾ ದುಷ್ಟರಾಕ್ಷಸರೊಂದಿಗೆ ಶಿವನು ನಡೆಸಿದ ಪೌರಾಣಿಕ ಯುದ್ಧಗಳ ಪ್ರಸ್ತಾಪವೂ ಸೇರಿದಂತೆ) ಹಾಡಿದ್ದಾಳಾದರೂ 'ಚೆನ್ನಮಲ್ಲಿಕಾರ್ಜುನ'ನ ಜೊತೆಗಿನ ಆಕೆಯ ಪ್ರೇಮ ಮತ್ತು ಇಂದ್ರಿಯಾನುಭೂತಿಗಳು ಸ್ಪಷ್ಟವಾಗಿ ಒಂದು 'ಆಧ್ಯಾತ್ಮಿಕ ರೂಪಕ'ವಾಗಿದೆ. ವೈಷ್ಣವ ಭಕ್ತಿ, ರಾಮ ಅಥವಾ ಕೃಷ್ಣಭಕ್ತಿಯು ಸಗುಣ ಭಕ್ತಿಯ ಸಾಮಾನ್ಯ ನಿದರ್ಶನವಾಗಿದೆ.

೧೦. ವಚನಕ್ಕಿರುವ ಸಾಮಾನ್ಯ ಅರ್ಥಗಳಲ್ಲಿ 'ಗದ್ಯ'ವೆಂಬುದೂ ಒಂದು. ವಚನಕಾರರಾರೂ ತಮ್ಮನ್ನು ಕವಿಗಳೆಂದು ತಿಳಿದುಕೊಂಡವರಲ್ಲ. ಕಾವ್ಯ ಅಥವಾ ಕವಿತ್ವವೆಂಬ ರಚನೆಗಳು ವಚನಗಳ ಕಾಲಕ್ಕೆ ಆಸ್ಥಾನ-ಆಲಯ ಮತ್ತು ಪಾಂಡಿತ್ಯ ವಲಯಗಳಿಗೆ ಸೇರಿದ್ದು 'ಸ್ಥಾವರ'ವಾಗಿದ್ದವು.

೧೧. ಎಂ. ಚಿದಾನಂದಮೂರ್ತಿ: ಸಂಶೋಧನ ತರಂಗ, ಪು. ೧೯೦-೨೦೪, ಮೈಸೂರು. ೧೯೬೬.

೧೨. ನೋಡಿ: ವಿ. ರಾಘವನ್, The Great Integrators: the saint singers of India, Delhi, 1966, ಭಾರತೀಯ ಪರಂಪರೆ ಮತ್ತು ಭಕ್ತಜನರ ಪರಸ್ಪರ ಸಂಬಂಧಗಳ ಜೊತೆಯಲ್ಲೆ ಇತರ ಪ್ರಾಂತಗಳಿಂದ ಬಂದ ಸಂತರನ್ನು ಕುರಿತ ಚರ್ಚೆಯೂ ಇಲ್ಲಿದೆ. ಭಕ್ತಿಪಂಥದ ಸಮಾಂತರ ಚಿಂತನೆಗಳು ಮತ್ತು ಅದರ ಮೇಲಣ ಪ್ರಭಾವಗಳು(ಮುಖ್ಯವಾಗಿ ಮುಸ್ಲಿಂ ಸೂಫಿಸಂತರು, ಹಿಂದೂ-ಬೌದ್ಧ-ಜೈನ ಪಂಥಗಳಿಗೆ ಸೇರಿದ ತಂತ್ರ ಮತ್ತು ಯೋಗ ಮಾರ್ಗದ ನಿಗೂಢ ಶಾಖೆಗಳು) ಇತ್ಯಾದಿಗಳನ್ನೆಲ್ಲ ನಾನಿಲ್ಲಿ ವರ್ಜಿಸಿದ್ದೇನೆ. ಅಲ್ಲದೆ ಆಧುನಿಕ ಭಾರತದ ಕಾವ್ಯಕ್ಷೇತ್ರದಲ್ಲಿ ಭಕ್ತಕವಿಗಳು (=ಬಂಗಾಳಿಯಲ್ಲಿ ಟಾಗೋರ್, ತಮಿಳಿನಲ್ಲಿ ಭಾರತಿ) ರಾಜಕೀಯ ಕ್ಷೇತ್ರದಲ್ಲಿ (ಗಾಂಧಿ), ಧರ್ಮ ಮತ್ತು ತತ್ವಜ್ಞಾನಗಳಲ್ಲಿ (ಶ್ರೀ ರಾಮಕೃಷ್ಣ, ಶ್ರೀ ಅರವಿಂದರು) ನೀಡಿದ ಕೊಡುಗೆಗಳನ್ನಿಲ್ಲಿ ಪರಿಗಣಿಸಬೇಕಾಗಿದೆ.

೧೩. ವಿ. ರಾಘವನ್ : ಅದೇ, ಪು.೩೭.

೧೪. II-೧.೨೦ಅನುವಾದ: R.C. Zaehner, Hindu Scriptures, Newyork, 1966, p.44

೧೫. ರೋಮನ್ ಜಾಕೊಬ್‌ಸನ್: Grammatical parallelism and its Russian facet; Language vol 42.2 (1966) p.399-420

೧೬. ನೆನಪಿಡಬೇಕಾದ ಸಂಗತಿಯೆಂದರೆ ಇಲ್ಲಿ ತೋರಿಸಿರುವ ಪಂಕ್ತಿಭೇದಗಳು ಅಥವಾ ಪಾದಾನುಕ್ರಮ ವಿಭಜನೆಗಳೆಲ್ಲವೂ ಐಚ್ಛಿಕವಾದವು. ವಚನಗಳನ್ನು ಸಂಪಾದಿಸಿಕೊಟ್ಟವರು ತಮ್ಮದೇ ಆದ 'ಭೇದ'ಗಳನ್ನು ವಾಕ್ಯಮಟ್ಟದಲ್ಲಿ ಮಾಡಿಕೊಂಡಿದ್ದಾರಾದರೂ ಮೂಲ ಹಸ್ತಪ್ರತಿಗಳಲ್ಲಿ (=ತಾಳೆಗರಿಗಳು) ಪಾದಾನುಕ್ರಮ ಸೂಚನೆಗಳಾಗಲಿ, ನುಡಿಗಟ್ಟು ಅಥವಾ ಪದವಿಭಜನೆಗಳಾಗಲಿ ಅಥವಾ ನಿಲುಗಡೆಯ ಚಿನ್ಹೆಗಳನ್ನಾಗಲಿ ಬಳಸಿರುವುದಿಲ್ಲ. ಜೊತೆಗೆ, ಇಂಗ್ಲಿಷ್‌ನಲ್ಲಿರುವಂತೆ house ಮತ್ತು home ಎಂಬ ಸ್ಪಷ್ಟ ವಿಂಗಡನೆಗಳು ವಚನದಲ್ಲಿ ಗೈರುಹಾಜ

ರಾಗಿದ್ದು, ಈ ಭಿನ್ನಾರ್ಥಗಳನ್ನು ಕನ್ನಡದಲ್ಲಿ 'ಮನೆ'ಯೆಂಬ ಒಂದೇ ಮಾತಿನಿಂದ ಸೂಚಿಸಲಾಗಿದೆ.

೧೭. ಜಾಕೊಬ್‌ಸನ್ : ಪೂರ್ವೋಕ್ತ, ಪು ೪೦೯

೧೮. ಎಲಿಯಾದೆ ಅವರ 'Yoga', P 249-54.

೧೯. ಅದೇ, ಪು ೨೫೧.

೨೦. ವೈಷ್ಣವ ಭಕ್ತಿಯ ಕವಿತೆಗಳಲ್ಲಿ-ಮುಖ್ಯವಾಗಿ ಕೃಷ್ಣ ಮತ್ತು ರಾಧೆಯರ ವೈಯಕ್ತಿಕ ಪ್ರಣಯ ವ್ಯವಹಾರದಲ್ಲಿ -ಇಂಥ ಸಂಪ್ರದಾಯಗಳ ಸಂಪೂರ್ಣ ಬಳಕೆಯನ್ನು ಮನಗಾಣಬಹುದು: ನೋಡಿ: In praise of Krishna, Songs of Bengali. ಅನುವಾದ: E.D. Dimock ಮತ್ತು D. Levertor, New York, 1967.

೨೧. ಇಂಗ್ಲಿಷ್ ಭಾಷೆಯಲ್ಲಿ ಬಾಂಧವ್ಯ ವಾಚಕಗಳಿಗೆ ಸಂಬಂಧಿಸಿದಂತೆ 'ಕಾನೂನು'(Law) ನೆಲೆಗಳು ಢಾಳಾಗಿ ಕಾಣುತ್ತವೆ. ಕನ್ನಡದಲ್ಲಾದರೋ ಅತ್ತೆ-ಮಾವ-ಅತ್ತಿಗೆ-ಮೈದುನ ಎಂಬಂತೆ ಬೇರೆ ಬೇರೆಯಾದ 'ವಿಶಿಷ್ಟ' ಪದಗಳು ಬಳಕೆಯಲ್ಲಿವೆ. ಇವುಗಳಿಗೆ ಇಂಗ್ಲಿಷಿನಲ್ಲಿ Mother-in-Law, Father-in-Law, Sister-in-Law, Borther-in-Law, ಎಂಬಂಥ ರೂಪಗಳಿದ್ದು ಕೌಟುಂಬಿಕ ಕಟ್ಟುಪಾಡುಗಳನ್ನು ಭಾಷಿಕವಾಗಿಯೂ ಹೇಳುತ್ತಿವೆ.

೨೨. The Bhagavadgita XI.12,Tr: R.C. Zaehner, Oxford, 1969, .."ಉಜ್ವಲವಾದ ಸ್ವರ್ಗದಲ್ಲಿ, ಮಿಂಚುವ ತೇಜಸ್ಸಿನ ಸಹಸ್ರಾರು ಸೂರ್ಯರು ಒಟ್ಟೊಟ್ಟಿಗೆ ಉದಯವಾದರೆ ಹೇಗೋ ಹಾಗೆ ಪರಮಾತ್ಮನ ಉಜ್ವಲ ತೇಜಸ್ಸು ಬಹುಶಃ ಪ್ರಕಟಗೊಳ್ಳುವುದು".

‘ನಿಶಾನೆ’ ಬಾರಿಸುವುದು

● ಬಿ ಎಂ ಪುಟ್ಟಯ್ಯ

ನಿಶಾನೆ ಎಂದರೆ ವಾದ್ಯ. ಮಲೆನಾಡಿನ ಕೆಳಜಾತಿಸಮುದಾಯಗಳ ಆಚರಣೆಗಳಲ್ಲಿ ನಿಶಾನೆಯ ಪಾತ್ರ ಬಹಳ ಮಹತ್ತರವಾದುದು. ನಿಶಾನೆಯ ಪಾತ್ರವನ್ನು ಬಿಟ್ಟು ಅಲ್ಲಿನ ಆಚರಣೆಗಳನ್ನು ನೋಡಲು ಬರುವುದೇ ಇಲ್ಲ. ಇವರೆಡಕ್ಕೂ ಅವಿನಾಭಾವ ಸಂಬಂಧವಿದೆ, ಕರುಳುಬಳ್ಳಿ ನಂಟಿದೆ. ಆಚರಣೆಗಳಿಗೆ ನಿಶಾನೆ ಏಕೈಕ ವೇಗವರ್ಧಕ ಶಕ್ತಿ. ನಿಶಾನೆ ಇಲ್ಲದೆ ಯಾವುದೇ ಕಾರ್ಯಕ್ರಮ ಶುರುವಾಗುವುದೂ ಇಲ್ಲ. ಮುನ್ನಡೆಯುವುದೂ ಇಲ್ಲ. ಅದು ಹಬ್ಬವಿರಲಿ, ಜಾತ್ರೆಯಿರಲಿ, ಮದುವೆ ಅಥವಾ ಸಾವು ಇರಲಿ, ನಿಶಾನೆ ಬೇಕೇ ಬೇಕು. ಪ್ರಧಾನ ಪರಿಕರಗಳೆಂದರೆ ಹಲಗೆ (ತಮಟೆ, ತಪಟೆ, ತಬಟೆ), ದೋಣು, ವಾಲಗ, ಸುತಿ, ಮೋರಿ, ಮೊರ್ಪು ಮತ್ತು ತಾಳ. ಇವಲ್ಲದೆ ಇನ್ನೂ ಕೆಲವು ಪರಿಕರಗಳಿವೆ. ಆದರೆ ಮೇಲಿನವು ಮೂಲಭೂತವಾದ ಪರಿಕರಗಳು. ವಾದ್ಯ ಬಾರಿಸುವಲ್ಲಿ ಹಲವು ಕ್ರಮ ಅಥವಾ ಲಯಗಳಿವೆ. ಒಂದೊಂದು ಲಯವೂ ಅದಮ್ಯವಾದ ಸಾಂಸ್ಕೃತಿಕ ನೆನಪುಗಳನ್ನು ಇಟ್ಟುಕೊಂಡಿದೆ. ನಿಶಾನೆ ಬಾರಿಸುವ ಲಯವನ್ನು ಕೇಳಿದರೆ ಸಾಕು, ಅದು ಯಾವ ಆಚರಣೆ, ಆಚರಣೆಯಲ್ಲೇ ಯಾವ ಸನ್ನಿವೇಶ ಎಂಬುದು ಖಚಿತವಾಗುತ್ತದೆ. ನಿಶಾನೆ ಒಂದು ಅಶಾಬ್ದಿಕ ಮಾಧ್ಯಮವಾದರೂ ಅದಕ್ಕೆ ಶಾಬ್ದಿಕ ಮಾಧ್ಯಮವನ್ನೂ ಮೀರಿದ ಪರಿಣಾಮಕಾರಿ ಶಕ್ತಿ ಇದೆ. ಆಚರಣೆಯಿಂದ ಆಚರಣೆಗೆ ಆಚರಣೆಯ ಹಂತಗಳಿಂದ ಹಂತಕ್ಕೆ ಲಯ ಬೇರೆ ಬೇರೆಯಾಗುತ್ತ ಸಾಗುತ್ತದೆ. ನಿಶಾನೆ ಪರಿಭಾಷೆಯಲ್ಲಿ ಈ ಲಯವನ್ನು ‘ಗಸ್ತಿ’ ಎನ್ನುತ್ತಾರೆ. ನಿಶಾನೆಯಲ್ಲಿ ಪಟ್ಟಿಮಾಡಿ ಹೇಳಲಾರದಷ್ಟು ‘ಗಸ್ತಿ’ಗಳಿವೆ. ದೇವರಿಗೆ ಪೂಜೆ ಮಾಡುವಾಗ, ಮಂಗಳಾರತಿ ಮಾಡುವಾಗ, ಉತ್ಸವ ಮೂರ್ತಿ ದೇವಸ್ಥಾನದಿಂದ ಹೊರಡುವಾಗ, ಒಳಗೆ ಹೋಗುವಾಗ, ಕೆಂಡವನ್ನು ತುಳಿದುಕೊಂಡು ಓಡುವಾಗ, ಮೈಮೇಲೆ ಗಣ ಬರುವಾಗ, ಜನರು ಕುಣಿಯುವಾಗ, ನಾಲ್ಕು ಜನ ಹೊರುವ ಉತ್ಸವಮೂರ್ತಿ ಕುಣಿಯುವಾಗ, ಒಬ್ಬರು ಹೊರುವ ಉತ್ಸವಮೂರ್ತಿ ಕುಣಿಯುವಾಗ -ಹೀಗೆ ಬೇರೆ ಬೇರೆ ಸನ್ನಿವೇಶಗಳಲ್ಲಿ ಬೇರೆ ಬೇರೆ ‘ಗಸ್ತಿ’ ಬಾರಿಸುತ್ತಾರೆ. ಇಂಥ ಬೇರೆ ಬೇರೆ ಗಸ್ತಿ ಆಯಾ ಸನ್ನಿವೇಶ ಕಣ್ಣಿಗೆ ಕಟ್ಟುತ್ತದೆ. ಮದುವೆಯಲ್ಲಿ ದಿಬ್ಬಣ ಹೊರಡುವಾಗ, ಒಳಗೆ ಹೋಗುವಾಗ, ತಾಳಿ ಕಟ್ಟುವಾಗ, ಗೌರಿ ಶಾಸ್ತ್ರ ಮಾಡುವಾಗ, ದಾರಿಯಲ್ಲಿ ಸಾಗುವಾಗ ಹೀಗೆ ಬೇರೆ ಬೇರೆ ‘ಗಸ್ತಿ’ಗಳಿವೆ. ಸತ್ತ ದಿನದ ಆಚರಣೆಯಲ್ಲಿ

ಮಾತ್ರ ಎರಡೇ 'ಗಸ್ತಿ'ಗಳಿವೆ. ಸಣ್ಣ ಮಕ್ಕಳು ಮತ್ತು ಅಪ್ರಾಪ್ತ ವಯಸ್ಸಿನವರ ಸಾವಿಗೆ ನಿಶಾನೆ ಮಾಡುವುದಿಲ್ಲ. ಇನ್ನು ಉಳಿದವರೆಲ್ಲರ ಸಾವಿನಲ್ಲಿ ನಿಶಾನೆ ಸಾಮಾನ್ಯ.

ನಿಶಾನೆಯು ಸಾಂಸ್ಕೃತಿಕ ಪರಿಸರದಲ್ಲಿ ಒಂದು ನಿರ್ದಿಷ್ಟ ಭಾವಪ್ರಪಂಚವನ್ನು ಸೃಷ್ಟಿಸುತ್ತದೆ. ಹಬ್ಬ, ಮದುವೆ ಮುಂತಾದ ಸಂದರ್ಭಗಳಲ್ಲಿ ಅದು ಸಂತೋಷ ಭಾವವನ್ನು ಸೃಷ್ಟಿಸುತ್ತದೆ. ಅಥವಾ ಸಂತೋಷ ಭಾವದಿಂದ ಜನ ನಿಶಾನೆಗೆ ಪ್ರತಿಕ್ರಿಯಿಸುತ್ತಾರೆ. ಸಾವಿನಲ್ಲಾದರೆ ದುಃಖ-ಶೋಕ ಎರಡೇ ಇರುತ್ತವೆ. ಇಲ್ಲಿ ನಿಶಾನೆಯು ಶೋಕ ಭಾವವನ್ನು ಸೃಷ್ಟಿಸುವುದಷ್ಟೇ ಅಲ್ಲ; ಅದನ್ನು ಉದ್ದೀಪನಗೊಳಿಸುತ್ತದೆ. ತಿಥಿಯ ರಾತ್ರಿ ಹಾಡುವ ಹಾಡುಗಳೂ ಇದೇ ರೀತಿ ಶೋಕವನ್ನು ಉದ್ದೀಪನಗೊಳಿಸುತ್ತವೆ. ಸಾವು ಎಂದರೆ ಶೋಕ ವಾತಾವರಣ ಇದ್ದೇ ಇರುತ್ತದೆ. ಆದರೆ ಶೋಕವನ್ನು ಉದ್ದೀಪನಗೊಳಿಸುವುದು ಯಾಕೆ ಎಂಬುದು ಇಲ್ಲಿಯ ಪ್ರಶ್ನೆ.

ಬದುಕಿನುದ್ದಕ್ಕೂ ಬೇರೆ ಬೇರೆ ಕಾರಣಗಳಿಗಾಗಿ ದುಃಖ-ಶೋಕಗಳು ಸೃಷ್ಟಿಯಾಗುತ್ತಲೇ ಇರುತ್ತವೆ. ಇವು ಬಹುತೇಕ ಒಬ್ಬ ವ್ಯಕ್ತಿಗೆ ಹೆಚ್ಚೆಂದರೆ ಒಂದು ಕುಟುಂಬಕ್ಕೆ ಸಂಬಂಧಿಸಿರುತ್ತವೆ. ಆದರೆ ಸಾವಿನಲ್ಲಿ ಉಂಟಾಗುವ ದುಃಖ-ಶೋಕ ವ್ಯಕ್ತಿನೆಲೆಯಲ್ಲಿ ನಿಲ್ಲದೆ ಆಯಾ ಕುಟುಂಬವನ್ನು ಆವರಿಸಿಕೊಳ್ಳುತ್ತದೆ. ಕುಟುಂಬದ ಮಿತಿಯನ್ನು ಒಡೆದುಕೊಂಡು ಸಮುದಾಯ ಮತ್ತು ಸಮಾಜ ನೆಲೆಗೆ ಬರುತ್ತದೆ. ಶೋಕದ ಭಾವೋದ್ವೇಗವು ಹರಿದು ಹಂಚಿ-ಬಿಡಿಬಿಡಿಯಾಗಿ ನಿಲ್ಲದೆ ಇಡಿಯಾಗಿ ಸಮೂಹದ/ಸಮಾಜದ ಶೋಕಧ್ವನಿಯಾಗಿ ಮಾರ್ಪಡುತ್ತದೆ. ಈ ಸಾಮೂಹಿಕ ಶೋಕಧ್ವನಿಯು ಸತ್ತವರ ಕುಟುಂಬಕ್ಕಾಗಿರುವ ಆಘಾತವನ್ನು ತುಂಬಿಸಿಕೊಡಲು ಪ್ರಯತ್ನ ಮಾಡುತ್ತದೆ. ಈ ಅಂಶವನ್ನು ಇನ್ನಷ್ಟು ವಿಸ್ತರಿಸಿ ನೋಡುವ ಅವಶ್ಯಕತೆಯಿದೆ. ವ್ಯಕ್ತಿಯೊಬ್ಬ ಸತ್ತಾಗ ಆ ಕುಟುಂಬಕ್ಕೆ ಸಹಜವಾಗಿ ದುಃಖವಾಗಿರುತ್ತದೆ. ಆಯಾ ಕುಟುಂಬದ ಸಮುದಾಯಕ್ಕೂ ದುಃಖವಾಗಿರುತ್ತದೆ. ಆದರೆ ದುಃಖದ ತೀವ್ರತೆಯ ವಿಷಯದಲ್ಲಿ ಕುಟುಂಬಕ್ಕಾಗಿರುವ ತೀವ್ರತೆಯೇ ಬೇರೆ. ಸಮುದಾಯಕ್ಕಾಗಿರುವ ತೀವ್ರತೆಯೇ ಬೇರೆ. ಸತ್ತವರ ಕುಟುಂಬಕ್ಕೆ ದುಃಖವನ್ನು ಹೊರಗಿನ ಪರಿಕರದಿಂದ ಉದ್ದೀಪನಗೊಳಿಸಬೇಕಾಗಿಲ್ಲ. ಆದರೆ ದುಃಖವು ಸಮುದಾಯವನ್ನು ತಲುಪಬೇಕಾದರೆ ಅಲ್ಲಿ ತೀವ್ರತೆ ಹೆಚ್ಚಿಸಬೇಕಾಗುತ್ತದೆ. ಸಾವಿನಲ್ಲಿ ಬರಿಸುವ ನಿಶಾನೆಯು ನಿರ್ಣಾಯಕವಾಗಿ ಈ ಕೆಲಸವನ್ನು ಮಾಡುತ್ತದೆ.

ಹಾಗಾದರೆ, ಕುಟುಂಬ ಮತ್ತು ಸಮುದಾಯಗಳ ನಡುವೆ ಇರುವ ಸಂಬಂಧ ಯಾವ ರೀತಿಯದು? ಇದನ್ನು ಪರಿಶೀಲಿಸಬೇಕು. ಸಾವಿನ ಆಚರಣೆಯಲ್ಲಿ ಬಹಳ ಸಲ ಕುಟುಂಬದವರಿಗೇ ಮೊದಲ ಆದ್ಯತೆ. ಸಮುದಾಯಕ್ಕೆ ಎರಡನೇ ಆದ್ಯತೆ. ಹೀಗೆ ಪ್ರತ್ಯೇಕಿಸಿ ನೋಡುವುದು ಕೆಲವೊಮ್ಮೆ ಯಾಂತ್ರಿಕವೆನಿಸಿಬಿಡುತ್ತದೆ. ಆದರೂ ಕುಟುಂಬವೊಂದಕ್ಕೆ ಆಘಾತವಾದರೆ, ಸಮುದಾಯ ನಿರ್ಲಕ್ಷ್ಯ ಮಾಡುವುದಿಲ್ಲ. ಆಘಾತದಲ್ಲಿ ತಾನೂ ಒಂದಾಗಲು ಪ್ರಯತ್ನಿಸುತ್ತದೆ. ಕುಟುಂಬಕ್ಕಾಗಿರುವ ನಷ್ಟವನ್ನು ತನಗೂ ಆಗಿರುವ ನಷ್ಟವೆಂದು ಭಾವನಾತ್ಮಕ

ನೆಲೆಯಲ್ಲಾದರೂ ಭಾವಿಸತೊಡಗುತ್ತದೆ. ಇಂಥ ಒಂದು ಕ್ರಿಯಾಶೀಲತೆಗೆ ಪೂರಕವಾಗಿ ಸಮುದಾಯ ನಿಶಾನೆಯನ್ನು ಬಳಸಿಕೊಳ್ಳುತ್ತದೆ. ಸಾವಿನಲ್ಲಿ ನಿಶಾನೆಯು ಉಂಟುಮಾಡುವ ಭಾವುಕತೀವ್ರತೆ ಎಷ್ಟೆಂದರೆ, ಅವರ ಮಾತಿನಲ್ಲೇ ಹೇಳುವುದಾದರೆ, 'ಹೆಣದ ಮುಖವನ್ನಾದರೂ ನೋಡಬಹುದು, ಶಾನೆಯನ್ನು ಮಾತ್ರ ಕಿವಿಯಿಂದ ಕೇಳಲು ಆಗುವುದಿಲ್ಲ'.

ಬೆಳಗಾವಿಯ ಬಹುಭಾಷಿಕತೆ

● ರವಿ ಉಪಾಧ್ಯ

ಕನ್ನಡಿಗ ಮರಾಠಿಗರ ಸಂಘರ್ಷಕ್ಕೆ ಹೆಸರಾದ ಬೆಳಗಾವಿ ವಿಚಿತ್ರ ರೀತಿಯಲ್ಲಿ ಬಹುಭಾಷಿಕ ಸಂಸ್ಕೃತಿಯ ಬೀಡು. ಅದರ ಚರಿತ್ರೆಯಲ್ಲಿ ಅನೇಕ ವಿಚಿತ್ರಗಳಿವೆ. 'ತರುಣ ಭಾರತ' ದೈನಿಕದ ಮೊತ್ತ ಮೊದಲ ಸಂಚಿಕೆಯನ್ನು ಮರಾಠಿಯ ಜೊತೆಗೇ ಕನ್ನಡವನ್ನೂ ಮಗ್ಗುಲಲ್ಲೇ ಛಾಪಿಸಿದ, ಸ್ವಾತಂತ್ರ್ಯಯೋಧರೂ ಆಗಿದ್ದ ಶ್ರೀ ಬಾಬುರಾವ ಠಾಕೂರ; ಈಗಿನ 'ಸಂಯುಕ್ತ ಕರ್ನಾಟಕ' ಹುಟ್ಟಿದ್ದೇ ಬೆಳಗಾವಿಯಲ್ಲಿ. ೧೯೩೦ರಲ್ಲಿ ಅದು ಮರಾಠಾ ಮಂಡಳ ಸ್ಕೂಲಿನ ಆವರಣದಲ್ಲಿ ತನ್ನ ಪ್ರಥಮ ಸಂಚಿಕೆಯನ್ನು ಕಂಡಿತು. ಚರಿತ್ರೆಯ ವ್ಯಂಗ್ಯವಿದು.

ಒಂದೆಡೆ ಪತ್ರಿಕೆಯ ಒಂದು ತುದಿಯಿಂದ ಕೊನೆಯ ತುದಿಯವರೆಗೂ ಪೂರ್ತಿ ಅಚ್ಚಗನ್ನಡ ಶಬ್ದಗಳಿಂದಲೇ ಅಚ್ಚುಹಾಕಿಸಿ 'ಜನಜೀವಾಳ' ವಾರಪತ್ರಿಕೆ ಬೇರೆಯವರಿಗೆಲ್ಲ ಮಾದರಿ ಯಾಗುವಂತೆ ತಮ್ಮ ಅಚಲ ಶ್ರದ್ಧೆ ನಿಷ್ಠೆಗಳನ್ನು ಮೆರೆದ ಬ.ಮ. ಏಳುಕೋಟಿಯವರು ಇನ್ನೊಂದೆಡೆ ತಮ್ಮ ಮನೆಮಾತು ಮರಾಠಿಯಾಗಿದ್ದರೂ, ಕನ್ನಡಕುಲದ ಚರಿತ್ರೆಯನ್ನು ಬರೆದ ಶಂಬಾ ಜೋಶಿಯವರು ಇದ್ದಾರೆ. ಅಥವಾ ಉರ್ದು ಮನೆಮಾತಾದರೂ ಕನ್ನಡದ ಕೆಲಸ ಮಾಡುವ ಜಿ.ಕೆ. ಚಿಕ್ಕೇದ ಅಂಥವರಿದ್ದಾರೆ. ಬೆಳಗಾವಿಯು ಹೇಗೆ ಕನ್ನಡನಾಡಿನ ಪ್ರದೇಶ ಎಂದು ನ್ಯಾಯಮೂರ್ತಿ ಮಹಾಜನ್ ಅವರಿಗೆ ಮನದಟ್ಟು ಮಾಡಿಸಿದವರು ಉರ್ದು ಭಾಷಿಕ ರಾದ ದಿ. ಎ.ಎಂ. ಶೇಖ ಅವರು. ಮರಾಠಿ ಹಾಗೂ ಕನ್ನಡ ಪತ್ರಿಕೆಗಳು ಇರುವಂತೆ ಮರಾಠಿ-ಕನ್ನಡ ಲೇಖಕರು ಜತೆಜತೆಯಲ್ಲಿ ಇದ್ದಾರೆ.

ದಲಿತ ಕವಿ ವಸಂತರಾಜನ್, ಕನ್ನಡ ಕವಿಯಾಗಿ ದೊಡ್ಡ ಹೆಸರು ಮಾಡಿದ ಬಿ.ಎ. ಸನದಿಯವರೂ, ಮರಾಠಿ ಸಾಹಿತ್ಯದಲ್ಲಿ ಹೆಸರು ಮಾಡಿದ ಜಿ.ಎ. ಕುಲಕರ್ಣಿಯವರಲ್ಲದೆ ಮರಾಠಿಗರೇ ಆಗಿದ್ದುಕೊಂಡು ಖ್ಯಾತನಾಮರಾದ ಇಂದಿರಾ ಸಂತ ಅವರೂ, ಕೆ.ಬಿ. ನಿಕುಂಬ ಅವರೂ ಅದರಂತೆಯೇ ರಣಜಿತ ದೇಸಾಯಿಯವರೂ ಮಾಧವಿ ದೇಸಾಯಿಯವರು ಇಲ್ಲಿದ್ದಾರೆ.

ತಮ್ಮ ನಡುವೆ ಈ ಸ್ಪರ್ಧೆಯಿದ್ದರೂ ಸಾಹಿತ್ಯ, ಸಂಸ್ಕೃತಿ ದೃಷ್ಟಿಯಿಂದ ಕನ್ನಡ-ಮರಾಠಿ ಗಳು ಒಂದನ್ನೊಂದು ಅವಿನಾಮಯವಾಗಿ ಹೊಂದಿಕೊಳ್ಳುವಂತೆ ಆದರೆ ಮುಸ್ಲಿಂ-ಕ್ರಿಶ್ಚಿಯನ್ ಸಂಸ್ಕೃತಿಗಳು ಅಷ್ಟಾಗಿ ತಮ್ಮ ತಮ್ಮೊಳಗೂ ಹೊಂದಿಕೊಳ್ಳುವುದಿಲ್ಲ. ಹಾಗೆಯೇ ಕನ್ನಡ-

ಮರಾಠಿಗಳೊಂದಿಗೂ ಸಾಮರಸ್ಯತೆಯನ್ನು ತಂದುಕೊಳ್ಳುವುದಿಲ್ಲ. ಅಲ್ಲಿಯ ವಿಧಿ-ವಿಧಾನಗಳು ಬೇರೆಯೇ ಆಗಿರುವುದರಿಂದ ಅವುಗಳಿಗೆ ಅವುಗಳದ್ದೇ ಆದ ಪ್ರತ್ಯೇಕತೆ ಇದೆ. ಹೀಗೆಂದಾಕ್ಷಣ, ಹೊಕ್ಕು ಬಳಕೆಯ ದೈನಂದಿನ ಕ್ರಮದಲ್ಲಿ, ವ್ಯಾವಹಾರಿಕ ಸಂಬಂಧದಲ್ಲಿ ಯಾವುದೇ ರೀತಿಯ ಆಮನೆ-ಸಾಮನೆ ಇಲ್ಲವೆಂದಲ್ಲ. ಆತ್ಮೀಯತೆ ಕುದುರುವುದಿಲ್ಲವೆಂದಲ್ಲ.

ಭಾಷಾವಾರು ಪ್ರಾಂತಗಳು ನಿರ್ಮಾಣವಾದದ್ದು ಒಂದು ರೀತಿಯ ಒಗ್ಗೂಡುವಿಕೆಗೆ ಸರಿಯಾದ ಪರಿಕಲ್ಪನೆಯಾದರೂ ಗಡಿಯಂಚಿನಲ್ಲಿ ಮಾತ್ರ ಅವಾಂತರ ಅಸಮಾಧಾನದ ನಿಟ್ಟುಸಿರಿಗೆ ದಾರಿಮಾಡಿಕೊಟ್ಟದ್ದಂತೂ ಸುಳ್ಳಲ್ಲ. ಗಡಿಪ್ರದೇಶವಾದ ಬೆಳಗಾವಿಯಲ್ಲಿ ಆಗೀಗ ಇರಸು-ಮುರುಸಿನ ಸಂದರ್ಭಗಳು ಇದ್ದೇ ಇರುತ್ತವೆ. ಉದಾಹರಣೆಗೆ ಕನ್ನಡಿಗರಿಗೆ ನವೆಂಬರ್ ೧ ರಾಜ್ಯೋತ್ಸವದ ದಿನ. ಅದೇ ಮರಾಠಿಗರಿಗೆ ಕಾಳಾದಿನ. ಒಬ್ಬರಿಗೆ ಸಂಭ್ರಮದ ಮೆರವಣಿಗೆ; ಇನ್ನೊಬ್ಬರಿಗೆ ಅಂಗಡಿಯ ಮುಂಗಟ್ಟುಗಳು ಮುಚ್ಚಬೇಕು.

ಜನೇವರಿ ೧೭ರಂದು ಹುತಾತ್ಮ ದಿನಾಚರಣೆ. ಮರಾಠಿಗರಿಗೆ ಹುತಾತ್ಮ ಚೌಕದಲ್ಲಿರುವ ಸ್ತೂಪದೆದುರು ಮರಾಠಿಪರ ಘೋಷಣೆ ಹಾಕುವುದಾಗಬೇಕು. ಕನ್ನಡಿಗರಿಗೆ ತಮ್ಮ ಅಂಗಡಿಗಳು ಸುರಕ್ಷಿತವಾಗಿರಬೇಕೆಂಬುದನ್ನು ನೋಡಿಕೊಳ್ಳುವುದಾಗಬೇಕು. ಈ ಜನೇವರಿ ೧೭ ಮಹಾರಾಷ್ಟ್ರ ಏಕೀಕರಣ ಸಮಿತಿಯವರಿಗೆ ಸಂಬಂಧಪಟ್ಟದ್ದಲ್ಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾಗಿದ್ದ ತಮ್ಮವರನ್ನು ನೆನಪಿಸಿಕೊಳ್ಳುವ ದಿನ.

ಶಿವಜಯಂತಿಯವರಿಗೆ ಬಸವಜಯಂತಿಯವರು ಎದುರುಗೊಳ್ಳಬಾರದು. ಹಾವಿಗೆ ಮುಂಗುಸಿಯಾಗಿ ತುರಮಾಸ್ ಮಾಡುವ ಜಾಯಮಾನ ಮರಾಠಿಗರದು. ಸಹನೆಯಿಂದ ಮೆತ್ತಗಾಗಿರಬೇಕಾದವರು ಲಿಂಗಾಯತ ಕನ್ನಡಿಗರು. ವಿಚಿತ್ರವೆಂದರೆ ಈಗ ಕೆಲವೊಂದು ವರ್ಷಗಳಿಂದ ಶಿವ ಮತ್ತು ಬಸವ ಒಂದಾಗಿದ್ದಾರೆ. ಶಿವಾಜಿಯೊಟ್ಟಿಗೇ ಬಸವೇಶ್ವರನ ಫೋಟೊ ಮೆರವಣಿಗೆಯಲ್ಲಿ ಸಾಗುತ್ತಿದೆ. ಆದರೆ ಕನ್ನಡ-ಮರಾಠಿ ಭೇದಗಳು ಕಾಣದೆ ಇವರಿಬ್ಬರೂ "ಹಿಂದೂವಾದಿಗಳಾಗಿ ಮುಸ್ಲಿಂರನ್ನು ದೂರವಿಡಲು ಪ್ರಯತ್ನಿಸುತ್ತಾರೆ. ಇಲ್ಲಿ ಕನ್ನಡ-ಮರಾಠಿ ಬಾಂಧವ್ಯದ ಈ ಪರಿ ಹೊಸತಾದುದು.

ಟಿಳಕರ ಕೊಡುಗೆಯಾದ ಸಾರ್ವಜನಿಕ ಗಣೇಶ ಉತ್ಸವ ಪುಣೆಯನ್ನು ಬಿಟ್ಟರೆ ಬೆಳಗಾವಿಯಲ್ಲೇ ಅತ್ಯಂತ ವಿಜೃಂಭಣೆಯಿಂದ ನಡೆಯುವುದು. ಗಣೇಶ ಚತುರ್ಥಿಯಾಗಮನದಲ್ಲಿ ಅಷ್ಟಾಗಿ ಕಾಣದ ಒಂದು ಬಗೆಯ ದ್ವೇಷ ಗಣೇಶ ವಿಸರ್ಜನೆಯ ಸಂದರ್ಭದಲ್ಲಿ ವಿನಾಕಾರಣ ಭುಗಿಲೆದ್ದು ಸಂಘರ್ಷಕ್ಕೆ ಎಡೆಯಾಗುತ್ತಿರುತ್ತದೆ. ಹಿಂದೂ-ಮುಸ್ಲಿಮರು ಕುಕೃತ್ಯಕ್ಕೆ ಇಳಿದ ಘಟನೆಗಳೂ ಇಲ್ಲದಿಲ್ಲ. ಈ ಹಿನ್ನೆಲೆಯಲ್ಲಿ ಮೊನ್ನೆಯ ಯಕ್ಸಂಬಾ ಗಲಾಟೆಯನ್ನು ನೆನಪಿಸಿಕೊಳ್ಳಬಹುದಷ್ಟೆ.

ಭಾಷೆಯ ಬಗೆಗಿನ, ಜಾತಿಯ ಬಗೆಗಿನ ಅಭಿಮಾನವೆಲ್ಲ ದುರಭಿಮಾನದಿಂದಾಗಿ ಹೀಗೆಲ್ಲ ಆದರೂ ಅಂಥ ತುರುಸಿನ ದಿನಗಳನ್ನು ಬಿಟ್ಟರೆ ಬಾಕಿ ದಿನಗಳಲ್ಲಿ ಯಾರೆಲ್ಲ ಒಂದು ಬಗೆಯ ಬಾಂಧವ್ಯಕ್ಕೆ ತೋರ್ಬೆರಳಾಗಿರುತ್ತಾರೆ.

ಮರಾಠಿ ಏಕೀಕರಣ ಸಮಿತಿಗೆ ಈಗ ಯಾವ ಅರ್ಥವೂ ಉಳಿದಿಲ್ಲ. ಈ ಘಟಕದಲ್ಲೇ ಒಡಕು ಹುಟ್ಟಿ 'ಸಿಂಹ'ಕ್ಕೆ ಪ್ರತಿಸ್ಪರ್ಧಿಯಾಗಿ 'ಟಬಲಾ' ಇನ್ನೊಂದು ಘಟಕದ ಚಿಹ್ನೆಯಾಗಿದ್ದೂ ಸುಳ್ಳಲ್ಲ. ಸದ್ಯಕ್ಕಂತೂ ಮ.ಏ.ಸಮಿತಿಯ ಯಾವೊಂದು ಸೀಟು ವಿಧಾನಸೌಧಕ್ಕೆ ಹೋಗದಾಗಿ ಭಾರಿ ಮುಖಭಂಗ ಅದಕ್ಕಾಗಿದೆ. ರಮೇಶ ಕುಡಚಿ ಮೊದಲೊಮ್ಮೆ ಮ.ಏ. ಸಮಿತಿಯವರ ಬೆಂಬಲದಿಂದಲೇ ಕಾರ್ಪೋರೇಷನ್ನಿನ ಮೇಯರ್ ಆಗಿದ್ದರೂ, ಅಂದಿನ ಆ ಘಟಕದಿಂದ ಹೊರಬಂದು, ಇದೀಗ ಕಾಂಗ್ರೆಸ್ ಅಭ್ಯರ್ಥಿಯಾಗಿ ಜಯಶಾಲಿಯಾಗಿ ವಿಧಾನಸೌಧ ಸೇರಿದ್ದು ಒಂದು ಪವಾಡ.

ಕನ್ನಡ ಮರಾಠಿ ಜಗಳಗಳಾಚೆ ಜನರ ಒಂದುಮಾಡುವ ಸಂಗತಿಗಳಿವೆ. ಅವುಗಳಲ್ಲಿ ಒಂದು ಬ್ಯಾಂಡ್ ಸೆಟ್. ಬೆಳಗಾವಿಯ 'ಬಸವಣ್ಣ ಬ್ಯಾಂಡ್'ಗೆ ಇದರದೇ ಆದ ಇತಿಹಾಸ ವಿದೆ. ಕರ್ನಾಟಕ, ಮಹಾರಾಷ್ಟ್ರವಲ್ಲದೆ ಗೋವಾ, ದಿಲ್ಲಿ, ರಾಜಸ್ಥಾನಗಳವರೆಗೂ ಇವರು ತಮ್ಮ ವಾದ್ಯವೈಖರಿಯನ್ನು ಪ್ರದರ್ಶಿಸಿ ಮುಕ್ತ ಕಂಠದ ಹೊಗಳಿಕೆಗೆ ಪಾತ್ರವಾಗಿದ್ದಾರೆ. ಎಲ್ಲ ಧರ್ಮೀಯರಿಗೂ ಆಪ್ತರಾಗಿದ್ದಾರೆ.

ಬೆಳಗಾವಿಯಲ್ಲಿ ನೆಲೆಯೂರಿ ಕೇವಲ ೭-೮ ವರ್ಷಗಳಾದರೂ 'ಹಸಿರು ಕ್ರಾಂತಿ' ದಿನಪತ್ರಿಕೆ ರೈತರ ಜೀವನಾಡಿಯಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿರುವುದರೊಂದಿಗೆ ಕಳೆದ ಮೂರು-ನಾಲ್ಕು ವರ್ಷಗಳಲ್ಲಿ ದೀಪಾವಳಿ ವಿಶೇಷಾಂಕಗಳನ್ನು ತರುವುದರ ಮೂಲಕ ನಾಡಿನ ಖ್ಯಾತನಾಮರಿಂದ ಪ್ರಶಂಸೆಗೆ ಪಾತ್ರವಾಗಿದೆ. ಕಲ್ಯಾಣರಾವ ಗು. ಮುಚಳಂಬಿ ಪತ್ರಿಕೆಯ ಸಂಪಾದಕರು. ಬೆಳಗಾವಿಯಂಥ ಗಡಿಪ್ರದೇಶದಲ್ಲಿ ಇಂಥ ಸಂಚಿಕೆಗಳು ಪ್ರಕಟಗೊಳ್ಳುವುದರಿಂದ ನಾಡಿನ ನಾಲ್ದೆಸೆಯ ವಿಭಿನ್ನ ಸಂಸ್ಕೃತಿಗಳನ್ನು ಒಂದೆಡೆ ಕಲೆಹಾಕಿದಂತಾಗುತ್ತದೆ. ಮೊದಲಿನ ಕಾವು ಅದೆಷ್ಟೇ ಕರಗಿದ್ದರೂ ಮರಾಠಿಮಯ ವಾತಾವರಣದ ಬೆಳಗಾವಿಯಲ್ಲಿ ಕನ್ನಡತನವನ್ನು ಕಟ್ಟುವಲ್ಲಿ, ಕನ್ನಡವನ್ನು ಜೀವಂತವಾಗಿಡುವಲ್ಲಿ ಕನ್ನಡ ಪತ್ರಿಕೆ ಪಾತ್ರ ಹಿರಿದು.

●

ಮರಾಠಿಯಲ್ಲಿ ದೀಪಾವಳಿ ವಿಶೇಷಾಂಕಗಳು

● ಸರಜೂ ಕಾಟ್ಕರ್

ದೀಪಾವಳಿ ಇನ್ನೂ ನಾಲ್ಕೈದು ತಿಂಗಳು ದೂರ ಇರುವಾಗಲೇ ಮಹಾರಾಷ್ಟ್ರದ ಮರಾಠಿ ಲೇಖಕರೆಲ್ಲ ಒಂದು ರೀತಿಯಲ್ಲಿ ಭೂಗತರಾಗಿಬಿಡುತ್ತಾರೆ. ಈ ಅವಧಿಯಲ್ಲಿ ಯಾವ ಲೇಖಕನೂ ಯಾವುದೇ ಕಾರ್ಯಕ್ರಮಗಳಿಗೆ ಸಿಕ್ಕುವುದಿಲ್ಲ. ಎಲ್ಲಾ ಲೇಖಕರೂ ಮರಾಠಿ ಸಾಹಿತ್ಯದ ವಿಶಿಷ್ಟ ಪ್ರಕಾರವಾಗಿರುವ 'ದೀಪಾವಳಿ' ಸಂಚಿಕೆಗಳಿಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ದೀಪಾವಳಿ ವಿಶೇಷಾಂಕಗಳು ಮರಾಠಿಯಲ್ಲಿ ಪ್ರಕಟವಾಗುವಂತೆ ಭಾರತದ ಯಾವ ಭಾಷೆಯಲ್ಲಿಯೂ ಪ್ರಕಟವಾಗುವುದಿಲ್ಲ. ಒಂದು ಅಂದಾಜಿನ ಪ್ರಕಾರ

ಮರಾಠಿಯಲ್ಲಿ ೧೦೦೦ಕ್ಕೂ ಮಿಕ್ಕಿ ಮರಾಠಿ ವಿಶೇಷಾಂಕಗಳು ಪ್ರಕಟವಾಗುತ್ತವೆ. ಆಶ್ಚರ್ಯವೆಂದರೆ ಇವುಗಳಿಗೆಲ್ಲ ತಮ್ಮದೇ ಆದ ವಾಚಕವೃಂದವೂ ಇದೆ. ಒಂದೊಂದು ವಿಶೇಷಾಂಕವೂ ಕನಿಷ್ಠ ೨,೫೦೦ ಪ್ರತಿಗಳಿಂದ ೫೦,೦೦೦ ಪ್ರತಿಗಳವರೆಗೂ ಪ್ರಕಟವಾಗುತ್ತವೆ.

ಮಹಾರಾಷ್ಟ್ರದ ಎಲ್ಲ ಮರಾಠಿ ಪತ್ರಿಕೆಗಳು ದೀಪಾವಳಿ ವಿಶೇಷಾಂಕಗಳನ್ನು ಕಡ್ಡಾಯವಾಗಿ ಪ್ರಕಟಿಸುತ್ತವೆ. ಆದರೆ ವಿಶೇಷವೆಂಬಂತೆ ಕೆಲ ಸಾಹಿತ್ಯಾಸಕ್ತರು ಅಥವಾ ಸಂಘ ಸಂಸ್ಥೆಗಳವರು ವರ್ಷಕ್ಕೆ ಕೇವಲ ದೀಪಾವಳಿ ವಿಶೇಷಾಂಕಗಳನ್ನು ಮಾತ್ರ ಪ್ರಕಟಿಸುತ್ತಾರೆ. ಈ ವಿಶೇಷಾಂಕ ಗಳಲ್ಲಿಯೂ ಮಹಾರಾಷ್ಟ್ರದ ಖ್ಯಾತ ವಿಖ್ಯಾತ ಕವಿಗಳು, ಕಥಾಕಾರರು, ಲೇಖಕರು ಬರೆಯು ತ್ತಾರೆ. ಅಲ್ಲಿಯ ಲೇಖಕರಿಗೆ ಇದೇ ಪತ್ರಿಕೆಗೆ ಬರೆಯಬೇಕು, ಆ ಪತ್ರಿಕೆಗೆ ಬರೆಯಬಾರದು ಎಂಬ ಮಡಿವಂತಿಕೆ ಇಲ್ಲ. ಸಂಪಾದಕರು ಒಂದು ಲೇಖನವನ್ನೋ ಅಥವಾ ಅವರ ಬರಹವನ್ನೋ ಅಪೇಕ್ಷಿಸಿ ಪತ್ರ ಬರೆದರೆ, ಇವರಿಂದ ಒಂದು ಲೇಖನ ಹೋಗೇಹೋಗುತ್ತದೆ.

ಈ ಲೇಖಕರಿಗೆ ಇದರಿಂದ ಬೇಕಾದಷ್ಟು ಆರ್ಥಿಕ ಲಾಭವಿದೆ. ಮರಾಠಿಯಲ್ಲಿ ಯಾವೊಬ್ಬ ಲೇಖಕನೂ ಯಾವುದೇ ಪತ್ರಿಕೆಗೆ ಪುಕ್ಕಟೆ ಬರೆಯಲಾರ. 'ನಮ್ಮ ಸಾಹಿತ್ಯದಿಂದ ಪತ್ರಿಕೆಗಳ ವರಿಗೆ ಲಾಭ ಆಗುವಂತಿದ್ದರೆ, ಅವರಿಂದ ನಾವು ಗೌರವಧನವನ್ನು ಅಪೇಕ್ಷಿಸುವುದು ತಪ್ಪಲ್ಲ'- ಎಂಬುದು ಅವರ ನಿಲುವು. ಇವರ ನಿಲುವಿಗೆ ಪತ್ರಿಕೆಗಳವರು ಅಥವಾ ವಿಶೇಷಾಂಕ ಪ್ರಕಟಿಸುವವರು ಮೋಸ ಮಾಡಿಲ್ಲವೆಂಬುದೂ ಒಂದು ವಿಶೇಷ.

ಒಬ್ಬ ಲೇಖಕ ಸಾಮಾನ್ಯವಾಗಿ ೨೦ ರಿಂದ ೫೦ ವಿಶೇಷಾಂಕಗಳಿಗೆ ಬರೆಯುತ್ತಾನೆ. ಕೆಲವು ಲೇಖಕರು ತಮ್ಮ ಕಥೆ, ಕವಿತೆ, ಲೇಖನಗಳನ್ನು ವಿಪಿಪಿ ಮೂಲಕ ಪ್ರಕಾಶಕರಿಗೆ ಕಳಿಸುವುದೂ ಉಂಟು. ತಾವು ಬರೆದದ್ದಕ್ಕೆ ತಾವೇ ಬೆಲೆ ಕಟ್ಟಿ ಆ ಮೊತ್ತಕ್ಕೆ ಪ್ರಕಾಶಕರಿಗೆ ಕಳಿಸುತ್ತಾರೆ. ಪ್ರಕಾಶಕರು ಆ ಮೊತ್ತವನ್ನು ನೀಡಿ ಇವರ ಬರವಣಿಗೆಯನ್ನು ಬಿಡಿಸಿಕೊಳ್ಳಬೇಕು. ಈ ಕ್ರಿಯೆಯಲ್ಲಿ ಇಬ್ಬರೂ ಸಂಕೋಚಪಟ್ಟುಕೊಳ್ಳುವುದಿಲ್ಲ.

ಕೆಲವು ವಿಶೇಷಾಂಕಗಳು ಕೇವಲ ಕಥೆಗೆ ಮಾತ್ರ, ಕೆಲವು ಕವಿತೆಗಳಿಗೆ, ಇನ್ನೂ ಕೆಲವು ಕಾದಂಬರಿಗಳಿಗೆ ಮಾತ್ರ ಮೀಸಲಿರುತ್ತವೆ. ಅನುವಾದ ಸಾಹಿತ್ಯಕ್ಕೇ ಮೀಸಲಾದ ವಿಶೇಷಾಂಕವೂ ಇದೆ. ಸೌಂದರ್ಯಕ್ಕಾಗಿಯೇ ಒಂದು ವಿಶೇಷಾಂಕ. ವ್ಯಂಗ್ಯಚಿತ್ರಗಳದ್ದೇ ಒಂದು ವಿಶೇಷಾಂಕ-ಹೀಗೆ ಸಾಹಿತ್ಯಕ್ಕೆ ಸಂಬಂಧಿಸಿದ ಅಥವಾ ಸಂಬಂಧಿಸಲಾರದ ಅನೇಕ ವಿಷಯಗಳ ಬಗ್ಗೆ ವಿಶೇಷಾಂಕಗಳು ಮರಾಠಿಯಲ್ಲಿ ಪ್ರಕಟವಾಗುತ್ತವೆ. ಚಂದ್ರಕಾಂತ ಕಾಕೋಡ್ಕರ್ ಎಂಬ ಜನಪ್ರಿಯ ಕಾದಂಬರಿಕಾರ 'ಕಾಕೋಡ್ಕರ್' ಎಂಬ ಹೆಸರಿನ ಒಂದು ವಿಶೇಷಾಂಕ ತೆಗೆಯುತ್ತಾರೆ. ಅದರಲ್ಲಿ ಅವರು ಬರೆದ ಒಟ್ಟು ೫ ಕಾದಂಬರಿಗಳು ಇರುತ್ತವೆ. ಈ ವಿಶೇಷಾಂಕದಲ್ಲಿ ಬೇರೆಯವರಿಗೆ ಪ್ರವೇಶ ಇಲ್ಲ. ಕಾಕೋಡ್ಕರ್ ವಿಶೇಷಾಂಕದ ಪ್ರಸಾರ ಸಂಖ್ಯೆ ೨೫೦೦೦ ಪ್ರತಿಗಳು! ಚಂದ್ರಕಾಂತ ಕಾಕೋಡ್ಕರ್ ಬೇರೆ ಯಾವ ಪತ್ರಿಕೆಗಳಿಗೂ ತಮ್ಮ ಕಾದಂಬರಿ ಕೊಡುವುದಿಲ್ಲ; ಅವರ ಕಾದಂಬರಿ ಓದಬೇಕಾದವರು ಅವರೇ ಹೊರಡಿಸುವ 'ಕಾಕೋಡ್ಕರ್' ಖರೀದಿಸಬೇಕು.

ಚಲನಚಿತ್ರರಂಗದಲ್ಲಿರುವ ಪ್ರಿಯಾ ತೆಂಡೂಲ್ಕರ್ (ಈಕೆ ಖ್ಯಾತ ನಾಟಕಕಾರ ವಿಜಯ ತೆಂಡೂಲ್ಕರ್ ಅವರ ಮಗಳು. ಕಥೆಗಾರ್ತಿಯೂ ಹೌದು) ಅಲಕಾ ಕುಬಲ, ನಿಶಿಗಂಧಾ ವಾಡ್ ಮುಂತಾದವರು ದೀಪಾವಳಿ ವಿಶೇಷ ಸಂಚಿಕೆಗಳನ್ನು ಸಂಪಾದಿಸಿ ಪ್ರಕಟಿಸುತ್ತಾರೆ. ಇವರು ಸಂಪಾದಿಸುವ ಸಂಚಿಕೆಗಳ ಗುಣಮಟ್ಟವೂ ಸಾಹಿತ್ಯಿಕವಾಗಿ ಉಚ್ಚ ದರ್ಜೆಯದ್ದೇ. ಸಂಗೀತಕ್ಕಾಗಿಯೇ ಪ್ರಕಟಿಸುವ ವಿಶೇಷಾಂಕವೂ ಮರಾಠಿಯಲ್ಲಿದೆ. ಸಚಿನ್ ತೆಂಡೂಲ್ಕರ್, ಅಜಿತ್ ವಾಡೇಕರ್ ಅವರುಗಳು ಈ ಹಿಂದೆ ಕ್ರಿಕೆಟ್‌ಗೆ ಸಂಬಂಧಪಟ್ಟ ವಿಶೇಷಾಂಕವನ್ನು ಸಂಪಾದಿಸಿದ್ದರು. ಮುಂದೆ ಅವರಿಂದ ಅದನ್ನು ಮುಂದುವರೆಸಲಾಗಲಿಲ್ಲ. ರೋಹಿಣಿ ಹಟ್ಟಂಗಡಿ ನಾಟಕಕ್ಕೇ ಮೀಸಲಾದ ದೀಪಾವಳಿ ವಿಶೇಷಾಂಕವನ್ನು ಪ್ರಕಟಿಸುತ್ತಾರೆ.

ಬೆಳಗಾವಿ ಪರಿಸರದಲ್ಲಿ ೨೫ ರಿಂದ ೩೦ ಮರಾಠಿ ದೀಪಾವಳಿ ವಿಶೇಷಾಂಕಗಳು ಪ್ರಕಟ ವಾಗುತ್ತವೆ. ಅವುಗಳ ಸಾಹಿತ್ಯ ಮಟ್ಟವೂ ಉಚ್ಚವಾದದ್ದು. ಮುಖಪುಟ, ಪುಟಗಳ ಮಂಡನೆಯೂ ಆಕರ್ಷಕವಾದಂತದ್ದು. ಬೆಳಗಾವಿಯಿಂದ ಪ್ರಕಟವಾಗುವ 'ತರುಣಭಾರತ' ಪತ್ರಿಕೆಯ ಈ ಸಲದ ದೀಪಾವಳಿ ಸಂಚಿಕೆಯು ದೀಪಾವಳಿ ವಿಶೇಷಾಂಕಗಳ ಇತಿಹಾಸದಲ್ಲಿ ಒಂದು ದಾಖಲೆಯನ್ನು ಸ್ಥಾಪಿಸಿದೆ. ಸುಮಾರು ೪೦೦ ಪುಟಗಳ ಎರಡು ಸಂಚಿಕೆಗಳನ್ನು (ಒಟ್ಟು ೮೦೦ ಪುಟಗಳು) ಅದು ಹೊರತಂದಿದೆ. ಎರಡು ಸಂಚಿಕೆಗಳು ಬೇರೆ ಬೇರೆಯಾಗಿ ಪ್ರಕಟಗೊಂಡಿದ್ದರೂ, ಅದು ಒಂದೇ ಸಂಚಿಕೆ. ಎರಡು ಸಂಚಿಕೆಗಳ ಮುಖಪುಟ ಬೇರೆ ಬೇರೆ; ಆದರೆ ಬೆಲೆ ಮಾತ್ರ ಒಂದೇ. ಸಂಚಿಕೆಯನ್ನು ಕೊಂಡವರಿಗೆ ಮರಾಠಿ ಹಾಡುಗಳ ಒಂದು ಕ್ಯಾಸೆಟ್ ಫ್ರೀಯಾಗಿ ನೀಡಿದೆ 'ತರುಣ ಭಾರತ'.

ಮರಾಠಿ ದೀಪಾವಳಿ ವಿಶೇಷಾಂಕಗಳು ಹೊರಬರಲು ಜಾಹೀರಾತುದಾರರ ಪಾಲೂ ಇದೆ. ಮಹಾರಾಷ್ಟ್ರದಲ್ಲಿ ಎಲ್ಲಾ ಉದ್ಯಮಿಗಳು, ಕಾರ್ಖಾನೆದಾರರು ತಮ್ಮ ವಾರ್ಷಿಕ ಬಜೆಟ್ಟಿನಲ್ಲಿ ಒಂದಿಷ್ಟು ಹಣವನ್ನು ಜಾಹಿರಾತುಗಳಿಗಾಗಿಯೇ ತೆಗೆದಿರಿಸಿರುತ್ತಾರೆ. ತಮ್ಮ ಭಾಷೆಯ ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಪ್ರೀತಿ ಅಭಿಮಾನವಿರುವ ಇವರು ದೀಪಾವಳಿ ವಿಶೇಷಾಂಕಗಳ ಬೆನ್ನೆಲುಬಾಗಿ ತಮಗೆ ಗೊತ್ತಿಲ್ಲದೇ ಕೆಲಸ ಮಾಡುತ್ತಾರೆ. ('ತರುಣ ಭಾರತ' ಈ ಸಲ ೨ ಸಂಚಿಕೆಗಳನ್ನು ತಂದಿದ್ದು ಅದಕ್ಕೆ ಬಂದಿರುವ ವಿಪರೀತ ಜಾಹೀರಾತುಗಳಿಂದಾಗಿ) ಹೀಗಾಗಿ ವಿಶೇಷಾಂಕಗಳನ್ನು ಹೊರಡಿಸುವವರಿಗೆ ನಷ್ಟದ ಭಯ ಎಂದೂ ಇರುವುದಿಲ್ಲ.

ಒಬ್ಬ ಓದುಗ, ಪ್ರಕಟವಾಗುವ ಎಲ್ಲಾ ವಿಶೇಷಾಂಕಗಳನ್ನು ಖರೀದಿಸಲಾರ. ಈ ಕೊರತೆಯನ್ನು ತುಂಬಲೆಂದೇ ಮಹಾರಾಷ್ಟ್ರದಲ್ಲಿ 'ದೀಪಾವಳಿ ವಿಶೇಷಾಂಕ ವಾಚನಾಲಯ ಗಳು' ಹುಟ್ಟಿವೆ. ಈ ವಾಚನಾಲಯಗಳು ವರ್ಷದಲ್ಲಿ ಕೇವಲ ೩ ತಿಂಗಳು ಮಾತ್ರ ಕೆಲಸ ಮಾಡುತ್ತವೆ (ದೀಪಾವಳಿ ಆರಂಭವಾಗುವ ಒಂದು ತಿಂಗಳು ಮೊದಲು, ದೀಪಾವಳಿ ನಂತರ ೨ ತಿಂಗಳು). ಈ ವಾಚನಾಲಯಗಳು ಸಾಮಾನ್ಯವಾಗಿ ಎಲ್ಲಾ ದೀಪಾವಳಿ ಸಂಚಿಕೆಗಳನ್ನು (ಅವುಗಳ ೨ ಅಥವಾ ೩ ಪ್ರತಿಗಳನ್ನು) ಖರೀದಿಸುತ್ತವೆ. ಈ ವಾಚನಾಲಯಗಳಿಗೆ ಸದಸ್ಯರಾ ದವರು ಅವುಗಳನ್ನು ಮನೆಗೆ ಓದಲು ತೆಗೆದುಕೊಂಡು ಹೋಗಬಹುದು. ವಾಚನಾಲಯಗಳು

ದಿನಕ್ಕೆ ಒಂದು ರೂಪಾಯಿಯಂತೆ ಫೀಯನ್ನು ಆಕರಿಸುತ್ತವೆ. ಸಾಮಾನ್ಯವಾಗಿ ಹೆಂಗಸರೇ ಈ ರೀತಿಯ ವಾಚನಾಲಯಗಳನ್ನು ನಡೆಸುವುದುಂಟು. ಮಹಾರಾಷ್ಟ್ರದಲ್ಲಿ ದೀಪಾವಳಿಯ ಕಾಲಕ್ಕೆ ಗಲ್ಲಿ ಗಲ್ಲಿಗಳಲ್ಲಿ ಇಂತಹ ವಾಚನಾಲಯಗಳು ಕಂಡುಬರುತ್ತವೆ. ಈ ದೀಪಾವಳಿ ಸಂಚಿಕೆಗಳ ಬೆಲೆಯೇನೂ ಕಡಿಮೆ ಇರುವುದಿಲ್ಲ. ೭೫ ರೂ ದಿಂದ ೧೫೦ ರೂವರೆಗಿನ ದೀಪಾವಳಿ ಸಂಚಿಕೆಗಳು ಇವೆ. 'ಆವಾಜ್' ಎಂಬ ದೀಪಾವಳಿ ಸಂಚಿಕೆ ಮೊಟ್ಟ ಮೊದಲ ಬಾರಿಗೆ ಚಿತ್ರಗಳ ಮಡಚುವಿಕೆಯಿಂದ ಉಂಟಾಗುವ ಹಾಸ್ಯದ ಚಿತ್ರಗಳನ್ನು ಪ್ರಕಟಿಸಿತು. ಈಗಲೂ ಈ ಪ್ರಥೆ 'ಆವಾಜ್'ದಲ್ಲಿ ಜಾರಿಯಲ್ಲಿದೆ. ಆವಾಜ್‌ದ ಪ್ರತಿ ಬೇಕಾದವರು ಮೊದಲೇ ಹೇಳಬೇಕಾಗುತ್ತದೆ (ಅಡ್ವಾನ್ಸ್ ರಿಸರ್ವೇಶನ್) ಇಲ್ಲದಿದ್ದರೆ ಪ್ರತಿಗಳು ಸಿಗುವುದು ಕಷ್ಟ.

ಕನ್ನಡದಲ್ಲಿ ಪ್ರಕಟವಾಗುವ ಪ್ರತಿಷ್ಠಿತ ದೀಪಾವಳಿ ಸಂಚಿಕೆಯನ್ನು ಮರಾಠಿ ಲೇಖಕರೊಬ್ಬರಿಗೆ ತೋರಿಸಿ 'ಈ ರೀತಿಯ ಸಂಚಿಕೆ ನಿಮ್ಮಲ್ಲಿ ಪ್ರಿಂಟಾದರೆ ಎಷ್ಟು ಬೆಲೆ ಇಡುತ್ತೀರಿ?' ಎಂದು ಕೇಳಿದೆ. ಅವರು ಸಂಚಿಕೆಯ ಮುಖಪುಟ, ಉಪಯೋಗಿಸಿದ ಕಾಗದದ ಗುಣಮಟ್ಟ, ಒಳಗಿನ ಬಣ್ಣಗಳಲ್ಲಿ ಪ್ರಕಟವಾದುದನ್ನು ನೋಡಿ 'ಕನಿಷ್ಠ ೧೫೦ ರೂ. ಇಡ್ತೇವೆ' ಎಂದರು. ನಿಜವಾಗಿ ನೋಡಿದರೆ ಆ ಸಂಚಿಕೆಯ ಬೆಲೆ ४೦ ರೂ. ಇಡಲಾಗಿತ್ತು. ಆದರೂ, ಅದು ನಮ್ಮ ವಾಚಕರನ್ನು ಆಕರ್ಷಿಸಿರಲಿಲ್ಲ.

ಪರಿಚಯ

ಎಸ್ ಶೆಟ್ಟರ ಅವರ 'ಇನ್‌ವೈಟಿಂಗ್ ಡೆತ್'

● ಸದಾನಂದ ಕನವಳ್ಳಿ

ಎಸ್ ಶೆಟ್ಟರ ಅವರು ಸಮಾಧಿ ಮರಣ ಕುರಿತು 'ಇನ್‌ವೈಟಿಂಗ್ ಡೆತ್' (ಮರಣಕ್ಕೆ ಆಮಂತ್ರಣ) ಬರೆದಾಗ ಅದು ಸಾಂಪ್ರದಾಯಿಕ ಇತಿಹಾಸ ರಚನೆಯನ್ನು ತಲೆ ಕೆಳಗೆ ಮಾಡಿ ನಿಲ್ಲಿಸೀತೆಂಬ ಕಲ್ಪನೆ ಅವರಿಗೆ ಇದ್ದಿರಲಿಕ್ಕಿಲ್ಲ. ನಿಜಕ್ಕೂ ಅವರು ಪ್ರಸ್ತುತ ಕೃತಿಯಲ್ಲಿ ಇತಿಹಾಸವನ್ನು ಮರುವ್ಯಾಖ್ಯಾನಿಸುವ ಕಾರ್ಯಗೈದಿರುವರು. ಮಾನವನ ಜೀವನ ಮಾತ್ರ ಇತಿಹಾಸ ನಿರ್ಮಿಸಬಲ್ಲದೆಂದು ಇದುವರೆಗೆ ನಂಬಲಾಗಿತ್ತು. ಮರಣ ಕೂಡ ಇತಿಹಾಸ ನಿರ್ಮಿಸಬಲ್ಲದೆಂದು 'ಇನ್‌ವೈಟಿಂಗ್ ಡೆತ್' ತೋರಿಸಿಕೊಟ್ಟಿದೆ. ಹಾಗೆ ನೋಡಿದರೆ, ಭಾರತದಲ್ಲಿಯೆ ಅತ್ಯಂತ ಪ್ರಮುಖ ಜೈನ ಕೇಂದ್ರವಾಗಿರುವ ಶ್ರವಣ ಬೆಳ್ಗೊಳದ ಇತಿಹಾಸ ಆರಂಭವಾಗುವುದೇ ಒಂದು ಮರಣದಿಂದ.

ಬಹುಶಿಸ್ತೀಯ ವಿಧಾನ, ಪ್ರಾಥಮಿಕ ಆಕರಗಳನ್ನು ಹೆಕ್ಕುವುದು, ವಿವರಗಳ ಖಚಿತತೆ ಶೆಟ್ಟರ ಅವರ ಬರವಣಿಗೆಯ ವಿಶಿಷ್ಟ ಲಕ್ಷಣಗಳು. 'ಇನ್‌ವೈಟಿಂಗ್ ಡೆತ್' ರಚಿಸುವಲ್ಲಿ ಅವರು ಜೈನ ಪುರಾಣಗಳು, ಆರಾಧನಾ ಗ್ರಂಥಗಳು, ಆಚಾರ ಗ್ರಂಥಗಳು, ಹಳಗನ್ನಡ ಕಾವ್ಯಗಳು, ಶ್ರವಣಬೆಳ್ಗೊಳದ ಸುಮಾರು ೫೭೦ ಶಾಸನಗಳನ್ನು ಜಾಲಾಡಿರುವರು. ಐತಿಹಾಸಿಕ ಪರಿಪ್ರೇಕ್ಷೆಯಲ್ಲಿ, ಮರಣದ ಸಿದ್ಧಾಂತ ಹಾಗೂ ಅನುಷ್ಠಾನಗಳನ್ನು ನಿರೂಪಿಸಿರುವರು. ಜೈನ ದರ್ಶನ, ಐತಿಹಾಸಿಕ ಪುರಾತತ್ವ ಕಲಾ ಇತಿಹಾಸ, ಸಮಾಜೋ-ಆರ್ಥಿಕ ವಿಶ್ಲೇಷಣೆ ಮೂಲಕ 'ಇನ್‌ವೈಟಿಂಗ್ ಡೆತ್' ಸಮಾಧಿ ಮರಣದ ಮೇಲೆ ಬೆಳಕು ಚೆಲ್ಲುವುದು. ಗ್ರಂಥದ ವಿಧಾನ ನವೀನವಾಗಿದ್ದು ಭಾರತೀಯ ಇತಿಹಾಸ ಅಧ್ಯಯನದಲ್ಲಿ ಒಂದು ಹೊಸ ಕ್ಷೇತ್ರವನ್ನೆ ತೆರೆದಿಟ್ಟಿದೆ.

ಸಮಾಧಿಮರಣ ಕುರಿತು ಡಾ. ಶೆಟ್ಟರ ಯೋಜಿಸಿದ್ದು ಮೂರು ಕೃತಿಗಳನ್ನು: Inviting Death, Pursuing Death ಮತ್ತು chosing Death. ಮೊದಲೆರಡು ಪ್ರಕಟಣೆ ಕಂಡಿವೆ. ಮೂರನೆಯದು ಪ್ರಕಟಗೊಂಡಾಗ ಸಮಾಧಿಮರಣ ಕುರಿತ ಕೃತಿತ್ರಯ ಪೂರ್ಣಗೊಳ್ಳುವುದು. Prusuing Deathಗೆ, ವೃತ್ತಿನಿರತ ಇತಿಹಾಸಕಾರರ ಶೃಂಗ ಸಂಘವಾದ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಎರಡು ವರ್ಷಕ್ಕೊಮ್ಮೆ ಕೊಡಮಾಡುವ ಪ್ರತಿಷ್ಠಿತ ಎಚ್.ಕೆ. ಬಾರಪುಜಾರಿ ಪ್ರಶಸ್ತಿ ೧೯೯೭ರಲ್ಲಿ ಸಂದಿದೆ.

ಮರಣಕ್ಕೆ ಆಮಂತ್ರಣ ರಚಿಸುವಲ್ಲಿ ಹಲವು ವಿದ್ವಾಂಸಮಿತ್ರರೊಂದಿಗೆ ಡಾ. ಶೆಟ್ಟರ ಸಮಾಲೋಚನೆಯನ್ನು ಮಾಡಿರುವರು. ಅವರೆಂದರೆ ಹಾರ್ವರ್ಡ್ ವಿ.ವಿ.ದ ಕಲಾ ಇತಿಹಾಸ ಪ್ರೊಫೆಸರ್ ಪ್ರಮೋದಚಂದ್ರ, ಹೈಡಲ್‌ಬರ್ಗ್ ವಿ.ವಿ.ದ ಗುಂಥರ್ ಸೊಂತೆಮರ್, ಶಿಕಾಗೊ ವಿ.ವಿ.ದ ಎ.ಕೆ. ರಾಮಾನುಜನ್, ಟೊರೊಂಟೊ ವಿ.ವಿ.ದ ಕೆ. ಹಿರೇಮಲ್ಲೂರ ಈಶ್ವರನ್, ಮುಲ್ಕ ರಾಜ ಆನಂದ ಮತ್ತು ಕ್ಯಾರಲ್ ಬೊಲನ್, ಕ್ಲಾಸ್ ಫಿಶರ್, ಮೈಕಲ್ ಮೈಸ್ನರ್, ಬ್ರುಹ್ನ ಕ್ಲ್.

ಪ್ರಪಂಚದ ಯಾವುದೇ ಧರ್ಮವಿರಲಿ, ಮರಣದ ಬಗೆಗೆ ಚಿಂತನೆ ಮಾಡಿಯೆ ಇದೆ. ಜೈನ ಧರ್ಮದಷ್ಟು ಆಳವಾಗಿ ಮರಣಚಿಂತನೆ ಬೇರೆ ಧರ್ಮ ಮಾಡಿದುದಿಲ್ಲ. ಜೈನರ ಮರಣ ದೃಷ್ಟಿಕೋನವನ್ನು ಅರ್ಥ ಮಾಡಿಕೊಳ್ಳದ ಹೊರತು ಅವರ ಜೀವನದೃಷ್ಟಿಯನ್ನು ಅರ್ಥ ಮಾಡಿಕೊಳ್ಳಲಾಗದು. ಜೈನರ ಮರಣ ದೃಷ್ಟಿಕೋನವನ್ನು ಒಪ್ಪಲಿ ಬಿಡಲಿ, ಅವರ ಗಾಢ ಚಿಂತನೆ ಮೆಚ್ಚಬೇಕಾದುದೇ. ಬದುಕಲು ಅರ್ಥಪೂರ್ಣ ಪ್ರಯತ್ನ ಮಾಡುವವರನ್ನು ಮರಣದ ಪ್ರಶ್ನೆ ಕಾಡದೆ ಬಿಟ್ಟಿಲ್ಲ.

ಜೈನರಿಗೆ ಮರಣಚಿಂತನೆ ಕೇವಲ ಬೌದ್ಧಿಕ ಕುತೂಹಲವಾಗಿರಲಿಲ್ಲ. ಅದೊಂದು ಸಾಮಾಜಿಕ, ಧಾರ್ಮಿಕ, ದಾರ್ಶನಿಕ ಆಯಾಮಗಳುಳ್ಳ ವಿಧಿಯಾಗಿತ್ತು. ಸಮಾಧಿಮರಣ ವನ್ನರಸಿ ಶ್ರವಣ-ಶ್ರವಣೆಯರು, ಗುಡ್ಡಗುಡ್ಡಿಯರು, ಶ್ರಾವಕ-ಶ್ರಾವಕಿಯರು ಶ್ರವಣ ಬೆಳ್ಗೊಳದ ಸಮಾಧಿ ಬೆಟ್ಟಕ್ಕೆ ತಂಡಗಟ್ಟಿ ಬಂದರು. ಶ್ರವಣಬೆಳ್ಗೊಳದ ಇತಿಹಾಸ ರೂಪುಗೊಂಡಿದ್ದು ಈ ಸಮಾಧಿಮರಣಗಳಿಂದ. ೧೫೦೦ ವರುಷಗಳ ಇತಿಹಾಸದಲ್ಲಿ ಸುಮಾರು ೧೫೦ ಸ್ತ್ರೀಪುರುಷರು ಸಮಾಧಿಮರಣವನ್ನಪ್ಪಿದ ದಾಖಲೆಗಳಿವೆ. ಭದ್ರಬಾಹು ಮತ್ತು ಚಂದ್ರಗುಪ್ತ ಮೌರ್ಯರ ಕ್ರಿ.ಪೂ. ಮೂರನೆಯ ಶತಮಾನದ ಪೌರಾಣಿಕ ಸಮಾಧಿ ಮರಣದಿಂದ ಆರಂಭಿಸಿ, ಕ್ರಿ.ಶ. ೧೯೦೦ ವರೆಗಿನ ಸಮಾಧಿಮರಣಗಳನ್ನು 'ಇನ್‌ವೈಟಿಂಗ್ ಡೆತ್' ಸಾದ್ಯಂತವಾಗಿ ವಿವರಿಸುವುದು. ಶ್ರವಣಬೆಳ್ಗೊಳದ ಚಂದ್ರಗಿರಿಯು ಇತಿಹಾಸದಲ್ಲಿ ಕಟವಪ್ರ ಅಥವಾ ಕಳ್ವಪ್ಪು ಅಥವಾ ಸಮಾಧಿ ಬೆಟ್ಟವೆಂದೇ ಪರಿಚಿತವಾಗಿತ್ತು. ಬೆಳ್ಗೊಳ (ಬಿಳಿ+ಕೊಳ) ಇತ್ತೀಚಿನ ಹೆಸರು.

ದೇಹ ದಂಡನೆಯ ಮೂಲಕ ಸಮಾಧಿ ಮರಣವನ್ನೂ ಸಾಧಿಸಬೇಕಿತ್ತು. ಅದೊಂದು ತೀರಾ ಕಠಿಣ ವ್ರತ. ಬಂಡೆಗಲ್ಲೇ ಹಾಸಿಗೆ, ಆಕಾಶವೇ ಹೊದ್ದಿಕೆ. ಭಕ್ತರು ಕೊಟ್ಟುದರಲ್ಲಿ ಮೂರೋ ನಾಲ್ಕೋ ತುತ್ತು ಆಹಾರ ಸೇವನೆ. ಕ್ರಮೇಣ ಅನ್ನ ನೀರು ತ್ಯಾಗ ಮಾಡಬೇಕು. ಯಾವುದಾದರೂ ಭಂಗಿಯನ್ನು ಸ್ವೀಕರಿಸಿ ಅಲುಗದೆ ನಿಲ್ಲಬೇಕು, ಕೂಡಬೇಕು ಇಲ್ಲವೆ ಮಲಗಬೇಕು. ಪರ್ಯಕಾಸನ, ಅರ್ಧಪರ್ಯಕಾಸನ ಇಲ್ಲವೆ ಗೊಮ್ಮಟನಂತೆ ಕಾಯೋತ್ಸರ್ಗ.

ಸ್ವ ಇಚ್ಛಾಮರಣದ ಪ್ರಕಾರಗಳಲ್ಲಿ ಪ್ರಮುಖವಾದವು ಇವು: ೧) ಸನ್ಯಾಸನ ಮರಣ (ತ್ಯಾಗದ ಮೂಲಕ ಮರಣ), ೨) ಸಲ್ಲೇಖನಾ ಮರಣ (ನಿರಸನ ಮೂಲಕ ಮರಣ), ೩) ಆರಾಧನಾ ಮರಣ (ಪೂಜೆಯ ಮೂಲಕ ಮರಣ), ೪)ಪಂಚಪದ ಮರಣ (ಪ್ರಾರ್ಥನಾ

ಮೂಲಕ ಮರಣ), ೫) ಪಂಡಿತ ಮರಣ(ಜ್ಞಾನಸಂಪಾದನೆ ಮೂಲಕ ಮರಣ) ಮತ್ತು ೬) ಸಮಾಧಿ ಮರಣ(ಧ್ಯಾನದ ಮೂಲಕ ಮರಣ). ಇವುಗಳಲ್ಲಿ ಯಾವುದೊಂದನ್ನು ಆಯ್ಕೆ ಮಾಡುವುದೆಂದರೆ ಅದೊಂದೇ ಮರಣವಿಧಿಯನ್ನು ಆಚರಿಸಿದರಾಯಿತು ಎಂದಲ್ಲ. ಸಾಧಕನು ಇವೆಲ್ಲವನ್ನೂ ಒಟ್ಟಿಗೇ ಆಚರಿಸಬೇಕಿತ್ತು.

ಸಮಾಧಿ ಮರಣವೆಂದರೆ ಆತ್ಮಹತ್ಯೆ ಮಾಡಿಕೊಳ್ಳುವುದಲ್ಲ. ಆತ್ಮಹತ್ಯೆ ರಾಗದ್ವೇಷಗಳಿಂದ ಪ್ರೇರಿತವಾಗಿರುತ್ತದೆ. ಸಮಾಧಿಮರಣ ಅನುಸರಿಸಲು ಎಲ್ಲರಿಗೂ ಅನುಮತಿಯಿರಲಿಲ್ಲ. ಪರಿಪಕ್ವವಾದ ಮನಸ್ಥಿತಿಯುಳ್ಳ ಸಾಧಕನಿಗೆ ಮಾತ್ರ ಅನುಮತಿ ನೀಡಲಾಗುತ್ತಿತ್ತು. ಒಟ್ಟು ೪೮ ಬಗೆಯ ಮರಣಗಳನ್ನು ಮೂರು ಸ್ಥೂಲ ವರ್ಗಗಳಲ್ಲಿ ವಿಭಜಿಸಲಾಗಿದೆ: (೧) ಬಾಲ ಮರಣ(ಬಾಲಿಶ ಅಥವಾ ಅಪಕ್ವ ಮನಸ್ಥಿತಿಯ ವ್ಯಕ್ತಿಗಳು ಕೈಕೊಳ್ಳುವ ಮರಣ); (೨) ಪಂಡಿತ ಮರಣ(ಜಾಣ ಮರಣ); (೩) ಪಂಡಿತ-ಪಂಡಿತ ಮರಣ (ಅತ್ಯಂತ ಜಾಣ ಮರಣ)

ಆತ್ಮಹತ್ಯೆಯನ್ನು ಒಳಗೊಳ್ಳುವ ಮೊದಲನೆಯದನ್ನು ನಿಸ್ಸಂದಿಗ್ಧವಾಗಿ ನಿರಾಕರಿಸಲಾಗಿದೆ. ಎರಡನೆಯದನ್ನು ಆಂಶಿಕವಾಗಿ ಅಂಗೀಕರಿಸಲಾಗಿದೆ. ಮೂರನೆಯದನ್ನು ಉತ್ಸಾಹಪೂರ್ಣವಾಗಿ ಶಿಫಾರಿಸಲಾಗಿದೆ.

'ಇನ್‌ವೈಟಿಂಗ್ ಡೆತ್'ದ ಮೂರು ವಿಭಾಗಗಳಲ್ಲಿ ಸಮಾಧಿಮರಣವನ್ನು ಚರ್ಚಿಸಲಾಗಿದೆ. ಸಮಾಧಿಮರಣದ ಪೌರಾಣಿಕ ಇತಿಹಾಸ ಭದ್ರಬಾಹು ಮುನಿ ಮತ್ತು ಚಂದ್ರಗುಪ್ತ ಮೌರ್ಯ ಶ್ರವಣಬೆಳ್ಗೊಳದಲ್ಲಿ ಸ್ವ ಇಚ್ಛಾಮರಣವನ್ನಪ್ಪಿದ ಐತಿಹ್ಯದಿಂದ ಆರಂಭಗೊಳ್ಳುವುದು. ಶಾಸನವೊಂದರಲ್ಲಿ ಆಚಾರ್ಯ ಪ್ರಭಾಚಂದ್ರನು ಸಮಾಧಿಮರಣವನ್ನಪ್ಪಿದ್ದನ್ನು ಉಲ್ಲೇಖಿಸಲಾಗಿದೆ. "ಸಮ್ಯಕ್ ಚಾರಿತ್ರ್ಯದೊಂದಿಗೆ ಸಂಬಂಧಿತವಾದ ತಪಸ್ಸಿನ ಗುರಿಯಾದ ಸಮಾಧಿಯನ್ನು ಸಾಧಿಸುವ ಇಚ್ಛೆಯಿಂದ" ಪ್ರಭಾಚಂದ್ರನು ಉನ್ನತ ಶಿಖರಗಳ ಈ ಬೆಟ್ಟಕ್ಕೆ ಬಂದನು. ಕ್ರಿ.ಶ. ೬೦೦ ರಿಂದ ಕ್ರಿ.ಶ. ೧೯೦೦ ರ ಕಾಲಾವಧಿಯಲ್ಲಿ ದೇಹದಂಡನೆಕಾರರು ಸಮಾಧಿಬೆಟ್ಟಕ್ಕೆ ಹಿಂಡುಗಟ್ಟಿ ಬಂದರು. ಸಮಾಧಿಮರಣದ ಉಚ್ಛ್ರಾಯ ಕಾಲವದು. ಉತ್ಸಾಹಿ ಅನುಯಾಯಿಗಳು ಸುಂದರ ಮಂದಿರ-ಮಂಟಪಗಳನ್ನು ಮಾನಸ್ತಂಭಗಳನ್ನು ನಿರ್ಮಿಸಿದರು. ಪ್ರಶಾಂತವಾಗಿದ್ದ ವಾತಾವರಣ ಗದ್ದಲಮಯವಾಯಿತು. ಅದರಿಂದಾಗಿ, ಶ್ರಮಣರು ದೂರವಾಗತೊಡಗಿದರು. ಬಸದಿಗಳಿಗೆ ಆಸ್ತಿಪಾಸ್ತಿ ಶೇಖರಗೊಂಡು ಆಚಾರ್ಯರು ಅವುಗಳ ನಿರ್ವಹಣೆಯ ಲೌಕಿಕದತ್ತ ವಾಲಿದರು. ಆಧ್ಯಾತ್ಮಿಕ ಜೀವನಕ್ಕಿಂತ ಮತೀಯ ನಿಯಮಗಳೇ ಮೇಲಾದವು. ಇದೆಲ್ಲದರ ಚಿತ್ರಣವನ್ನು 'ಇನ್‌ವೈಟಿಂಗ್ ಡೆತ್'ದ ಮೊದಲ ವಿಭಾಗ ನೀಡುವುದು.

ಎರಡನೆಯ ವಿಭಾಗದಲ್ಲಿ, ಮರಣವಿಧಿಗಳಾವುವು? ಮರಣವನ್ನು ಆಮಂತ್ರಿಸುವ ಬಗೆ ಎಂತು? ಸಮಾಧಿಮರಣ ಸಾಧಿಸಲು ಅರ್ಹರಾರು? ಯಾವ ಉದ್ದೇಶಗಳಿಗಾಗಿ ಅದನ್ನು ಸಾಧಿಸುವುದು? ಅನುಸರಿಸಬೇಕಾದ ನೀತಿಸಂಹಿತೆ ಯಾವುದು? ಸಮಾಧಿಮರಣ ಸಾಧಿಸಿದ

ಪರಂಪರೆಯಲ್ಲಿ ಕಂಡುಬರುವ ದೊಡ್ಡವರಾರು? ಮರಣವನ್ನು ಮುಂದೂಡುವ ಯಾ ಅದರಿಂದ ತಪ್ಪಿಸಿಕೊಳ್ಳಲು ಕಾರಣಗಳೇನು? ಕಾಲಕ್ರಮೇಣ ಸಮಾಜ ಇಂಥ ಕ್ರಮಗಳನ್ನು ಹೇಗೆ ಸ್ವೀಕರಿಸಿತು? ಇವೆಲ್ಲ ಚರ್ಚಿತವಾಗಿವೆ.

ಮೂರನೆಯ ವಿಭಾಗದಲ್ಲಿ, ಸಮಾಧಿಮರಣವನ್ನಪ್ಪಿದವರಿಗಾಗಿ ನಿರ್ಮಿಸಿದ ನಿಸಿಧಿಗಳ ವಿವರಣೆ ಇದೆ. ನಿಸಿಧಿ ಸ್ಮಾರಕಗಳೂ ಬೌದ್ಧರ ಛಾಯಾಸ್ತಂಭಗಳು, ವೀರಗಲ್ಲುಗಳು, ಮಾಸ್ತಿ ಕಲ್ಲುಗಳಂತೆಯ ವಿಶಿಷ್ಟವಾದವುಗಳು. ಅವುಗಳ ರಚನಾಕ್ರಮ, ಸ್ಥಳ, ವರ್ಗೀಕರಣ, ಅವುಗಳಿಗೆ ನೀಡಿದ ಪದಗಳ ಮಹತ್ವ, ವೈವಿಧ್ಯ ಮೊದಲಾದ ಅಂಶಗಳನ್ನು ಇದುವರೆಗೆ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದೆ ತಿಳಿಯಲಾಗಿತ್ತು. ಇವೆಲ್ಲ ಅಂಶಗಳನ್ನು ವಿವೇಚಿಸುವುದು. ಇದುವರೆಗೆ ನಿಸಿಧಿಗಳ ಸ್ವರೂಪ, ವಸ್ತುವಿಷಯಗಳನ್ನು ಕಲಾ ಇತಿಹಾಸಕಾರರಾಗಲಿ ಸಮಾಜೋ-ಧಾರ್ಮಿಕ ಇತಿಹಾಸಕಾರರಾಗಲಿ ವಿಶ್ಲೇಷಣಾತ್ಮಕ ಆಧ್ಯಯನಕ್ಕೆ ಒಳಪಡಿಸಿಲ್ಲ.

ವಿಪುಲ ಛಾಯಾಚಿತ್ರಗಳು, ರೇಖಾಚಿತ್ರಗಳು, ನಕ್ಷೆಗಳು ಗ್ರಂಥಕ್ಕೆ ಅರ್ಥಪೂರ್ಣತೆ ಒದಗಿಸಿವೆ.

ವಿರೂಪಾಕ್ಷಪ್ಪ ಅಬ್ಬಿಗೇರಿ

● ನಾಗಭೂಷಣ ಪಾಟೀಲ

ಮಾಸಲು ಖಾದಿಪಂಚೆ, ಖಾದಿ ಜುಬ್ಬ, ಹವಾಯಿ ಚಪ್ಪಲಿ, ಕುರುಚಲು ಗಡ್ಡ, ಬಡಕಲು ದೇಹ; ತಲೆಯಲ್ಲಿ ಸಮಾನತೆ, ಸಮಾಜವಾದಿ, ಪ್ರಜಾತಂತ್ರದ ಆಶಯಗಳು. ಗಾಂಧಿ, ಲೋಹಿಯಾ, ಮಾರ್ಕ್ಸ್, ಅಂಬೇಡ್ಕರರ ವಿಚಾರಗಳು. ಈ ಚಿತ್ರ ವಿರೂಪಾಕ್ಷಪ್ಪ ಅಬ್ಬಿಗೇರಿಯವರದು. ಗದಗ ಜಿಲ್ಲೆಯ ರೋಣ ತಾಲೂಕಿನ ಹಳ್ಳಿಯಾದ ಸೂಡಿಯಲ್ಲಿ ನಿವೃತ್ತ ಶಾಲಾ ಮಾಸ್ತರರಾದ ವಿರೂಪಾಕ್ಷಪ್ಪನವರು ಸಾಮಾನ್ಯ ಮನುಷ್ಯರಾಗಿ ಬದುಕುತ್ತಿದ್ದಾರೆ. ಸಮಾಜವಾದವನ್ನು ಹೇಳುವವರದೊಂದು, ಬಾಳುವವರದೊಂದು ಎಂಬುದಾಗಿ ಎರಡು ಗುಂಪುಗಳಾಗಿ ನೋಡಿದಲ್ಲಿ, ವಿರೂಪಾಕ್ಷಪ್ಪ ಅಬ್ಬಿಗೇರಿಯವರದು ಎರಡನೇ ಗುಂಪು; ಅವರದು ಹೋರಾಟದ ಬದುಕು. ಸ್ವಾತಂತ್ರ ಚಳುವಳಿಯ ಅನುಭವ, 'ನೆಹರು ವಿಸಂ'ನ ಅತಿರೇಕ, ಇಂದಿರಾಗಾಂಧಿಯ ಬಡತನ ನಿರ್ಮೂಲನೆಯೆಂಬ ಘೋಷಣೆಯ ವಾಸ್ತವತೆ, ಲೋಹಿಯಾ ಅವರ ಪ್ರೀತಿ, ಎಲ್ಲವನ್ನೂ ಕಂಡಿರುವ ವಿರೂಪಾಕ್ಷಪ್ಪನವರು ನಿಜವಾದ ಸಮಾಜವಾದಿ ವ್ಯವಸ್ಥೆಯ ಕನಸು ಕಂಡವರು.

ಆಧುನಿಕ ಭಾರತದ ರಾಜಕೀಯ ಚರಿತ್ರೆಯ ಭಾಗವಾಗಿ ೧೯೩೪ರಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಹುಟ್ಟಿಕೊಂಡಿತು. ರಾಜಕೀಯ ಸ್ವಾತಂತ್ರ್ಯ ಪಡೆಯಲು ಗಾಂಧೀಜಿ ನೇತೃತ್ವದ ಸತ್ಯಾಗ್ರಹಪಥವೊಂದೇ ಮುಖ್ಯವಾಗಿದ್ದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದೊಳಗಿನ ತೀವ್ರಗಾಮಿಗಳ ತಳಮಳದ ಫಲವಾಗಿ ಪರ್ಯಾಯವೆಂಬಂತೆ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಘಟಿಸಿತು. ರಾಷ್ಟ್ರಮಟ್ಟದಲ್ಲಿ ನಡೆದ ಈ ಬೆಳವಣಿಗೆ ಫಲವಾಗಿ ಸೋಷಲಿಸ್ಟ್ ಪಕ್ಷವು ಕಾಂಗ್ರೆಸ್ಸೇತರ ಧ್ವನಿಯಾಗಿ ಪ್ರತಿಧ್ವನಿಸಿತು. ಅದರಂತೆ ಕರ್ನಾಟಕದಲ್ಲಿಯೂ ಸೋಷಲಿಸ್ಟ್ ಚಟುವಟಿಕೆಗಳು ಚುರುಕುಗೊಂಡವು. ಕಾಗೋಡು ಸತ್ಯಾಗ್ರಹ, ಸಂಡೂರು ರೈತ ಹೋರಾಟ, ಹೆಬ್ಬಳ್ಳಿ ಭೂ ಹೋರಾಟ, ನರಗುಂದ ರೈತಬಂಡಾಯ ಮುಂತಾದ ಘಟನೆಗಳು ಕರ್ನಾಟಕದಲ್ಲಿ ಸಮಾಜವಾದೀ ಚಳುವಳಿ ಇಟ್ಟ ಹೆಜ್ಜೆಗುರುತುಗಳಾಗಿವೆ. ಈ ದಿಸೆಯಲ್ಲಿ ನೀಲಗಂಗಯ್ಯ ಪೂಜಾರರಂತೆ ಉತ್ತರ ಕರ್ನಾಟಕದಲ್ಲಿ ಸಮಾಜವಾದಿ ಹೋರಾಟದ ಬೀಜಬಿತ್ತಿದ ಅಬ್ಬಿಗೇರಿಯವರು ಯಾವ ಬಗೆಯ ಪ್ರಚಾರ-ಪ್ರಶಸ್ತಿ ಬಯಸದೆ ಸಮಾಜವಾದಿ, ಗಾಂಧೀವಾದಿ ಮಾನವತಾವಾದಿಯಾಗಿ ಬದುಕಿದವರು.

ದೇಶದಾದ್ಯಂತ ಭುಗಿಲೆದ್ದ ೧೯೪೨ರ ಚಲೇಜಾವ್ ಚಳುವಳಿ ಅನೇಕ ಯುವಕರನ್ನು ಆಕರ್ಷಿಸಿತು. ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದ ವಿರೂಪಾಕ್ಷಪ್ಪನವರು ಅಂತಃ ಸ್ಫೂರ್ತಿಯಿಂದ

ಚಳುವಳಿಗಿಳಿದರು. ಇದು ಅವರ ಸಹಪಾಠಿಗಳಿಗೂ ಪ್ರೇರಣೆಯಾಯಿತು. ಆ ಸಂದರ್ಭದಲ್ಲಿ ಇವರು ಸೂಡಿ, ರೋಣ, ಗಜೇಂದ್ರಗಡದ ಭಾಗದಲ್ಲಿ ನಡೆದ ಪಿಕೆಟಿಂಗ್, ಬಹಿಷ್ಕಾರಗಳಂತಹ ಚಟುವಟಿಕೆಗಳಲ್ಲಿ ಪಾತ್ರವಹಿಸಿದರು. ತಿಂಗಳುಗಳ ಕಾಲ ಮನೆ, ಬಂಧು-ಬಳಗದಿಂದ ದೂರವಾಗಿದ್ದುಕೊಂಡು ಭೂಗತರಾಗಿ ಹೋರಾಟ ಮಾಡಿದರು. ಕೊನೆಗೆ ಪೊಲೀಸರ ವಶರಾಗಿ ಕೋರ್ಟಿನ ವಿಚಾರಣೆ ನಂತರ ಹಿಂಡಲಗಾ ಜೈಲಿನಲ್ಲಿ ನಾಲ್ಕು ತಿಂಗಳ ಕಠಿಣ ಶಿಕ್ಷೆ ವಿಧಿಸಲಾಯಿತು. ಅವರ ಸರ್ಕಾರಿ ಕೆಲಸ ಹೋಯಿತು. ಈ ಘಟನೆ ವಿರೂಪಾಕ್ಷಪ್ಪನವರ ಬದುಕಿನಲ್ಲಿ ಹೊಸ ಲೋಕದೃಷ್ಟಿ ರೂಪ ಪಡೆಯಲು ಕಾರಣವಾಯಿತು.

ವಿರೂಪಾಕ್ಷಪ್ಪನವರು ಜ್ಞಾನಕ್ಕಾಗಿ ಹಪಹಪಿಸುವವರು. ಅವರ ಸಂಗ್ರಹದಲ್ಲಿರುವ ಪುಸ್ತಕಗಳ ರಾಶಿ ಇದನ್ನು ಸೂಚಿಸುತ್ತದೆ. ತಾರುಣ್ಯದಿಂದಲೇ ಅವರು ಮಹತ್ವದ ಸಾಹಿತ್ಯ ಕೃತಿಗಳನ್ನು ಕನ್ನಡ, ಹಿಂದಿ, ಇಂಗ್ಲೀಷ್ ಭಾಷೆಗಳಲ್ಲಿ ಓದಿದವರು. ಕಾಲೇಜು ಮೆಟ್ಟಿಲ ಹತ್ತುವ ಕಾಲಕ್ಕಾಗಲೇ ಬೇಂದ್ರೆ, ಕುವೆಂಪು, ಮಾಸ್ತಿ, ಡಿ.ವಿ.ಜಿ., ಆಲೂರ ವೆಂಕಟರಾಯ ಅವರ ಕೃತಿಗಳನ್ನಲ್ಲದೆ ಮಾರ್ಕ್ಸ್, ಲೆನಿನ್, ಟಾಲ್‌ಸ್ಟಾಯ್, ಗಾರ್ಕಿ ಮುಂತಾದ ಸಮಾಜವಾದಿ ಚಿಂತಕರ ಸಾಹಿತ್ಯ ಕೃತಿಗಳನ್ನು ಅವರು ಓದಿ ಮುಗಿಸಿದ್ದರು. ಯುವ ವಯಸ್ಸಿನಲ್ಲಿ ಸಿಕ್ಕಿದ ಈ ಓದು ಹಾಗೂ ಉನ್ನತ ವಿಚಾರ ಧಾರೆಗಳ ಸಂಪರ್ಕದಿಂದಾಗಿ, ಆದರ್ಶವಾದಿ ಮಾರ್ಗವನ್ನು ಆಯ್ದುಕೊಂಡರು. 'ಕ್ವಿಟ್ ಇಂಡಿಯಾ' ಚಳುವಳಿಯ ಕಾರಣದಿಂದ ಸೆರೆಮನೆ ಅನುಭವಿಸಿ ಹೊರಬಂದ ಬಳಿಕ ಕ್ರಾಂತಿಕಾರಿ ಮಾರ್ಗದಿಂದ ಲೋಕಸೇವೆ ಮಾಡಬೇಕೆಂಬ ಸಂಕಲ್ಪ, ವೈಚಾರಿಕ ಶ್ರದ್ಧೆ, ಸಾಹಿತ್ಯ ಪ್ರೀತಿ ಪ್ರಾಪ್ತವಾಯಿತು. ಇಂಥ ಒಬ್ಬ ಪ್ರಾಮಾಣಿಕ ಕಾರ್ಯಕರ್ತನ ವಿಷಯ ತಿಳಿದ ರಾಮಮನೋಹರ ಲೋಹಿಯಾ ಅವರು, ರೋಣಕ್ಕೆ ಬಂದರು. ಆಗ ನಡೆದ ಸಭೆಯನ್ನು ವಿರೂಪಾಕ್ಷಪ್ಪ ಅಭಿಮಾನದಿಂದ ನೆನೆಯುತ್ತಾರೆ. ವೈಚಾರಿಕ ತಳಹದಿಯ ಮತ್ತು ಪ್ರತಿಭಟನಾ ನೆಲೆಯ ಬದುಕನ್ನು ರೂಡಿಸಿಕೊಂಡಿರುವ ವಿರೂಪಾಕ್ಷಪ್ಪ ಇಂದಿಗೂ ಆದರ್ಶಗಳ ಜತೆ ರಾಜಿಯಾಗಿಲ್ಲ. ಸೂಡಿ, ಗದಗ ಪ್ರದೇಶದ ಸಮಕಾಲೀನ ಸಂದರ್ಭದದ ರೈತ ಸಮುದಾಯದ ಹೋರಾಟಗಳಿಗೆ, ಕಾರ್ಮಿಕರ ಹಕ್ಕು ಬಾಧ್ಯತೆಗಳಿಗೆ ಸಂಬಂಧಿಸಿದ ಹೋರಾಟಗಳಿಗೆ ಅಬ್ಬಿಗೇರಿಯವರು ಈಗಲೂ ಪ್ರೇರಕ ಶಕ್ತಿ.

ಗಾಂಧಿ, ಲೋಹಿಯಾ, ಜೆಪಿಯವರ ಸಮಾನತೆ, ಸಮಾಜವಾದ, ಸರ್ವೋದಯದಂತಹ ಮೌಲ್ಯಗಳು ಇಂದು ಭಾಷಣ ಮಟ್ಟದಲ್ಲಿ ಉಳಿದಿವೆ ಅಥವಾ ಭಾರತದ ಶಕ್ತಿರಾಜಕಾರಣ ಪ್ರವಾಹದಲ್ಲಿ ತೇಲಿ ಹೋದ ಅನೇಕ ಸಮಾಜವಾದಿಗಳ ಸಂದರ್ಭದಲ್ಲಿ ಹಾಸ್ಯಾಸ್ಪದವಾಗಿದೆ. ಕರ್ನಾಟಕದ ಸಮಾಜವಾದಿ ಚಳುವಳಿಗೆ ಧುಮುಕಿದವರಲ್ಲಿ ಕೆಲವರು ಅಧಿಕಾರ ರಾಜಕಾರಣದಲ್ಲಿ ಮುಂದುವರೆದರೆ, ಮತ್ತೆ ಕೆಲವರು ಅಧಿಕಾರದಿಂದ ವೈಯಕ್ತಿಕ ಆದರ್ಶವಾದಿಗಳಾಗಿಯೇ ಉಳಿದರು. ಅಂಥವರಲ್ಲಿ ಅಬ್ಬಿಗೇರಿ ಒಬ್ಬರು. ಆದರ್ಶದ ಬದುಕೇ ತಮಾಶೆಯಾಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ವಿರೂಪಾಕ್ಷಪ್ಪ ಅಬ್ಬಿಗೇರಿ ಅವರಂತಹವರು ಇನ್ನೂ ಇದ್ದಾರೆ. ಈಗಲೂ ಸಮಕಾಲೀನ ರಾಜಕೀಯ ವಿದ್ಯಮಾನಗಳನ್ನು ತೀಕ್ಷ್ಣವಾಗಿ ಗ್ರಹಿಸುವ ವಿಶ್ಲೇಷಿಸುವ ಮನಸ್ಸನ್ನು ಇನ್ನೂ ಉಳಿಸಿಕೊಂಡಿದ್ದಾರೆ. ಲೇಖಕರೂ ಆಗಿರುವ ಅಬ್ಬಿಗೇರಿಯವರು ಕವನ ಸಂಕಲನ, ಕಥಾ ಸಂಕಲನ ಪ್ರಕಟಿಸಿದ್ದಾರೆ.

ಎಸ್ ಶೆಟ್ಟರ್ ಅವರೊಂದಿಗೆ

● ಸಂಪಾದಕ

(ಡಾ. ಷಡಕ್ಷರ ಶೆಟ್ಟರ್ ಅವರು ಕರ್ನಾಟಕದ ಚರಿತ್ರೆಯ ಸಂಶೋಧಕರಲ್ಲಿ ಒಬ್ಬರು. ಕರ್ನಾಟಕ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದವರು. ಭಾರತೀಯ ಧರ್ಮಗಳು ಮುಖ್ಯವಾಗಿ ಜೈನರ ಧಾರ್ಮಿಕ ಮರಣಗಳನ್ನು ಕುರಿತು ಅವರು ಬರೆದ ಪುಸ್ತಕಗಳು ಅಂತಾರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟವು. ಕೇಂಬ್ರಿಜ್ ವಿಶ್ವ ವಿದ್ಯಾಲಯದಲ್ಲಿ ಅಧ್ಯಯನ ಮಾಡಿದ ಶೆಟ್ಟರ್ ಅವರು, ಜಗತ್ತಿನ ಅನೇಕ ವಿಶ್ವ ವಿದ್ಯಾಲಯಗಳಲ್ಲಿ ಕೆಲಸ ಮಾಡಿದ ಅನುಭವವುಳ್ಳವರು. ಐಸಿಎಚ್ಆರ್‌ನ ನಿರ್ದೇಶಕರೂ ಆಗಿದ್ದ ಅವರು, ಕನ್ನಡ ವಿಶ್ವವಿದ್ಯಾಲಯಕ್ಕೆ ವಿಶೇಷ ಉಪನ್ಯಾಸ ನೀಡಲು (ದಿನಾಂಕ: ೧೨-೯-೨೦೦೦) ಬಂದಿದ್ದರು. ಆಗ ಅವರ ಈ ಸಂದರ್ಶನ ಮಾಡಲಾಯಿತು. ಚರಿತ್ರಕಾರ ರಾಗಿ ಶೆಟ್ಟರ್ ಅವರ ಅನುಭವ-ಚಿಂತನೆಗಳು ಕುತೂಹಲಕಾರಿಯಾಗಿವೆ. ಸಂ.)

ಸಂ: ನಿಮ್ಮ ಬಾಲ್ಯದ ಹಿನ್ನೆಲೆಯಿಂದ ಸಂದರ್ಶನ ಶುರು ಮಾಡಬಹುದು ಅನಿಸುತ್ತೆ.

ಶೆ: ನಾನು ಹುಟ್ಟಿದ್ದು, ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ತುಂಗಭದ್ರಾ ದಡದಲ್ಲಿರುವ ಹಂಪಸಾಗರದಲ್ಲಿ. ಈ ಹಳೇಹಂಪಸಾಗರ ತುಂಗಭದ್ರಾ ಅಣೆಕಟ್ಟಿನಲ್ಲಿ ಈಗ ಮುಳುಗಿಹೋಗಿದೆ. ಇದು ತುಂಗಭದ್ರೆಯ ಬಲದಡದ ಮೇಲೆ ಇತ್ತು. ಬಹಳ ಸುಂದರವಾದಂತಹ ಹಳ್ಳಿ. ದಿನಾ ಸಂಜೆ ತುಂಗಭದ್ರಾ ನದೀಮೇಲೆ ನಾವು ಆಡ್ತಾ ಇದ್ವಿ.

ಸಂ: ನಿಮ್ಮದು ದೊಡ್ಡ ಜಮೀನ್ದಾರಿ ಮನೆತನ ಅಂತ ಕೇಳಿದೀನಿ.

ಶೆ: ಹೌದು, ಸರೂರು ಮತ್ತೂರು ಅಂತ, ಎರಡೂ ಪಾಳೇಗಾರ ಮನೆತನಗಳು. ಐದು ಹಳ್ಳಿಗಳ ಮೇಲೆ ನಮ್ಮ ಭೂಮಿ ಇತ್ತು. ಅರ್ಧಕ್ಕರ್ಧ ಊರು ಈ ಮನೆತನಗಳ ಸಮುಚ್ಚಯವೇ ಆಗಿತ್ತು. ನಾನು ಹುಟ್ಟಿದ ಮನೆ ಸುಮಾರು ಒಂದು ಫರ್ಲಾಂಗು ಇತ್ತು. ಅದರ ಒಳಗಡೆ ನಾಲ್ಕು ಭಾವಿಗಳಿದ್ದವು. ಮೂರು ತೆರೆದ ಅಂಗಳಗಳಿದ್ದು. ನಾವು ಸ್ನಾನಮಾಡಿ ತಲೆ ಒರಿಸ್ಕೋಬೇಕಾದ್ರೆ ಈ ಅಂಗಳಕ್ಕ ಬರಬೇಕು. ಸುಮಾರು ಆರೇಳು ಅಡಿ ಉದ್ದದ ಹೊರಗೋಡೆ ಇತ್ತು. ಇದನ್ನ ಯಾತಕ್ಕ ಹೇಳ್ತೀನಿ ಅಂತಂದ್ರೆ, ಹೊರಗಡೆ ಹೋಗಾಕ ಅವಕಾಶವೇ ಇರಲಿಲ್ಲ. ಅದೇ ಒಂದು ಊರು. ಹೊರಗೋಡೆ ಕಿಟಕಿಯಲ್ಲಿ ಕೂತ್ಕೊಂಡು ನಾವು ಆಡ್ತಾ ಇದ್ವಿ.

ಸಂ: ನಿಮ್ಮ ತಂದೆಯವರೇನು ಮಾಡ್ತಿದ್ರು?

ಶೆ: ತಂದೆ ವ್ಯಾಪಾರ ಮನೆತನದಿಂದ ಬಂದೋರು. ಶೆಟ್ರು ಅಂತ ಅಂದ್ರೆ ಬಣಜಿಗರು, ವ್ಯಾಪಾರಸ್ಥರು. ನಮ್ಮ ತಾತ ಸರ್ವೇರ್ ವೀರಭದ್ರಪ್ಪ ಅಂತ. ಅವರಿಗೆ ಸಾಕಷ್ಟು ಹೆಸರಿತ್ತು ಆ ಭಾಗದೊಳಗ. ಅವರ ಬಗೆಗೆ ದಂತಕತೆಗಳೇ ಇದ್ದಾವೆ. ಅವ್ರು ರೆವುಲೂಷನರಿ ಆಗಿದ್ದ ಮುಂಡರಗಿ ಭೀಮರಾಯನ ಸಮಕಾಲಿಕರು ಮತ್ತು ಅವನ ಒಳ್ಳೇ ಸ್ನೇಹಿತರು.

ಸಂ: ಬ್ರಿಟಿಶ್ ಸರ್ಕಾರದ ಜತೆ ನಿಮ್ಮ ಕುಟುಂಬದ ಸಂಬಂಧ ಹೇಗಿತ್ತು?

ಶೆ: ಮುಂಡರಗಿ ಭೀಮರಾಯನ ಮೂಲಕವೇ ನಮಗ ಬ್ರಿಟಿಶರ ಸಂಬಂಧ. ಭೀಮರಾಯರ ಆಂದೋಲನಕ್ಕೆ ಹಣ ಕೊಡ್ತಾರೆ ಅಂತ್ಹೇಳಿ ಅಪವಾದ ನಮ್ಮ ಮನೆತನದ ಮೇಲೆ ಇತ್ತು. ನಮ್ಮ ಮುತ್ತಜ್ಜನ ಕಾಲದೊಳಗ ಮುಂಡರಗಿಯಲ್ಲಿ ನಮ್ಮ ಒಂದು ಮನೆ ಇತ್ತು. ಭೀಮರಾಯನ ಮತ್ತು ನಮ್ಮ ಮುತ್ತಜ್ಜನ ಸಂಪರ್ಕ ಬಹಳಾನೇ ನಿಕಟವಾಗಿತ್ತು. ಇವತ್ತಿಗೂನೂ ಲಾವಣಿಯಲ್ಲಿ ಅವರಿಬ್ಬರನ್ನೂ ಕೂಡಿಸ್ಕೊಂಡು ಹಾಡ್ತಾರೆ.

ಸಂ: ನೀವು ಕೊಡೋ ಚಿತ್ರ ನೋಡಿದ್ರೆ ಅದೊಂದು ದೊಡ್ಡ ಫ್ಯೂಡಲ್ ಫ್ಯಾಮಿಲಿ ಅಂತ ಸ್ಪಷ್ಟವಾಗುತ್ತೆ. ಆದರೆ ನಿಮ್ಮ ಕಾಲಕ್ಕೆ ಪರಿಸ್ಥಿತಿ ಹೇಗಿತ್ತು?

ಶೆ: ಜಮೀನ್ದಾರಿಕೆ, ಪಾಳೆಗಾರಿಕೆ ಮತ್ತು ವ್ಯಾಪಾರ ಇವೇ ನಮ್ಮ ವೃತ್ತಿಯಾಗಿದ್ವು. ನಮ್ಮಲ್ಲಿ ಹೊರಗಡೆ ಹೋಗಿ ಅಭ್ಯಾಸ ಮಾಡಿ ಯಾರೂ ನೌಕರಿ ಮಾಡಿರಲಿಲ್ಲ. ನಾನೇ ಪ್ರಪ್ರಥಮ ಅಂತ ನನಗನಸತ್ತೆ. ನನ್ನ ಬಾಲ್ಯದ ಕಾಲಕ್ಕ ಆಗಲೇ ಈ ಆಸ್ತಿ ಬಗ್ಗೆ ವ್ಯಾಜ್ಯಗಳು ಬಹಳಷ್ಟು ಆಗಿದ್ವು. ಮನೆತನ ಒಡದುಹೋಗಿತ್ತು. ಎಷ್ಟೋ ಭೂಮಿ ಕೈಬಿಟ್ಟು ಹೋಗಿತ್ತು. ಬಡತನ ಶುರುವಾಗಿತ್ತು. ಆದ್ರೆ ಇನ್ನೂ ಕುದುರೆಗಳನ್ನ ಕಟ್ಟುವಂತಹ ಒಂದು ಲಾಯಾ ಇತ್ತು. ಒಂದು ಆನೆ ಇತ್ತು. ನಿರ್ವಹಿಸಲಿಕ್ಕ ಆಗ್ತಿರಲಿಲ್ಲ. ಅದನ್ನ ಮುಂಡರಗಿ ಮಠಕ್ಕ ದಾನಾ ಮಾಡಿದ್ವಿ. ಈಗ ಮುಂಡರಗಿ ಅನ್ನದಾನೇಶ್ವರರ ಭವ್ಯವಾದ ಮಠ ಏನಿದೆ ಅದು, ಅದು ನಮ್ಮ ಪೂರ್ವಜರ ಮನೆ.

ಸಂ: ಈಗಲೂ ನಿಮ್ಮ ಬಾಲ್ಯದ ಯಾವ ಅನುಭವ ಹಾಂಟ್ ಮಾಡುತ್ತೆ?

ಶೆ: ನಮ್ಮ ಮನೆ ಮತ್ತು ನಮಗಿದ್ದಂತಹ ಗೌರವ. ವಾಸ್ತವದಲ್ಲಿ ಸಂಪತ್ತನ್ನ ನಾನು ಕಂಡಿಲ್ಲ ಆ ಮನೆಯಲ್ಲಿ. ಆದರೆ ಎಲ್ಲರೂ ನಮ್ಮನ್ನ ಶ್ರೀಮಂತರೇ ಅಂತ ಅಂತಿದ್ರು. ನಮ್ಮ ತಾಯಿಯವರು ಹೇಳುತ್ತಿದ್ದಂತಹ ಭವ್ಯವಾದ ಪರಂಪರೆ ಏನಿತ್ತು, ಅದನ್ನ ಕೇಳಿದಾಗ ನಿಜವೆ ಅಂತ ಅನುಮಾನ ಅನಸ್ತಾ ಇತ್ತು. ಆದ್ರ ಒಂದು ಮಾತ್ರ ನಿಜ. ಊರಿನಲ್ಲಿ ಏನೇ ಕೆಲಸ ಆದ್ರ ಕೂಡಾನೂ. ಊರಲ್ಲಿ ನಮಗಿಂತ ಶ್ರೀಮಂತರು ಬೆಳೆದಿದ್ರ ಕೂಡಾನೂ, ನಾವು ಮುಂದಾಳತ್ವ ವಹಿಸದ ಹೊರತು ಯಾವುದೇ ಕೆಲಸಾನೂ ಆಗ್ತಿರಲಿಲ್ಲ.

ಸಂ: ಜಮೀನ್ದಾರಿ ವ್ಯವಸ್ಥೆಯಲ್ಲಿ ಇರೋ ಇಂಥ ಸಾಮರಸ್ಯದ ಹೊಟ್ಟೆಯೊಳಗೆ ಡೀಪ್ ಆದ ಘರ್ಷಣೆಗಳೂ ಇರ್ತಾವೆ.

ಶೆ: ನನಗ ಗೊತ್ತಿದ್ದ ಹಾಗೆ ಘರ್ಷಣೆಗಳು ಇರಲಿಲ್ಲ. ನಮ್ಮ ಅಜ್ಜಾಮುತ್ತಜ್ಜರ ಬಗ್ಗೆ ಕೆಲವು ಆಪಾದನೆಗಳು ಇದ್ವು. ಯಾಕಂದ್ರ ಅವ್ರು ೧೯ನೇ ಶತಮಾನದ ಆದಿಭಾಗದ ಸಾಮಾಜಿಕ ಪರಿಸರ ಏನಿತ್ತು, ಅದರಂತೆ ಬದುಕಿದವರು. ವೀರಭದ್ರಪ್ಪ ಅಜ್ಜನವರ ಬಗೆಗೆ ದಂತಕತೆಗಳನ್ನ ಕೇಳಿದ್ದೀನಿ. ಅವರು ಹಿರಿಯ ಹೆಂಡತಿಗೆ ಮಕ್ಕಳಾಗಲಿಲ್ಲ ಅನ್ನೋ ಕಾರಣಕ್ಕೆ ಮೂವರನ್ನ ಮದುವೆ ಆದ್ರು. ಹಿರಿಯಳು ಸಂಸಾರದೊಳಗ ನಿರುತ್ಸಾಹಿಯಾಗಿ, ಧರ್ಮಕಾರ್ಯಕ್ಕೆ ಮುಡುಪಾಗಿಟ್ಟುಕೊಂಡು ಗಂಗಮ್ಮನ ಗುಡಿ, ಸಿದ್ದೇಶ್ವರನ ಗುಡಿ, ಮಠ ಒಟ್ಟಾರೆ ಹಂಪಸಾಗರದಲ್ಲಿ ಇರುವ ಎಲ್ಲ ಗುಡಿಗಳನ್ನ ಅವ್ರೇ ಕಟ್ಟಿಸಿದ್ರು ಅಂತ ಅನೇಕರು ಹೇಳ್ತಾ ಇದ್ರು. ನಮ್ಮ ಮನೆತನದೊಳಗಿನ ಪಾಳೆಗಾರಿಕೆ ಆರ್ಭಟದ ಕುರುಹು ಅಂದ್ರೆ ಮನೆ ಒಂದೆ.

ಸಂ: ನನ್ನ ಪ್ರಶ್ನೆ ಜಮೀನ್ದಾರಿ ವ್ಯವಸ್ಥೆಯ ಕರಾಳ ಅನುಭವಗಳ ಬಗ್ಗೆ.....

ಶೆ: ಇತ್ತು ಇತ್ತು. ಶ್ರೀಮಂತಿಕೆಯ ಹೊರಪದರು ಏನಿತ್ತು ಅದನ್ನ ಉಳಿಸಿಕೊಳ್ಳೋದಿಕ್ಕೆ ಎಲ್ರೂ ಹೆಣಗಾಡ್ತಾಯಿದ್ರು. ಆಗ ನಮ್ಮ ಮನೆಯಲ್ಲಿ ಮೊದಲಿಂದಲೂ ಒಂದು ಪರಂಪರೆ ಏನಿತ್ತಂದ್ರೆ, ಜಾತ್ರೆ ನಡೆದಾಗ, ಸಂತೆ ದಿವಸ, ವಿಶೇಷ ಸಂದರ್ಭ ಇದ್ದಾಗ, ಬೇರೆ ಹಳ್ಳಿಯಿಂದ ಬಂದಂತಹ ಜನ ನಮ್ಮಲ್ಲೇ ಊಟ ಮಾಡಬೇಕು. ನಮ್ಮ ತಾಯಿ ಶಾಲೆ ಕಲ್ತಿರಲಿಲ್ಲವಾದರೂ ಬುದ್ಧಿವಂತ್ರಾಗಿದ್ರು. ಅವ್ರು ಹೇಳ್ತಿದ್ರು, 'ನಾನು ೧೧ನೇ ವರ್ಷದಲ್ಲಿ ಮದುವೆ ಆಗಿ ಬಂದೆ. ಈ ಶ್ರೀಮಂತರ ಮನೆಗೆ ಬಂದಿದ್ದೇ ಒಂದು ಶಾಪ' ಅಂತ. 'ಯಾತಕ್ಕೆ' ಅಂತ ನಾನು ಕೇಳಿದೆ. 'ನೋಡು. ಈ ದೊಡ್ಡ ಮನೆತನದಲ್ಲಿ ಯಾರ ಸಂಪರ್ಕನೂ ಇರ್ತಿರಲಿಲ್ಲ. ಹೊರಗಡೆ ಹೋಗಲಿಕ್ಕೆ ಸಾಧ್ಯವಾಗ್ತಿರಲಿಲ್ಲ'. ನಾನೂ ಕೇಳ್ದೆ 'ನಮ್ಮ ತಂದೆಯವರ ಜತೆಗೆ ಅಂದ್ರೆ ನಿನ್ನ ಗಂಡನ ಜತೆಗೆ ಸಂಸಾರ ಹೇಗಿತ್ತು?' ಅಂತ. 'ಎಲ್ಲಿ ಸಂಸಾರ? ಸಾಕಷ್ಟು ಸಂಪತ್ತು ಇತ್ತು. ಜನ್ರೂ ಇದ್ರು. ಮನೆಗೆ ಬಂದಂತಹ ಸೊಸೆಯಂದಿರು, ಶ್ರೀಮಂತರಾಗಿದ್ದರೂ ಆಳಾಗಿ ದುಡೀಬೇಕಾಗಿತ್ತು. ಶ್ರೀಮಂತಿಕೆಯೇ ಭಾರವಾಗಿತ್ತು. ಬೆಳಿಗ್ಗೆ ಐದಕ್ಕೆ ಏಳ್ತಾಯಿದ್ವಿ. ಸ್ನಾನಾ ಮಾಡಿ ಮಡಿನೀರು ತರಬೇಕು. ಜಂಗಮರನ್ನ ಕರೆಸಬೇಕು, ಪೂಜೆ ಮಾಡಿಸಬೇಕು, ಪೂಜಾ ಸಾಮಗ್ರಿಗಳನ್ನ ಮನೆಯವರೇ ತೊಳೀಬೇಕು. ಪೂಜೆ ಮುಗಿಸಿದ ಮೇಲೆ ಅವ್ರಿಗೆ ಮಡಿಯೊಳಗ ಊಟಕ್ಕ ಹಾಕಬೇಕು. ಎರಡನೇ ಜವಾಬ್ದಾರಿ ಅಂತ ಹೇಳಿದರೆ, ಆಳುಕಾಳು ಗಳಿಗೆ ಬುತ್ತಿ ಕಟ್ಟಿಕೊಡೋದು. ಹತ್ತುಆಳುಗಳಿದ್ದರೆ ಒಬ್ಬಬ್ಬಂವ ಹತ್ತತ್ತ ರೊಟ್ಟಿ ತಿಂತಿದ್ದ. ಒಳ್ಳೇ ಕೆಲಸಾನು ಮಾಡ್ತಿದ್ರು. ಈ ಆಳುಗಳನ್ನ ಎಂಟು ಗಂಟೆಯೊಳಗೆ ಕಳಿಸಿ ಕೊಡಬೇಕಾದ್ರೆ ಎಲ್ಲಾ ಸೊಸೆಯಂದಿರು ದುಡೀತಿದ್ರು. ಆಮೇಲೆ ಸ್ನಾನಕ್ಕಾಗಿ ಒಬ್ಬೊಬ್ಬರೇ ಗಂಡಸರು ಬರ್ತಾ ಇದ್ದರು. ಒಬ್ಬಬ್ಬರು ಸ್ನಾನಾ ಮಾಡಿ ಈಚೆಗೆ ಬಂದ ವಾರ್ತೆ ಕೇಳಿ ಅವ್ರಿಗೆ ಬಿಸಿ ಅಡುಗೆ ರಡಿ ಮಾಡಬೇಕು. ಇಷ್ಟೆಲ್ಲಾ ಮಾಡಿದ್ರೆ ಕೂಡಾನೂ ನನ್ನ ಗಂಡ ಊಟಕ್ಕ ಬಂದಾನಂದ್ರೆ ನಾ ಹೋಗಿ ಊಟಕ್ಕ ನೀಡಂಗಿಲ್ಲ. ಅತ್ತೇನೋ ಅಜ್ಜೀನೋ ನೀಡತಿದ್ರು.'

ಸಂ: ಎಲ್ಲ ಫ್ಯೂಡಲ್ ಫ್ಯಾಮಿಲಿಗಳಲ್ಲೂ ಹೆಣ್ಣು ಬಲಿಪಶು ಆಗ್ತರ್ತಾಳೆ. ಇದೊಂದು ತರಹ ವೈಭವದೊಳಗಿನ ದಾಸ್ಯ. ನಿಮ್ಮ ಮನೆತನಕ್ಕೆ ವ್ಯಾಪಾರಾನೂ ಇತ್ತು ಅಂದ್ರಿ. ಏನು ವ್ಯಾಪಾರ ಅದು?

ಶೆ: ನಮ್ಮದು ಮೂಲತಃ ಜುವೆಲರಿ ವ್ಯಾಪಾರ. ಸಾಕಷ್ಟು ಕಾಲ ಮುಂಬೈನಲ್ಲೇ ಕಳೆದವರು ಅವ್ರು. ನಮ್ಮ ತಂದೆಯವರು ಹತ್ತಿ ವ್ಯಾಪಾರ ಮಾಡ್ತಿದ್ರು. ನಮ್ಮ ಅಜ್ಜಿ ಬಂದಿರೋದು ಹುಬ್ಬಳ್ಳಿಯ ದೊಡ್ಡ ವ್ಯಾಪಾರಸ್ಥರ ಮನೆತನದಿಂದ ಬಳ್ಳಾರಿ ಜಿಲ್ಲೆಗೆ ಶೇಂಗಾ ಬೆಳೆತಂದಿದ್ದು ನಮ್ಮ ತಂದೆಯವರೇ ಅಂತೆ - ಗುಜರಾತ್ ನಿಂದ.

ಸಂ: ಹಂಪಸಾಗರ ಮುಳುಗಡೆಯಾದ ಅನುಭವ ಹೇಳಿ.

ಶೆ: ಮುಳುಗಡೆ ಆದಾಗ ನಾನು ಮೈಸೂರಲ್ಲಿ ಓದ್ತಾ ಇದ್ದೆ. ಮುಳುಗಡೆ ಆಗುತ್ತಂತ ಗೊತ್ತಾದಾಗ ಆ ದೊಡ್ಡ ಮನೆ ಏನು ಮಾಡಬೇಕು ಯಾರು ಜವಾಬ್ದಾರಿ ವಹಿಸಬೇಕು ಅಂತ ಒಂದು ದೊಡ್ಡ ಸಮಸ್ಯೆ ಆಗಿತ್ತು. ನಾವು ಎಲ್ಲಿ ಮನೆ ಕಟ್ಟಬೇಕು, ಯಾವ ಭೂಮಿ ಉಳಿಯಬಹುದು, ಹೋಗಬಹುದು ಎನ್ನುವುದು ಹತ್ತು ವರ್ಷದ ಘರ್ಷಣೆ ಊರಿನಲ್ಲಿ. ಮುಳುಗಡೆದು ಕೇಳತಿದ್ವಿ, ಆದ್ರೆ ಅಲ್ಲಿ ಹೋಗಿ ನೋಡಬೇಕೆಂಬ ವ್ಯವಧಾನ ವಾಗಲೀ ಇರಲಿಲ್ಲ. ಒಂದು ಥರಾ ದುಃಖ ಆಗಿತ್ತು. ನಾನಂತೂ ಕಣ್ಣಾರೆ ನೋಡಿಲ್ಲ. ಹೇಳೋ ಪದ್ಧತಿ ನಂಬೊದಾದ್ರೆ ನಮ್ಮ, ಒಂದೇ ಒಂದು ಮನೇಲಿ ಹೊಸ ಊರು ಕಟ್ಟುವಷ್ಟು ಕಲ್ಲು ಕಟ್ಟಿಗೆ ತೊಲೆಗಳಿದ್ದವು. ಇದನ್ನೆಲ್ಲ ತುಗೊಂಡು ಜನ್ರು ಹೋಗ್ತಿರ ಬೇಕಾದ್ರೆ, ಅವರನ್ನ ನಿಲ್ಲಿಸಿ ಯಾತಕ್ಕ ತಗೊಂಡು ಹೋಗ್ತೀರಿ ಅಂತ ಕೇಳೋರು ಇರಲಿಲ್ಲ. ಇಪ್ಪತ್ತು ವರ್ಷದ ನಂತರ, ನನ್ನ ಮಕ್ಕಳು ಒಂದು ಸಾರೆ ವಿದೇಶದಿಂದ ಬಂದಾಗ, ಅವ್ರನ್ನ ಕರ್ಕೊಂಡು ನಮ್ಮ ಮನೆ ಎತ್ತರದಲ್ಲಿ ಇರೋದ್ರಿಂದ ಭಗ್ನಾವಶೇಷ ಗಳು ಸಿಗಬಹುದು ಅಂತ ಹಳ್ಳಿಗೆ ಹೋದೆ. ಏನು ಯಾವ ದಿಕ್ಕೂ ಗೊತ್ತಾಗದ ಹಾಗೆ ಕೆಸರು ನಿಂತಿತ್ತು.

ಸಂ: ಹಂಪಸಾಗರ ವಿಜಯನಗರದ ಪಂಪಾಸಾಗರ ಅಲ್ವಾ?

ಶೆ: ಹೌದು. ಪಂಪಾಸಾಗರಾನೇ ಹಂಪಸಾಗರ. ಹಂಪಸಾಗರ ಅಂತ ಯಾಕ ಬಂತು ಅಂತ ಗೊತ್ತಿಲ್ಲ. ಎರಡು ಚಾಲುಕ್ಯ ಶಾಸನಗಳು ಮಾತ್ರ ಅಲ್ಲಿ ಇದ್ದದ್ದು ನನಗೆ ನೆನಪಿದೆ. ಅದರ ಬಗ್ಗೆ ಹೆಚ್ಚು ತಿಳೀತಾ ಇಲ್ಲ.

ಸಂ: ನೀವು ಶಿಕ್ಷಣ ಕಲಿತ ವಾತಾವರಣ ಹೇಗಿತ್ತು?

ಶೆ: ಹಳ್ಳಿಯಲ್ಲಿರತಕ್ಕಂತಹ ಗುರುಮಠ ಶಾಲೆ. ಖಾಯಂ ಆದಂತಹ ಇಬ್ಬರು-ಮೂವರು ಮಾಸ್ತರು ಇದ್ರಲ್ಲಿ. ಪಾಂಡಿತ್ಯ ಇದ್ದವರೇನಲ್ಲ. ಆಟದ ಬಗೆಗೆ ಆಸಕ್ತಿ ಮೂಡಿಸೋದು. ಪಾಠವನ್ನು ಕ್ರಮವಾಗಿ ಮಾಡೋದು, ನಾಟಕಗಳನ್ನ ಆಡಸೋದು ಮಾಡ್ತಿದ್ರು. ನಾವು ಹೊಸಪೇಟೆ ಮುನ್ಸಿಪಲ್ ಹೈಸ್ಕೂಲಿಗೆ ಬಂದಾಗ ಮರಿಯಪ್ಪಭಟ್ಟರು ನಮಗ ಹೆಡ್ ಮಾಸ್ತರರು. ಎಂ ಮರಿಯಪ್ಪ ಭಟ್ಟರಿದ್ದರಲ್ಲ ಮದ್ರಾಸ್ ಯುನಿವರ್ಸಿಟಿಯಲ್ಲಿ ಅವರ

ಸೋದರರು. ಅವರ ಶಿಸ್ತು, ಸಂಯಮ, ಠೀವಿ, ಪಾಂಡಿತ್ಯ ಪ್ರಭಾವ ಆಯ್ತು. ನಾವು ಮದ್ರಾಸ್ ಪ್ರಾಂತದೊಳಗ ಇದ್ವಿ. ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ಆಗ ಇಂಗ್ಲಿಶ್‌ನಲ್ಲಿ ಇರ್ತಿತ್ತು. ಇಂಗ್ಲಿಶ್ ನಲ್ಲಿ ಡಿಬೇಟ್ ಮಾಡೋದು, ಪಾರ್ಲಿಮೆಂಟ್ ಮಾಡೋದು ಇವೆಲ್ಲ ಆ ಮಟ್ಟದೊಳಗ ಇತ್ತು. ಆನಂತರ ವೀರಶೈವ ಕಾಲೇಜಲ್ಲಿ ನಾಗೇಶಶಾಸ್ತ್ರಿಗಳು ಕನ್ನಡ ಪಾಠ ಹೇಳ್ತಿದ್ರು. ಅವ್ರು ಪಂಡಿತರು. ಇಂಟರ್ ಮೀಡಿಯೇಟ್ ಮುಗಿದ ಮೇಲೆ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿಗೆ ಹೋಗಬೇಕು ಅನ್ನೋ ಕನಸು ಕಾಣ್ತಾಯಿದ್ದೆ. ಭಾಷಾವಾರು ಪ್ರಾಂತ್ಯದಲ್ಲಿ ಬಳ್ಳಾರಿ ಮೈಸೂರಿಗೆ ಸೇರಿದ ಮೇಲೆ ಮೈಸೂರಿನ ಸಂಪರ್ಕ ನಮಗ ಬಂತು. ನಾನು ಮೈಸೂರಿನ ಮಹಾರಾಜ ಕಾಲೇಜಕ್ಕ ಹೋದೆ.

ಸಂ: ಇತಿಹಾಸವನ್ನು ಆರಿಸಿಕೊಳ್ಳಲು ಯಾರು ಪ್ರೇರಣೆ?

ಶೆ: ಆಗ ಪುಟ್ಟಪ್ಪನವರು ಪ್ರಿನ್ಸಿಪಾಲರಾಗಿದ್ದರು. ಒಮ್ಮೆ ಏನಾಯ್ತು, ಇತಿಹಾಸದ ಪ್ರೊಫೆಸರ್ ಎಂ ವಿ ಕೃಷ್ಣರಾಯರು ಆಕಸ್ಮಿಕವಾಗಿ ಸಿಕ್ಕು ಅಲ್ಲಿ ಅವ್ರ ಪರಿಚಯವಾಯ್ತು. ಕೃಷ್ಣರಾಯರು ಹೇಳಿದ್ರು 'ನೀವು ಯಾವ ಶಾಖೆಯಲ್ಲಿ ಓದ್ತಾ ಇದ್ದೀರಿ?' 'ಸರ್, ನಾನು ಆನರ್ಸ್ ವಿದ್ಯಾರ್ಥಿ ಆಗಿದ್ದೀನಿ' ಅಂತಂದೆ. 'ಅಲ್ಲಪಾ ಇತಿಹಾಸಕ್ಕಾದ್ರೂ ಬಾ. ಇಂಗ್ಲಿಶ್‌ಗೆ ಬಹಳ ಜನ ಹೋಗ್ತಾರೆ' ಅಂದ್ರು. ಅವ್ರು ಕರೆದಿದ್ರೋ ಏನೋ ಮರುದಿವ್ಸ ಅವ್ರ ಕ್ಲಾಸಿಗೆ ಹೋಗಿ ಕೂತ್ಕೊಂಡೆ. ಒಂದು ತರಹ ಅಟ್ರ್ಯಾಕ್ಷನ್ ಆಯ್ತು. ಲಿಟರೇಚರ್ ಆನರ್ಸ್ ಬಿಟ್ಟುಬಿಟ್ಟು ಇಲ್ಲಿಗೆ ಬಂದೆ. ಆಮೇಲೆ ಶ್ರೀಕಂಠಶಾಸ್ತ್ರಿಗಳ ಅಚ್ಚುಮೆಚ್ಚಿನ ವಿದ್ಯಾರ್ಥಿಗಳಲ್ಲಿ ಒಬ್ಬನಾದೆ. ಆ ದೊಡ್ಡ ಮನುಷ್ಯನನ್ನ ನಾನು ಇವತ್ತಿಗೂ ನೆನಿಸಿಗೋತೀನಿ.

ಸಂ: ಕೇಂಬ್ರಿಜ್‌ಗೆ ಹೋದ ಹಿನ್ನೆಲೆ ಏನು?

ಶೆ: ನಾನು ಐಎಎಸ್ ಮಾಡಬೇಕಂತ ಒತ್ತಡ ಮನೇಲಿ ಬಹಳ ಇತ್ತು. ಮಹಾರಾಜ ಕಾಲೇಜಿನ ಕೆಲಸ ಸಿಕ್ಕಿರಲಿಲ್ಲ ಅಂದ್ರೆ ಆ ಕೆಲಸ ಮಾಡ್ತಿದ್ದೆನೋ ಏನೋ. ಈ ಅಧ್ಯಾಪಕ ಕೆಲ್ಸ ಸಿಕ್ಕಿ ಪಾಪ್ಯುಲರ್ ಟೀಚರ್ ಆಗಿದ್ದಕ್ಕೆ ತೃಪ್ತಿ ಇತ್ತು. ಆದರೆ ಕಾಮನ್ ವೆಲ್ತ್ ಫೆಲೋಶಿಪ್‌ಗೆ ಟೆಂಪರರಿ ಲೆಕ್ಚರರ್ ಆಗಿದ್ದಕ್ಕ ಸೆಲೆಕ್ಟ್ ಆಗಲಿಲ್ಲ ಅಂತ ಬಹಳ ದುಃಖ ಇತ್ತು. ಒಂದ್ಸಲ ವೈಸ್‌ಛಾನ್ಸಲರ್ ನಿಕ್ಕಂ ಅವ್ರು ಪಾವಟೆ ಅವ್ರನ್ನ ಪರಿಚಯ ಮಾಡಿಕೊಟ್ರು. ಪಾವಟೆ ಅವ್ರು ಶೆಟ್ಟರ್ ಅಂದ ತಕ್ಷಣವೇ, 'ನೀ ಉತ್ತರ ಕರ್ನಾಟಕದಂವ್ನ ಅಂತ ಕಾಣಸ್ತದ. ಇಲ್ಲೇನು ಮಾಡ್ತೀ? ನಮ್ಮ ವಿಶ್ವವಿದ್ಯಾಲಯಕ್ಕ ಬಾ' ಅಂದ್ರು. ಸಾಲತ್ತೊರೆ ಅವ್ರು ರಿಟೈರ್ಡ್ ಆಗಿದ್ರು. ಆ ಜಾಗಕ್ಕ ನಾನು ಹೋದೆ. ಮತ್ತೊಮ್ಮೆ ಕಾಮನ್ ವೆಲ್ತ್ ಫೆಲೋಶಿಪ್‌ಗೆ ಹಾಕಿದೆ. ಫೆಲೋಶಿಪ್ ಸಿಕ್ತು. ಅಷ್ಟರೊಳಗ ನನಗ ಮದುವೆ ಆಗಿತ್ತು. ಮಗೂನೂ ಇತ್ತು. ೬೭ರಲ್ಲಿ ಎಲ್ಲ ಕೂಡಿ ಇಂಗ್ಲೆಂಡಿಗೆ ಹೋದ್ವಿ.

ಸಂ: ನಿಮ್ಮ ಸಂಶೋಧನೆ ವಿಷಯ ಏನು?

ಶೆ: ಶ್ರವಣಬೆಳಗೊಳದ ಶಾಸನಗಳು ಮೂಲತಃ ನನಗ ಆಕರ್ಷಿಸಿದ್ದು ಹೊಯ್ಸಳರ ಕಲೆ.

ಹೊಯ್ಸಳರ ದೇವಾಲಯಗಳನ್ನ ೧೯೬೩ರಿಂದಲೇನೇ ಸರ್ವೇಕ್ಷಣ ಮಾಡಲಿಕ್ಕೆ ಪ್ರಾರಂಭ ಮಾಡಿದ್ದೆ. ಅಲ್ಲಿ ಹೊಸ ೩೦ ಶಾಸನಗಳು ದೊರತವು. ಈ ಹೊಯ್ಸಳರ ಬಗೆಗೆ ದೀರ್ಘವಾದ ಸಂಶೋಧನೆ ಮಾಡುವ ಬದಲಿಗೆ, ಈ ಶ್ರವಣಬೆಳಗೊಳದಲ್ಲಿದ್ದಂತಹ ಮಟಿರಿಯಲ್ ಮೇಲೆ ಪ್ರಬಂಧ ಬರೆದರೆ ಪಿಎಚ್‌ಡಿ ಸಿಗಬಹುದು ಅಂತ ಅನ್ನಿಸಿಬಿಡ್ತು. ಆ ಮಟಿರಿಯಲ್ ನ್ನು ಇಟ್ಟುಕೊಂಡು ಪಿಎಚ್‌ಡಿ ತಗೊಂಡೆ. ಆದ್ರ ಭವ್ಯವಾದ ಹೊಯ್ಸಳರ ಸಂಪತ್ತು ಏನಿತ್ತು, ಅದನ್ನ ಕೆಂಬ್ರಿಡ್ಜ್ ವಿಶ್ವವಿದ್ಯಾಲಯಕ್ಕ ತಗೊಂಡು ಹೋಗಿ ಕೆಲಸಮಾಡಿದೆ. ಮೂರು ವರ್ಷ ಅಲ್ಲಿನ ವಿಧಿವಿಧಾನಗಳನ್ನ, ಸಂಶೋಧನೆಯ ಬಗೆಯನ್ನ, ಭಾಷೆಯನ್ನು ಬಳಸತಕ್ಕಂತಹ ವಿಧವನ್ನ, ಅವರ ಸೌಜನ್ಯವನ್ನ ನಾನು ಪಡಕೊಂಡೆ.

ಸಂ: ಸರ್, ಕರ್ನಾಟಕದ ಕೀರ್ತಿಯನ್ನು ವಿದೇಶಗಳಲ್ಲಿ ಹರಡಿರುವ ಪ್ರಾಧ್ಯಾಪಕರಲ್ಲಿ ಒಬ್ಬರೆಂದು ನಿಮ್ಮನ್ನ ಗುರುತಿಸಲಾಗುತ್ತೆ. ನೀವು ಮಾಡಿದ ಮುಖ್ಯ ಕೆಲಸ ಯಾವುದು ಅಂದ್ರೆ ಏನು ಹೇಳ್ತೀರಿ?

ಶೆ: ನಾನು ಕರ್ನಾಟಕ ವಿಶ್ವವಿದ್ಯಾಲಯ ಸೇರಿದಾಗ, ಅಂದ್ರೆ ೧೯೬೧ ರಲ್ಲಿ, ವಿಭಾಗದಲ್ಲಿ ವಿಚಿತ್ರ ಪರಿಸ್ಥಿತಿ ಇತ್ತು. ಪಾವಟೆ ಅವರು ಸಾಲತ್ತೊರೆ, ಪಿ ಬಿ ದೇಸಾಯಿ ಇವರನ್ನೆಲ್ಲ ಕರಕೊಂಡು ಬಂದಿದ್ರು. ಸಾಲತ್ತೊರೆ ಪ್ರಸಿದ್ಧ ಇತಿಹಾಸಕಾರರು. ಪಾಂಡುರಂಗ ದೇಸಾಯಿ ಅವರು ಶಾಸನತಜ್ಞರು. ಇವರು ಆಕರಗಳನ್ನ ಸಿದ್ಧಮಾಡಬೇಕು, ಅವ್ರು ಇತಿಹಾಸ ಬರೀಬೇಕು ಅಂತ ಪಾವಟೆ ಅವ್ರ ಕನಸು. ಆದ್ರ ವೈಯಕ್ತಿಕ ಕಾರಣಕ್ಕ ದೇಸಾಯಿ ಅವರಿಗೆ ಸಾಲತ್ತೊರೆ ಅವರಿಗೆ ಸರಿಹೋಗಲಿಲ್ಲ. ನಾನು ಸೇರಿದಾಗ ಸಾಲತ್ತೊರೆ ನಿವೃತ್ತ ರಾಗಿದ್ದರು. ಉಳಿದಿದ್ದೋರು ಅಂದ್ರೆ ಜಿ ಎಸ್ ದೀಕ್ಷಿತ್ ಅವರು. ಕನ್ನಡ ರೀಸರ್ಚ್ ಇನ್‌ಸ್ಟಿಟ್ಯೂಟ್‌ಕ ಪಿ ಬಿ ದೇಸಾಯಿ ಇದ್ರು. ಇವ್ರಿಬ್ಬರಿಗೂನೂ ಹೆಚ್ಚು ಸಂಪರ್ಕ ಇರಲಿಲ್ಲ. ನಾನೇ ಒಂದು ಕೊಂಡಿಯಾಗಬೇಕಾಯ್ತು. ಜಿ ಎಸ್ ದೀಕ್ಷಿತ್ ಸೌಜನ್ಯದ ವ್ಯಕ್ತಿ. ಅವ್ರು ಎಂದೂ ತಮ್ಮ ಪಾಂಡಿತ್ಯವನ್ನ ಪ್ರದರ್ಶನ ಮಾಡಿಕೊಂಡಂತಹವರಲ್ಲ. ಪಿ ಬಿ ದೇಸಾಯಿ ಅವ್ರು ಒಳ್ಳೇ ಶಾಸನತಜ್ಞ ಅಂತ ಕೇಳಿದ್ದೆ. ಆದ್ರೆ ನನಗೂ ಬಿಚ್ಚು ಮನಸ್ಸಿನಿಂದ ಅವ್ರ ಜೊತೆಗೆ ಬೆಳೀಲಿಕ್ಕೆ ಸಾಧ್ಯವಾಗಲಿಲ್ಲ ಅಂತ ಅನಸ್ತದ.

ಸಂ: ವಿಭಾಗದ ಮೂಲಕ ನೀವು ಮಾಡಿದ ಕೆಲಸ?

ಶೆ: ಹೇಳ್ತೀನಿ. ಕೇಂಬ್ರಿಜಿನಿಂದ ಬಂದ ತಕ್ಷಣ - ನನಗ ಆಗ ಮೂವತ್ತೊಂದು ವರ್ಷ ಆಗಿರಬಹುದು- ಇತಿಹಾಸ ವಿಭಾಗದ ಪ್ರಾಧ್ಯಾಪಕನಾಗುವ ಪುಣ್ಯ ಬಂತು. ದೀಕ್ಷಿತ್ ಅವ್ರು ರಿಟಾಯರ್ಡ್ ಆಗಿದ್ರು. ಆಗ ವಿಭಾಗದೊಳಗ ಒಂದು ಟೈಪ್ ರೈಟರ್ ಒಂದು ಕುರ್ಚಿ ಟೇಬಲ್ ಬಿಟ್ರ ಏನೂ ಇರಲಿಲ್ಲ. ಅದನ್ನ ಹೊಸದಾಗಿ ಕಟ್ಟಬೇಕೆನ್ನುವಂತಹ ಹೊಣೆ ನನಗ ಬಂತು. ಅದನ್ನು ಸ್ವೀಕಾರ ಮಾಡಿದೆ. ಕೂಡ್ಲೆ ನಾನು ಒಂದು ದೊಡ್ಡ ಕಾರ್ಯ ಕೈಗೆತ್ತಿಕೊಂಡೆ. ಅದು ಏನು ಅಂತ ಹೇಳಿದ್ರೆ, ಮೈಸೂರು ಪ್ರಾಕ್ತನ ವರದಿಗಳು

೧೮೮೫ ರಿಂದ ೧೯೫೫ರವರೆಗೆ ಪ್ರಕಟ ಆಗಿದ್ವು. ಅದನ್ನ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಉಪಯೋಗವಾಗುವ ಹಾಗೆ ಮಾಡಬೇಕು ಅಂತ, ವಿದ್ಯಾರ್ಥಿಗಳ ಸಣ್ಣದೊಂದು ಟೀಮನ್ನ ಕಟ್ಟಿದೆ. ಮೂರು ಸಂಪುಟಗಳಲ್ಲಿ ಮೈಸೂರು ಆರ್ಕ್ಯಾಲಜಿ ಸಂಪುಟಗಳನ್ನ ತೆಗೆದುಕೊಂಡು ಬಂದೆ. ೩೦ ವರ್ಷದ ಸಂಪುಟಗಳನ್ನ ತರಬೇಕು ಅಂತ ಇಚ್ಛೆ ಇತ್ತು. ಆದ್ರೆ ಪ್ರಾಕ್ತನ ಇಲಾಖೆಯಿಂದ ಕೆಲವು ತಕರಾರುಗಳು ಬಂದ್ವು. ನನಗೂನೂ ಬೇಜಾರು ಆಯ್ತು. ಅಲ್ಲೇ ಕೈಬಿಟ್ಟೆ. ಇದರ ಉದ್ದೇಶ ರೀಪ್ರಿಂಟ್ ಅಲ್ಲ. ಹಿಂದೆ ಎತ್ತಿದ ಪ್ರತಿಯೊಂದು ವಿಷಯದ ಬಗೆಗೆ ೫೦ ವರ್ಷಗಳಲ್ಲಿ ಏನು ಸಂಶೋಧನೆ ಆಗಿದೆ ಅನ್ನೋದನ್ನ ಅಡಿಟಿಪ್ಪಣಿಯೊಳಗ ಕೊಡುವುದು. ಅದು ನನಗ ಬಹಳ ತೃಪ್ತಿ ತಂದುಕೊಟ್ಟು.

ಸಂ: ನೀವು ಪುರಾತತ್ವ ವರದಿಗಳ ಮೇಲೆ ಕೆಲಸ ಮಾಡಿದಿರಿ. ಆರ್ಟ್‌ಹಿಸ್ಟರಿ ಮೇಲೆ ಕೆಲಸ ಮಾಡಿದಿರಿ. ಜೈನರ ಧಾರ್ಮಿಕ ಮರಣಗಳ ಮೇಲೆ ಕೆಲಸ ಮಾಡಿದಿರಿ. ನಿಮ್ಮನ್ನು ಯಾವ ಕ್ಷೇತ್ರದಲ್ಲಿ ವಿದ್ವಾಂಸ ಅಂತ ಗುರುತಿಸಿಕೊಳ್ಳೋದಕ್ಕೆ ಬಯಸ್ತೀರಿ?

ಶೆ: ನಾನು ಯಾವುದರಲ್ಲೂ ಪಂಡಿತನಾಗಲಿಲ್ಲ ಅಂತ ನನಗನ್ನಸ್ತದ. ಆದರ ನನಗ ಬಹಳ ಸಂತೃಪ್ತಿ ತಂದದ್ದು ಅಂತ ಹೇಳಿದ್ರ, ಹೈಡಲ್ ಬರ್ಗ್ ವಿಶ್ವವಿದ್ಯಾಲಯದ ಪ್ರತಿಭಾವಂತ ಜರ್ಮನ್ ಇಂಡಾಲಾಜಿಸ್ಟ್ ಆಗಿರುವಂತಹ ಗುಂತರ್ ಸೊಂಥೈಮರ್ ಜತೆ ಕೆಲಸ ಮಾಡಿದ್ದು, ಮಹಾರಾಷ್ಟ್ರದೊಳಗ. ಆಕಸ್ಮಿಕವಾಗಿ ಧಾರವಾಡಕ್ಕ ಬಂದಾಗ ಅವರ ಪರಿಚಯವಾಯ್ತು. ಅವರು ಮಹಾರಾಷ್ಟ್ರದ ಹೀರೋಸ್ಟೋನ್ಸ್ ಬಗ್ಗೆ, ಬೀರಪ್ಪನ ಬಗೆಗೆ ಸಂಶೋಧನೆ ಮಾಡಿದ್ರು. ಕರ್ನಾಟಕದಲ್ಲಿ ನಾನೂ ವೀರಗಲ್ಲು ಬಗ್ಗೆ ಕೆಲಸ ಮಾಡಿದ್ದೆ. ಇಬ್ರೂ ಕೂಡಿ ಧಾರವಾಡದೊಳಗ ವೀರಗಲ್ಲುಗಳ ಮೇಲೆ ಒಂದು ಅಂತಾರಾಷ್ಟ್ರೀಯ ಸೆಮಿನಾರ್ ಮಾಡಿದಿವಿ.

ಸಂ: ಸಾವಿನ ಮೇಲೆ ನಿಮ್ಮ ಪುಸ್ತಕಗಳು ಪ್ರಸಿದ್ಧವಾಗಿವೆ. ಈ ವಿಷಯ ನಿಮಗೆ ಯಾಕೆ ಕಾಡಿತು?

ಶೆ: ನಾನು ಸಂದರ್ಶಕ ಪ್ರಾಧ್ಯಾಪಕನಾಗಿ ಹಾರವರ್ಡ್ ವಿಶ್ವವಿದ್ಯಾಲಯಕ್ಕೆ ಹೋಗುವಂತಹ ಅವಕಾಶ ೧೯೮೮ರಲ್ಲಿ ಬಂತು. ಅಲ್ಲಿ ನಾಲ್ಕು ಉಪನ್ಯಾಸ ಕೊಟ್ಟೆ. ಕೆಂಬ್ರಿಡ್ಜ್, ಆಕ್ಸಫರ್ಡ್, ಹಾರವರ್ಡ್‌ದಂತಹವುಗಳಲ್ಲಿ ಉಪನ್ಯಾಸ ಮಾಡಿದ್ರ ಅಲ್ಲೇನು ತುಂಬಿ ತುಳುಕುವಂತಹ ಜನ ಇರುವುದಿಲ್ಲ. ಕೆಲವೇ ಪ್ರಖ್ಯಾತ ಆಂತ್ರೋಪಲಾಜಿಸ್ಟರು ಆ ಸೆಮಿನಾರ್‌ನಲ್ಲಿ ಇದ್ದರು. ಸಾವಿನ ಬಗೆಗೆ ಬಹಳಷ್ಟು ದೀರ್ಘವಾದಂತಹ ಚರ್ಚೆ ಆಯ್ತು. ಆದಮೇಲೆ ನಾವು ಮಾಡಬೇಕಾದಂತಹ ಕೆಲಸ ಬಹಳ ಇದೆ ಅಂತ ಅನ್ನಿಸ್ತು. ಭಾರತೀಯರು ಬರೆದಂತಹ ಪುಸ್ತಕಗಳನ್ನ ಹುಡಕಲಿಕ್ಕೆ ಪ್ರಾರಂಭ ಮಾಡಿದೆ. ನನಗ ಆಶ್ಚರ್ಯವಾಯ್ತು. ಇಷ್ಟೊಂದು ಭವ್ಯವಾದಂತಹ ಪರಂಪರೆ ಇಟ್ಟುಕೊಂಡಿದ್ದರುನೂ ಒಂದೂ ಗ್ರಂಥ ಈ ಬಗ್ಗೆ ಆಗಿಲ್ಲವಲ್ಲ ಅಂತ. ದಾರ್ಶನಿಕರೂ ಬರೀಲಿಲ್ಲ, ಇತಿಹಾಸಕಾರರೂ ಬರೀಲಿಲ್ಲ. ಅಮೆರಿಕದಿಂದ ಬಂದ ನಂತರ ಈ ಮರಣ ಪರಿಕಲ್ಪನೆ ನನ್ನನ್ನ

ಹುಚ್ಚನನ್ನಾಗಿ ಮಾಡಿತು. ಮುಂದಿನ ಹತ್ತುವರ್ಷ ನಾನು ಈ ಒಂದೇ ಒಂದು ವಿಷಯದ ಬಗ್ಗೆ ವಿಚಾರ ಮಾಡ್ತಾ ಇದ್ದೆ. ನನಗ ಹಾಸ್ಯ ಮಾಡ್ತಾ ಇದ್ದರು- ಮರಣದ ಓಂದೆ ಬಿದ್ದಂತಹವನು ಅಂತ. ಆಮೇಲೆ ಅದರ ಮೊದಲನೆ ಸಂಪುಟವನ್ನು ಬಿಡುಗಡೆ ಮಾಡಿ ದಂತಹ ನಿಜಲಿಂಗಪ್ಪನವರು, "ಏನಯ್ಯ, ನಿನಗೇನಾಗಿದೆ? ಇಷ್ಟು ಚಿಕ್ಕವಯಸ್ಸಿನಲ್ಲಿ ಮರಣದ ಬಗೆಗೆ ಬರೆದೀದಿ. ಬದುಕಿನ ಬಗೆಗೆ ಬರಿ" ಅಂತ ಹೇಳಿದ್ರು. ಮೊದಲು 'ಇನ್‌ವೈಟಿಂಗ್ ಡೆತ್' ಬರೆದೆ. ಬರೆದ ನಂತರ ನನಗ ತೃಪ್ತಿ ಆಯ್ತು. ಆದ್ರ ಅಚ್ಚಾಗಿ ಬಂದ ಕೂಡ್ಲೇನೇ ಅತೃಪ್ತಿ ಆಯ್ತು. ಮರಣದ ಪರಿಕಲ್ಪನೆ ಇತಿಹಾಸದ ದೃಷ್ಟಿಯಿಂದ ನೋಡಿದರೆ ಅದು ಸಾಕಷ್ಟು ಪರಿಣಾಮಕಾರಿಯಾಗಿದೆ. ಅದಕ್ಕೋಸ್ಕರ ನಾನು ಕೂಡ್ಲೇ 'ಪರ್ಸೀವಿಂಗ್ ಡೆತ್' ಎರಡನೇ ಸಂಪುಟವನ್ನ ಬರೆದೆ. ಈ 'ಪರ್ಸೀವಿಂಗ್ ಡೆತ್' ಸಾಹಿತ್ಯ, ಶಾಸನ, ಕಲೆ, ಅನುಭವಗಳು, ಓರಲ್ ಟ್ರೆಡಿಶನ್ಸ್ ಇವುಗಳೆಲ್ಲವನ್ನೂ ತೆಕ್ಕೆಗೆ ಹಾಕಿಕೊಂಡು ಮಾಡಬೇಕಾದಾಗ, ಸುಮಾರು ಐದು ವರ್ಷವೇ ಬೇಕಾಯ್ತು.

ಸಂ: ಈ ಅಂತರ್‌ಶಿಸ್ತೀಯ ಅಧ್ಯಯನದ ಅನುಭವ ಏನು?

ಶೆ: ಬಹಳಷ್ಟು. ಅದನ್ನ ಪ್ರಕಟಣೆ ಮಾಡಿದಾಗ ಇಂಡಿಯನ್ ಹಿಸ್ಟರಿ ಕಾಂಗ್ರೆಸ್‌ನವರು ನನಗ ನ್ಯಾಶನಲ್ ಅವಾರ್ಡ್ ಕೊಟ್ಟರು. 'ಈ ದಶಕದಲ್ಲಿ ಬರೆದಂತಹ ಅತ್ಯುತ್ತಮವಾದ ಗ್ರಂಥ. ಅಂತಾರಾಷ್ಟ್ರೀಯ ಮಟ್ಟದಲ್ಲಿರತಕ್ಕಂತಹ ಗ್ರಂಥ ಮತ್ತು ಅಂತರ್‌ಶಿಸ್ತೀಯ ಸೋರ್ಸಸ್‌ಗಳನ್ನ ಪಳಗಿಸಿ ಸಮರ್ಥವಾಗಿ ಉಪಯೋಗ ಮಾಡಿದಂತಹದು' ಅಂತ ಹೇಳಿ ಪ್ರಶಸ್ತಿ ಪತ್ರದಲ್ಲಿ ಅವರು ಹೇಳಿದ್ದಾರೆ.

ಸಂ: ನಾವು ನಮ್ಮನ್ನಾಳಿದವರ ದೇಶಕ್ಕೆ ಹೋಗಿ ಅಧ್ಯಯನ ಮಾಡುವಾಗ, ಸೈದ್ಧಾಂತಿಕವಾಗಿ ಸಾಮಾಜಿಕವಾಗಿ ಯಾವ ತರಹದ ಸವಾಲುಗಳು ಎದುರಾಗ್ತವೆ?

ಶೆ: ನಮ್ಮ ಕಾಲದೊಳಗ, ಅಂದ್ರೆ ೧೯೬೦ರ ದಶಕದೊಳಗ, ಈ ರೇಸಿಯಲ್ ಸಮಸ್ಯೆ ಅಷ್ಟೊಂದು ಪ್ರಖರವಾಗಿ ಇರಲಿಲ್ಲ. ಕೆಂಬ್ರಿಡ್ಜ್ ಆಕ್ಸ್‌ಫರ್ಡ್‌ನಲ್ಲಿದ್ದಂತಹ ಪರಿಸರ ಬೇರೆ ಆಗಿತ್ತು. ನಾನಿದ್ದ ಚರ್ಚಿಲ್ ಕಾಲೇಜಿನ ಪರಂಪರೆ ಪ್ರಕಾರ, ಅಲ್ಲಿ ಪ್ರತಿಯೊಬ್ಬರ ಪಕ್ಕದ ಮನೆಯವನೂ ಬೇರೆ ದೇಶದವನೇ ಆಗಿರ್ತಾನೆ. ನಾನು ಲಂಡನ್ನಿನಲ್ಲೇ ಇದ್ದರೆ ರೇಶಿಯಲ್ ಪ್ರಾಬ್ಲೆಮ್ಸ್ ಅನುಭವಿಸುತ್ತಿದ್ದೆನೋ ಏನೋ ಗೊತ್ತಿಲ್ಲ.

ಸಂ: ತಾತ್ವಿಕವಾದ ಸಮಸ್ಯೆಗಳು?

ಶೆ: ಅಲ್ಲಿ ಮುಖ್ಯವಾಗಿ ಬರೋ ವಿಷಯ ಅಂದ್ರ ಭಾಷೆಯನ್ನ ಬಳಸೋದು. ಈ ಭಾಷೆಯನ್ನು ಬಳಸಬೇಕಾದಾಗ ಆಕ್ಸ್‌ಫರ್ಡ್ ಆಕ್ಸೆಂಟೇ ಬಹಳ ದೊಡ್ಡದು. ಅದನ್ನ ಬರೀಬೇಕಾದಾಗ ಶುದ್ಧವಾದ ಇಂಗ್ಲಿಶ್‌ನಲ್ಲೇ ಬರೀಬೇಕು. ಇಡಿಯೊಮ್ಯಾಟಿಕ್ ಇಂಗ್ಲಿಶ್‌ನಲ್ಲಿ ಬರೀಬೇಕು. ಸ್ಟೇಟ್‌ಮೆಂಟ್ ಕೊಡಬೇಕಾದಾಗ ಅಂಡರ್ ಸ್ಟೇಟ್ ಮೆಂಟ್ ಮಾಡಬೇಕು. ಇದು ಅಲ್ಲಿಯ ಲಕ್ಷಣ.

ಸಂ: ಪಾಶ್ಚಾತ್ಯರ ಅಧ್ಯಯನ ವಿಧಾನದಲ್ಲಿ ನಿಮಗೆ ಯಾವುದು ಮುಖ್ಯವಾಗಿ ಕಂಡಿತು?

ಶೆ: ಈಗಲೂ ನನ್ನ ಮನಸ್ಸಿನೊಳಗ ಹಸರಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಯಾರಾದರೂ ಒಂದು ಕ್ಷೇತ್ರ ಆಯ್ಕೆ ಮಾಡಿಕೊಂಡು ಅಭ್ಯಾಸ ಮಾಡಲಿಕ್ಕೆ ಶುರು ಮಾಡಿದ್ರ, ಆ ಆಯ್ಕೆ ಅವರ ಸ್ವಂತ ಉತ್ಸಾಹದಿಂದಗಿರುತ್ತೆ. ಅದಕ್ಕ ಜೀವನವನ್ನೇ ಮುಡುಪಾಗಿಡ್ತಾರ. ಈಗ ಕರ್ನಾಟಕದ ಬಗ್ಗೆ ಸಂಶೋಧನೆ ಮಾಡ್ತಾರ ಅಂದ್ರ, ಮೊದಲು ಕನ್ನಡ ಭಾಷೆಯನ್ನು ಕಲಿತಾರ. ಈ ಹಿಂದೆ ಪ್ರಕಟವಾದಂತಹ ಎಲ್ಲಾ ಪ್ರಕಟಣೆಗಳನ್ನು ಓದ್ತಾರ. ಆ ಸಮಸ್ಯೆ ವಿವಿಧ ಕೋನಗಳನ್ನ ಅರ್ಥಮಾಡಿಕೊಂಡು ನೋಡ್ತಾರ. ಈ ಡೆಡಿಕೇಶನ್ ಏನಿದೆ, ಅದು ಅದ್ಭುತ.

ಸಂ: ನಮ್ಮಲ್ಲಿ ಅದು ಇಲ್ಲವಾ?

ಶೆ: ನಮ್ಮಲ್ಲಿ ಎರಡು ತರಹದ ಸಂಶೋಧಕರನ್ನ ಕಾಣಬಹುದು. ಒಂದು ಸ್ವಂತ ಅವಶ್ಯಕತೆಯನ್ನ ಪೂರೈಸಲಿಕ್ಕೇನೇ ಅಧ್ಯಯನ ಮಾಡ್ತಾ ಇದ್ದೀವಿ ಅನ್ನುವಂತಹ ಜನರು. ಪಿಎಚ್‌ಡಿ ಬೇಕು ಅಂತ ಅದನ್ನ ಮಾಡೋದು. ಆ ಸ್ಥಾನವನ್ನು ಗಳಿಸಿದಮೇಲೆ ಆ ಶಕ್ತಿ ನಿಮ್ಮಲ್ಲಿ ಉಳದರ ನೀವು ಪಂಡಿತರಾಗಿ ಮುಂದುವರಿತೀರಿ. ಇಲ್ಲದಿದ್ರ ಇಲ್ಲ. ೬೦ರ ದಶಕದಲ್ಲಿ ಇತಿಹಾಸಕಾರರು ಕಾವ್ಯಗಳನ್ನ ಸರಿಯಾಗಿ ಓದ್ತಾ ಇಲ್ಲ ಅನ್ನೋದನ್ನ ನಾನು ಮನದಟ್ಟು ಮಾಡಿಕೊಂಡಿದ್ದೆ. ಪಂಪ ಜನ್ನರಂತಹ ಅತಿಪೂರ್ವದ ಕಾವ್ಯಗಳನ್ನ ಓದುವಂತಹ ಸಾಮರ್ಥ್ಯ ನನಗಿರಲಿಲ್ಲ. ಒಂದು ಶಬ್ದ ತಗೊಂಡು ಹೋಗಿ ಕಲಬುರ್ಗಿಯವರನ್ನ ಕಾಡಸ್ತಾ ಇದ್ದೆ. ಇತಿಹಾಸ ವಿದ್ಯಾರ್ಥಿಗಳ ಕಷ್ಟ ಅಂದ್ರೆ ಭಾಷೆ ಬಹಳ ಕಠಿಣ. ಕನ್ನಡ ಸಾಹಿತ್ಯದವರು ಇತಿಹಾಸ ವಿಷಯವನ್ನು ತೆಗೆದುಕೊಂಡು ಕೆಲಸ ಮಾಡೋದು ಆಮೇಲೆ ಶುರು ಆಯ್ತು- ಚಿದಾನಂದಮೂರ್ತಿಯವರು, ಕಲಬುರ್ಗಿಯವರು, ಹಂಪನಾ ಅವರು ಇನ್ನೂ ಅನೇಕರು. ಇತಿಹಾಸದಲ್ಲಿ ಏನಾದರೂ ಒಳ್ಳೇ ವಿಷಯಗಳು ಬಂದಿವೆ ಅಂದರೆ ಕನ್ನಡದ ವಿದ್ಯಾರ್ಥಿಗಳಿಂದನೇ ಅಂತ ಸ್ಪಷ್ಟವಾಗಿ ಹೇಳ್ತೀನಿ.

ಸಂ: ನೀವು ಇಷ್ಟೆಲ್ಲ ಕನ್ನಡ ಮೆಟೀರಿಯಲ್ಲನ್ನು ಬಳಸಿದರೂ ಬರವಣಿಗೆ ಮಾತ್ರ ಕನ್ನಡದಲ್ಲಿ ಮಾಡಲಿಲ್ಲ. ಇದು ನಿಮ್ಮ ಮೇಲಿರುವ ಆಪಾದನೆ.

ಶೆ: ಈ ಆಪಾದನೆ ನನ್ನ ಮೇಲೆ ಏನಿದೆ, ಅದನ್ನ ಸ್ವೀಕರಸ್ತೀನಿ. ಅದಕ್ಕ ಉತ್ತರ ಏನು ಹೇಳ್ತೀನಿ ಅಂದ್ರ, ಕನ್ನಡಿಗನಾಗಿ ಕನ್ನಡದಲ್ಲಿ ಬರೆಯುವಂತಹ ಒಂದು ಹೊಣೆ ನನ್ನ ಮೇಲೆ ಇದ್ದರೂ ಕೂಡಾನೂ, ಅದಕ್ಕಿಂತಲೂ ಗುರುತರವಾದ ಒಂದು ಹೊಣೆ ನನ್ನ ಮೇಲೆ ಇತ್ತು. ಏನಂದ್ರ ಕನ್ನಡದಲ್ಲಿ ಬರತಕ್ಕಂತಹ ಈ ಸಂಶೋಧನೆಯನ್ನ ಹೊರನಾಡಿನವರಿಗೆ ಪರಿಚಯ ಮಾಡಿಕೊಡೋದು. ಅಂದರೆ ವಿದೇಶಿಯರಿಗೆ ಅಷ್ಟೇ ಅಲ್ಲ. ಆಂಧ್ರದಲ್ಲಿರೋರಿಗೆ, ತಮಿಳರಿಗೆ ಕೂಡಾನು. ಈಗ ನೋಡಿ, 'ಪರ್ಸೀವಿಂಗ್ ಡೆತ್'ನಲ್ಲಿ ಪಂಪನಿಂದ ಹಿಡಿದು ಬಂಧುವರ್ಮನವರೆಗೆ ಎಲ್ಲಾ ಗ್ರಂಥಗಳನ್ನು ನಾನು ಬಳಸಿಕೊಂಡಿದ್ದೇನೆ. ಅದು ಇಂಗ್ಲಿಶ್‌ನಲ್ಲಿ ಬಂದಮೇಲೆ 'ಇಷ್ಟೊಂದು ಸಾಮಗ್ರಿ ಕನ್ನಡ ಸಾಹಿತ್ಯದಲ್ಲಿದೆನೋ' ಅಂತ ಎಷ್ಟೋ ಜನ ಆಶ್ಚರ್ಯದಿಂದ ಕೇಳ್ತಾರ.

ಸಂ: ಈಗ ಕನ್ನಡದಲ್ಲಿ ಬರೆಯುವ ಉದ್ದೇಶ ಇದೆಯಾ?

ಶೆ: ಈ ಆಪಾದನೆಯಿಂದ ವಿಮುಕ್ತಿ ಪಡೆಯುವುದಕ್ಕೋಸ್ಕರನೇ ಈಗ ಪೂರ್ಣ ಅವಧಿಯನ್ನ ಕನ್ನಡಕ್ಕಾಗಿ ಮೀಸಲಾಗಿಟ್ಟಿದ್ದೇನೆ. ನಾಲ್ಕಾರು ವರ್ಷ ತಡೀರಿ ಅದರ ಪರಿಣಾಮ ಏನೋ ಬರುತ್ತೆ, ನನಗ ಶಕ್ತಿ ಇದ್ದರೆ.

ಸಂ: ಸಾರ್, ಬರವಣಿಗೆಯ ಭಾಷೆ ಯಾವುದು ಅನ್ನೊ ಪ್ರಶ್ನೆ ನಮ್ಮ ದೃಷ್ಟಿಕೋನವನ್ನೂ ನಿಯಂತ್ರಿಸ್ತದೆ. ಇಂಗ್ಲಿಶ್‌ನಲ್ಲಿ ಬರೆಯುವಾಗ ಮತ್ತೊಬ್ಬರ ಅವಶ್ಯಕತೆಗಳು ಯಾವುವು ಅಂತ ಯೋಚಿಸಿ ಬರೆಯುವ ವಸಾಹತುಶಾಹಿ ದೃಷ್ಟಿಕೋನ ಕೆಲಸ ಮಾಡ್ತದೆ ಅನಿಸೋಲ್ಲವಾ?

ಶೆ: ಇದರಿಂದ ನಾನು ಮುಕ್ತನಾಗಿದ್ದೇನೆ. ನಾನು ಯಾವುದೇ ಗ್ರಂಥ ಬರೆದರೂ ಒಬ್ಬ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಒಪ್ಪಬೇಕು, ಅಲ್ಲಿ ರಿವ್ಯೂ ಆಗಬೇಕು ಅನ್ನೋ ದೃಷ್ಟಿಯಿಂದ ಬರೆದೋನಲ್ಲ. ಆರ್ ಕೆ ನಾರಾಯಣ ಹ್ಯಾಗೆ ಭಾರತೀಯರನ್ನ ಮನಸ್ಸಲ್ಲಿಟ್ಟುಕೊಂಡು ಸರಳವಾಗಿ ಸುಲಲಿತವಾಗಿ ಇಂಗ್ಲಿಶ್‌ನಲ್ಲಿ ಬರೆದರೊ, ಅದರಂತೆ ನಾನೂ ಕೂಡ ಬೇರೆಯವರಿಗೆ ಇಂಗ್ಲಿಶ್ ಭಾಷೆ ಮೂಲಕ ತಲುಪಬೇಕು ಅನ್ನೋ ಒಂದು ಉದ್ದೇಶ ಬಿಟ್ಟರೆ, ಕಲೋನಿಯಲ್ ಆಟಿಟ್ಯೂಡನ್ನು ಬೆಳೆಸಿಕೊಂಡಿಲ್ಲ. ನನ್ನ ಯಾವ ಗ್ರಂಥದಲ್ಲಾದರೂ ಅದು ಒಂದು ವಾಕ್ಯದಲ್ಲಾದರೂ ಪ್ರತಿಬಿಂಬಿತವಾಗಿದ್ದರೆ ಅದಕ್ಕೆ ಪಶ್ಚಾತ್ತಾಪ ಪಡುತ್ತೇನೆ.

ಸಂ: ಭಾರತದಲ್ಲಿ ಇಂಗ್ಲಿಶ್ ಬರಹ ಮಾಡೋರಲ್ಲಿ ಈ ಧೋರಣೆ ಇಲ್ಲ ಅನಿಸುತ್ತಾ?

ಶೆ: ಇದೇಇದೆ. ಅಷ್ಟೇ ಅಲ್ಲ ಪಾಶ್ಚಾತ್ಯರಿಗಾಗೇ ಬರೀತಕ್ಕಂತಹ ಒಂದು ಪ್ರವೃತ್ತಿ ಇದೆ. ಭಾರತೀಯರಲ್ಲಿ ಪ್ರತಿಭಾವಂತರು ಅನ್ನಿಸಿಕೊಂಡೋರಲ್ಲಿ ಕೂಡ, ದೃಷ್ಟಿಕೋನ ಏನಿರ್ತದೆ ಅಂದ್ರೆ, ನನ್ನ ಪುಸ್ತಕ ಹಾರ್‌ವರ್ಡ್ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳಲ್ಲಿ ಮಾನ್ಯತೆ ಪಡೀಬೇಕು ಅನ್ನೋದು. ಆದರೆ ಯಾವಾಗ್ಲೂನೂ ನಮ್ಮ ಗ್ರಂಥದಿಂದ ಬೇರೆಯವರು ಉಪಯೋಗ ಮಾಡಿಕೊಂಡು ನಮ್ಮ ದೇಶಕ್ಕೆ ಬಂದು ಅಭ್ಯಾಸ ಮಾಡಬೇಕು. ನೋಡಿ, ನಾನು ಅಮೇರಿಕದಲ್ಲಿ ಅವಕಾಶ ಇದ್ದರುನೂ ಸಾಕು ಅಂತ ವಾಪಾಸ್ ಬಂದವನು. ಇಲ್ಲಿ ಬಂದ ನಂತರ ಸುಮಾರು ೬-೮ ಪಾಶ್ಚಾತ್ಯ ವಿದ್ಯಾರ್ಥಿಗಳು ಶಿಕಾಗೋದಿಂದ ನ್ಯೂಯಾರ್ಕ್‌ನಿಂದ ಪ್ರಿನ್ಸ್‌ಟನ್‌ನಿಂದ ಬಂದವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್‌ಡಿ, ಪಡೆದರು. ಅದಕ್ಕ ನನಗ ಹೆಮ್ಮೆ ಇದೆ. ಬೇರೆಬೇರೆ ಕಡೆ ಇರುವ ಪ್ರಾಧ್ಯಾಪಕರು ನನ್ನ ಜತೆಗೆ ಒಡನಾಟ ಇಟ್ಟುಕೊಂಡಿದ್ದಕ್ಕ ಸಂತೋಷ ಇದೆ.

ಸಂ: ವಿದೇಶೀ ಭಾಷೆಯಲ್ಲಿ ಬರೆಯುವಾಗ, ನಮ್ಮ ಭಾಷಿಕ ಸಮುದಾಯ ಮತ್ತು ನಮ್ಮ ಸಂಬಂಧಗಳಲ್ಲಿ ಬಿರುಕು ಹುಟ್ಟುವುದಿಲ್ಲವಾ?

ಶೆ: ಹುಟ್ತದ. ನಾವು ಗಮನಿಸಬೇಕಾದ್ದು ಅಂದ್ರೆ, ಇತಿಹಾಸದ ವಿದ್ಯಾರ್ಥಿಯಾಗಿ ೧೦ನೇ ಶತಮಾನದ ವಿಷಯ ಬರೆಯಬೇಕಾದಾಗ, ಕನ್ನಡದಲ್ಲಿ ಬರೆದರೂ ಕೂಡಾನೂ ಆ

ಒಂದು ಅಂತರ ಇದ್ದೇ ಇರುತ್ತದೆ. ೧೧ನೇ ಶತಮಾನದ ಸಂಸ್ಕೃತಿಗೂ ೨೦ನೇ ಶತಮಾನದ ಸಂಸ್ಕೃತಿಗೂ ಇರುವ ಅಂತರ ಅಂತರವಾಗೇ ಉಳಿಯುತ್ತೆ. ಇಂಗ್ಲಿಶ್‌ನಲ್ಲಿ ಬರೆದಾಗ ಅಂತರ ಇನ್ನೂ ಹೆಚ್ಚಾಗುತ್ತೆ. ಅದಕ್ಕೇ ಭಾಷೆಯನ್ನು ಹ್ಯಾಗೆ ಬಳಸಬೇಕು ಎನ್ನುವುದು ಯಾವಾಗಲೂ ದೊಡ್ಡ ಸಮಸ್ಯೆ. ಜೈನ ಪಾರಿಭಾಷಿಕ ಪದಗಳನ್ನು ಉಪಯೋಗ ಮಾಡಬೇಕಾದಾಗ, ಹ್ಯಾಗೆ ಮಾಡಬೇಕು ಅಂತಹೇಳಿ ನನಗೊಂದು ದೊಡ್ಡ ಸಮಸ್ಯೆ ಇತ್ತು. ಕೊನೆಗೆ ನಾನು ಆಯ್ಕೆ ಮಾಡಿದ್ದು ಅಂದ್ರೆ, ಯಾವ ಶಬ್ದವನ್ನ ಸುಲಭ ವಾಗಿ ಗುರ್ತಿಸಲಾಗಿದೆನೋ ಆ ಅರ್ಥದೊಳಗೇ ನಾವು ಇಂಗ್ಲಿಶ್‌ನಲ್ಲಿ ಬರೀಬೇಕು. ಇಲ್ಲಾ, ಅರ್ಥ ಮತ್ತು ಧ್ವನಿ ಎರಡೂ ಬರುವಂತಹ ಶಬ್ದ ಬಳಸಬೇಕಾದರೆ, ಅದನ್ನ ಆ ಮೂಲ ಭಾಷೆಯಲ್ಲಿಯೇ ಬಳಸಬೇಕು. ಯಾರು ಓದ್ತಾರೋ ಅದನ್ನ ಕಷ್ಟಪಟ್ಟು ಓದಿ ತಿಳಕೊಳ್ಳಲಿ ಅಂತ. ಈಗ ಸಲ್ಲೇಖನ ವ್ರತವನ್ನ ಸ್ಥೂಲವಾಗಿ ಭಾಷಾಂತರ ಮಾಡ್ಲಿಕ್ಕೆ ಸಾಧ್ಯ. ನೀವು ಅರ್ಥ ಕೊಡಬಹುದು. ಧ್ವನಿ ಕೊಡಲಿಕ್ಕೆ ಆಗೋದಿಲ್ಲ.

ಸಂ: ಸಾರ್, ನೀವು, ಎಂ ಎನ್ ಶ್ರೀನಿವಾಸ್ ಮುಂತಾದವರು ಕನ್ನಡದಲ್ಲಿ ಬರೆಯದೇ ಇದ್ದುದರಿಂದ, ಸಮಾಜವಿಜ್ಞಾನಗಳ ಒಳಗೆ ಎಷ್ಟು ಬೆಳವಣಿಗೆ ಆಗಬೇಕಾಗಿತ್ತೋ ಅದು ಆಗಲಿಲ್ಲ ಅಂತ ಕೆಲವರು ಫೀಲ್ ಮಾಡೋದುಂಟು.

ಶೆ: ಹೌದು. ಈ ಅಪವಾದ ನಾವು ಹೊರಬೇಕು.

ಸಂ: ಸಮಾಜವಿಜ್ಞಾನಗಳಲ್ಲಿ ಕನ್ನಡದ ಬಳಸುವ, ಬೆಳೆಸುವ ದಿಸೆಯಲ್ಲಿ ಏನು ತೊಡಕಿದೆ ಅನಸುತ್ತೆ?

ಶೆ: ನೋಡಿ, ಕನ್ನಡದಲ್ಲಿ ಬರೆಯುವುದಕ್ಕೆ ಎರಡು ಮೂರು ಹಂತಗಳಿವೆ. ೧೯೪೦-೫೦ರಲ್ಲಿ ಕೆಲವರು ಇತಿಹಾಸಕಾರರು, ಸಮಾಜವಿಜ್ಞಾನಿಗಳು ಕನ್ನಡದಲ್ಲಿ ಗ್ರಂಥ ರಚನೆ ಮಾಡಿದ್ರು. ಅವು ಪರಿಚಯಾತ್ಮಕ ಗ್ರಂಥಗಳು. ಪರಿಚಯ ಮಾಡಬೇಕಾದಾಗ ಸ್ಥಳೀಯ ಅವಶ್ಯಕತೆ ಗಳನ್ನ ಕಳಕೊಂಡು ಮಾಡಿದ್ದಾಯಿತು. ಮೊದಲನೆಯ ಸಾರಿ ಮೂಲ ಸಂಶೋಧನೆ ಮಾಡುವ ವಸ್ತು ಏನಿದೆ, ಅದನ್ನ ಕನ್ನಡದಲ್ಲಿ ಬರೀಬೇಕಾಗಿರುವಂತಹದು, ಇತ್ತೀಚೆಗೆ ಬಂದಂತಹದು. ಇತಿಹಾಸ ಮಹಾಪ್ರಬಂಧಗಳನ್ನು ಕನ್ನಡದಲ್ಲಿ ಈಗ ಬರೀತಾರೆ. ತಮ್ಮ ಭಾಷೆಯಲ್ಲಿ ಬರೀಲಿ ಅಂತ ಹೇಳಿ ಸೆನೆಟ್ ಸಿಂಡಿಕೇಟ್‌ನಲ್ಲಿ ಹಠ ಮಾಡಿದೋರಲ್ಲಿ ನಾನೂ ಒಬ್ಬ. ಯಾಕಂದರೆ ಇಂಗ್ಲಿಶ್ ಭಾಷೆಯಲ್ಲಿ ಕೆಟ್ಟದಾಗಿ ಬರಿಯೋದಕ್ಕಿಂತ ನಮ್ಮ ಭಾಷೆಯಲ್ಲಿ ಸುಲಭವಾಗಿ ಹ್ಯಾಗೆ ತಿಳಿಯುತ್ತೋ ಹಾಗೆ ಬರೀಲಿ ಅಂತ. ಇದನ್ನ ಹೆಚ್ಚೆಚ್ಚು ಸಮರ್ಥವಾಗಿ ನಮ್ಮ ವಿದ್ಯಾರ್ಥಿಗಳು ಮಾಡ್ತಾ ಇದ್ದಾರೆ. ಆದರೆ ಗಹನವಾದ ವಿಷಯವನ್ನ ತೆಗೆದುಕೊಂಡು ಹೊಸ ಸಿದ್ಧಾಂತವನ್ನ ಪರಿಚಯ ಮಾಡಿಕೊಡುವಂತಹ ಗ್ರಂಥಗಳು ಇನ್ನೂ ಕನ್ನಡದಲ್ಲಿ ಬರಬೇಕಾಗಿದೆ.

ಸಂ: ವಿದೇಶಿಯರು ಭಾರತದ ಮೇಲೆ ಅಧ್ಯಯನ ಮಾಡ್ತಾರಲ್ಲಾ, ಉದಾ: ಇಂಡಾಲಾಜಿಸ್ಟರು, ಅವರು ಯಾಕೆ ಮಾಡ್ತಾರೆ?

ಶೆ: ನೋಡಿ ಈ ಪ್ರಶ್ನೆಗಳನ್ನ ನಾವು ಕೇಳ್ತೀವಿ. ಅವರು ಕೇಳೋದಿಲ್ಲ. ಇದೊಂದು ದೊಡ್ಡ ಆಶ್ಚರ್ಯ ಅಂತ ಅನ್ನಸ್ತದ. ಅಮೇರಿಕನ್ ಇಂಗ್ಲಿಶ್ ಫ್ರೆಂಚ್ ವಿಶ್ವವಿದ್ಯಾಲಯಗಳಿಗೆ ಹೋದರೆ ಅವರ ಸಂಸ್ಕೃತಿಯನ್ನ ಬಿಟ್ಟು ಬೇರೆ ಸಂಸ್ಕೃತಿಯನ್ನ ಅಭ್ಯಾಸ ಮಾಡಿಕೊಳ್ತಾರ. ಈ ಸಹೃದಯತೆ ನಮ್ಮಲ್ಲಿ ಇಲ್ಲ.

ಸಂ: ಇದು ಕೇವಲ ಸಹೃದಯತೆ ಪ್ರಶ್ನೆನಾ ಸಾರ್?

ಶೆ: ಅವಶ್ಯಕತೆಯ ಪ್ರಶ್ನೆ ಸಹೃದಯತೆನೇ ಆಗಿದೆ ಈಗ. ಅವಶ್ಯಕತೆ ಏನಾಯ್ತು ಅಂತ ಹೇಳಿದರೆ, ಕಲೋನಿಯಲ್ ಟೈಂನಲ್ಲಿ ಈ ಭಾಷೆ ಸಂಸ್ಕೃತಿಯನ್ನ ಅರ್ಥಮಾಡಿಕೊಳ್ಳು ವುದು ಇತ್ತು ಒಂದು ಹಂತದೊಳಗ.

ಸಂ: ರಾಜಕೀಯ ಕಾರಣಕ್ಕಾಗಿ.

ಶೆ: ಹೌದು, ಆದರೆ ಇದು ಆಡಳಿತಕ್ಕ ಮಾತ್ರ ಸೀಮಿತ ಆಗಿದ್ದರೆ, ಯಾವುದೋ ಒಂದು ಸ್ವಾರ್ಥಕ್ಕ ಅಂತ ಹೇಳಬಹುದಾಗಿತ್ತು. ಅದನ್ನ ಅವರು ಪೂರೈಸಿಕೊಂಡು ಹೆಚ್ಚಿನ ಸಂಶೋಧನೆಯನ್ನು ಮಾಡಿಲಿಕ್ಕ ಶುರು ಮಾಡಿದರು. ಅದರಲ್ಲಿ ಎರಡು ವರ್ಗಗಳನ್ನ ನೋಡಬಹುದು. ಒಂದು ಆಡಳಿತದ ಬಳಕೆಗಾಗಿ ಮಾಡ್ತಾ ಇದ್ದೋರು. ಇನ್ನೊಂದು, ಕೇವಲ ಜ್ಞಾನದಾಹಕ್ಕಾಗಿ ಅಭ್ಯಾಸ ಮಾಡ್ತಾ ಇದ್ದೋರು. ಈಗ ಟ್ಯೂಬಿಂಗನ್ ವಿಶ್ವವಿದ್ಯಾಲಯದಲ್ಲಿ ಜರ್ಮನ್ಸ್ ಸಂಸ್ಕೃತವನ್ನ ಯಾಕ ಅಭ್ಯಾಸ ಮಾಡಬೇಕು? ಮ್ಯಾಕ್ಸಮುಲ್ಲರ್ ನಮ್ಮ ವೇದಗಳನ್ನ ಯಾತಕ್ಕ ಅಭ್ಯಾಸ ಮಾಡಬೇಕು?

ಸಂ: ಅವರು ಆರ್ಯನ್ ಜನಾಂಗ, ಭಾಷೆ, ಫಿಲಾಸಫಿಗಳನ್ನು ಹುಡುಕುವ ತುರ್ತಿನಲ್ಲಿ ಕೆಲಸ ಮಾಡಿದರು ಅನ್ನೋದು ಮರೆಯುವಂತಿಲ್ಲ.

ಶೆ: ಹುಡುಕಿ ಹುಡುಕಿ ಹುಳುಕು ತೆಗೆದಾಗ ಹೀಗೆ ಅನ್ನಸುತ್ತೆ. ಈಗ ಬುಡಕಟ್ಟು, ಶೂದ್ರ ಜನಾಂಗಗಳ ಬಗೆಗೆ, ಸಬಾಲ್ಟನ್ ಹಿಸ್ಟರಿಯ ಬಗೆಗೆ, ಅವರು ಮಾಡಿದಷ್ಟು ನಾವು ಮಾಡ್ತಾ ಇಲ್ಲ. ನೋಡಿ, ಸೊಂಥೈಮರ್ ಅನ್ನುವರು ಮಾಳಚಿ, ಮೈಲಾರ, ಖಂಡೋ ಬಾನ ಬಗ್ಗೆ ಮಾಡಿದಷ್ಟು ಸಂಶೋಧನೆ ಯಾವ ಭಾರತೀಯನೂ ಮಾಡಿಲ್ಲ. ಅಷ್ಟೇ ಅಲ್ಲ ಅವರು ಮರಾಠಿ ಭಾಷೆಯನ್ನ ಕಲ್ತರು. ಎಂಥಾ ಮರಾಠಿ ಅಂದರೆ ಪೂಣೆಯಲ್ಲಿದ್ದಾಗ ಸಂಸ್ಕೃತ ಹೆಚ್ಚು ಬಳಕೆ ಮಾಡಿಕೊಂಡು ಮರಾಠಿಯನ್ನು ಮಾತಾಡ್ತಾ ಇದ್ದರು. ಧನಗರರ ಜತೆಗೆ ಹೋಗಬೇಕಾದಾಗ ಕುರುಬ ಭಾಷೆಯನ್ನು ಮರಾಠಿಯಲ್ಲಿ ಮಾತಾಡ್ತಾ ಇದ್ದರು.

ಸಂ: ಸರ್, ವಿದೇಶಿಗರ ಅಧ್ಯಯನಗಳ ಮೇಲೆ ಗುಮಾನಿಯಿಂದ ಸಿನಿಕವಾಗಿ ಮಾಡುವವರು ಇರಬಹುದು. ಆದರೆ ಸತತವಾಗಿ ಯೂರೋಪಿನಿಂದ ಆಳಿಸಿಕೊಂಡ, ಈಗ ಜಾಗತೀ ಕರಣದ ಹೆಸರಲ್ಲಿ ಆರ್ಥಿಕ ರಾಜಕೀಯ ಹಿಡಿತಗಳಲ್ಲಿ ಸಿಕ್ಕಿಕೊಳ್ಳುತ್ತಿರುವ ಭಾರತದಂತಹ ದೇಶಗಳು, ಯಾವುದೇ ಅಧ್ಯಯನಗಳ ಹಿಂದಿನ ಪಾಲಿಟಿಕ್ಸ್ ಅನ್ನು ಕುರಿತು ಪ್ರಶ್ನೆ ಎತ್ತುವುದು ತಪ್ಪಲ್ಲ.

ಶೆ: ಇದೊಂದು ಅನುಮಾನ ನಮ್ಮಲ್ಲಿ ಇದೆ. ನನಗನ್ನಸಿದ ಹಾಗೆ ಯಾವ ವ್ಯಕ್ತಿ ಭಾರತೀಯ

ಕಲೆಯಾಗಲೀ, ಸಂಸ್ಕೃತಿಯನ್ನಾಗಲೀ ಆಯ್ಕೆ ಮಾಡಿಕೊಂಡು ಅಭ್ಯಾಸ ಮಾಡ್ತಾನೋ ಅವನೆಲ್ಲ ಸ್ಪೈ ಅಲ್ಲ. ಐರನ್ ಕರ್ಟನ್ ಇದ್ದ ಕಾಲದೊಳಗ ವಿದೇಶಿಯರು ಅಂತ ಹೇಳಿದರೆ, ಏನೋ ಒಂದು ದೃಷ್ಟಿಯಿಂದ ಬಂದಿದ್ದಾರೆ ಅಂತ ಹೇಳಿ ನಮ್ಮ ಆತಂಕಗಳು ಇದ್ದವು. ಈಗ ಅದು ಪರಿಹಾರ ಆಗಿದೆ. ಮಾಧ್ಯಮಗಳು ಜನಾಂಗವನ್ನ ಬಹಳ ಸಮೀಪ ತಂದುಕೊಟ್ಟಿವೆ. ಇವತ್ತು ನಾನು ಮಾಡಿದಂತಹ ಸಂಶೋಧನೆ ನಾಳೆಯೇ ಆಕ್ಸ್‌ಫರ್ಡ್‌ನ ಸಂಶೋಧಕನಿಗೆ ಮುಟ್ಟತದ. ನೀವು ಅದನ್ನ ಮುಚ್ಚಿಡಬೇಕಾದಂತಹ ಅವಶ್ಯಕತೆಯಿಲ್ಲ.

ಸಂ: ೬೦, ೭೦ರ ದಶಕದಲ್ಲಿ ಅಮೇರಿಕ ನಡೆಸಿದ ಅನೇಕ ಅಧ್ಯಯನಗಳ ಹಿಂದೆ ಬೇರೆ ರಾಜಕೀಯ ಕಾರಣಗಳು ಇದ್ದವು.

ಶೆ: ಇರಬಹುದು. ಕೆಲವರ ದೃಷ್ಟಿಯಲ್ಲಿ ವಾಸ್ತವಿಕವಾಗಿಯೂ ಇರಬಹುದು. ಆದರೆ ಇಂಥವು ಎಲ್ನೋ ಹತ್ತರಲ್ಲಿ ಒಂದು.

ಸಂ: ನೀವು ಇಷ್ಟಪಟ್ಟ ವ್ಯಕ್ತಿ ಸೊಂಥೈಮರ್ ಅಂತ ಮಾತಾಡಿದಿರಿ. ಅವರ ಜತೆಗಿನ ನಿಮ್ಮ ಅನುಭವ ಯಾಕೆ ಅಮೂಲ್ಯ ಅನಿಸಿತು?

ಶೆ: ನನ್ನ ಸ್ನೇಹಿತರಾದ ಮೇಲೆ ಅವರು ಜರ್ಮನಿ ವಿಶ್ವವಿದ್ಯಾಲಯದಲ್ಲಿ ೨ದಿವಸ ರಜಾ ಸಿಕ್ಕರೆ ಸಾಕು, ಹಿಂದುಸ್ಥಾನಕ್ಕ ಓಡಿ ಬಂದುಬಿಡ್ತಿದ್ದರು. ಈ ನಾಡನ್ನ ಎಷ್ಟೊಂದು ಪ್ರೀತಿಸ್ತಾ ಇದ್ದರು ಅಂದ್ರೆ, ಒಂದೆರಡು ತಿಂಗಳು ಬಂದು ಹೋಗದೇ ಇದ್ದರ, ಅವರ ಆರೋಗ್ಯವೇ ಸುಧಾರಿಸ್ತಾ ಇರಲಿಲ್ಲ ಅನ್ನೋ ಮಟ್ಟದೊಳಗ ಇದ್ದರು. ನಮ್ಮ ಸಂಸ್ಕೃತಿಯ ಮೇಲೆ ಅವರಿಗೆ ಎಷ್ಟೊಂದು ಗೌರವ ಇತ್ತು ಅಂತ ಹೇಳಿದ್ರೆ, ನನಗ ಭೇಟಿಯಾಗಬೇಕಾದಾಗ ಹೊರಗಡೆ ಬೂಟು ತೆಗೆದು ಪ್ರವೇಶ ಮಾಡ್ತಾ ಇದ್ದರು. ಬಂದವರು ಕಾರ್ಪೆಟ್ ಮೇಲೆ ಕೂಡ್ತಾ ಇದ್ದರು. ಇದು ದೊಡ್ಡ ವಿಷಯ ಅಂತ ನಾ ಹೇಳ್ತಾ ಇಲ್ಲ. ಅವರು ಮೊದಲು ಭಾರತೀಯ ಸಂಸ್ಕೃತಿಯನ್ನು ಅರ್ಥ ಮಾಡಿಕೊಂಡು ಭಾರತೀಯರಾಗಬೇಕು ಅಂತ ಇಚ್ಛೆ ಪಡ್ತಾ ಇದ್ದರು. ಇದು ನನಗೆ ಮುಗ್ಧನನ್ನಾಗಿ ಮಾಡಿಬಿಡ್ತಾ ಇತ್ತು.

ಸಂ: ಇಂಡಾಲಜಿ ವಿದ್ವಾಂಸರಂತೆ ಬೇರೆ ದೇಶಗಳ ವಿದ್ವಾಂಸರು ಇದೇ ತರಹ ಇರ್ತಾರಾ?

ಶೆ: ನಮ್ಮ ಸಂಸ್ಕೃತಿ ಬಗೆಗೆ ಸಂಪರ್ಕ ಎಷ್ಟಿರತದೋ ಅಷ್ಟು ಅವರು ಹಂಬಲ್ ಆಗಿರ್ತಾರೆ. ಎಷ್ಟು ದೂರವಾಗಿರ್ತಾರೋ ಅಷ್ಟು ಗತ್ತುಗಾರಿಕೆ ಹೆಚ್ಚಾಗಿರ್ತದ. ನಾನು ಅಮೇರಿಕಾ ವಿಶ್ವವಿದ್ಯಾಲಯದಿಂದ ಬಂದಂತಹ ವಿದ್ಯಾರ್ಥಿಗಳಿಗೆ ಹೆಚ್ಚು ಗೌರವ ಕೊಡೋದಿಲ್ಲ. ಯಾತಕ್ಕಂದ್ರ ಅವರು ಬಂದ ಮೂರನೇ ದಿವಸಕ್ಕನೇ 'ನನ್ನ ಅಭಿಪ್ರಾಯ' ಅಂತ ಮಾತಾಡ್ತಾರ. ಭಾಷೆ ಸಂಸ್ಕೃತಿಯ ಪರಿಜ್ಞಾನ ಇಲ್ಲದ ಇನ್ನೂ ಪ್ರಾರಂಭದ ಅವಸ್ಥೆಯಲ್ಲಿರಬೇಕಾದಾಗಲೇ ಅವರ ಸೊಕ್ಕು ಏನಿದೆ, ನನಗ ಸರಿ ಅನಿಸೋದಿಲ್ಲ.

ಸಂ: ನೀವು ಭಾರತದ ವಿದೇಶದ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದೀರಿ. ನೀವು ಹೆಮ್ಮೆಯಿಂದ ಹೆಸರಿಸೋ ಶಿಷ್ಯ ಯಾರು? ಅವರ ವರ್ಕ್ ಯಾವುದು?

ಶೆ: ದಯಮಾಡಿ ಈ ಮಾತನ್ನ ಕೇಳಬೇಡಿ. ಆ ಮಟ್ಟಕ್ಕ ಯಾರೂ ಬರಲಿಲ್ಲ. ಬಹಳಷ್ಟು ದುಃಖ ಆಗ್ತದ.

ಸಂ: ತಪ್ಪು ಶಿಷ್ಯರಲ್ಲಿದೆಯಾ ಅಥವಾ ನಿಮ್ಮಲ್ಲೇ ಏನಾದರೂ ಇದೆಯಾ?

ಶೆ: ಇರಬಹುದು. ಎರಡು ಮೂರು ತಪ್ಪುಗಳನ್ನ ಒಪ್ಪಕೋತೀನಿ. ನಾನು ಬಹಳ ಸ್ಟ್ರಿಕ್ಟ್ ಅಂತ ಒಂದು ಅಪವಾದ ನನ್ನ ಮೇಲೆ ಇದೆ. ನಾನು ಹೇಳ್ತಾ ಇದ್ದದ್ದು ಏನು ಅಂದರೆ, 'ಎಂದೂ ಪಿಎಚ್‌ಡಿಯನ್ನ ನಿಮಗ ಕೊಡೋದಿಲ್ಲ. ನೀವು ಅದನ್ನ ತಗೋಬೇಕಾಗ್ತದ'. ಆಮೇಲೆ ಸಾಮಾನ್ಯ ವಿಷಯ ಕೊಟ್ಟು ಇದನ್ನ ಹ್ಯಾಗೋ ಮುಗಿಸಿರಿ ಅಂತ ಹೇಳಿ ನಾನು ಯಾರಿಗುನೂ ಎನ್‌ಕರೇಜ್ ಮಾಡಿಲ್ಲ. ಮೂರನೇಯದು ಏನು ಅಂತ ಹೇಳಿದರೆ, ಒಂದು ಹಂತದವರೆಗೂ ನನ್ನ ವಿದ್ಯಾರ್ಥಿಗಳು ಒಂದು ಹಂತ ಮುಟ್ಟಿ ಬಹಳ ಸಂತೋಷ ತಂದುಕೊಡ್ತಾ ಇದ್ದರು. ಆದರ ಪರಿಸರದ ಪ್ರಭಾವವೋ ಏನೋ, ಹಂತ ಮುಟ್ಟಿದರು ಅಂದಕೂಡ್ಲೆನೇ, ಅವರಿಗೆ ಒಂದು ತರಹದ ನಿರಾಸಕ್ತಿ ಶುರು ಆಗ್ತಿತ್ತು ಜ್ಞಾನದ ಬಗ್ಗೆ. ಅದರಲ್ಲಿ ನಾನು ಸೋತಿದ್ದೀನಿ. ನನಗೊಂದೊಂದು ಸಾರಿ ಅನುಮಾನ ಬರ್ತದ. ಅಂತರ್ ಶಿಸ್ತೀಯ ಒಂದು ವ್ಯವಸ್ಥೆ ಏನಿದೆಯಲ್ಲಾ, ಅದನ್ನ ಕಟ್ಟೋದು ನಮ್ಮ ದೇಶದೊಳಗ ಬಹಳ ದೊಡ್ಡ ಕಷ್ಟದ. ವ್ಯಕ್ತಿ ಇಂಡಿವಿಜುಯಲ್ಲಾಗಿ ಸಾಧನೆಯನ್ನ ಮಾಡಿಕೊಳ್ಳಲಿಕ್ಕೆ ಆಗ್ತದ. ಸಂಸ್ಥೆಯನ್ನು ಬೆಳೆಸೋದು ಕಷ್ಟ ಅದ.

ಸಂ: ಆಧುನಿಕ ಕನ್ನಡದ ಸಾಹಿತ್ಯದ ನಿಮ್ಮ ಓದಿನ ಬಗ್ಗೆ ಕೇಳಬೇಕು ಅನಿಸ್ತಿದೆ?

ಶೆ: ನನಗೆ ಸಾಕಷ್ಟು ಜನ ಆರಂಭ ಕಾಲದೊಳಗ ಸ್ನೇಹಿತರಿದ್ದರು. ತರಾಸು ನಿಕಟವಾಗಿದ್ದರು. ಅವರು ಹೊಯ್ಸಳರ ಬಗ್ಗೆ ಆಗ ಕಾದಂಬರಿಗಳನ್ನ ಬರೀತಾ ಇದ್ದರು. ನನ್ನ ರೂಮಿಗೆ ಬಂದು ಚರ್ಚೆ ಮಾಡ್ತಾ ಇದ್ದರು. ನಿರಂಜನ ಅವರು ಅತ್ಯಂತ ಸ್ನೇಹದ ವ್ಯಕ್ತಿಯಾಗಿದ್ದರು. ನಾನು ಆಗ ಸಣ್ಣಕತೆಗಳನ್ನ ಬರೀತಾ ಇದ್ದೆ. ಪ್ರಜಾವಾಣೀಲಿ ಚುಟುಕುಗಳನ್ನ ಬರೀತಾ ಇದ್ದೆ. ಸಟಾಯರ್ಸ್ ಬರೀತಾ ಇದ್ದೆ. 'ಸ್ವಾಮಿ, ಇಲ್ಲೇನಾದರೂ ಬಾಡಿಗೆಗೆ ಮನೆ ಇದೆಯಾ?' ಎಂಬ ಲೇಖನ ಇಷ್ಟೊಂದು ಜನರ ಮೆಚ್ಚುಗೆಯನ್ನ ಪಡೀತು ಅಂದ್ರೆ, ನಿರಂಜನರು ಇದನ್ನ ಬರೆದೋನು ನನಗ ಗೊತ್ತಿದ್ದಾನೆ ಅಂತ ಹುಡಕ್ಕೊಂಡು, ಮನೆಗೆ ಬಂದರು. ನನ್ನ ಸ್ನೇಹಿತರು ನನ್ನ ಜತೆ ಓದಿದವರು ದೊಡ್ಡದೊಡ್ಡ ಕವಿಗಳಾದರು. ಆಗಿನ ಪರಿಸರದಲ್ಲಿದ್ದಂತಹ ರಾಜೀವ್ ತಾರಾನಾಥ್, ಲಂಕೇಶ, ಅ ರಾ ಮಿತ್ರ, ಹಂಪನಾ, ಸ್ವಲ್ಪ ಸೀನಿಯರ್ ಆದ ಅನಂತಮೂರ್ತಿ -ಇವರೆಲ್ಲರನ್ನ ನೋಡಿ ನಾವು ಕಲೀತಾ ಇದ್ವಿ. ನಾನು ಮೊದಲು ೩-೪ ವರ್ಷ ಈ ಸಂಶೋಧನೆಯನ್ನ ಮಾಡೇ ಇರಲಿಲ್ಲ. ಲಂಕೇಶ 'ನೀನು ಸಣ್ಣಕತೆ ಬರಿ. ನಿನ್ನ ಭಾಷೆ ಮೆಚ್ಚಿದ್ದೀನಿ' ಅಂತ ಹೇಳ್ತಿದ್ದ. ಆದರ ನನಗ ಎರಡೂ ನಿರ್ವಹಿಸಲಿಕ್ಕ ಸಾಧ್ಯವಾಗಲಿಲ್ಲ. ೧೯೬೫ರ ನಂತರ ನಾನು ಕ್ರಿಯೇಟಿವ್ ಆಗಿ ಬರೆಯೋದನ್ನ ಕಡಿಮೆ ಮಾಡಿಕೊಳ್ತಾ ಹೋದೆ.

ಸಂ: ನಿಮ್ಮನ್ನು ಪ್ರಭಾವಿಸಿದ ಲೇಖಕರು...

ಶೆ: ನಾವೆಲ್ಸ್‌ನಲ್ಲಿ ನಿರಂಜನ ನನಗ ಅಚ್ಚುಮೆಚ್ಚಿನ ಕಾದಂಬರಿಕಾರ. ಕಾರಂತರ ನಾವೆಲ್ಸ್ ಮೊದಲು ಹಿಡಿಸಲಿಲ್ಲ. ಭಾಷೆ ಒಂತರಹ ಆಗ್ತಿತ್ತು. ಆನಂತರ ಕಾರಂತರವರನ್ನ ನಾನು ಬಹಳಷ್ಟು ಮೆಚ್ಚಿಕೊಂಡೆ. ಮುಂದೆ ಅವರಿಗೂ ನನಗೂ ಸಂಪರ್ಕ ಬಂತು. ಕಾರಂತರು ಬರೀ ಕಾದಂಬರಿಕಾರರಾಗಿರಲಿಲ್ಲ, ಸಂಶೋಧಕರೂ ಆಗಿದ್ದರು. ಹಾಲಕ್ಕಿ ಒಕ್ಕಲಿಗರ ಬಗ್ಗೆ ೧೯೬೫ರಲ್ಲಿ ಸರ್ವೇಕ್ಷಣೆ ಮಾಡ್ತಾ ಇದ್ದೆ. ಆಗ ಬಂದಂತಹ ಕೆಲವು ಪ್ರಶ್ನೆಗಳಿಗೆ ಪತ್ರ ಬರೆದಾಗ, ಅವರು ಉತ್ತರಿಸಿದ್ದು ಇನ್ನೂ ನೆನಪಿದೆ. ಅವರ ವ್ಯಕ್ತಿತ್ವ ಬಹಳ ದೊಡ್ಡದು. ನನಗ ಈಗಲೂ ಪೂಜ್ಯವಾದ ವ್ಯಕ್ತಿ ಅಂತ ಅಂದ್ರ ಕಾರಂತರು.

ಸಂ: ಶಂಬಾ ನಿಮಗ ಹತ್ತಿರ ಇದ್ದರು. ಅವರ ಸಂಶೋಧನೆ ಮೇಲೆ ನಿಮ್ಮ ಕಾಮೆಂಟ್ ತಿಳಿಯುವ ಕುತೂಹಲವಿದೆ.

ಶೆ: ಅವರ ಸಂಪರ್ಕ ಬಂದಿತ್ತು ನನಗ. 'ಹಾಲುಮತ ದರ್ಶನ' ಓದಿ ಟೀಕೆ ಮಾಡಿದ್ದಕ್ಕ ಆ ಪುಸ್ತಕಾನೂ ಕೊಟ್ಟಿದ್ದರು ನನಗ. ನನ್ನನ್ನ ನಾನು ಮೋಸಪಡಿಸಿಕೊಳ್ಳದೇ ಹೇಳೋದಾದರೆ, ಎಷ್ಟು ಶ್ರಮ ಪಟ್ಟೆನೋ ಅಷ್ಟು ಅವರು ಅರ್ಥವಾಗದೇ ಹೋದರು. ಎಷ್ಟು ಸಮಸ್ಯೆಗಳನ್ನ ಚರ್ಚೆ ಮಾಡತಿದ್ದೇನೋ ಅವು ಅಷ್ಟು ಜಟಿಲವಾಗ್ತಾ ಹೋದ್ವು. ಅದಕ್ಕ ಅವರು ಪರಿಹಾರ ಕೊಡ್ತಾರ ಅಂತ ಅನ್ನಿಸಲಿಲ್ಲ ಅಥವಾ ಅವರನ್ನ ಅರ್ಥ ಮಾಡಿಕೊಳ್ಳೋ ಶಕ್ತಿ ನನಗಿರಲಿಲ್ಲ ಅಂತ ಅನ್ನಸ್ತದ. ಅದಕ್ಕೋಸ್ಕರ ಅವರ ಸಂಪರ್ಕ ನಿಕಟವಾಗಲಿಲ್ಲ. ಆದರೆ ಅವರ ವಿದ್ವತ್ತು ಬಹಳ ದೊಡ್ಡದು ಅಂತ ಗುರುತಿಸ್ತೀನಿ. ದೊಡ್ಡದು ಅಲ್ಲ ಅಂತ ಹೇಳಬೇಕಾದಾಗ ಅಂತಹ ಶಕ್ತಿ ಬೇಕಾಗುತ್ತೆ. ನನ್ನ ದೃಷ್ಟಿಕೋನ ಮೈ ಕಪ್ ಆಫ್ ಟಿ.

ಸಂ: ಇವತ್ತಿನ ನಿಮ್ಮ ಉಪನ್ಯಾಸಕ್ಕೆ ಸಂಬಂಧಿಸಿದಂತೆ ಕೇಳ್ತಾ ಇದೀನಿ. ಶಾಸನಗಳನ್ನ ಕುರಿತು ನಮ್ಮ ಜನರಿಗೆ ಆಸಕ್ತಿ ಇಲ್ಲ, ವಿದೇಶಿಯರು ಬಂದು ಶಾಸನಗಳನ್ನ ಓದಿ ಹೇಳಬೇಕಾಯಿತು ಅಂದಿರಿ. ಪ್ರಶ್ನೆ ಅಂದರೆ, ಜನಕ್ಕೆ ತಮ್ಮ ಪೂರ್ವಜರಿಗೆ ಸಂಬಂಧಿಸಿದಂತಹ ಸಂಗತಿಗಳು, ಅವು ಮನೆಪಕ್ಕ ಇದ್ದರೂ ಸಹ, ಯಾಕೆ ಇಂತಹ ಮರೆವು ಬರುತ್ತೆ? ಇದು ಕೇವಲ ನಿರಾಸಕ್ತಿ ಪ್ರಶ್ನೆಯಾಗಿರುತ್ತಾ?

ಶೆ: ಹಂಗಂದ್ರ ಮತ್ತೇನು ಆಗಿರ್ತದ?

ಸಂ: ನನಗೆ ಗೊತ್ತಿಲ್ಲ. ಆದ್ರೆ, ಒಂದು ಭಾಷಿಕ ಸಮುದಾಯವೇ ಅದರ ತಿಳುವಳಿಕೆಯನ್ನ ಬಿಟ್ಟುಕೊಟ್ಟಿದೆ ಅಂದರೆ, ಬೇರೆ ಗಹನವಾದ ಕಾರಣಗಳಿರಲೇ ಬೇಕು. ನಿರಾಸಕ್ತಿ ಅನ್ನೋದು ಸರಳೀಕರಣ ಆಗಬಹುದು. ಇಡೀ ಸಮುದಾಯದ ಮೇಲೆ ಮಾಡೋ ಆಪಾದನೆಯಾಗಿ ಬಿಡಬಹುದೇನೋ ಅನ್ನೋ ಭಯ ನನಗಿದೆ.

ಶೆ: ನಮ್ಮ ದೇಶದೊಳಗ ಪರಂಪರೆಯ ಸಂಪತ್ತು ಏನಿದೆ ಇದು ಅತಿಯಾಗಿ ಬೆಳೀತು. ಇದು ಕಡಿಮೆ ಆಗಿದ್ದರೆ ನಮಗೆ ಆಸಕ್ತಿ ಹೆಚ್ಚಾಗತಿತ್ತೋ ಏನೋ ಅನ್ನಸ್ತದ.

ಸಂ: ನನಗೆ ಬೇರೆ ಹೊಳೀತಿದೆ. ವರ್ತಮಾನದ ಬದುಕಿನ ಕಷ್ಟಸುಖಗಳಿಗೆ ಲಗತ್ತಾಗದ ಯಾವುದನ್ನೂ ಸಮುದಾಯ ತನ್ನ ನೆನಪಿನಿಂದ ಆಚೆಗೆ ಹಾಕಿಬಿಡ್ತದೆ ಅಂತ ಅನಿಸ್ತಿದೆ.

ಶೆ: ನಮ್ಮ ಸಮಾಜದಲ್ಲಿ ಅಂತಹದು ಇದೆ. ಯಾತಕ್ಕಂದರೆ, ನೋಡಿ ಒಂದುಶಾಸನ ಬರೆಸಿ ಇಡಬೇಕಾದಾಗ ಅದರ ಉದ್ದೇಶ ಏನಾಗಿತ್ತು ಅಂತ ಹೇಳಿದರೆ, ಕೊಟ್ಟ ದಾನ ಇಸಕೊಂಡವನಿಗೂ ಕೊಟ್ಟವನಿಗೂ ಸಂಬಂಧ ಇತ್ತು. ಈ ಕೊಡುಕೊಳ್ಳುವಿಕೆಯಿಂದ ದೂರ ಉಳಿದಂತಹ ಜನರು ಸಮಾಜದಲ್ಲಿ ಬಹಳಷ್ಟು ಇದ್ರು. ಅವರು ದೂರ ನಿಂತುಕೊಂಡು ನೋಡ್ತಾ ಇದ್ದರು. ವೈಯಕ್ತಿಕವಾಗಿ ಅದರಲ್ಲಿ ಭಾಗವಹಿಸಲಿಕ್ಕೆ ಸಾಧ್ಯವಾಗ್ತಾ ಇರಲಿಲ್ಲ. ನಾಳೆ ಆ ಶಾಸನ ಹಾಳಾದರೆ ಅವರಿಗೇನು ಆತಂಕ ಇರಲಿಲ್ಲ.

ಸಂ: ಆದರೂ ನಮ್ಮ ಜನರಿಗೆ ಇತಿಹಾಸ ಪ್ರಜ್ಞೆ ಯಾವುದೋ ಬೇರೊಂದು ಮಾದರಿಯಲ್ಲಿ ಇದ್ದೇ ಇತ್ತು. ವಿಜಯನಗರ ಉದಾಹರಣೆ ಇಟ್ಟುಕೊಂಡು ಹೇಳೋದಾದ್ರೆ, ಶಿಷ್ಟ ಇತಿಹಾಸ ಪರಂಪರೆಗೆ ರಾಷ್ಟ್ರೀಯವಾದಿ ಇತಿಹಾಸಕಾರರಿಗೆ ಕೃಷ್ಣದೇವರಾಯ ವಿಜಯನಗರದ ಚರಿತ್ರೆ ಮುಖ್ಯ. ಆದರೆ ಹಂಪಿ ಸುತ್ತಮುತ್ತ ಇರುವ ಜನಸಮುದಾಯ ವಿಜಯನಗರ ಇತಿಹಾಸದ ಬಗೆಗೆ ಹೆಚ್ಚಿನ ನೆನಪನ್ನ ಇಟ್ಟಿಲ್ಲ. ಆದರೆ ಕಾಲದ ದೃಷ್ಟಿಯಿಂದ ಇನ್ನೂ ಹಿಂದೆ ಇದ್ದ ಕುಮಾರರಾಮನ ಬಗ್ಗೆ ದೊಡ್ಡ ಕಾವ್ಯವನ್ನ ಕಟ್ಟಿ ಹಾಡ್ತಾ ಇದೆ. ಇದು ಏನನ್ನು ಸೂಚಿಸುತ್ತಿರಬಹುದು?

ಶೆ: ನೋಡಿ, ಇದು ದೊಡ್ಡ ಪ್ರಶ್ನೆ. ಇದಕ್ಕ ಸಮರ್ಪಕ ಉತ್ತರ ಕೊಡೋದು ನನಗ ಕಷ್ಟವಾಗುತ್ತದೆ. ಕುಮಾರರಾಮನಿಗೆ ಇದ್ದಂತಹ ಒಂದು ಅಂತಸ್ತು ಕರ್ನಾಟಕದ ಇತಿಹಾಸ ಅಷ್ಟೇ ಅಲ್ಲ, ದಕ್ಷಿಣ ಇತಿಹಾಸದಲ್ಲೂ ಅಪರೂಪ. ಸಾಮಾನ್ಯವಾದ ಒಂದು ಯುದ್ಧ ಮಹಾಭಾರತ ಸ್ವರೂಪ ಪಡೆದುಕೊಂಡ ಹಾಗೆ, ಕುಮಾರರಾಮನ ಒಂದು ಘಟನೆ ಇಷ್ಟೊಂದು ಪ್ರಸಿದ್ಧಿ ಆಗಿದೆ ಅಂತ ಅನ್ನಸ್ತದ. ಇದಕ್ಕೊಂದು ಕಾರಣ ಹುಡುಕಿ ತೆಗೀಬೇಕು ಅಂತ ಹೇಳಿದರೆ, ದೊಡ್ಡ ರಾಜ್ಯಗಳು ದಾಳಿಗೆ ಆಹುತಿಯಾದಾಗ ಒಬ್ಬನಾದರೂ ಪ್ರತಿರೋಧ ಮಾಡಿದನಲ್ಲಾ ಅಂತ ಹೇಳಿ ಬಹುಶಃ ಅವನ ವೀರತ್ವವನ್ನು ಮೆಚ್ಚಿಕೊಂಡು ಆ ಕಾವ್ಯ ಕತೆ ಬೆಳಕೊಂಡು ಬಂತು.

ಸಂ: ವೀರನ ಸಾವು ದುರಂತ ಆಗಿರೋ ಕಾರಣಕ್ಕೇನೆ ನೆನಪಿಟ್ಟುಕೊಂಡಿದೆ ಅನ್ನಬಹುದೇ?

ಶೆ: ಅದನ್ನ ಗಮನಕ್ಕ ತಗೋಬಹುದು. ಆದರ ಅದು ಅಂತಿಮ ಸ್ವರೂಪ ಕೊಟ್ಟಿರಲಿಕ್ಕಿಲ್ಲ. ರಾಮರಾಯನದು ಟ್ರಾಜಿಕ್‌ಡೆತ್. ಮುಮ್ಮಡಿ ಬಲ್ಲಾಳನದು ಟ್ರಾಜಿಕ್‌ಡೆತ್. ಇವ್ರು ಹೋರಾಟ ಮಾಡ್ತಾ ಮಾಡ್ತಾ ಯುದ್ಧದಲ್ಲಿ ಆಕಸ್ಮಿಕವಾಗಿ ಸತ್ತವರು. ಕುಮಾರರಾಮ ನಿಶ್ಚಿತವಾಗಿ ಸಾವು ಐತಿ ಅಂತ ಗೊತ್ತಿದ್ದೂ ಹೋರಾಡಿ ಸತ್ತವನು. ಬಹುಶಃ ತನ್ನ ಜನಾಂಗದೊಳಗ ಅಸಾಮಾನ್ಯನಾಗಿದ್ದಂತಹ ವ್ಯಕ್ತಿ ಇವನಾಗಿದ್ದ. ಮೊದಲು ಜನಾಂಗ ಸಮಾಜ ಒಪ್ಪಬೇಕು. ಕೆಲವು ವರ್ಗಗಳಲ್ಲಿ ಮಾತ್ರ ಅವನ ಪರಿಚಯ ಉಳೀತು. ಕುಮಾರರಾಮನ ಬಗ್ಗೆ ಸಂಸ್ಕೃತದಲ್ಲಾಗಲೀ, ಶಿಷ್ಟಭಾಷೆಯಲ್ಲಾಗಲೀ ಏನಾದರುನೂ ಬಂದಿದ್ದು ಅನಂತರ. ಸಮಕಾಲೀನವಾಗಿ ಈ ಜನಪದ ಸಾಹಿತ್ಯದ ಮೂಲಕ ಪ್ರಸಿದ್ಧಿ ಪಡೆದಿದ್ದಕ್ಕೋಸ್ಕರನೇ ಅವನು ಚಿರಸ್ಥಾಯಿಯಾಗಿ ಉಳಕೊಂಡ.

ಸಂ: ಆಳುವದೊರೆಗಳ ವರ್ಗಕ್ಕೆ ಸೇರಿದ್ದರೂ ಕೂಡ ಕೆಲವರನ್ನು ಮಾತ್ರ ಸಮುದಾಯಗಳು ಆರಿಸಿಕೊಂಡು ತಮ್ಮವನ್ನಾಗಿ ಮಾಡಿಕೊಳ್ಳುತ್ತವೆ. ಮತ್ತೆ ಕೆಲವರ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನ ತೋರಿಸುತ್ತವೆ. ಜನರ ಈ ಆಯ್ಕೆ ಪ್ರಜ್ಞೆಯ ಬಗ್ಗೆ ಇನ್ನೂ ವಿಶ್ಲೇಷಣೆ ಆಗಬೇಕಾಗಿದೆ.

ಶೆ: ಓರಲ್ ಟ್ರೆಡಿಶನ್ ಮೂಲಕ ಇತಿಹಾಸ ಪ್ರಜ್ಞೆ ಬಹಳಷ್ಟು ಜನಾಂಗದೊಳಗ ಉಳಿದಿದೆ. ಶೂದ್ರ ಬುಡಕಟ್ಟು ಜನಾಂಗದೊಳಗ ಹೆಚ್ಚು ಉಳೀತದ ಆ ಶಕ್ತಿ. ಈಗ ನೋಡಿ, ಕಂಪಿಲರಾಯನ ಬಗ್ಗೆ ಕುಮಾರರಾಮನ ಬಗ್ಗೆ ಕಾವ್ಯಗಳಲ್ಲಿ ಸಿಗ್ತಾಯಿದೆ. ಶಾಸನಗಳಲ್ಲಿ ಸಿಗ್ತಾಯಿಲ್ಲ.

ಸಂ: ಸರ್, ಭಾಷಣದಲ್ಲಿ 'ಮುಸ್ಲಿಮರ ದಾಳಿ' ಅಂತ ಒಂದು ಪದ ಬಳಸಿದಿರಿ. ರಾಜಕೀಯ ದಾಳಿಗಳ ಹಿಂದೆ ಸಾಮ್ರಾಜ್ಯಗಳನ್ನು ಕಟ್ಟುವ ಆಶಯಗಳು ಇರ್ತವೆ. ಆಳುವವರ್ಗಗಳ ಹಿತಾಸಕ್ತಿ ಇರ್ತವೆ. ಅಧಿಕಾರದ ಹಂಬಲಗಳು ಇರ್ತವೆ. ಅದನ್ನ ಒಂದು ಧಾರ್ಮಿಕ ಸಮುದಾಯ ಮಾಡಿದ್ದು ಎಂಬರ್ಥದ ಪರಿಭಾಷೆಯಲ್ಲಿ ಇತಿಹಾಸಕಾರರು ವಿವರಿಸುತ್ತ ಬಂದಿದ್ದಾರೆ. ನೀವೂ ಅದನ್ನು ಬಳಸಿದಿರಿ...

ಶೆ: ಇಲ್ಲ. ಒಂದು ಘಟ್ಟದೊಳಗ ಧರ್ಮ ಸ್ವರೂಪವನ್ನು ಪಡೆದುಕೊಂಡಂತಹ ಸಮಾಜ ದಾಳಿ ಮಾಡಿದ್ದಕ್ಕೋಸ್ಕರ, ಉದಾಹರಣೆಗೆ ಹೂಣರ ಧಾಳಿ ಅಂತ ಹೇಳ್ತೀವಿ. ಗ್ರೀಕರ ದಾಳಿ ಅಂತೀವಿ. ಅಲ್ಲಿ ಜನಾಂಗದ ಮಾತು ಇದೆ. ಅದನ್ನ ಒಂದು ಜನಾಂಗದ ದೃಷ್ಟಿಯಿಂದಾನೂ ನೋಡಬಹುದು.

ಸಂ: 'ವಿಜಯನಗರದವರ ದಾಳಿ' 'ಹೊಯ್ಸಳರ ಸೈನ್ಯ' ಅಂತ ಬಳಸುವಾಗ ಧಾರ್ಮಿಕ ಸಮುದಾಯದ ಪರಿಭಾಷೆ ಬಳಕೆ ಮಾಡೋದಿಲ್ಲ. ಅದೇ ತರಹ ಆದಿಲ್‌ಶಾಹಿಗಳ ದಾಳಿ, ಮೊಗಲರ ದಾಳಿ ಎಂದು ರಾಜವಂಶ ಅಥವಾ ರಾಜ್ಯದ ಸ್ಪೆಸಿಫಿಕೇಶನಲ್ಲಿ ಬಳಸಬಹುದಿತ್ತು.

ಶೆ: ನೋಡಿ, ಎರಡು ಘಟ್ಟಗಳು ಇದ್ದಾವೆ. ಮೊದಲನೇ ಘಟ್ಟದೊಳಗ ಬಂದಂತಹವರ ಸೈನ್ಯ, ಸೈನ್ಯಕ್ಕಿಂತ ಹೆಚ್ಚಾಗಿ ಅವರ ನಾಯಕತ್ವ, ಒಂದೇ ಒಂದು ಧರ್ಮಕ್ಕೆ ಸಂಬಂಧಪಟ್ಟದ್ದು ಅಂತಹೇಳಿ ಈ ಪದಗಳನ್ನ ಸ್ಥೂಲವಾಗಿ ನಾವು ಉಪಯೋಗಿಸ್ತೀವಿ. ಅನಂತರ ಮಾತಾಡ್ತಿರಬೇಕಾದಾಗ ಆದಿಲ್‌ಶಾಹಿ, ಮೊಗಲರು, ತುಘಲಕರು, ಅಂತ ಗುರುತಿಸ್ತೀವಿ.

ಸಂ: ಅನಂತರದ ಘಟ್ಟದಲ್ಲೂ ಗುರುತಿಸುತ್ತಿಲ್ಲವಲ್ಲ. ಈ ಪದಗಳಿಗೆ ಚರಿತ್ರೆಯನ್ನು ಸಮಕಾಲೀನ ರಾಜಕಾರಣಕ್ಕೆ ತಂದು ದುರ್ಬಳಕೆ ಮಾಡುವ ಉದ್ದೇಶವಿರುವುದರಿಂದ ಈ ಸಮಸ್ಯೆ.

ಶೆ: ಅದನ್ನ ದುರ್ಬಳಕೆ ಮಾಡಿದರೆ ತಪ್ಪು ಅದು.

ಸಂ: ಬಹಮನಿರಾಜ್ಯ ಒಡೆದು ಹುಟ್ಟಿದ ಐದು ಶಾಹಿ ಮನೆತನಗಳು ಮಾಡಿದ ಶೇಕಡಾ

ತೊಂಬತ್ತರಷ್ಟು ಯುದ್ಧಗಳು, ಅವರ ನಡುವೆಯೇ ನಡೆದಂತಹ ಯುದ್ಧಗಳು ಅಥವಾ ಮೊಗಲರ ವಿರುದ್ಧ ನಡೆಸಿದ ಯುದ್ಧಗಳು. ಆಗ ಧಾರ್ಮಿಕ ಸಮುದಾಯ ಸೂಚಕ ಪದಗಳನ್ನು ಬಳಸ್ತೀರಾ?

ಶೆ: ಇಲ್ಲ. ಅಲ್ಲಿ ಬರೀ ಡೈನಾಸ್ಟಿ ಬಗ್ಗೆ ಮಾತಾಡ್ತೀವಿ. ಔರಂಗಜೇಬ, ತುಘಲಕ್, ಖಿಲ್ಜಿ ಅಂತ ಮಾತ್ರ ಮಾತಾಡ್ತೀವಿ. ಆದರ ಮೊದಲು ನಾನು ಹೇಳಿದೆನಲ್ಲ, ಗ್ರೀಕ್ ಧಾಳಿ ಅಂತ ನಾವು ಕೇಳಬೇಕಾದಾಗ ಅಲೆಕ್ಸಾಂಡರ್ ಒಬ್ಬನೇ ವ್ಯಕ್ತಿಯಾಗಿರಬಹುದು.

ಸಂ: ಗ್ರೀಕ್ ಎಂಬುದು ರಿಲಿಜಿಯಸ್ ಪರಿಭಾಷೆ ಅಲ್ವಲ್ಲ ಸಾರ್.

ಶೆ: ಆ ಪರಿಸರದೊಳಗ ಅಲ್ಲ. ಈ ಪರಿಸರದೊಳಗ ಹೌದು. ನಾನು ಧಾರ್ಮಿಕ ಪರಿಭಾಷೆ ಬಳಕೆ ಮಾಡೋದಿಲ್ಲ. ಮೊದಲ ಘಟ್ಟದೊಳಗ ದಾಳಿ ಮಾಡಿದ ಸೈನ್ಯದ ನಾಯಕರನ್ನ ಗುರ್ತಿಸಲಿಕ್ಕೆ ಸುಲಭವಾದ ಮಾರ್ಗ ಅಂತ ಬಳಕೆ ಇದ್ದದ್ದರಿಂದ ನಾನು ತಾಳ್ಮೆಯಿಂದ ನೋಡ್ತೀನಿ. ಅದನ್ನ ಲೆಜಿಟಿಮೈಜ್ ಮಾಡ್ತಾಯಿಲ್ಲ.

ಸಂ: ಧಾರ್ಮಿಕ ಪರಿಭಾಷೆ ಬಳಕೆಯಿಂದ ಫ್ಯೂಡಲ್ ದಾಳಿಗಳ ಹಿಂದೆ ಇರುವ ರಾಜಕೀಯ ಆರ್ಥಿಕ ಕಾರಣಗಳನ್ನು ವಿಶ್ಲೇಷಿಸಲು ಸಾಧ್ಯ ಆಗ್ತಾ ಇಲ್ಲ.

ಶೆ: ಇದಾಗುತ್ತೆ.

ಸಂ: ಇದಕ್ಕೆ ಲಗತ್ತಾಗಿ ಕೇಳಬಹುದಾದ ಪ್ರಶ್ನೆ ಅಂದರೆ, ಇತ್ತೀಚಿಗೆ ಚರಿತ್ರೆಕಾರರ ಮೇಲೆ ಇತರೆ ಶಾಖೆಗಳ ಮೇಲೆ ಇಲ್ಲದ ಒತ್ತಡಗಳು ಬಿದ್ದಂತಿವೆ. ರಾಜಕೀಯ ನೆಲೆಯಿಂದ ಬರುವ ಇಂತಹ ಒತ್ತಡಗಳ ಸ್ವರೂಪವನ್ನ ಚರಿತ್ರೆಕಾರರಾಗಿ ನೀವು ಹೆಂಗೆ ಗಮನಿಸ್ತೀರಿ?

ಶೆ: ಸಾಮಾಜಿಕ ರಾಜಕೀಯ ಒತ್ತಡಗಳು ಚರಿತ್ರೆಕಾರರ ಮೇಲೆ ಯಾವಾಗ್ಲೂ ಇವೆ. ಚರಿತ್ರೆ ಸತ್ಯವನ್ನ ಪೂರ್ತಿ ಹೊರಗೆಡಹಲಿಕ್ಕೆ ಅಥವಾ ಹಿಡಕೊಳ್ಳಿಕ್ಕೆ ಸಾಧ್ಯವಾಗೋದಿಲ್ಲ. ಅದು ಸತ್ಯವನ್ನ ಪ್ರತಿಪಾದನೆ ಮಾಡೋದಿಲ್ಲ. ಪೂರ್ತಿವಸ್ತುವನ್ನು ಕೂಡಾನೂ ಪ್ರವೇಶ ಮಾಡೋದಿಲ್ಲ. ಒಂದು ವಸ್ತು ಒಬ್ಬ ಇತಿಹಾಸಕಾರನ ಮನಸಿನ ಮೂಲಕ ಅವನ ಆಲೋಚನೆಯನ್ನ ಅಳವಡಿಸಿಕೊಂಡು ಹೊರಬರುವುದರಿಂದ, ಇಲ್ಲಿ ಕೆಲವು ಮಟ್ಟಿಗೆ ಇತಿಹಾಸ ಅನ್ನೋದು ಸಬ್ಜೆಕ್ಟಿವ್ ಆಗುತ್ತೆ. ಆಬ್ಜೆಕ್ಟಿವ್ ಹಿಸ್ಟರಿ ಅನ್ನೋದು ಒಂದು ಕನಸು. ಒಬ್ಬ ವ್ಯಕ್ತಿಗೆ ಯಾವುದು ಆಬ್ಜೆಕ್ಟಿವ್ ಆಗಿ ಕಾಣಿಸುತ್ತೋ, ಅದು ಇನ್ನೊಬ್ಬನಿಗೆ ಸಬ್ಜೆಕ್ಟಿವ್ ಆಗಿ ಇರುತ್ತೆ. ಇಷ್ಟು ದಿವ್ಸ ನಮಗೆ ರಾಜಕೀಯ ಪ್ರಭಾವ ಸ್ಥೂಲವಾದ ಒಂದು ಭಾವನಾತ್ಮಕ ರೀತಿಯಲ್ಲಿ ಇತ್ತು. ಇತ್ತೀಚಿನ ಕಾಲದೊಳಗ ನೇರವಾಗಿ ಪಾರ್ಟಿಸಿದ್ಧಾಂತಕ್ಕೆ ಸಂಬಂಧಪಟ್ಟ ಪ್ರಭಾವಕ್ಕೆ ಒಳಗಾಗಲಿಕ್ಕೆ ಇತಿಹಾಸಕಾರರು ಆತುರರಾಗಿದ್ದಾರೇನೋ ಅನ್ನಿಸುತ್ತೆ. ಒಬ್ಬನಿಗೆ ನಾನು ಲೆಫ್ಟಿಸ್ಟ್ ಅಂತ ಹೇಳಿಕೊಳ್ಳೋದು ಹೆಮ್ಮೆಯ ಮಾತಾದರೆ, ನಾನು ರೈಟಿಸ್ಟ್ ಅಂತ ಹೇಳಿಕೊಳ್ಳೋದು ಮತ್ತೊಬ್ಬನಿಗೆ ಹೆಮ್ಮೆಯ ಮಾತಾಗಿದೆ. ಈ ಒಂದು ಪರಿಸರ ಏನಿದೆ, ಇದು ಒಂದು ಸಿದ್ಧಾಂತಕ್ಕೆ ನಿಮ್ಮನ್ನ ಸ್ಲೇವನ್ನಾಗಿ ಮಾಡಿದೆ. ಇಂತಹ ಒಂದು ಒತ್ತಡ ಇತಿಹಾಸಕಾರರಿಗೆ ಗಣಿಾಂ-

೬೦ರ ವರೆಗುನೂ ಇರ್ಲಿಲ್ಲಾ ಅಂತ ಅನ್ನಿಸುತ್ತೆ. ಇತಿಹಾಸಕಾರರಿಗೂ ರಾಜಕೀಯ ವ್ಯಕ್ತಿಗಳಿಗೂ ಈಗ ನೇರವಾದ ಸಂಪರ್ಕ ಏರ್ಪಟ್ಟಿದೆ. ಅಷ್ಟೇಅಲ್ಲ, ಅದು ದಟ್ಟವಾಗುತ್ತಿದೆ.

ಸಂ: ಯಾವುದೇ ರಾಜಕೀಯ ದೃಷ್ಟಿಕೋನರಹಿತವಾದ ಚಿಂತನೆ ಇರ್ತದೆ ಅಂತ ಅನ್ನಿಸ್ತದಾ? ವಿದ್ವಾಂಸರಿಗೆ ರಾಜಕೀಯ ಪಕ್ಷಗಳ ಜತೆಗಿನ ಸಂಬಂಧ ಬೇರೆ ಮತ್ತು ರಾಜಕೀಯ ದೃಷ್ಟಿಕೋನ ಇರುವುದು ಬೇರೆ.

ಶೆ: ಯಾವತ್ತೂ ವೈಯಕ್ತಿಕ ಸಂಬಂಧ ಬೇರೆ, ವೃತ್ತಿ ಸಂಬಂಧ ಬೇರೆ ಅಂತ ಹೇಳಿ ಇರ್ತದ. ಚರಿತ್ರೆಕಾರನಿಗೆ ಈ ಸಂಬಂಧ ಬರೋದಿಲ್ಲ. ಪಕ್ಷಸಂಬಂಧವನ್ನು ಕೆಲವರು ಇಟ್ಟುಕೊಂಡು ಪ್ರತಿಪಾದನೆ ಮಾಡ್ತಿದಾರೆ. ಇದರ ಬಗ್ಗೆ ಆತಂಕವಾಗ್ತದ. ಆದರೆ ನಿರಾಶರಾಗಬೇಕಾಗಿದ್ದಿಲ್ಲ. ಇದು ಪಾಸಿಂಗ್ ಫೇಸ್ ಅಷ್ಟೆ. ಯಾಕಂದರ ಇತಿಹಾಸವನ್ನು ಒಬ್ಬ ವ್ಯಕ್ತಿ ಒಂದು ಸಿದ್ಧಾಂತದ ಮೂಲಕ ಪ್ರತಿಪಾದಿಸಲಿಕ್ಕೆ ಬರೋದಿಲ್ಲ. ಇತಿಹಾಸವನ್ನು ಪುನಃಪುನಃ ನಿರ್ಮಾಣ ಮಾಡಬೇಕಾಗಿರುವುದರಿಂದ, ಇವತ್ತು ಯಾರು ಅಧಿಕಾರದಲ್ಲಿದ್ದಾರೋ ಅವರು ಆಡಂಬರದಿಂದ ಅದನ್ನ ಪ್ರತಿಪಾದನೆ ಮಾಡಬಹುದು. ಲಾಭ ಪಡೆದುಕೊಳ್ಳೋದಕ್ಕೋಸ್ಕರಾನೇ ಕೆಲವರು ಅದನ್ನು ಒಪ್ಪಿಕೋಬಹುದು. ಆದರ ಅದು ಶಾಶ್ವತವಾಗಿ ಉಳೀತದ ಅಂತ ನನಗ ಅನ್ನಿಸೋದಿಲ್ಲ. ಈಗ ವಿಚಾರ ಮಾಡೋಣ. ವೈಚಾರಿಕತೆ ಎಡಪಂಗಡದವರಿಗೆ ಮಾತ್ರ ಇರತಕ್ಕಂತಹ ಸ್ವಾಮ್ಯ ಅಲ್ಲ. ಅದರಂತೆ ದೇಶಪ್ರೇಮ ಅನ್ನುವಂತಹದ್ದು ಕೆಲವು ಪಾರ್ಟಿಗಳಿಗೆ ಮಾತ್ರ ಅಲ್ಲ. ಪ್ರತಿಯೊಬ್ಬ ಮನುಷ್ಯನಲ್ಲೂ ದೇಶಪ್ರೇಮ, ಸಾಂಸ್ಕೃತಿಕಪ್ರೇಮ ಇದ್ದೇ ಇರ್ತದ. ಯಾವ ಮನುಷ್ಯ ಅನವಶ್ಯಕವಾದ ಪ್ರಶ್ನೇನ ಅವಶ್ಯಕ ಅನ್ನೋ ಭ್ರಮೆಯಲ್ಲಿ ಕಲ್ಪಿಸಿಕೊಂಡು ಅದನ್ನು ಬೆಳೆಸಿಕೊಳ್ಳತಾನೋ, ಅವನು ನಿಜವಾದ ಇತಿಹಾಸಕಾರನಲ್ಲ ಅಂತ ನನಗನ್ನಸ್ತದ.

ಸಂ: ನೀವು ಐಸಿಎಚ್‌ಆರ್‌ನ ಚೇರಮನ್ ಆದ ಮೊದಲ ಕನ್ನಡಿಗರು. ಈಗ ನೀವು ಹೇಳ್ತಾ ಇರೋ ಈ ಅಭಿಪ್ರಾಯಗಳು ಅಲ್ಲಿನ ಅನುಭವದಿಂದ ಬಂದವು ಅಂತ ತಿಳೀಬಹುದಾ?

ಶೆ: ಸಾಕಷ್ಟು. ಐಸಿಎಚ್‌ಆರ್‌ನ ಕುರ್ಚಿ ಮೇಲೆ ನಾ ಕುಂತಾಗ, ನನಗ ಸ್ನೇಹಿತರೂ ಇಲ್ಲ ಶತ್ರುಗಳೂ ಇಲ್ಲ ಅಂತ ನಾನು ಭಾವನೆ ಮಾಡಿಕೊಂಡಿದ್ದೆ. ಆದರ ತಮ್ಮವನನ್ನಾಗಿ ಮಾಡಿಕೊಳ್ಳಬೇಕಂತ ಎರಡೂ ಪಂಗಡದವರೂ ಪ್ರಯತ್ನಪಟ್ಟರು. ಇವತ್ತು ನಾನು ಸ್ನೇಹಿತರಿಲ್ಲದಂತಹ ಸ್ಥಿತಿ ಮುಟ್ಟಿದೀನಿ. ಇದಕ್ಕ ಕಾರಣ, ಅವರ ಜತೆಗೆ ನಾನು ಸೇರ್ಕೊಂಡಿದ್ದರ ಅವ್ರು ನನ್ನನ್ನ ಹೆಚ್ಚು ಗೌರವಿಸುತ್ತಿದ್ದರು. ನನಗ ಆ ತರಹದ ಗೌರವ ಬೇಕಾಗಿರಲಿಲ್ಲ. ನಾನು ವಸ್ತುವನ್ನು ಗಮನದಲ್ಲಿ ಇಟ್ಟುಕೊಳ್ತಾ ಇದ್ದೆ. ವ್ಯಕ್ತಿಯನ್ನಲ್ಲ.

ಸಂ: ಈ ಎರಡೂ ಬಣಗಳಿಗೆ ಸೇರದ ಒಂದು ಮಧ್ಯಬಿಂದುವಿನ ತಾತ್ವಿಕ ನಿಲುವನ್ನು ಐಸಿಎಚ್‌ಆರ್‌ಗೆ ದೊರಕಿಸಿಕೊಳ್ಳಲು ಪ್ರಯತ್ನಿಸಿದರಾ?

ಶೆ: ಮೊದಲು ಇತಿಹಾಸವನ್ನು ಬರೀಬೇಕಾಗಿದ್ದು ನಮ್ಮ ಕರ್ತವ್ಯ. ಯಾವ ಇತಿಹಾಸವನ್ನ, ಯಾವ ಸ್ವರೂಪದಲ್ಲಿ ಬರೀಬೇಕಾದದ್ದು, ಯಾವ ತರಹ ಬರೀಬೇಕಾದದ್ದು, ಅನ್ನೋದರಲ್ಲಿ ನಮ್ಮ ವಿಧಾನಗಳನ್ನ ಆಯ್ಕೆ ಮಾಡಿಕೊಳ್ಳಬೇಕು. ಅದು ಮುಖ್ಯವಾದ ವಿಷಯ. ನಾನು ರಾಜಕೀಯ ಇತಿಹಾಸವನ್ನ ಬರೆದಿಲ್ಲ. ಅದಕ್ಕೋಸ್ಕರನೇ ನನಗ ರಾಜಕೀಯ ಪ್ರತಿಪಾದನೆ ಮಾಡಬೇಕಾದಂತಹ ಅವಶ್ಯಕತೆ ಬಂದಿಲ್ಲ. ಅದಕ್ಕ ಸಿದ್ಧಾಂತಕ್ಕ ಒಳಗಾಗದ ಇತಿಹಾಸ ರಚನೆಯೇ ನನಗ ಮುಖ್ಯವಾಗಿರೋದರಿಂದ, ಎರಡೂ ಪಂಗಡಕ್ಕೆ ದೂರವಾಗೇ ನಿಂತುಕೊಂಡು ನನ್ನ ಕರ್ತವ್ಯವನ್ನ ನಿಭಾಯಿಸಿದ್ದೀನಿ.

ಸಂ: ಸಿದ್ಧಾಂತರಹಿತವಾದ ಚರಿತ್ರೆ....?

ಶೆ: ನೋನೋ. ಸಿದ್ಧಾಂತರಹಿತವಾದ ಇತಿಹಾಸ ಇರೋದಿಲ್ಲ. ಇತಿಹಾಸ ರಚನೆ ಮಾಡಬೇಕಾದಾಗ ಸಿದ್ಧಾಂತ ಇರುತ್ತೆ. ಮಾರ್ಕ್ಸಿಸ್ಟ್ ಸಿದ್ಧಾಂತಕ್ಕೆ ಪೂರ್ತಿ ಶರಣಾಗಬೇಕಾದಂತಹ ಒಂದು ಸ್ಥಿತಿ ಇರ್ತದ, ಆ ಸಿದ್ಧಾಂತವನ್ನ ನಾನು ಹೇಳ್ತೀನಿ. ದೇಶಪ್ರೇಮ ಅಂದ ಕೂಡ್ಲೇನೇ ರಾಮನನ್ನ ಆರಾಧನೆ ಮಾಡಬೇಕು. ಆರ್ಯರು ನಮ್ಮವರು ಅಂತ ಪ್ರತಿಪಾದನೆ ಮಾಡಬೇಕು. ಬಾಬರಿಮಸೀದಿ ಸಮಸ್ಯೆಗೆ ಅವರ ಜತೆ ಹೊಂದಾಣಿಕೆ ಮಾಡಿಕೊಳ್ಳಬೇಕು ಅಂತ ನನ್ನ ಮೇಲೆ ಕಡ್ಡಾಯ ಹಾಕಿದರೆ, ಅಂತಹದ್ದನ್ನು ನಾನು ಒಪ್ಪೋದಿಲ್ಲ. ಈ ತರಹದ ಸಿದ್ಧಾಂತವನ್ನ ನಾನು ಹೇಳ್ತಾ ಇರೋದು.

ಸಂ: ಯಾವುದೇ ಒಂದು ಸಿದ್ಧಾಂತಕ್ಕೆ ಒಳಗಾಗಲು ನಿಮಗೆ ಮನಸ್ಸಿಲ್ಲ, ಆದರೆ ನಿಮ್ಮ ಪ್ರಿಯವಾದ ಚರಿತ್ರಕಾರ ಯಾರು ಅಂತ ಕೇಳಬಹುದಾ?

ಶೆ: ನನಗ ಸಾಕಷ್ಟು ಜನ ಪ್ರಿಯ ಇತಿಹಾಸಕಾರರಿದ್ದಾರೆ. ಅವರನ್ನು ಈಗ ಹೆಸರಿಸಲಿಕ್ಕೆ ಸಾಧ್ಯವಿಲ್ಲ.

ಸಂ: ಪರ್ಸನಲ್ ಆಗಿ ಅಲ್ಲ ಸರ್, ತಾತ್ವಿಕವಾಗಿ. ಉದಾಹರಣೆಗೆ ನನಗೆ ಪ್ರಭಾವ ಬೀರಿದವರು ಅಂತ ನನ್ನನ್ನ ಕೇಳಿದರೆ, ಕುವೆಂಪು ಅಂತ ಹೇಳ್ತೀನಿ. ಹಾಗೆ ಯಾರು?

ಶೆ: ಆ ತರಹದಲ್ಲಿ ಒಬ್ಬ ವ್ಯಕ್ತಿ ನನ್ನ ಮೇಲೆ ಪ್ರಭಾವ ಬೀರಿದಾನೆ ಅಂತ ಅನ್ನಿಸೋದಿಲ್ಲ. ಒಂದೊಂದು ಕಾಲಘಟ್ಟದಲ್ಲಿ ಅವರು ಮಾಡಿದಂತಹ ಶೋಧನೆಯನ್ನ ನಾನು ಬಹಳ ಗೌರವದಿಂದ ಅಂಗೀಕಾರ ಮಾಡಿದೀನಿ.

ಸಂ: ಉದಾಹರಣೆಗೆ...

ಶೆ: ಈಗ ಅಷ್ಟೊಂದು ಗೌರವ ಸಿಕ್ಕದೇ ಇದ್ದರೂ ಕೂಡಾನೂ ಹಿಂದಿನ ತಲೆಮಾರಿಗೆ ಸೇರಿದ ಆನಂದಕುಮಾರಸ್ವಾಮಿ ಅವರು ನನ್ನ ಮೇಲೆ ಆರಂಭ ಕಾಲದೊಳಗ ಬಹಳ ಪ್ರಭಾವ ಬೀರಿದರು.

ಸಂ: ನಿಮ್ಮ ಮಾತು ಕೇಳಿದ್ರೆ ಐಸಿಎಚ್‌ಆರ್ ಕಹಿ ಅನುಭವ ಕೊಟ್ಟಂತೆ ತೋರುತ್ತದೆ.

ಶೆ: ಬಹಳ ಕಷ್ಟಕರವಾದ ಎಕ್ಸ್‌ಪೀರಿಯನ್ಸ್. ಮೊದಲು ಗೌರವ ಅಧ್ಯಕ್ಷ ಅಂದರೆ ಕೆಲವು ರೂಪುರೇಷೆಗಳನ್ನ ಮಾಡಿ ಕೊಟ್ಟು, ಆಗಿಂದಾಗ್ಗೆ ಮೀಟಿಂಗ್‌ಗೆ ಹೋಗಿ ಅವನ್ನ

ಅನುಷ್ಠಾನಕ್ಕ ತರ್ತಾರ ಇಲ್ಲ ನೋಡಿಕೊಂಡು ಬರೋದು ಅಂತ್ಹೇಳಿ ನನಗನಿಸಿತ್ತು. ಆ ಗೌರವಾಧ್ಯಕ್ಷ ಸ್ಥಾನ ಪೂರ್ಣಪ್ರಮಾಣದ ಅಧ್ಯಕ್ಷ ಸ್ಥಾನ ಅಂತ ಅನುಭವ ಆಯ್ತು. ಈಗ ನಿವೃತ್ತಿಯಾದ ನಂತರ, ಇದು ಪೂರ್ಣಪ್ರಮಾಣದ ಸ್ಥಾನ ಅಲ್ಲ, ಜನ್ಮಾಂತರದ ಸ್ಥಾನನೂ ಅಂತ ಅನಿಸ್ತಾ ಇದೆ. ಈಗ ಅವರು ಏನು ಪ್ರಶ್ನೆ ಎತ್ತಿದ್ದಾರೆ, ಅದಕ್ಕ ಇನ್ನೂ ಉತ್ತರ ಕೊಡ್ತಾ ಇದ್ದೀನಿ. ಆ ಸಂಸ್ಥೆಗೆ ಅಡಿಗಲ್ಲೇ ಸರಿಯಾಗಿ ಬಿದ್ದಿಲ್ಲ. ಅಲ್ಲಿಯ ನೌಕರ ವರ್ಗಕ್ಕೆ ಇತಿಹಾಸದ ಕಲ್ಪನೆಯೇ ಇಲ್ಲ.

ಸಂ: ವಿದ್ವಾಂಸರಿಗೆ?

ಶೆ: ವಿದ್ವಾಂಸರಿಗೂ ಇಲ್ಲ. ಅದು ಸ್ವಾಯತ್ತ ಸಂಸ್ಥೆ ಆಗಿದ್ದರೂ ಕೂಡಾನೂ ರಾಜಕೀಯ ಪ್ರಭಾವ ಬಹಳಷ್ಟು ಇದೆ. ಕೌನ್ಸಿಲ್‌ನ ಆಡಳಿತಗಾರರು ಮಂತ್ರಿಗಳ ಮಾತನ್ನ ಕೇಳಿ ಚರ್ಚೆಗೆ ಬರ್ತಾರೆ. ಈ ಒಂದು ಪರಿಸರದೊಳಗ, ಅದು ಸ್ವಾಯತ್ತ ಸಂಸ್ಥೆ ಅಂತ ಹೇಳಿ ಪ್ರತಿಪಾದನೆ ಮಾಡಿದರ, ಅದು ಖಂಡಿತವಾಗ್ಲೂ ಸುಳ್ಳು. ಮಂತ್ರಿಗಳ ಅಥವಾ ರಾಜಕೀಯ ಪಂಗಡಗಳ ಪ್ರಭಾವ ಹೆಚ್ಚಾಗಿರೋದರಿಂದ, ಅಲ್ಲಿ ಇಂಟರ್‌ಫಿಯರನ್ಸ್ ಬಹಳ. ಲೆಫ್ಟಿಸ್ಟ್ ಇದ್ದವರು ತಮ್ಮ ಸ್ವಾಮ್ಯವನ್ನಾಗಿ ಮಾಡಿಕೊಂಡರು. ಆಗ ಕೆಲವರು ಅದರಿಂದ ದೂರಾನೇ ಇದ್ದರು. ಈಗ ರೈಟಿಸ್ಟ್ ಕೆಲವರು ಅದನ್ನ ತಮ್ಮ ಸ್ವಾಮ್ಯವನ್ನಾಗಿ ಛಲದಿಂದ ಮಾಡಿಕೊಳ್ಳತಾ ಇದ್ದಾರೆ. ಅಲ್ಲಿ ಮುಖ್ಯವಾದಂತಹ ಸಂಶೋಧನಾ ಕಾರ್ಯ ಏನಿದೆ, ಅದಕ್ಕೆ ಅಡ್ಡಿಆತಂಕಗಳು ಬಹಳ ಇದ್ದಾವೆ. ಹಠಮಾರಿ ಆಗಿದ್ದಂತಹವನು ಬಹಳಷ್ಟು ಕಷ್ಟಪಡುವಂತಹವನು ಮಾತ್ರ ಸಾಧನೆ ಮಾಡಲಿಕ್ಕೆ ಸಾಧ್ಯವಾಗ್ತದೆ.

ಸಂ: ನಿಮಗೆ ಸಾಧನೆ ಮಾಡಿದ ತೃಪ್ತಿ ಇದೆಯಾ?

ಶೆ: ವೈಯಕ್ತಿಕವಾಗಿ ತೃಪ್ತಿ ಅದ. ಯಾತಕ್ಕ ಅಂತ ಹೇಳಿದರೆ, ನನ್ನ ಕಾಲದೊಳಗ ೧೦-೧೫ ವರ್ಷಗಳಿಂದ ನೆನೆಗುದಿಗೆ ಬಿದ್ದಂತಹ ಪ್ರಾಜೆಕ್ಟ್‌ಗಳನ್ನ ಪೂರ್ತಿಮಾಡಲಿಕ್ಕೆ ಸಾಧ್ಯ ವಾಯ್ತು. ಆ ಸಂಸ್ಥೆಯೊಳಗ ಸ್ವಲ್ಪಮಟ್ಟಿಗೆ ಶಿಸ್ತು ತರ್ಲಿಕ್ಕೆ ಪ್ರಯತ್ನ ಮಾಡಿದೆ. ಪೂರ್ತಿ ಯಶಸ್ಸು ಸಿಗದೇ ಇದ್ದರೂನೂ, ನೂರಹತ್ತು ಜನರಲ್ಲಿ ಮೂವತ್ತು ವ್ಯಕ್ತಿಗಳಾದರೂ ಕೂಡಾನೂ ಕೆಲಸದ ಬಗ್ಗೆ ಆಸಕ್ತಿ ತೋರಿಸಲಿಕ್ಕೆ ಶುರು ಮಾಡಿದರು. ಅದರ ಹೆಮ್ಮೆ ನನಗಿದೆ. ಐಸಿಎಚ್‌ಆರ್‌ನ ಮುಖ ಅಂತ ಹೇಳಿದರೆ ಅದರ ಜರ್ನಲ್. ೬ ವರ್ಷಗಳ ವರೆಗೂ ನೆನೆಗುದಿಗೆ ಬಿದ್ದಿತ್ತು. ೬ ವರ್ಷಗಳ ನಂಬರುಗಳೆಲ್ಲವನ್ನೂ ಪ್ರಕಟಮಾಡಿ, ಬರಬೇಕಾದಾಗ ಮೂರು ಹೊಸ ಸಂಪುಟಗಳನ್ನ ಪ್ರೆಸ್ಸಿಗೆ ಕಳಿಸಿಬಂದೆ. ಕೊನೇ ಎರಡು ತಿಂಗಳದೊಳಗ ಸುಮಾರು ೧೨ ಗ್ರಂಥವನ್ನ ಹೊರಗಡೆ ತಗೊಂಡು ಬಂದೆ. ಇವೆಲ್ಲ ವೈಯಕ್ತಿಕ ಹೆಮ್ಮೆ ಅಲ್ಲ. ಯಾವ ಒಬ್ಬ ವಿದ್ವಾಂಸ ಈ ಸಂಸ್ಥೆಯನ್ನ ನಂಬಿ ಕೆಲಸವನ್ನ ಮಾಡಿ ಕೊಟ್ಟಿದ್ದನೋ, ಅದನ್ನ ತಾತ್ಸಾರವಾಗಿ ಬಳಸಿಕೊಂಡಂತಹ ಸಂಸ್ಥೆಯಿಂದ ಅವರಿಗೆ ನೆಮ್ಮದಿ ಸಿಗಬೇಕಂತ ಹೇಳಿ, ಮಾಡಿದೆ.

ಸಂ: ಈಗ 'ಟುವರ್ಡ್ಸ್ ಫ್ರೀಡಂ ಮೂವ್ ಮೆಂಟ್'ನ ಒಂದು ಸಂಪುಟದ ಮೇಲೆ ವಿವಾದ

ಹುಟ್ಟಿಕೊಂಡಿದೆ. ನಿಮಗೂ ಅದರ ಬಿಸಿ ತಟ್ಟಿರಬೇಕು. ಈ ಪ್ರಕರಣದ ನಿಜವಾದ ಹಿನ್ನೆಲೆ ಏನು?

ಶೆ: ನೋಡಿ, ಇದೊಂದು ಅನವಶ್ಯಕವಾಗಿ ಹಿಗ್ಗಿಸಿ ಮಾಡಿದಂತಹ ಸಮಸ್ಯೆ. ಇದರಲ್ಲಿ ಇಬ್ಬರ ದೋಷಗಳನ್ನೂ ಕಾಣ್ತಾ ಇದ್ದೀನಿ. ೧೯೭೦ರಲ್ಲಿ ಯೋಜನೆ ಮಾಡಿದಂತಹ ಈ ಪ್ರಾಜೆಕ್ಟ್ ಆಗಿಂದಾಗ್ಗೆ ನೆನೆಗುದಿಗೆ ಬೀಳ್ತಾ ೧೯೭೮ರ ವರೆಗೆ ಮುಂದುವರಿಕೊಂಡು ಬಂತು. ಆಗ ಡಾ.ಸರ್ವೇಪಲ್ಲಿ ಗೋಪಾಲ್ ಅವರ ಅಧ್ಯಕ್ಷತೆಯೊಳಗ ಒಂದು ಟೀಮ್ ಸಂಶೋಧಕರನ್ನು ಗುರುತಿಸಿ, ಒಂದು ವರ್ಷದ ಗ್ರಂಥವನ್ನು ಕೊಟ್ಟರು. ಇದನ್ನ ನಿರ್ವಹಿಸಿಕೊಡಬೇಕಾದಂತಹ ಜವಾಬ್ದಾರಿ ಯಾರು ಒಪ್ಪಿಕೊಂಡಿದ್ದರು, ಅವರು ಐಸಿಎಚ್ಆರ್‌ನ ಸಂಬಳ ಪಡೀತಕ್ಕಂತಹ ವ್ಯಕ್ತಿಗಳಲ್ಲ ಅಂತ ನನಗ ಗೊತ್ತಿದೆ. ಆದರೂ ಕೂಡಾನೂ ಒಬ್ಬ ವಿದ್ವಾಂಸನಾಗಿ ಕಾರ್ಯವನ್ನು ಒಪ್ಪಿಕೊಂಡಿದಿರಿ ಅಂದಾಗ, ವರ್ಷದೊಳಗ ಅದನ್ನ ಮುಗಿಸಿಕೊಡಬೇಕಾಗಿತ್ತು. ಆದರ ಅದನ್ನ ಒಪ್ಪಿಕೊಂಡು, ನಿರ್ವಹಿಸಿಕೊಡದೇ ಇದ್ದದ್ದು ತಪ್ಪೇ.

ಸಂ: ನೀವು ಏನು ಕ್ರಮ ಕೈಗೊಂಡಿರಿ?

ಶೆ: ನಾನು ಅಧ್ಯಕ್ಷನಾಗಿ ಹೋದ ಕೂಡಲೆ ಸಭೆಯನ್ನು ಕರೆದು ಇದನ್ನ ಸ್ಪಷ್ಟಗೊಳಿಸಿದೆ: 'ನೀವಿದನ್ನ ಒಂದು ಟೈಂಫ್ರೇಮ್‌ನಲ್ಲಿ ಪ್ರೀತಿಯಿಂದ ಇದನ್ನ ಮುಗಿಸಿಕೊಡಿ, ಇಲ್ಲವೆ ಹೊರಗಡೆ ಹೋಗಿ' ಅಂತ ಕೇಳಿದೆ. ನನ್ನ ಕಾಲದೊಳಗ ನಾಲ್ಕು ಸಂಪುಟಗಳು ಪೂರ್ತಿಯಾದವು. ಅದಕ್ಕಿಂತ ಮುಂಚೆ ಒಂದು ಸಂಪುಟವೂ ಪ್ರಕಟವಾಗಿರಲಿಲ್ಲ. ಎರಡನ್ನ ಪ್ರೆಸ್ಸಿಗೆ ಕಳಿಸಿದ್ದೆ. ಸರ್ಕಾರ ಬದಲಾಯಿತು. ಹೊಸ ಕೌನ್ಸಿಲ್ ನಿರ್ಮಾಣ ಆಯ್ತು. ಎಕ್ಸಿಕ್ಯೂಟಿವ್ ಬಾಡಿ ಮೂಲಕ ನನ್ನ ಮೇಲೆ ಒತ್ತಾಯ ತರ್ಲಿಕ್ಕೆ ಶುರು ಮಾಡಿದ್ರು. ಒತ್ತಡ ಏನು ಅಂತ ಹೇಳಿದ್ರೆ ಈಗ ಏನು ಸಂಪುಟಗಳು ಸಿದ್ಧವಾಗಿದ್ದಾವೋ, ಪ್ರೆಸ್‌ನಲ್ಲಿದ್ದಾವೋ ಅವನ್ನ ಸಮೀಕ್ಷೆ ಮಾಡಬೇಕು ಅಂತ. ನಾನು ಹೇಳಿದೆ 'ಇದು ಸಮೀಕ್ಷೆ ಮಾಡುವಂತಹ ಕಾಲ ಅಲ್ಲ. ನಾವು ಒಬ್ಬರಿಗೆ ವಹಿಸಿಕೊಟ್ಟಿದ್ದೀವಿ, ಅವರನ್ನ ಸಂಪಾದಕರು ಅಂತ ಗುರ್ತಿಸಿದ್ದೀವಿ. ಅದಕ್ಕೊಂದು ಸಮಿತಿ ಇದೆ. ಆ ಸಮಿತಿಯವರು ಪೂರ್ಣ ನಿರ್ವಹಿಸಿಕೊಡಬೇಕು. ಮತ್ತು ಈ ಗ್ರಂಥದಲ್ಲಿ ಏನಾದರೂ ಅಪರಾಧಗಳು ಇದ್ದರೆ ನನಗ ಮನದಟ್ಟು ಮಾಡಿಕೊಡಿ. ನೀವು ಹೇಳಿದಂತಹ ಚಾನ್ಸಸ್ ಇದ್ದರೆ ಅವನ್ನು ವಾಪಸ್ಸು ತರಿಸಲಿಕ್ಕೆ ಸಾಧ್ಯವಾಗ್ತದ. ಸುಮ್ನೆ ಗಾಳಿ ಮಾತಿನಿಂದ ಅಪವಾದಗಳಿವೆ ಅಂತ ಹೇಳಿದ್ರೆ, ಅದು ಆಗೋದಿಲ್ಲ.' ಒಂದು ಸಭೆಯಲ್ಲಿ ಸುಮಾರು ೧೦ ಗಂಟೆ ವಾದ ಆಯ್ತು. ನಾನು ಅವ್ರಿಗೆ ಏನು ಹೇಳಿದೆ ಅಂದ್ರೆ- 'ಮೊದಲನೇದಾಗಿ ನಿಮ್ಮ ತಕರಾರುಗಳೇನಾದರೂ ಇದ್ದರೆ ನಮ್ಮ ಜರ್ನಲ್ ಇದೆ. ಅದರಲ್ಲಿ ಅದನ್ನ ವಿಮರ್ಶೆ ಮಾಡಿ. ಖಂಡತುಂಡವಾಗಿ ಖಂಡನಾ ಮಾಡ್ರಿ. ಅದನ್ನ ನಾನು ಪ್ರಕಟ ಮಾಡ್ತೀನಿ. ಎರಡನೇದಾಗಿ, ಇದಕ್ಕ ಇನ್ನೂ ಬಿಟ್ಟುಹೋದಂತಹ ಸಂಗತಿಗಳನ್ನು ಸೇರಿಸಬೇಕು ಅಂತ

ಇದ್ರೆ, ಅದನ್ನ ನನ್ನ ಗಮನಕ್ಕೆ ತಗೊಂಡು ಬನ್ನಿ. ಒಂದು ಸಪ್ಲಿಮೆಂಟರಿ ವಾಲ್ಯೂಮ್ ಬೇಕಾದ್ರ ಸಿದ್ಧಮಾಡೋಣ' ಅಂತ ಎರಡು ಆಪ್ಶನ್ ಕೊಟ್ಟೆ. ಅದಕ್ಕ ಕೆಲವರು 'ಮೂರುವರೆ ಸಾವಿರ ಪುಟಗಳಲ್ಲಿರತಕ್ಕಂತಹ ಗ್ರಂಥವನ್ನು ಯಾರು ಅಭ್ಯಾಸ ಮಾಡ್ತಾರ - ಅಂತ ಕೇಳಿದ್ರು. ನಾನು ಹೇಳಿದೆ.' 'ಯಾವ ಮನುಷ್ಯನಿಗೆ ಅಭ್ಯಾಸ ಮಾಡೋ ವ್ಯವಧಾನ ಇಲ್ಲ, ಅಂತಹ ಮನುಷ್ಯನಿಗೆ ಟೀಕೆ ಮಾಡುವಂತಹ ಹಕ್ಕಿಲ್ಲ'; ಅದಕ್ಕ ಅವ್ರು ನಾನು ನಿವೃತ್ತಿ ಆಗುವವರೆಗೂ ಕಾಯಬೇಕಾಯಿತು. ನಿವೃತ್ತಿಯಾದ ದಿವ್ಸನೇ ಅವ್ರ ಮೊದಲನೇ ಕಾರ್ಯ ಅಂತ ಹೇಳಿದ್ರೆ, ಪ್ರೆಸ್‌ನಲ್ಲಿರತಕ್ಕಂತಹ ಸಂಪುಟಗಳನ್ನು ಹಿಂದಕ್ಕೆ ತರಿಸಿಕೊಳ್ಳಲಿಕ್ಕೆ ಹುಮ್ಮಸ್ಸಿನಿಂದ ಆತುರರಾಗಿದ್ದು. ನನ್ನ ಬಗ್ಗೆಯೂ ಕೆಲವು ಖಂಡನೆ ಮಾತುಗಳನ್ನಾಡಿದರು.

ಸಂ: ನಿಮ್ಮ ಪ್ರತಿರೋಧ..?

ಶೆ: ಎರಡು ಮೂರು ತಿಂಗಳು ಅದನ್ನ ಸಹಿಸಿಕೊಂಡೇ ಇದ್ದೆ. ಕೊನೆಗೆ ಕಲೇಬಿದ್ದಿದ್ದು ಅಂತ ಹೇಳಿದ್ರೆ ಪಾರ್ಲಿಮೆಂಟಿನಲ್ಲಿ. ಪೂರ್ತಿಪಾಠವನ್ನು ಫ್ರೀಡಂ ಪ್ರಾಜೆಕ್ಟ್‌ನ ಚೀಫ್ ಎಡಿಟರ್ ಆದ ಗೋಪಾಲ್ ಅವರಿಗೆ ವಿವರಿಸಿ ಪತ್ರ ಬರೆದೆ. ಆ ಪತ್ರದಲ್ಲಿ 'ಈಗ ಎದ್ದಿರುವ ತಕರಾರುಗಳು ಟೀಕೆಗಳನ್ನು ಸಂಸ್ಥೆಯ ಅಧ್ಯಕ್ಷನಾಗಿ ನಿಮ್ಮ ಗಮನಕ್ಕೆ ತರೋದು ನನ್ನ ಕರ್ತವ್ಯ. ಟೀಕೆಗಳು ಮುಂದೆ ಬರದ ಹಾಗೆ ನೋಡಿಕೊಳ್ಳೋದು ಏನಾದರೂ ಸತ್ಯಾಂಶ ಇದ್ದರೆ ಇಂತಹ ಟೀಕೆಗಳಿಗೆ ಪರಿಹಾರ ಹುಡುಕೋದು, ತಮ್ಮ ಕರ್ತವ್ಯ' ಅಂತ ಬರೆದೆ. ಅದಕ್ಕ ಅವ್ರು ಹೊಸದೊಂದು ದೃಷ್ಟಿಕೋನಕೊಟ್ಟು ತಿರುಚಿ 'ಹಿಂದಿನ ಅಧ್ಯಕ್ಷರಿಗೆ ಇದರ ಬಗ್ಗೆ ತಕರಾರಿತ್ತು ಅಂತ ಹೇಳಿ, ಮಾನವಸಂಪನ್ಮೂಲ ಮಂತ್ರಿ ಅವರಿಗೆ ನನ್ನ ಬಗ್ಗೆ ತಪ್ಪುಕಲ್ಪನೆ ಬರುವಂಗೆ ಸ್ಟೇಟ್‌ಮೆಂಟ್ ಕೊಟ್ರು. ಮಂತ್ರಿಗಳು ಪಾರ್ಲಿಮೆಂಟಿನಲ್ಲಿ 'ನೋಡಿ, ಹಿಂದಿನ ಅಧ್ಯಕ್ಷರಿಗೂ ಈ ಸಂಪುಟದ ಬಗ್ಗೆ ಅಸಮಾಧಾನವಾಗಿತ್ತು. ಈ ಯೋಜನೆಯನ್ನ ಆತುರ ಆತುರವಾಗಿ ಪೂರೈಸಬೇಕು ಅಂತ ಹೇಳಿ ಈಗಿನ ಛೇರ್ಮನ್ ಸಂಪಾದಕರಿಗೆ ಪತ್ರ ಬರೆದಿದ್ದಾರೆ' ಅನ್ನೋ ಚಿತ್ರವನ್ನ ಕೊಟ್ಟರು. ಈ ಘಟ್ಟದೊಳಗ ನಾನು ಪ್ರೆಸ್ಸಿಗೆ ಹೋಗಿ ವಿಷಯ ಪ್ರಸ್ತಾಪ ಮಾಡಬೇಕಾಯಿತು.

ಸಂ: ಸಾರ್, ಬೆಳಗಿನ ಉಪನ್ಯಾಸದಲ್ಲಿ ' ಆಕರಗಳನ್ನ ನಿರ್ಮಾಣ ಮಾಡ್ತಾ ಇದ್ದೀವಿ. ಅದರ ಬಳಕೆ ಮಾಡ್ತಿಲ್ಲ; ಪ್ರಿಂಟ್ ಮಾಡ್ತಾ ಇದ್ದೀವಿ ಇಂಟರ್‌ಪ್ರಿಟೇಶನ್ ಮಾಡ್ತಿಲ್ಲ' ಅಂದಿರಿ. ಇದನ್ನ ಸ್ವಲ್ಪ ವಿವರಿಸಿ.

ಶೆ: ನೋಡಿ, ಆಕರಗಳನ್ನು ನಾವು ಬಳಸಬೇಕಾದಾಗ ಎಚ್ಚರಿಕೆಯಿಂದ ಬಳಸಬೇಕು. ಆದರ ಶಬ್ದಾರ್ಥ ಬೇರೆ ಒಳಾರ್ಥ ಬೇರೆ. ಈಗ ಒಂದು ದಾಖಲೆಯನ್ನು ತೆಗೆದುಕೊಂಡು ಬರೀ ಶಬ್ದಾರ್ಥವನ್ನು ಬಳಕೆ ಮಾಡಿ, ಒಳಾರ್ಥವನ್ನು ಗುರ್ತಿಸದೇ ಹೋಗಬಹುದು. ಉದಾಹರಣೆ ಹೇಳ್ತೀನಿ. ಒಂದು ಶಾಸನ ಅಥವಾ ದಾಖಲೆಯನ್ನ ನಿರ್ಮಾಣ ಮಾಡಬೇಕಾ ದಾಗ ಒಬ್ಬ ದಾಖಲೆಕಾರ ಪಂಡಿತ ಇರ್ತಾನೆ. ಅವನು ಸರ್ವಧರ್ಮಗಳನ್ನ ಸಮಾನವಾಗಿ

ಕಂಡಂತಹ ರಾಜಾ ಅಂತ ಹೊಗಳ್ತಾನೆ. ಯುದ್ಧಗಳನ್ನ ಮಾಡಿ ಇಂದ್ರನನ್ನ ಸೋಲಿಸಿದ ಅಂತ ಹೊಗಳ್ತಾನೆ. ಇದು ಶಬ್ದಾರ್ಥ. ಆದರೆ ಹೇಳಿದಾಕ್ಷಣ ಅದು ಆಗಲಿಲ್ಲ. ಆ ರಾಜ ಜೀವನದೊಳಗ ಎಂದಾದರೂ ಯುದ್ಧ ಮಾಡಿದನೆ? ಆ ಘಟನೆಯನ್ನ ಸಮಗ್ರವಾಗಿ ಅಭ್ಯಾಸ ಮಾಡಿ ಬರೀಬೇಕು ಅಂತ ನಾನು ಹೇಳೋದು. ಬುಕ್ಕರಾಯನ ಶಾಸನ ಇದಕ್ಕ ನಿದರ್ಶನ. ಆ ಶಾಸನದೊಳಗ ಜೈನರು ಏನು ಮಾಡ್ತಾರೆ, ವೈಷ್ಣವರು ನಮಗ ಹಿಂಸೆ ಕೊಡ್ತಾರೆ ಅಂತ ತಕರಾರು ತುಗೊಂಡು ಹೋಗಿ, ಇದನ್ನ ನಿವಾರಣೆ ಮಾಡಿ ಅಂತ ಹೇಳ್ತಾರೆ. ಬುಕ್ಕರಾಯ ಇಬ್ಬರನ್ನು ಕರೆಸಿಕೊಂಡು ಸಮನ್ವಯ ಮಾಡ್ತಾನೆ ಅಂತ ಎಲ್ಲಾ ಇತಿಹಾಸಕಾರರು ಬರೆದಾರ. ಬರೀ ಶಬ್ದಾರ್ಥ ತೆಗೆದುಕೊಂಡರೆ ಅರಸ ಬಹಳ ವಿಶಾಲ ಮನೋವೃತ್ತಿಯವನಿದ್ದ ಅಂತ ಹೇಳಿ ಆಗ್ತದ. ನ್ಯಾಯ ಯಾರಿಗೆ ದೊರೆಯಬೇಕಾಗಿತ್ತು? ಅನ್ಯಾಯವಾದವನಿಗೆ. ಜೈನರಿಗೆ ಅನ್ಯಾಯವಾಗಿತ್ತು. ಅವರು ಅರಸನ ಹತ್ತಿರ ಹೋದಾಗ ಅವ್ನು ಒಂದು ವ್ಯವಸ್ಥೆ ಮಾಡ್ತಾನ. 'ನೀವಿನ್ನ ಜಗಳ ಮಾಡಬೇಡಿ. ಶಾಂತರೀತಿ ಇರ್ರಿ' ಅಂತ ಹೇಳ್ತಾಹೇಳ್ತಾ, ಜೈನರೆಲ್ಲ ಒಟ್ಟುಗೂಡಿ ಒಂದು ಮನೆಗೆ ಇಷ್ಟಿಷ್ಟು ಹಣ ಸಂಗ್ರಹಣೆ ಮಾಡಿ, ವೈಷ್ಣವರ ಕೈಯಲ್ಲಿ ಕೊಡ್ತಾನ, ಈ ಹಣವನ್ನು ಇಟ್ಟುಕೊಂಡು ನೀವಿವರ ರಕ್ಷಣೆ ಮಾಡಿ ಅಂತ. ಯಾರ ವಿರುದ್ಧ ದೂರು ಹೋಗಿರ್ತಾರೋ ಅವರೆ ವ್ಯವಸ್ಥಾಪಕರಾಗ್ತಾರೆ. ಅಂದ್ರೆ ಜೈನರಿಗೆ ಸೋಲು ಪೂರ್ತಿ ಆಯಿತು. ಬುಕ್ಕರಾಯ ಇಲ್ಲಿ ಏನ ಮಾಡಿದ ಅಂತಹೇಳಿದ್ರೆ, ತನಗೆ ಸಮೀಪದಲ್ಲಿರತಕ್ಕಂತಹ ಒಂದು ವರ್ಗಕ್ಕೆ, ಅವರ ಬಗ್ಗೆ ತಕರಾರು ಇದ್ದರು ಕೂಡಾನೂ, ಅವರನ್ನೇ ವ್ಯವಸ್ಥಾಪಕರನ್ನಾಗಿ ಮಾಡಿ ಜೈನರಿಗೆ ಅನ್ಯಾಯ ಮಾಡಿದ. ಇದು ಒಳಾರ್ಥ.

ಸಂ: ಕನ್ನಡ ಸಂಶೋಧನೆಯಲ್ಲಿ ಆಗ್ತಾ ಇರೋ ಮುಖ್ಯ ಕೆಲಸ ಈಗಲೂ ಆಕರನಿರ್ಮಾಣಾನೇ. ಕನ್ನಡ ಚರಿತ್ರಲೇಖನದ ಮುಖ್ಯ ಸ್ವಭಾವವೇ ಆಕರ ನಿರ್ಮಾಣ ಇದ್ದಂಗ ಕಾಣುತ್ತೆ. ಬ್ರಿಟಿಶರ ಕಾಲದಲ್ಲಿ ಶುರುವಾದ ಈ ದೃಷ್ಟಿಕೋನದಿಂದ ಇನ್ನೂ ತಪ್ಪಿಸಿಕೊಳ್ಳಲು ಯಾಕೆ ಸಾಧ್ಯವಾಗ್ತಿಲ್ಲ?

ಶೆ: ಹೊಸ ಹೊಸ ಮಾಹಿತಿ ಬರೋದರಿಂದ ಎಂಪೆರಿಕಲ್ ಸ್ಟಡೀಜ್‌ಗೆ ಅವಶ್ಯಕವಾಗಿದ್ದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಹೋಗಬೇಕಾದ ಪ್ರಮೇಯ ಇದೆ. ಅದರ ಬಗ್ಗೆ ಎರಡು ಮಾತಿಲ್ಲ. ಕಳೆದ ೪೦-೫೦ ವರ್ಷಗಳಲ್ಲಿ ಆಗಿರುವ ಕರ್ನಾಟಕದ ಸಂಶೋಧನೆಗಳು ಹರಡಿಹೋಗಿಬಿಟ್ಟಾವ. ಎಷ್ಟೋ ಜರ್ನಲ್ಸ್ ಈಗ ಪಬ್ಲಿಶ್ ಆಗ್ತಾಯಿಲ್ಲ. ಅಂತಹ ವಸ್ತು ವಿಷಯಗಳನ್ನೆಲ್ಲ ಒಂದು ಕಡೆಗೆ ತರುವಂತಹ ಕೆಲಸ ಆಗಬೇಕು. ಒಂದೇ ಸ್ಥಳದೊಳಗ ಎಲ್ಲಾ ಆಕರಗಳು ದೊರೀಬೇಕು. ಇದು ಮೊದಲನೇ ಹಂತ. ಎರಡನೇ ಹಂತ ಮಾಹಿತಿಯನ್ನ ಉಪಯೋಗ ಮಾಡಿಕೊಳ್ಳೋದು. ಮಾಹಿತಿಯನ್ನ ವಿಚಾರಪೂರ್ಣವಾಗಿ ಅರ್ಥೈಸಿಕೊಂಡು ಹೊಸ ವಿಷಯಗಳನ್ನ ಪ್ರತಿಪಾದನೆ ಮಾಡಿಕೊಳ್ಳೋದು. ಈಗ ಒಂದು ಸಂಸ್ಥೆ ಯಾವ ಕೆಲಸವನ್ನ ಮಾಡಬೇಕು ಅನ್ನೋ

ಪ್ರಶ್ನೆ ಬರುತ್ತೆ. ನನ್ನ ದೃಷ್ಟಿಯೊಳಗ ಒಂದು ಸಂಸ್ಥೆ ಎರಡೂ ಕೆಲಸ ಮಾಡಬೇಕು. ಮಾಹಿತಿಗಳನ್ನ ಆಕರಗಳನ್ನ ವೈಯಕ್ತಿಕವಾಗಿ ಸಂಗ್ರಹಿಸೋದು ಶೋಧಿಸೋದು ಬಹಳ ಕಷ್ಟ ಅದ. ಆದ್ರ ಬರೀ ಸಂಗ್ರಹಾನೇ ಮಾಡಿದ್ರೆ, ನಿಮ್ಮ ಗುರಿ ಏನು ಅಂತ ನೀವು ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತೆ. ಆ ಪ್ರಶ್ನೆ ಮಾಡಿಕೊಳ್ಳುವ ಘಟ್ಟವನ್ನು ಮುಟ್ಟಿದ್ದರೆ, ವಿಚಾರಪೂರ್ಣವಾದ ವಿದ್ವತ್‌ಪೂರ್ಣವಾದ ಚಿಂತನೆ ಹೊರಗಡೆ ಬರ್ಲಿಕ್ಕೆ ಸಾಧ್ಯ ಅದ. ಇವು ಬರಲೇಬೇಕು.

ಸಂ: ನೀವು ಬಹಳ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದೀರಿ. ಕನ್ನಡ ವಿಶ್ವವಿದ್ಯಾಲಯದಂತಹ ಸಂಸ್ಥೆಯ ಮುಂದಿನ ಸವಾಲುಗಳನ್ನು ಹೇಗೆ ವಿಶ್ಲೇಷಿಸುತ್ತೀರಿ?

ಶೆ: ಈಗ ನೀವು ಓರಲ್ ಟ್ರೆಡಿಶನ್‌ನ ಅಭ್ಯಾಸ ಮಾಡೋದ್ರೊಳಗ, ಏನು ಆಸಕ್ತಿಯನ್ನ ತೋರಸ್ತಾ ಇದ್ದೀರೋ, ಅದು ಒಂದು ಸಮಾಧಾನಕರವಾದ ವಿಷಯ ಅಂತಹೇಳಿ ಅನಸ್ತದ. ಮಾಹಿತಿಸಂಗ್ರಹವನ್ನ ಸಂಸ್ಥೆಗಳು ಸಾಮೂಹಿಕವಾಗಿ ಮಾಡ್ಲಿಕ್ಕೆ ಸಾಧ್ಯವಾಗ್ತದ. ಇಂಟರ್‌ಪ್ರಿಟೇಶನ್ ಏನಿದೆ, ಅದನ್ನ ಮಾಡ್ಲಿಕ್ಕೆ ಇರಬೇಕಾದ ವ್ಯಕ್ತಿಗಳ ಗುಣಮಟ್ಟದ ಮೇಲೆ ಹೋಗ್ತದ. ಅಂತಹ ವ್ಯಕ್ತಿಗಳು ಇದ್ದರೆ, ಆಕರಗಳನ್ನ ಹದ್ದಿನ ಹಾಗೆ ತಕ್ಕೊಂಡು ಇಂಟರ್‌ಪ್ರಿಟ್ ಮಾಡಬೇಕು. ಒಂದು ಸಂಸ್ಥೆ ನಿರ್ಮಾಣ ಮಾಡಿದಂತಹ ಮಾಹಿತಿಯನ್ನ ನಾವು ಉಪಯೋಗ ಮಾಡ್ತಾಯಿಲ್ಲ ಅಂತ ಹೇಳಿದ್ರೆ, ಅದು ನಮ್ಮಲ್ಲಿರತಕ್ಕಂತಹ ದೋಷ ಮಾತ್ರ.

ಸಂ: ಇದರಲ್ಲಿ ತಾತ್ವಿಕವಾದ ಒಂದು ಸಣ್ಣಪ್ರಶ್ನೆ ಇದೆ. ಈಗ ಆಕರ ನಿರ್ಮಾಣ ಮಾಡುವವರು ಒಬ್ಬರು. ಇಂಟರ್‌ಪ್ರಿಟ್ ಮಾಡುವವರು ಮತ್ತೊಬ್ಬರು ಅನ್ನುವ ಶ್ರಮವಿಭಜನೆಯನ್ನ ನಾವು ಮಾಡಿದಂಗ ಆಗ್ತದೆ.

ಶೆ: ದಾಖಲೆಗಳನ್ನ ತೆಗೆದುಕೊಂಡು ಸಂಪಾದನೆ ಮಾಡಬೇಕಾದ ಕಲೆ ಏನಿದೆ, ಆ ಕಲೆಯನ್ನ ನಾವು ಸಾಧಿಸಲಿಕ್ಕೆ ಆಗೋದಿಲ್ಲ. ಆಮೇಲೆ ಇಂಟರ್‌ಪ್ರಿಟ್ ಮಾಡುವಂತಹವರಿಗೆ ದಾಖಲೆಗಳನ್ನ ಸರಿಯಾಗಿ ಬರೀರಂತ ಹೇಳಿದ್ರೆ ಸಾಧ್ಯವಾಗೋದಿಲ್ಲ. ಇದು ಎಲ್ಲಾ ದೇಶದಲ್ಲೂ ಎಲ್ಲಾ ಕಾಲದಲ್ಲೂ ನಡಕೊಂಡು ಬಂದಂತಹ ಸಂಗತಿ. ಇದಕ್ಕ ಸೃಜನಾತ್ಮಕ ಸಾಹಿತ್ಯದ ಒಂದು ಮಾತನ್ನ ಹೇಳ್ತೀನಿ. ಪಬ್ಲಿಶರೊಳಗ ಕೊಡ್ತೀನಿ. ಕಾಪಿಎಡಿಟರ್ ಅಂತ ಒಬ್ಬಂವ ಇರ್ತಾನೆ. ಅವನು ಭಾವನಾತ್ಮಕವಾಗಿ ಮಾಡಿದಂತಹ ಕೃತಿಯ ಭಾಷೆಯನ್ನು ತಿಳಿಗೊಳಿಸಿ, ದೋಷಗಳು ಆಗದ ಹಾಗೆ ತಿದ್ದಿ, ಸಿದ್ಧಮಾಡಿ ಬರವಣಿಗೆಗೆ ಒಂದು ಹೊಸ ಆಯಾಮವನ್ನು ಕೊಡ್ತಾನೆ. ಅವನಿಗೆ ಹೋಗತಕ್ಕಂತಹ ಕೀರ್ತಿ ಲೇಖಕರಿಗೆ ಬರ್ತದ. ಈ ತೆರೆಹಿಂದೆ ಇರತಕ್ಕಂತಹ ಕಾಪಿಎಡಿಟರ್‌ನ ಮಹತ್ವ ಹೇಗೋ ಹಾಗೆ, ಈ ಆಕರ ಸಂಕಲನ ಮಾಡುವಂತಹವನದು. ಈ ಕೀರ್ತಿ ಅವ್ರಿಗೂ ಹೋಗಬೇಕು. ಇದು ಇಂಟರ್‌ಪ್ರಿಟೇಟರ್‌ಗೆ ಹೋಗ್ತದೆ.

ಸಂ: ಇದು ಬೌದ್ಧಿಕ ಜೀತ ಅಲ್ಲವಾ?

ಶೆ: ಅಲ್ಲ. ಅಪ್ರಿಗೆ ಆಕರಗಳನ್ನ ಸಂಪಾದನೆ ಮಾಡುವಂತಹ ಒಂದು ಸ್ಕಿಲ್ ಏನಿದೆಯಲ್ಲ ಅದರೊಳಗೆ ಬಹಳ ತೃಪ್ತಿಯಿದೆ, ಗೌರವ ಇದೆ. ಅದನ್ನ ಇನ್ನೊಂದು ರೀತಿಯಿಂದ ನೋಡಬಹುದು. ಕೆಲವರು ಶಾಸನತಜ್ಞರು ಇತಿಹಾಸವನ್ನು ಬರೀಲಿಕ್ಕೆ ಪ್ರಾರಂಭ ಮಾಡಿ ಬಹಳ ಕೆಟ್ಟದ್ದನ್ನ ಬರೆದಿದ್ದಾರೆ. ಯಾಕೇಂದ್ರೆ ಅವರಲ್ಲಿ ಬೇರೆಬೇರೆ ವಿಷಯಗಳ ಬಗ್ಗೆ ಆಳವಾಗಿ ಹೋಗುವಂತಹ ಬುದ್ಧಿ ಇಲ್ಲ. ಒಂದು ಶಾಸನ ಇದ್ದಾಗ, ೧೧ನೇ ಶತಮಾನದ ಒಂದು ಚಾಲುಕ್ಯರ ಶಾಸನದಲ್ಲಿ ಹೀಗೆ ಅಂತ ನಾವು ಮಾತಾಡ್ತೀವಿ. ಅವ್ರಿಲ್ಲ. ಇಂತಹ ಹಳ್ಳಿಯೊಳಗ, ಇಂತಹ ದೇವಸ್ಥಾನದೊಳಗ, ಇಂತಹ ಪಟ್ಟಿಕೆಯೊಳಗ ಕೊರೆದಂತಹ ಸಂಸ್ಕೃತ ಭಾಷೆಯೊಳಗ ಇಂತಹ ಶಕ ವರ್ಷದಲ್ಲಿ ಇದ್ದದ್ದನ್ನ ಅಂತ ಹೇಳೋದರೊಳಗ ಇಂಟರ್‌ಪ್ರಿಟೇಶನ್ ಕೆಟ್ಟುಹೋಗಿರ್ತದೆ.

ಸಂ: ಒಬ್ಬರು ಮಾಹಿತಿ ತರುವುದು, ಇನ್ನೊಬ್ಬರು ಕ್ಷೇತ್ರಕ್ಕೆ ಹೋಗದೇನೇ ವಿಶ್ಲೇಷಣೆ ಮಾಡೋದು ಈ ವಿಭಜನೆ ಈ ಗಡಿಗಳು ಅಗತ್ಯ ಅಂತ ಹೇಳ್ತಿದೀರಾ?

ಶೆ: ಬೇಕು. ವೈದ್ಯಕೀಯದಲ್ಲಿ ಬೇರೆಬೇರೆ ಸ್ಪೆಶಲಿಸ್ಟ್ಸ್ ಬೇಕಾಗುವ ಹಾಗೆ ಇಲ್ಲಿ ಕೂಡ ಸ್ಪೆಶಾಲಿಸ್ಟ್ಸ್ ಬೇಕಾಗ್ತದ.

ಸಂ: ಸಮಸ್ಯೆ ಅಂದರೆ, ಈ ಸ್ಪೆಶಲಿಸ್ಟ್‌ಗಳಲ್ಲಿ ಹೈರಾರ್ಕಿ ಇರೋದು.

ಶೆ: ಹೈರಾರ್ಕಿ ಇಲ್ಲ. ಅಂದ್ರೆ ಎಪಿಗ್ರಾಫಿಸ್ಟ್ ಎಪಿಗ್ರಾಫಿಸ್ಟ್ ಆಗಿಯೇ ಉಳಿಬೇಕಾಗಿಲ್ಲ. ಅವ್ನಿಗೆ ಇತಿಹಾಸ ರಚನೆ ಮಾಡ್ಲಿಕ್ಕೆ ಯಾರೂ ಅಡ್ಡಿ ಮಾಡ್ತಾ ಇಲ್ಲ. ಆದ್ರೆ ಅವನು ಸಿದ್ಧಮಾಡತಕ್ಕಂತಹ ದಾಖಲೆ ಆ ಬಗೆಯಲ್ಲಿ ನನ್ನ ಕೈಲಿ ಸಾಧ್ಯವಾಗೋದಿಲ್ಲ. ಅವನು ಎತ್ತುವ ಪ್ರಶ್ನೆಗಳು, ಹುಡುಕುವ ಪರಿಹಾರಗಳು, ಅವನು ಮಾತ್ರ ಮಾಡ್ಲಿಕ್ಕೆ ಸಾಧ್ಯ. ಕಲ್ಲುಕುಟಿಗನ ಕೆಲಸ ಕಲ್ಲನ್ನು ತಂದು ಒಂದು ಶೇಪ್ ಮಾಡೋದು. ನಿಷ್ಣಾತನಾಗಿದ್ದರೆ ಅವನೂ ಶಿಲ್ಪಿಯಾಗ್ತಾನ.

ಸಂ: ನೀವು ಹೇಳುವಂತಹ ಈ ಕಲ್ಲುಕುಟಿಗ- ಶಿಲ್ಪಿಯಾಗಿ ರೂಪಾಂತರವಾಗುವ ರೂಪಕ ಅಂತರ್‌ಶಿಸ್ತೀಯ ಅಧ್ಯಯನಗಳಲ್ಲಿ ಅನ್ವಯವಾಗ್ತದಾ?

ಶೆ: ಈಗ ನನ್ನ ತಗೊಳ್ಳಿ, ನನಗೆ ಮೊದಲು ಈ ಶಾಸನಗಳನ್ನ ಸಂಪಾದನೆ ಮಾಡುವ ಆಸಕ್ತಿ ಇರಲಿಲ್ಲ. ಆದರೆ ಈಗ ಹೊಸ ಶಾಸನ ಸಿಕ್ಕರೆ ನಾನೇ ಎಡಿಟ್ ಮಾಡಿಕೊಳ್ತೀನಿ. ಮ್ಯಾನ್ ಸ್ಕ್ರಿಪ್ಟ್ ತಯಾರು ಮಾಡಬೇಕಾದ್ರ ಹ್ಯಾಗೋ ಬರೀತೀನಿ. ಎರಡನೇ ಹಂತದೊಳಗ ಕೂತು ಕಾಪಿ ಎಡಿಟರ್ ಆಗ್ತೀನಿ. ಅಂದ್ರೆ ನನಗ ಆ ಸಾಮರ್ಥ್ಯ ಇದ್ದರೆ ನನಗ ಆಗ್ಲಿಕ್ಕ ಆಗ್ತದ.

ಸಂ: 'ಗ್ಲೋಬಲೈಜೇಶನ್ ಆಫ್ ಇಂಟಲೆಕ್ಚುವಲ್ ಕಮ್ಯುನಿಟಿಯಲ್ಲಿ' ಎಂಬ ಮಾತನ್ನು ಬೆಳಿಗ್ಗೆ ಆಡಿದಿರಿ. ಅದರ ಸ್ವರೂಪ ಸ್ಪಷ್ಟವಾಗಲಿಲ್ಲ. ಜ್ಞಾನಶಿಸ್ತುಗಳು ತಮ್ಮನ್ನ ಈ ಹೊಸ ಜಾಗತೀಕರಣ ವ್ಯವಸ್ಥೆಯಲ್ಲಿ ಹೇಗೆ ರೂಪಾಂತರ ಪಡೀತವೆ ಅನ್ನುವ ಬಗ್ಗೆ ಆತಂಕ ಗೊಂದಲ ಇವೆ. ಚರಿತ್ರೆಕಾರರ ಸ್ಥಾನ ಈ ಸಂದರ್ಭದಲ್ಲಿ ಏನು?

ಶೆ: ಗ್ಲೋಬಲೈಜೇಶನ್ ಪ್ರಥಮ ಹೆಂತದಲ್ಲಿ ಇರುವುದಕ್ಕೋಸ್ಕರನೇ ಈ ಕನ್‌ಫ್ಯೂಜನ್ ಕಾಡ್ತಿದೆ. ಇದು ಒಂದು ಅವಶ್ಯಕತೆ. ಗ್ಲೋಬಲೈಜೇಶನ್ ಈಸ್ ಇನೆವಿಟೆಬಲ್ ಥಿಂಗ್.

ಸಂ: ಇದು ನೆಸೆಸಿಟೀನಾ ಇನವಿಟಬಲ್ಲಾ?

ಶೆ: ಎರಡೂ. ನೆಸೆಸಿಟಿ ಒಂದು ಘಟ್ಟ ಮುಟ್ಟಿದ ನಂತರ ಇನವಿಟಬಲ್ ಆಗ್ತದ. ಈಗ ಆಕ್ಸ್‌ಫರ್ಡ್ ಯುನಿವರ್ಸಿಟಿಯಲ್ಲಿ ಕೆಲಸ ಮಾಡಿದಂತಹ ನಾನು, ಅವರಲ್ಲಿ ಒಂದು ನಮ್ರತೆ ಇದ್ದರೆ ಅದನ್ನ ಅಳವಡಿಸಿಕೊಳ್ತೇನೆ. ನಾನು ಸಿದ್ಧಪಡಿಸಿದ ಮಾಹಿತಿ ಅವರಿಗೆ ನೇರವಾಗಿ ಸಂಬಂಧಪಡ್ತದೆ. ಈ ದೃಷ್ಟಿಯೊಳಗ ಗ್ಲೋಬಲೈಜೇಶನ್ ಅಂದೆ. ಹಿಂದಕ ನಾವು ಒಂದು ವಸ್ತು ಬೇರೆ ಕಡೆ ಏನಾಗಿದೆ ಅಂತ ತಿಳಕೊಳ್ಳಲಿಕ್ಕೆ ತಿಣಕ್ಯಾಡ್ತಾ ಇದ್ವೆವು. ಅದು ಈಗ ಸುಲಭವಾಗಿ ಗಾಯಬ್ ಆಗಿಬಿಟ್ಟದ. ನನಗೊಂದು ಸಮಸ್ಯೆ ಈ ರಾತ್ರಿ ಕಾಡ್ತಿದ್ದರೆ, ಕಂಪ್ಯೂಟರ್‌ನಲ್ಲಿ ಅದನ್ನ ಒತ್ತಿದ ಬೆಳಿಗ್ಗೆ ಎದ್ದಾಗ ಅದಕ್ಕ ಸ್ಪಂದನ ಬಂದಿರ್ತದ. ಹುಡಕಾಡಬೇಕಾದ್ದಿಲ್ಲ. ಈ ಜ್ಞಾನ ಏನು ಒಬ್ಬರ ಸ್ವತ್ತಾಗಿತ್ತೋ, ಶಿಷ್ಯ ಗುರು ಪರಂಪರೆಯೊಳಗ ಇತ್ತೋ, ಗುರುಗಳ ಕಾಲು ಒತ್ತೋದರ ಹೊರತು ಅವರು ಕೊಡ್ತಿರಲಿಲ್ಲ. ಈಗ ನೀವು ಕೊಡದೇ ಇದ್ದರೆ ಇನ್ನೊಬ್ಬರು ಕೊಡ್ತಾರ. ಮತ್ತು ಪ್ರಭಾವಗಳು ಏನಿದ್ದಾವೆ ಹಿಂದಕ ಒಂದು ಜನಾಂಗದಿಂದ ಮತ್ತೊಂದಕ್ಕೆ ರವಾನೆಯಾಗ ಲಿಕ್ಕ ಸಾಕಷ್ಟು ಕಾಲ ಬೇಕಾಗಿತ್ತು. ಒಂದೊಂದು ಸಾರಿ ಭೌಗೋಳಿಕ ಸಂಘರ್ಷಗಳು ಉಂಟಾಗ್ತಿದ್ದವು. ಈಗ ಅದು ಇಲ್ಲ. ಮರುದಿವಸವೇ ಅದ್ರ ಪ್ರಭಾವ ನಿಮ್ಮ ಮೇಲೆ ಆಗ್ಲಿಕ್ಕೆ ಸಾಧ್ಯ ಅದ.

ಸಂ: ತಾಂತ್ರಿಕಕ್ರಾಂತಿಯ ಫಲಗಳನ್ನ ಒಂದು ಬೌದ್ಧಿಕ ಸಮುದಾಯ ಪಡಕೊಳ್ಳೋದನ್ನ ಹೇಳ್ತಿದೀರಿ. ಆದರೆ ಈ ಗ್ಲೊಬೋಲೈಜೇಶನ್ನಿಗೆ ರಾಜಕೀಯ ಆರ್ಥಿಕ ಮುಖವೂ ಇದೆ ಅಂತ..

ಶೆ: ಗ್ಲೋಬಲೈಜೇಶನ್ ಅಂದ್ರ ನಾವು ಯಾವುದಕ್ಕೂ ಲಿಮಿಟ್ ಮಾಡ್ಲಿಕ್ಕೆ ಆಗೋದಿಲ್ಲ. ಈಗ ನಮ್ಮದೇಶ ನಮ್ಮಭಾಷೆ ಅಂತ ಇಲ್ಲೀವರೆಗೂ ಏನು ಅನ್ನಕೋಂತಾ ಬಂದೀವೋ, ಇದು ಗೌಣ ಆಗ್ತದ; ಸ್ವಲ್ಪಕಾಲದ ನಂತರ ನಾನೂ ಪ್ರಪಂಚದ ಒಂದು ಅಂಗ ಅನ್ನುವ ಒಂದು ಬೆಳವಣಿಗೆ ಬರ್ತದ. ನಮ್ಮ ಭಾಷೆಯನ್ನ, ನಮ್ಮ ಜನಾಂಗವನ್ನ ಬಿಡಬೇಕು ಅಂತ ಅಲ್ಲ. ಹೊಂದಾಣಿಕೆ ಮಾಡಿಕೋಬೇಕು ಅನ್ನುವ ಅರಿವು ಹೆಚ್ಚಾಗಿ ಬರ್ತದೆ ಅಂತ ಅನ್ನಸ್ತದೆ. ಅದಕ್ಕಾಗಿ ಇದು ಇನೆವಿಟೆಬಲ್.

ಸಂ: ಹಿಂದೆ ಎತ್ತಿದ ಪ್ರಶ್ನೆಯನ್ನ ಈಗ ಮತ್ತೆ ಎತ್ತಲಿಕ್ಕೆ ಬಯಸ್ತೀನಿ. ಮುಂದೆ ಕನ್ನಡದೊಳಗೆ ಕೆಲಸ ಮಾಡಿ ಅದರ ಋಣವನ್ನ ತೀರಸ್ತೀನಿ ಅಂತ ಹೇಳಿದಿರಿ. ಈಗ ಗ್ಲೋಬಲೈಜೇಶನ್ ಅನಿವಾರ್ಯ ಅಂತ ಹೇಳ್ತಾ ಅದರ ಪ್ರಾಸೆಸ್‌ನಲ್ಲಿ ನಮ್ಮಭಾಷೆ ನಮ್ಮದೇಶ ಎಂಬುವು ಗೌಣ ಆಗ್ತವೆ ಅಂತನೂ ಹೇಳ್ತೀದೀರಿ. ಇದು ವೈರುಧ್ಯವಲ್ಲವಾ?

ಶೆ: ನೋ. ನಾನು ಕರ್ತವ್ಯವನ್ನ ನಿಭಾಯಿಸಿದ ಮೇಲೆ ನನ್ನ ಆಕರಗಳು ಗ್ಲೋಬಲ್‌ಗೆ

ಸಂಬಂಧವಾಗ್ತವೆ. ಎಲ್ಲಾ ಸಂಸ್ಕೃತಿಗೂ ಸಂಬಂಧವಾಗ್ತವೆ. ನಾನು ನನ್ನ ಕರ್ತವ್ಯವನ್ನ ನಿರ್ವಹಿಸದೇ ಇದ್ದರೆ, ನನ್ನ ಮಾಹಿತಿ ಬೇರೆಯವರಿಗೆ ಲಭ್ಯವಾಗುವುದಿಲ್ಲ. ಅವು ಗೌಣವಾಗ್ತವೆ. ಇದು ಕಾಂಟ್ರಡಿಕ್ಶನ್ ಆಗೋಲ್ಲಾಂತ ನನಗನ್ನಸ್ತದ. ನಾನು ಕನ್ನಡ ಭಾಷೆಯಲ್ಲಿ ದುಡೀಬೇಕಾಗಿತ್ತು ಅಂತ ಆಸೆಯನ್ನ ಎರಡು ದೃಷ್ಟಿಕೋನದಿಂದ ಇಟ್ಟುಕೊಂಡಿದ್ದೀನಿ. ಒಂದು- ಕನ್ನಡ ಭಾಷೆಯಲ್ಲಿ ದುಡಿದು ಅದನ್ನ ಉಪಯೋಗ ಮಾಡಿಕೊಳ್ಳಬೇಕು ಅಂತ ಹೇಳಿ. ಯಾವರೀತಿ ಅದನ್ನ ಉಪಯೋಗ ಮಾಡಿಕೋಬೇಕು ಅನ್ನೋದನ್ನ ಎರಡನೇ ಹಂತದೊಳಗ ನಿರ್ಧಾರ ಮಾಡಿಕೊಳ್ಳತೀನಿ. ಕನ್ನಡದ ಆಕರಗಳನ್ನ ಕನ್ನಡದಲ್ಲೀನೇ ಮಾಡ್ತೀನೋ ಅಥವ ಕನ್ನಡದ ಆಕರಗಳನ್ನ ಇಂಗ್ಲೀಷ್‌ನಲ್ಲಿ ಮಾಡಿ ಹೊರ ಜನಾಂಗಕ್ಕೆ ಪರಿಚಯ ಮಾಡ್ತೀನೋ ಅಥವಾ ನಾನು ಮಾಡದೇ ಇದ್ದರುನೂ ಅದು ಒಂದು ವೇದಿಕೆ ಆದಾಗ, ಅದನ್ನ ಸುಲಭವಾಗಿ ಮತ್ತೊಬ್ಬರು ಅದಕ್ಕೆ ತೆಕ್ಕೆಬಿದ್ದು ಮತ್ತೊಂದು ಪರಿಚಯ ಮಾಡಿಕೊಡ್ಲಿಕ್ಕೆ ಸಾಧ್ಯವಾಗುತ್ತೋ ನೋಡೋಣ. ಇಟ್ ಈಸ್ ಎ ಪ್ರಾಸೆಸ್ ಅಂತ ನನಗನ್ನಸ್ತದ.

(ಬರೆಹರೂಪ: ಶಿವಾನಂದ ವಿರಕ್ತಮಠ ಹಾಗೂ ಲಕ್ಷ್ಮಣ ಮಹಾಮುನಿ)

'ವಡ್ಡಾರಾಧನೆ' ಅಧ್ಯಯನಗಳು

● ಅಮರೇಶ ನುಗಡೋಣಿ

ಕನ್ನಡ ಪ್ರಾಚೀನ ಪಠ್ಯಗಳನ್ನು ಕುರಿತ ಅಧ್ಯಯನಗಳು ಸಾಕಷ್ಟು ನಡೆಯುತ್ತ ಇವೆ. ಈ ಅಧ್ಯಯನಗಳಲ್ಲಿ ಕೆಲವು ಪ್ರಮುಖ ಮಾದರಿಗಳು ಎದ್ದು ಕಾಣುತ್ತಿವೆ. ಅವನ್ನು ಸಂಪಾದನಾ ಮಾದರಿ, ಸಾಹಿತ್ಯ ವಿಶ್ಲೇಷಣಾ ಮಾದರಿ, ಸಂಸ್ಕೃತಿಕ ಚಿಂತನ ಮಾದರಿ ಎಂದು ಸ್ಥೂಲವಾಗಿ ಗುರುತಿಸಬಹುದು. ಕಳೆದ ಶತಮಾನದ ಆದಿಯಲ್ಲಿ ಸಿಕ್ಕ ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಂಪಾದಿಸುತ್ತ, ಅದಕ್ಕೆ ಪೂರಕ ಎಂಬಂಥ ಪ್ರಸ್ತಾವನೆಗಳನ್ನು ಬರೆಯಲಾಯಿತು. ಈ ಸಂಪಾದನೆ ಪ್ರಸ್ತಾವನೆಗಳೇ ಮಹತ್ವದ್ದಾಗಿಯೂ ಸಂಶೋಧನೆಯಾಗಿಯೂ ಪರಿಣಮಿಸಿದವು. ಇವು ಸಂಪಾದನೆಗೆ ಸಂಬಂಧಿಸಿದ ಶಾಸ್ತ್ರೀಯ ಶಿಸ್ತನ್ನೂ ರೂಪಿಸಿದವು. ಇವು ಕವಿಚರಿತೆ, ಸಾಹಿತ್ಯ ಚರಿತ್ರೆಗಳ ಹುಟ್ಟಿಗೆ ಕಾರಣವಾದವು. ಇದರಿಂದ ಅಲ್ಲಿಯವರೆಗೆ ಬೆಳೆದು ಬಂದಿದ್ದ ಸಾಹಿತ್ಯವನ್ನು, ಕಾಲ ಧರ್ಮಗಳ ಹಿನ್ನೆಲೆಯಲ್ಲಿ ವಿಭಾಗಿಸಿ ಅರ್ಥೈಸುವ ಅಧ್ಯಯನಗಳಾಗಿ ಬೆಳೆಯುವಂತಾಯಿತು. ಸಾಹಿತ್ಯ ಚರಿತ್ರೆಗಳು ಪ್ರಾಚೀನ ಸಾಹಿತ್ಯದ ಪ್ರತ್ಯೇಕ ಸಂಶೋಧನೆಗಳಿಗೆ ದಾರಿ ಮಾಡಿದವು. ಕಾಲ, ಧರ್ಮಗಳ ಹಿನ್ನೆಲೆಯಲ್ಲಿ ರೂಪಗೊಂಡ ವಿಭಾಗ ಕ್ರಮಗಳನ್ನು ಅನುಸರಿಸಿ ವಿಸ್ತಾರವಾದ ಸಂಶೋಧನಾತ್ಮಕ ಅಧ್ಯಯನಗಳು ಹೆಚ್ಚಾಗಿ ಆರಂಭವಾದವು.

ವಸಾಹತುಶಾಹಿ ಶಿಕ್ಷಣವು ಹೊಸ ಬಗೆಯ ಓದು, ವಿಮರ್ಶಾತ್ಮಕ ಅಧ್ಯಯನಗಳನ್ನು ಹುಟ್ಟು ಹಾಕಿತು. ಈ ಮಾದರಿ ಇಡಿಯಾದ ಅಧ್ಯಯನಕ್ಕೆ ಬದಲಾಗಿ ಬಿಡಿಬಿಡಿಯಾದ ಭಾಗಗಳನ್ನು ಆರಿಸಿಕೊಂಡು ಅಥವಾ ತನಗೆ ವಿಶಿಷ್ಟವಾದ ಅಂಶಗಳ ಕಡೆ ಒತ್ತುಕೊಟ್ಟು, ವಿಮರ್ಶಿಸುವ ಕೆಲಸ ಮಾಡಿತು. ಇದರಿಂದ ಒಂದೇ ಪಠ್ಯವನ್ನು ಭಿನ್ನಭಿನ್ನ ದೃಷ್ಟಿಕೋನಗಳ ಮೂಲಕ ನೋಡುವ ಅಥವಾ ಪಠ್ಯದಲ್ಲಿ ವ್ಯಕ್ತವಾಗುವ ಹಲವು ನೆಲೆಗಳನ್ನು ಪರಿಶೀಲಿಸುವ ಅಧ್ಯಯನಗಳು ಹೆಚ್ಚಾದವು. ಈ ಅಧ್ಯಯನಗಳು ವೈವಿಧ್ಯಮಯವಾಗಿ ಬೆಳೆದವು. ಆಧುನಿಕ ವಾದಗಳು, ಸಿದ್ಧಾಂತಗಳು ಪ್ರಾಚೀನ ಸಾಹಿತ್ಯವನ್ನೂ ಹೊಸಹೊಸ ದೃಷ್ಟಿಕೋನದಿಂದ ನೋಡಲು ಪ್ರೇರೇಪಿಸಿದವು. ಹೀಗೆ ಸಂಪಾದನೆ, ಸಂಶೋಧನೆ ಮತ್ತು ವಿಮರ್ಶೆ ಎಂಬ ಮೂರು ಹಂತದ ಚಟುವಟಿಕೆಗಳು ಈಗ 'ಅಧ್ಯಯನ' ಎಂಬ ಹೆಸರಿನಲ್ಲಿ ಸೇರಿಕೊಂಡಿವೆ.

ಪ್ರಾಚೀನ ಪಠ್ಯಗಳ ಈವರೆಗಿನ ಅಧ್ಯಯನಗಳನ್ನು ಗಮನಿಸಿದರೆ, ಕವಿ-ಕಾವ್ಯಗಳ ಕಾಲ, ದೇಶ, ಮತವನ್ನು ಕುರಿತ ವಿಚಾರಗಳನ್ನೇ ಮುಂದುಮಾಡಿಕೊಂಡವು ಹೆಚ್ಚಾಗಿವೆ. ಪ್ರಾಚೀನರಿಗೆ

ಚರಿತ್ರೆಯ ಪ್ರಜ್ಞೆ ಕಡಿಮೆ ಎಂಬ (ಬ್ರಿಟೀಷರ) ಆಕ್ಷೇಪಕ್ಕೆ ಇವು ಪ್ರತಿಕ್ರಿಯೆಯಾಗಿರಬಹುದು. ಶಾಸನಗಳ ಸಂಶೋಧನೆ-ಅಧ್ಯಯನಗಳು ನಡೆದಂತೆ, ಅಲ್ಲಿ ವ್ಯಕ್ತವಾದ ವಿಷಯಗಳ ಬೆಂಬಲದಿಂದ ಹೊಸಹೊಸ ಮಾಹಿತಿಗಳು ಸೇರ್ಪಡೆಯಾಗುತ್ತ ಹೋದವು. ಪ್ರಾಚೀನ ಕವಿಗಳ ಬಗ್ಗೆ ಇದ್ದ ಅರೆಕೊರೆಗಳನ್ನು ತುಂಬಲು ಇವು ಸಹಾಯಕವಾದವು. ಕವಿಯ ಕಾಲ, ದೇಶ, ಮತ ಸಂಬಂಧಿ ಅಧ್ಯಯನದ ಜತೆಗೆ, ಪಠ್ಯವು ಲೌಕಿಕವೋ ಧಾರ್ಮಿಕವೋ ಎಂದು ಗುರುತಿಸಿ, ಅವರದರ ಸಾಧ್ಯತೆಗಳನ್ನು ವಿಶ್ಲೇಷಿಸುವ ಅಧ್ಯಯನಗಳು ನಡೆದವು. ಈ ಮಾದರಿಯ ಅಧ್ಯಯನಗಳಲ್ಲಿ ಕವಿಯ ಶೈಲಿ, ಕಾವ್ಯದ ಸತ್ವ-ಸೌಂದರ್ಯವನ್ನು ಭಾರತೀಯ ಕಾವ್ಯ ಮೀಮಾಂಸೆಯ ಹಿನ್ನೆಲೆಯಲ್ಲಿ ಎತ್ತಿ ತೋರಿಸುವುದನ್ನು ವಿದ್ವಾಂಸರು ಮಾಡಿದರು. ನಂತರ ಪಠ್ಯಗಳ ಸಾಂಸ್ಕೃತಿಕ ಅಧ್ಯಯನಗಳು ಶುರುವಾದವು. ಈ ಬಗೆಯ ಅಧ್ಯಯನಗಳು ಸರಿಯಾದ ನೆಲೆಯನ್ನು ಕಾಣಲಿಲ್ಲವೆಂದೇ ಹೇಳಬೇಕು. ಯಾಕೆಂದರೆ ಸಂಸ್ಕೃತಿ ಎಂದರೆ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಮುಂತಾದ ಸಮಸ್ತವನ್ನು ಒಳಗೊಂಡಿದ್ದು ಎಂದು ಗ್ರಹಿಸದೆ, ಆಯಾ ಚೌಕಟ್ಟುಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಎತ್ತಿ ಜೋಡಿಸುವುದೇ ಅಧ್ಯಯನ ವಾಯಿತು. ಈ ಅಧ್ಯಯನಗಳು ಉಪಯುಕ್ತವಾಗಿ ಕಾಣಲಿಲ್ಲ. ಸಂಸ್ಕೃತಿಯ ಪರಿಕಲ್ಪನೆಯನ್ನು ಇದಕ್ಕಿಂತ ಭಿನ್ನವಾಗಿ ಇಡಿಯಾಗಿ ಗ್ರಹಿಸುವ ಅಧ್ಯಯನಗಳು ಈಗೀಗ ಶುರುವಾಗಿವೆ. ಇವು ಉಪಯುಕ್ತವಾಗಿ ಬೆಳೆಯುತ್ತಿವೆ ಕೂಡ.

ಪ್ರಾಚೀನ ಕನ್ನಡ ಸಾಹಿತ್ಯ ಅಧ್ಯಯನಗಳಲ್ಲಿ ಆರಂಭದ ಜೈನ ಸಾಹಿತ್ಯವನ್ನು ಜೈನೇತರ ವಿದ್ವಾಂಸರು ಅಧ್ಯಯನ ಮಾಡಿದರು. ಇದರಿಂದ ಪೂರ್ವಗ್ರಹಗಳಿಗೆ ಅವಕಾಶಗಳು ಕಮ್ಮಿ ಯಾದವೆಂದು ಕಾಣುತ್ತದೆ. ಈ ಮಾತನ್ನು 'ಮಧ್ಯಯುಗ'ದ ಸಾಹಿತ್ಯಕ್ಕೆ ಅನ್ವಯಿಸುವುದು ಕಷ್ಟ. ಪ್ರಾಚೀನ ಪಠ್ಯಗಳ ಅಧ್ಯಯನಕ್ಕೆ ಸಂಬಂಧಿಸಿದ ಮೇಲಿನ ವಿಚಾರಗಳು 'ವಡ್ಡಾರಾಧನೆ' ಕೃತಿಗೂ ಅನ್ವಯಿಸುತ್ತವೆ. ಈ ಕೃತಿಯನ್ನು ಕುರಿತು ನಡೆದ ಅಧ್ಯಯನಗಳೆಂದರೆ 'ವಡ್ಡಾ ರಾಧನೆ' ಕೃತಿಯು 'ಕವಿರಾಜ ಮಾರ್ಗ' ಕೃತಿಗಿಂತ ಹಿಂದಿನದ್ದೋ ಅಥವಾ ನಂತರದ್ದೋ? ಈ ಕೃತಿಗೆ ಮೂಲ ಯಾವುದು? ಇದರ ಕರ್ತೃ ಶಿವಕೋಟ್ಯಾಚಾರ್ಯನೋ, ಭ್ರಾಜಿಷ್ಣುವೊ?- ಹೀಗೆ ಕವಿಯ ಕಾಲ ದೇಶ ಧರ್ಮಕ್ಕೆ ಸಂಬಂಧಿಸಿದ ಅಧ್ಯಯನಗಳು ಸಾಂಪ್ರದಾಯಿಕ ಎಂಬಂತೆ ನಡೆದಿವೆ. 'ವಡ್ಡಾರಾಧನೆ' ಒಂದು ಧಾರ್ಮಿಕ ಪಠ್ಯ ಎಂದು ಸರಳವಾಗಿ ಗ್ರಹಿಸಿ, ಅದರಲ್ಲಿರುವ ವ್ರತಗಳು, ಅವು ಜೈನಧರ್ಮವನ್ನು ಪ್ರತಿಪಾದಿಸುವ ಬಗೆ ಮುಂತಾದ ಅಂಶಗಳನ್ನು ಎತ್ತಿ ತೋರಿಸುವ ಅಧ್ಯಯನಗಳು ಹೆಚ್ಚಾಗಿ ಕಾಣಸಿಗುತ್ತಿವೆ. ಈ ಪಠ್ಯದಲ್ಲಿ ಕಾಣುವ ಸಾಮಾಜಿಕ ರಾಜಕೀಯ ಶೈಕ್ಷಣಿಕ ಆಯಾಮಗಳನ್ನು ಮಾಹಿತಿಯ ರೂಪದಲ್ಲಿ ತೋರಿಸುವ ಸಾಂಸ್ಕೃತಿಕ ಅಧ್ಯಯನಗಳೂ ನಡೆದಿವೆ.

'ವಡ್ಡಾರಾಧನೆ'ಯಂಥ ಪಠ್ಯಗಳನ್ನು ಧಾರ್ಮಿಕ ಪಠ್ಯಗಳೆಂದು ಹೇಳುವುದು ಸುಲಭ. ಇದಕ್ಕೆ ಪೂರಕವಾಗುವಂಥ ವಿವರಗಳನ್ನು ಆಯ್ದು ತೋರಿಸುವುದೂ ಸರಳ. ಆದರೆ ಧಾರ್ಮಿಕ ಕೃತಿಯೊಂದು ಹುಟ್ಟಿಕೊಳ್ಳುವುದಕ್ಕೆ, ಅದು ಪ್ರತಿಪಾದಿಸಬಹುದಾದ ಧರ್ಮ, ನೀತಿಯ ಹಿಂದೆ

ಇರುವ ಕಾಲದ ತುರ್ತುಗಳು ಯಾವುವು? ಈ ತುರ್ತುಗಳಿಗೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳೂ ಹೇಗೆ ಕಾರಣವಾಗಿರುತ್ತವೆ? ಇದು ಕಷ್ಟ. 'ವಡ್ಡಾರಾಧನೆ'ಯನ್ನೇ ತೆಗೆದುಕೊಂಡರೆ, ಅದನ್ನು ಜೈನರ ಧಾರ್ಮಿಕ ಪಠ್ಯ ಎನ್ನುವುದಾದರೆ, ಅದು ಹೇಳುವ ನೀತಿ ಯಾವುದು? ಎಲ್ಲ ಬಗೆಯ ಹಿಂಸೆಯನ್ನು ಸಹಿಸಿ ಕೊನೆಗೆ ಮೋಕ್ಷವನ್ನು ಸಂಪಾದಿಸುವುದು. ಈ ಹಿಂಸೆಯನ್ನು ಸಹಿಸುವ ಗುಣವನ್ನು ಎತ್ತಿ ಹೇಳುವುದರ ಹಿಂದೆ ಇರುವ ಒತ್ತಡ ಯಾವುದು? ಜೈನರ ಧಾರ್ಮಿಕತೆಯನ್ನು ಗಟ್ಟಿಗೊಳಿಸುವುದೇ? ಹೌದಾದರೆ ಜೈನಧರ್ಮದ ಇಳಿಗಾಲದಲ್ಲಿ ಇಂಥ ಕೃತಿಗಳು ಹುಟ್ಟಿಕೊಳ್ಳಬಹುದು ಎಂದು ಕಾಣುತ್ತದೆ. 'ವಡ್ಡಾರಾಧನೆ'ಯಂಥ ಗ್ರಂಥ ಗಳನ್ನು ಮತ್ತು ಈ ಹೊತ್ತಿನ ದಿಗಂಬರ ಜೈನರ ಬದುಕನ್ನು ಮುಖಾಮುಖಿ ಮಾಡಿದರೆ ಹೇಗಿರುತ್ತದೆ? ಇಂಥ ಪ್ರಶ್ನೆಗಳು ಈ ಹೊತ್ತಿನ ಸಾಂಸ್ಕೃತಿಕವಾದ ಒತ್ತಡಗಳಿಂದ ಪ್ರೇರಿತ ವಾಗುತ್ತಿವೆ.

ಯಾವುದನ್ನು 'ಪ್ರಾಚೀನ ಪಠ್ಯ' ಎಂದು ಕರೆಯಲಾಗುತ್ತಿದೆಯೋ ಅದು ನಿಜವಾಗಿಯೂ ಹೌದೇ? ಈ ಹೊತ್ತಿನ ಅಧ್ಯಯನಗಳು ಇದನ್ನು ಪ್ರಶ್ನಿಸುತ್ತಿವೆ. ನಮ್ಮ ಕಾಲದ ಓದು 'ಪ್ರಾಚೀನ ಪಠ್ಯ'ಗಳನ್ನು ನೋಡುವ ದೃಷ್ಟಿಯನ್ನು ಹೊಸದಾಗಿ ರೂಪಿಸಿದೆ. 'ಕವಿರಾಜ ಮಾರ್ಗ' ಕೇವಲ ಲಾಕ್ಷಣಿಕ ಗ್ರಂಥವಲ್ಲ. 'ವಡ್ಡಾರಾಧನೆ' ಕೇವಲ ಧಾರ್ಮಿಕ ಗ್ರಂಥವಲ್ಲ. ಅವುಗಳ ಹುಟ್ಟಿನ ಹಿಂದೆ ಅನೇಕ ಬಗೆಯ ಒತ್ತಡಗಳಿವೆ. ಅವು ಯಾವುವು ಎಂಬ ಶೋಧ ನಡೆಯಬೇಕಾಗಿದೆ. ಜತೆಗೆ ನಮ್ಮ ಆಧುನಿಕ ಬಾಳಿನ ಸಂವೇದನೆಯ ಜತೆಗೆ ಇದನ್ನು ಮುಖಾಮುಖಿ ಗೊಳಿಸಬೇಕಿದೆ. ಈ ಬಗೆಯ ಅಧ್ಯಯನಗಳು ಚುರುಕಾಗಬೇಕಾಗಿದೆ. ಕನ್ನಡ ವಿಶ್ವವಿದ್ಯಾಲಯವು 'ಪ್ರಾಚೀನ ಪಠ್ಯಗಳ ಹೊಸಓದು' ಆರಂಭಿಸಿದೆ. ಇದರ ಫಲವಾಗಿ 'ಕವಿರಾಜ ಮಾರ್ಗ' ಹೊರಬಂದಿದೆ. 'ವಡ್ಡಾರಾಧನೆ' ಹೊರಬರಲಿದೆ. ಭಿನ್ನ ದೃಷ್ಟಿಕೋನದ ಅಧ್ಯಯನಗಳು ಈ ವಿಮರ್ಶಾ ಕೃತಿಗಳಲ್ಲಿ ವ್ಯಕ್ತವಾಗಿವೆ. ಇವುಗಳ ಹಿಂದೆ ಈತನಕ ನಡೆದ ಅಧ್ಯಯನಗಳ ಅನುಭವ ಕೂಡ ಕಾರಣವಾಗಿದೆ. ಅಂಥ ಅಧ್ಯಯನಗಳನ್ನು 'ಕನ್ನಡ ಅಧ್ಯಯನ' ಓದುಗರಿಗಾಗಿ ಇಲ್ಲಿ ಸಂಗ್ರಹಿಸಿ ಕೊಟ್ಟಿದೆ.

ಆಕರಸೂಚಿ

ಅ) ಗ್ರಂಥಗಳು

೦೧. ಆರ್.ಎಲ್.ಅನಂತರಾಮಯ್ಯ, (೧೯೮೭), ವಡ್ಡಾರಾಧನೆಯ ಕಥಾಲೋಕ (ಗದ್ಯಾನುವಾದ), ಸಮಾಜ ಪುಸ್ತಕಾಲಯ, ಧಾರವಾಡ

೦೨. ಟಿ.ಕೇಶವಭಟ್ಟ, (೧೯೭೯), ಶಿವಕೋಟ್ಯಾಚಾರ್ಯರ ವಡ್ಡಾರಾಧನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೦೩. ಬಿ.ಕೆ.ಖಡಬಡಿ (೧೯೯೬), ವಡ್ಡಾರಾಧನೆ ಸಂಶೋಧನಾತ್ಮಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಗದಗ

೦೪. ಎಸ್.ಬಿ.ತೋಟದ (೧೯೭೯), ವಡ್ಡಾರಾಧನೆಯ ಕಥಾಗುಚ್ಛ, ಪ್ರಕಾಶನ ?

೦೫. ಧವಳಶ್ರೀ (೧೯೬೯). ವಡ್ಡಾರಾಧನೆಯಲ್ಲಿ ಸ್ತ್ರೀ, ಪದ್ಮಶ್ರೀ ಪ್ರಕಾಶನ, ದೊಡ್ಡಬೆಲೆ
೦೬. ಡಿ.ಎಲ್.ನರಸಿಂಹಾಚಾರ್ (ಸಂ)(೧೯೬೫). ವಡ್ಡಾರಾಧನೆ, ಶಾರದಾ ಮಂದಿರ, ಮೈಸೂರು
೦೭. ಕೆ. ನಾಗೇಂದ್ರಪ್ಪ (೧೯೬೩) ವಡ್ಡಾರಾಧನೆಯ ಕತೆಗಳು, ಸರಸ ಸಾಹಿತ್ಯ ಪ್ರಕಾಶನ, ಮೈಸೂರು
೦೮. ಎಸ್.ಬಸವಾರಾಧ್ಯ (ಸಂ) (೧೯೯೬), ವಡ್ಡಾರಾಧನೆ (ಮುಕ್ತಿಸಹಾರ ಮಾಲೆ). ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
೦೯. ಬಿ.ಶಂಕರಭಟ್ ಮತ್ತು ಬಿ ಮಹಾಬಲೇಶ್ವರ (೧೯೪೩), ವಡ್ಡಾರಾಧನೆಯ ಕತೆಗಳು
೧೦. ಬಿ.ಶಂಕರಭಟ್ (೧೯೫೯). ವಡ್ಡಾರಾಧನೆಯ ಕತೆಗಳು, ಪ್ರಕಾಶನ ?
೧೧. ಪಿ.ಸೀತಾರಾಮಯ್ಯ (೧೯೭೭). ವಡ್ಡಾರಾಧನೆ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು
೧೨. ಹಂಪ ನಾಗರಾಜಯ್ಯ (೧೯೬೬) ವಡ್ಡಾರಾಧನೆ, ಮೈಸೂರು ವಿಶ್ವವಿದ್ಯಾನಿಲಯ
೧೩. ಹಂಪ ನಾಗರಾಜಯ್ಯ (೧೯೬೮) ವಡ್ಡಾರಾಧನೆ, ಮೈಸೂರು ವಿಶ್ವವಿದ್ಯಾನಿಲಯ
೧೪. ಹಂಪ ನಾಗರಾಜಯ್ಯ (೧೯೯೩) ವಡ್ಡಾರಾಧನೆ, ಬೆಂಗಳೂರು ವಿಶ್ವವಿದ್ಯಾನಿಲಯ
೧೫. ಹಂಪ ನಾಗರಾಜಯ್ಯ (೧೯೬೮) ಜೈನ ಕಥಾಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೬. ಹಂಪ ನಾಗರಾಜಯ್ಯ (೧೯೯೯) ವಡ್ಡಾರಾಧನೆ: ಸಮಗ್ರ ಅಧ್ಯಯನ, ಸಿ.ವಿ.ಜಿ.ಪಬ್ಲಿಕೇಶನ್ಸ್, ಬೆಂಗಳೂರು

ಆ) ಲೇಖನಗಳು

೦೧. ಎನ್.ಅನಂತರಂಗಾಚಾರ್ (೧೯೭೦). 'ವಡ್ಡಾರಾಧನೆ', ಸಾಹಿತ್ಯ ಭಾರತಿ, ಮೈಸೂರು ವಿಶ್ವವಿದ್ಯಾನಿಲಯ
೦೨. ಆರ್.ಎಲ್.ಅನಂತರಾಮಯ್ಯ (೧೯೭೬), 'ವಡ್ಡಾರಾಧನೆ ಭಾಷೆ-ಶೈಲಿ', ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ಸಂ.೩, ಮೈಸೂರು ವಿಶ್ವವಿದ್ಯಾನಿಲಯ
೦೩. ಆರ್.ಎಲ್.ಅನಂತರಾಮಯ್ಯ (೧೯೭೬) 'ಕೃತಿ ಪರಿಶೀಲನೆ-ಕಥಾಸಾರ', ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ಸಂ.೩, ಮೈಸೂರು ವಿಶ್ವವಿದ್ಯಾನಿಲಯ
೦೪. ಅರವಿಂದ ಮಾಲಗತ್ತಿ (೧೯೯೯) 'ವಡ್ಡಾರಾಧನೆ : ಸಮಾನತೆ ಮತ್ತು ಪಾಪಪ್ರಜ್ಞೆ ಎಂಬ ಜ್ವಾಲೆ' : ದಲಿತಯುಗ ಮತ್ತು ಕನ್ನಡ ಸಾಹಿತ್ಯ, ಚೇತನ ಬುಕ್ ಹೌಸ್, ಬೆಂಗಳೂರು
೦೫. ಆ.ನೇ.ಉಪಾಧ್ಯ, (ಅನು:ಡಿ.ಎಲ್.ನರಸಿಂಹಾಚಾರ್) 'ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ'. ಪ್ರಬುದ್ಧ ಕರ್ನಾಟಕ, ಸಂಪುಟ-೨೪ ಸಂಚಿಕೆ-೨
೦೬. ಆ.ನೇ.ಉಪಾಧ್ಯ (೧೯೭೬) 'ಹಿನ್ನೆಲೆ, ಗ್ರಂಥನಾಮ, ಕರ್ತೃತ್ವ, ಕಾಲ' ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ಸಂ.೩, ಮೈಸೂರು ವಿಶ್ವವಿದ್ಯಾನಿಲಯ
೦೭. ಸಿ. ಓಂಕಾರಪ್ಪ (೧೯೬೪) 'ವಡ್ಡಾರಾಧನೆ ಮತ್ತು ಧರ್ಮ ಸಮನ್ವಯ' ಮುಕ್ತಿಶ್ರೀ
೦೮. ಕಮಲಾ ಹಂಪನಾ (೧೯೮೨) 'ವಡ್ಡಾರಾಧನೆ ಒಂದು ಸ್ಥೂಲ ಪರಿಚಯ' : ಜೈನ ಸಾಹಿತ್ಯ ಪರಿಸರ, ವರ್ಧಮಾನ ಪ್ರಕಾಶನ, ಬೆಂಗಳೂರು
೦೯. ಕೆ.ಜಿ.ಕುಂದಣಗಾರ (೧೯೬೭) 'ವಡ್ಡಾರಾಧನೆಕಾರನ ಕಾಲ ದೇಶ' : ಉಪಾಯನ (ಡಿ.ಎಲ್. ನರಸಿಂಹಾಚಾರ ಅಭಿನಂದನ ಗ್ರಂಥ), ಡಿಎಲ್ ಎನ್ ಸಂಭಾವನ ಗ್ರಂಥ ಪ್ರಕಾಶನ ಸಮಿತಿ, ಬೆಂಗಳೂರು

೧೦. ಕೆ.ಕುಶಾಲಪ್ಪಗೌಡ (೧೯೬೬) 'ವಡ್ಡಾರಾಧನೆಯ ಕೆಲವು ವೈಶಿಷ್ಟ್ಯಗಳು', ಪ್ರಬುದ್ಧ ಕರ್ನಾಟಕ, ಸಂಪುಟ-೪೮ ಸಂಚಿಕೆ-೨

೧೧. ಕೀರ್ತಿನಾಥ ಕುರ್ತಕೋಟಿ (೧೯೯೮) 'ವಡ್ಡಾರಾಧನೆ'-ಕನ್ನಡ ಸಾಹಿತ್ಯ ಸಂಗಾತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨. ಬಾ.ರಾ.ಗೋಪಾಲ (೧೯೮೭) 'ಭದ್ರಬಾಹು: ಐತಿಹಾಸಿಕ ವಿಮರ್ಶೆ', ಹರತಿ ಸಿರಿ, ಲಕ್ಷ್ಮಣ್ ತೆಲಗಾವಿ (ಸಂ), ವಾಲ್ಮಿಕಿ ಸಾಹಿತ್ಯ ಸಂಪದ, ಹಿರಿಯೂರು.

೧೩. ಎಂ.ಚಂದ್ರಶೇಖರ (?) 'ಶಿವಕೋಟ್ಯಾಚಾರ್ಯರು ಕಂಡ ಸಮಾಜ', ವೀರಭಾರತಿ, ಸಂಪುಟ-೧೧,೧೨ ಸಂಚಿಕೆ-೧೩

೧೪. ಎಂ.ಚಂದ್ರಶೇಖರ (?) 'ವಡ್ಡಾರಾಧನೆಯಲ್ಲಿ ಜೈನಧರ್ಮ ಪರಿಭಾಷೆ', ವೀರಭಾರತಿ, ಸಂಪುಟ-೧೩, ಸಂಚಿಕೆ-೬-೭

೧೫. ಎಚ್.ದೇವೀರಪ್ಪ (೧೯೭೬), 'ಶಿವಕೋಟ್ಯಾಚಾರ್ಯರ ಕಾಲದೇಶ'-ಶ್ರೀಕಂಠತೀರ್ಥ (ತೀನಂಶ್ರೀ ಅಭಿನಂದನ ಗ್ರಂಥ,) (ಸಂ) ಎಂ.ಚಿದಾನಂದಮೂರ್ತಿ, ತೀನಂಶ್ರೀ ಅಭಿನಂದನ ಸಮಿತಿ, ಬೆಂಗಳೂರು

೧೬. ಎಚ್.ದೇವೀರಪ್ಪ (೧೯೮೮೪), 'ಶಿವಕೋಟ್ಯಾಚಾರ್ಯ: ಸಂಶೋಧನ ಸಂಪುಟ', ಶಿವಕುಮಾರ ಪ್ರಕಾಶನ, ಬೆಂಗಳೂರು

೧೭. ಡಿ.ಎಲ್.ನರಸಿಂಹಾಚಾರ್ (೧೯೩೧), 'ಶಿವಾಕೋಟ್ಯಾಚಾರ್ಯ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ-೧೬ ಸಂಚಿಕೆ-೩

೧೮. ಡಿ.ಎಲ್.ನರಸಿಂಹಾಚಾರ್ (೧೯೩೯) 'ವಡ್ಡಾರಾಧನೆ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಸಂಪುಟ-೨೩ ಸಂಚಿಕೆ-೪

೧೯. ಡಿ.ಎಲ್.ನರಸಿಂಹಾಚಾರ್ (೧೯೪೦) 'ಸುಕೌಶಲಸ್ವಾಮಿಯ ಕಥೆ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ-೨೫ ಸಂಚಿಕೆ-೩

೨೦. ಡಿ.ಎಲ್.ನರಸಿಂಹಾಚಾರ್ (೧೯೪೧) 'ಗಜಕುಮಾರನ ಕಥೆ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ-೨೫, ಸಂಚಿಕೆ-೪

೨೧. ಡಿ.ಎಲ್.ನರಸಿಂಹಾಚಾರ್ (೧೯೪೧) 'ಸನತ್ಕುಮಾರ ಚಕ್ರವರ್ತಿಯ ಕಥೆ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ-೨೫ ಸಂಚಿಕೆ-೪

೨೨. ಡಿ.ಎಲ್.ನರಸಿಂಹಾಚಾರ್ (೧೯೪೧) 'ಅಣ್ಣಿಕಾಪುತ್ರನ ಕಥೆ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ-೨೫ ಸಂಚಿಕೆ-೪

೨೩. ಡಿ.ಎಲ್.ನರಸಿಂಹಾಚಾರ್ (೧೯೪೧) 'ಭದ್ರಬಾಹು ಭಟ್ಟಾರರ ಕಥೆ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ-೨೬ ಸಂಚಿಕೆ-೧

೨೪. ಡಿ.ಎಲ್.ನರಸಿಂಹಾಚಾರ್ (೧೯೪೧) 'ಧರ್ಮಘೋಷ ಭಟ್ಟಾರರ ಕಥೆ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ-೨೬ ಸಂಚಿಕೆ-೩

೨೫. ಡಿ.ಎಲ್.ನರಸಿಂಹಾಚಾರ್ (೧೯೪೧) 'ಕಾರ್ತೀಕ ಋಷಿಯ ಕಥೆ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ-೨೬ ಸಂಚಿಕೆ-೩

೨೬. ಡಿ.ಎಲ್.ನರಸಿಂಹಾಚಾರ್ (೧೯೪೧) 'ವೃಷಭಸೇನ ಭಟ್ಟಾರರ ಕಥೆ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ-೨೬ ಸಂಚಿಕೆ-೩

೨೭. ಡಿ.ಎಲ್.ನರಸಿಂಹಾಚಾರ್ (೧೯೪೧) 'ಲಲಿತ ಘಟೆಯ ಕಥೆ', ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ-೨೭ ಸಂಚಿಕೆ-೨

೨೮. ಡಿ.ಎಲ್.ನರಸಿಂಹಾಚಾರ್ (೧೯೭೧) 'ವಡ್ಡಾರಾಧನೆ-ಪೀಠಿಕೆಗಳು ಲೇಖನಗಳು', ಡಿ.ವಿ.ಕೆ.ಮೂರ್ತಿ, ಮೈಸೂರು

೨೯. ಟಿ.ಎಸ್.ನಾಗರಾಜಶೆಟ್ಟಿ (ಹಂಪನಾ ಅಭಿನಂದನ ಗ್ರಂಥ-೧೯೮೮) 'ವಡ್ಡಾರಾಧನೆ, ಸಂಸ್ಕೃತಿ' (ಸಂ)ಲಕ್ಕಪ್ಪಗೌಡ, ಹಂಪನಾ ಅಭಿನಂದನ ಸಮಿತಿ, ಬೆಂಗಳೂರು

೩೦. ಕೆ.ನಾಗೇಂದ್ರಪ್ಪ (?) 'ವಡ್ಡಾರಾಧನೆಯ ಕಥೆಗಳು', ಧವಳಶ್ರೀ ಪ್ರಕಾಶನ, ಬೆಂಗಳೂರು

೩೧. ಕೆ.ನಾಗೇಂದ್ರಪ್ಪ (ಸೆಪ್ಟೆಂಬರ್-೧೯೭೧) 'ವಡ್ಡಾರಾಧನೆಯಲ್ಲಿ ಜನಜೀವನ': ಜೀವನ

೩೨. ನಿರಂಜನ (ಸಂ) (೧೯೭೩) 'ವಡ್ಡಾರಾಧನೆ' : ಜ್ಞಾನಗಂಗೋತ್ರಿ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು

೩೩. ಜೀ.ಶಂ.ಪರಮಶಿವಯ್ಯ (೧೯೭೬), 'ವಡ್ಡಾರಾಧನೆ:ಜಾನಪದ ಅಂಶಗಳು' ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ ಸಂ.೩, ಮೈಸೂರು ವಿಶ್ವವಿದ್ಯಾನಿಲಯ

೩೪. ಬಿ.ಎಂ.ಪುಟ್ಟಯ್ಯ (೧೯೯೭), 'ವಡ್ಡಾರಾಧನೆ: ಕಾರ್ತಿಕ ಋಷಿಯ ಕತೆ', ನಮ್ಮ ಕನ್ನಡ ಕಾವ್ಯ,(ಸಂ)ಓ.ಎಲ್.ನಾಗಭೂಷಣಸ್ವಾಮಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೫. ಬಿ.ಎಂ.ಪುಟ್ಟಯ್ಯ (೧೯೯೯) 'ಕಾರ್ತಿಕ ಋಷಿಯ ಕತೆ: ಭೌತಿಕವಾದ ವಿಶ್ಲೇಷಣೆ' : ಕನ್ನಡ ಅಧ್ಯಯನ, ಸಂಪುಟ-೬, ಸಂಚಿಕೆ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೬. ಎಚ್.ಎಸ್.ಬಿಳಿಗಿರಿ (೧೯೯೮), 'ವಡ್ಡಾರಾಧನೆಯಲ್ಲಿ ಆಡುವ ಮಾತಿನ ಶೈಲಿ' ವರಸೆಗಳು, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು

೩೭. ಭೀಮರಾವ್ ಚಿಟಗುಪ್ಪಿ (೧೯೭೪) 'ವಡ್ಡಾರಾಧನೆಯ ವಿಚಾರ : ಸಂಶೋಧನ ಪಂಚದಶಿ', ಉಷಾ ಸಾಹಿತ್ಯಮಾಲೆ, ಬೆಂಗಳೂರು

೩೮. ಸಾ.ಶಿ.ಮರುಳಯ್ಯ (೧೯೯೧), 'ವಡ್ಡಾರಾಧನೆ-ಮನಿಷಾ', ರಾಗಿಣಿ ಪ್ರತಿಷ್ಠಾನ, ಬೆಂಗಳೂರು

೩೯. ಸ.ಸ.ಮಾಳವಾಡ, 'ವಡ್ಡಾರಾಧನೆಯಲ್ಲಿ ಜೀವನ ಚಿತ್ರ'

೪೦. ಮಿರ್ಜಿ ಅಣ್ಣಾರಾಯ (೧೯೭೯), 'ವಡ್ಡಾರಾಧನೆ': ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೪೧. ರಂ.ಶ್ರೀ.ಮುಗಳಿ (೧೯೯೮), 'ವಡ್ಡಾರಾಧನೆ' : ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು

೪೨. ಎಸ್.ವಿ.ರಂಗಣ್ಣ (೧೯೭೫), 'ವಡ್ಡಾರಾಧನೆಯ ಶೈಲಿ' : ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ -೨, (ಸಂ)ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ

೪೩. ರಹಮತ್ ತರೀಕೆರೆ (೧೯೮೫), 'ಕಾರ್ತಿಕ ಋಷಿಯ ಕತೆ ಹಾಗೂ ಜೈನ ಹಿನ್ನೆಲೆ', ಪ್ರಬುದ್ಧ ಕರ್ನಾಟಕ, ಏಪ್ರಿಲ್ -೧೯೮೫

೪೪. ಸಿ.ವೀರಣ್ಣ (೧೯೮೬) 'ವಡ್ಡಾರಾಧನೆ': ಪ್ರಾಚೀನ ಸಾಹಿತ್ಯ-೧, ನವಕರ್ನಾಟಕ ಪ್ರಕಾಶನ, ಬೆಂಗಳೂರು

೪೫. ಟಿ.ವಿ.ವೆಂಕಟಾಚಲ ಶಾಸ್ತ್ರೀ : 'ವಡ್ಡಾರಾಧನೆಯ ದೇಶಿ' : ಜ್ಞಾನೋಪಾಸಕ

೪೬. ಟಿ.ವಿ.ವೆಂಕಟಾಚಲ ಶಾಸ್ತ್ರೀ: 'ವಡ್ಡಾರಾಧನೆಯಲ್ಲಿಯ ಒಂದು ಪಾಠ ವಿಚಾರ', ಪ್ರಬುದ್ಧ ಕರ್ನಾಟಕ, ಸಂಪುಟ-೫೩, ಸಂಚಿಕೆ-೨

೪೭. ಟಿ.ವಿ.ವೆಂಕಟಾಚಲ ಶಾಸ್ತ್ರೀ (೧೯೯೯) 'ವಡ್ಡಾರಾಧನೆಯಲ್ಲಿಯ ಒಂದು ಪಾಠ ವಿಚಾರ' : ಶಾಸ್ತ್ರೀಯ, ಸಪ್ನಾ ಬುಕ್ ಹೌಸ್, ಬೆಂಗಳೂರು

೪೮. ತ.ಸು.ಶಾಮರಾಯ (೧೯೭೬) 'ವಡ್ಡಾರಾಧನೆ' : ಕನ್ನಡ ಸಾಹಿತ್ಯ ಚರಿತ್ರೆ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು

೪೯. ಸೀತಾರಾಮ ಜಾಗೀರ್‌ದಾರ (ಎಂ.ವಿ.ಸೀತಾರಾಮಯ್ಯ ಅಭಿನಂದನ ಗ್ರಂಥ ೧೯೮೩), ವಡ್ಡಾರಾಧನೆಯಲ್ಲಿ ಛಂದಗಳು : ಆಸ್ವಾದ (ಸಂ)ಶ್ರೀವತ್ಸ, ಉದಯಬಾನು ಕಲಾಸಂಘ(ರಿ), ಬೆಂಗಳೂರು

೫೦. ಆರ್.ಎಸ್.ಸುಂಕದ (೧೯೯೧), 'ಶಿವಕೋಟಿ', ಕನ್ನಡ ಸಾಹಿತ್ಯ ಸಂಸ್ಕೃತಿ ದರ್ಶನ, ಸಮಾಜ ಪುಸ್ತಕಾಲಯ, ಧಾರವಾಡ

೫೧. ಎಸ್.ಎಂ.ಹಿರೇಮಠ (೧೯೯೩), 'ವಡ್ಡಾರಾಧನೆಯ ಕಾಲ ಯಾವುದು?' : ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳು

೫೨. ಬಿ.ಬಿ.ಹೆಂಡಿ (೧೯೭೫), 'ವಡ್ಡಾರಾಧನೆ : ಕವಿ ಕಾಲ ದೇಶ ವಿಚಾರ'-ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ-೨, ಜಿ.ಎಸ್.ಶಿವರುದ್ರಪ್ಪ(ಸಂ), ಬೆಂಗಳೂರು ವಿಶ್ವವಿದ್ಯಾಲಯ

೫೩. ಹಂಪ ನಾಗರಾಜಯ್ಯ (೧೯೭೫) 'ವಡ್ಡಾರಾಧನೆಯ ಕೃತಿ ಪರಿಶೀಲನ' : ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೨, (ಸಂ) ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ

೫೪. ಹಂಪ ನಾಗರಾಜಯ್ಯ (೧೯೯೭) 'ವಡ್ಡಾರಾಧನೆಯ ಮೂರು ಶ್ಲೋಕಗಳು'-ಚಂದ್ರಕೊಡೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೫. ಹಂಪ ನಾಗರಾಜಯ್ಯ (೧೯೯೭) 'ಚಾಣಾಕ್ಯರಿಸಿಯ ಕಥೆ': ಪರಾಮರ್ಶೆ-ಚಂದ್ರಕೊಡೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೬. ಹಂಪ ನಾಗರಾಜಯ್ಯ (೧೯೯೭) 'ಭದ್ರಬಾಹುಭಟ್ಟಾರರ ಕಥೆ'-ಚಂದ್ರಕೊಡೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೭. ಹಂಪ ನಾಗರಾಜಯ್ಯ (೧೯೯೭) 'ಬ್ರಾಜಿಷ್ಣು : ಆರಾಧನಾ ಕರ್ನಾಟ ಟೀಕಾ', ಚಂದ್ರಕೊಡೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೮. ಹಂಪ ನಾಗರಾಜಯ್ಯ (೧೯೯೭) 'ಆರಾಧನಾ ಕರ್ನಾಟ ಟೀಕಾ ಸಾಹಿತ್ಯ ಸಂಪತ್ತು', ಚಂದ್ರಕೊಡೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಈ ಸಂಚಿಕೆಯ ಲೇಖಕರು

೧. ಡಾ ಹಿ ಚಿ ಬೋರಲಿಂಗಯ್ಯ ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ-ಹಂಪಿ ವಿದ್ಯಾರಣ್ಯ-೫೮೩ ೨೭೬

೨. ಡಾ ವೀರಣ್ಣ ದಂಡೆ, ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ-೫೮೫ ೧೦೬

೩. ಪ್ರೊ ಎಸ್ ಜಿ ಸಿದ್ಧರಾಮಯ್ಯ, 'ಹೊಂಬೆಳಕು' ಶೆಟ್ಟಿಹಳ್ಳಿಗೇಟ್ ಬಳಿ, ರಾಘವೇಂದ್ರ ನಗರ, ತುಮಕೂರು

೪. ಶ್ರೀ ಬಾಳಾಸಾಹೇಬ ಲೋಕಾಪುರ, ಉಪನ್ಯಾಸಕ, ಸಕ್ರಿ ಪದವಿಪೂರ್ವ ಕಾಲೇಜು ಬಾಗಲಕೋಟ

೫. ಡಾ ವೀರೇಶ ಬಡಿಗೇರ, ಪ್ರವಾಚಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ-ಹಂಪಿ, ವಿದ್ಯಾರಣ್ಯ-೫೮೩ ೨೭೬

೬. ದಿ. ಎ ಕೆ ರಾಮಾನುಜನ್ ಅವರು

೭. ಪ್ರೊ ಚಂದ್ರಶೇಖರ ನಂಗಲಿ, ಕನ್ನಡ ಅಧ್ಯಾಪಕ, ೩೨೮೪ ಪಿ ಸಿ ಬಡಾವಣೆ, ಕೋಲಾರ-೫೬೩ ೧೦೪.

೮. ದಿ. ಅನಕೃ ಅವರು

೯. ಡಾ ಸದಾನಂದ ಕನವಳ್ಳಿ, 'ಸವಿ' ಜಲದರ್ಶಿನಿಪುರ ಧಾರವಾಡ-೫೮೦ ೦೦೭

೧೦. ಡಾ ಎಸ್ ಶೆಟ್ಟರ್, 'ಮಾನಸೋಲ್ಲಾಸ', ಮಾಳಮಡ್ಡಿ, ಧಾರವಾಡ

೧೧. ಬಿ ಎಂ ಪುಟ್ಟಯ್ಯ, ಉಪನ್ಯಾಸಕರು, ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬

೧೨. ರವಿ ಉಪಾಧ್ಯ, ಮಠಗಲ್ಲಿ, ಬೆಳಗಾವಿ

೧೩. ಡಾ. ಸರಜೂ ಕಾಟ್ಕರ್, ಕಾವ್ಯ, ಮಹಂತೇಶನಗರ, ಬೆಳಗಾವಿ

೧೪. ನಾಗಭೂಷಣ ಪಾಟೀಲ, ಸಂಶೋಧನ ವಿದ್ಯಾರ್ಥಿ, ಲೋಹಿಯಾ ಅಧ್ಯಯನ ಪೀಠ, ಕನ್ನಡ ವಿಶ್ವವಿದ್ಯಾಲಯ-ಹಂಪಿ

೧೫. ಡಾ. ಅಮರೇಶ ನುಗಡೋಣಿ, ಉಪನ್ಯಾಸಕರು, ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩ ೨೭೬

ಕನ್ನಡ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯವು, ತಾನೊಂದು ಸಂಶೋಧನ ಸಂಸ್ಥೆಯಾಗಿ ಪ್ರಕಟಿಸುತ್ತಿರುವ ಹಲವು ನಿಯತಕಾಲಿಕೆಗಳಲ್ಲಿ, 'ಕನ್ನಡ ಅಧ್ಯಯನ'ವು ಒಂದು ವಿದ್ವತ್ ಪತ್ರಿಕೆಯಾಗಿದೆ. ಇದು ಕರ್ನಾಟಕದ ಅಧ್ಯಯನಗಳಿಗೆ ಮೀಸಲಾದ ಪತ್ರಿಕೆ. ಕರ್ನಾಟಕದ ಜನ, ಸಮಾಜ, ಭಾಷೆ, ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಧರ್ಮ, ಆರ್ಥಿಕತೆ, ರಾಜಕಾರಣ, ಪರಿಸರ, ಕಲೆ -ಮುಂತಾದ ಕ್ಷೇತ್ರಗಳಲ್ಲಿ ನಡೆಯುವ ಚರ್ಚೆ-ಶೋಧಗಳು ಇಲ್ಲಿ ಪ್ರಕಟವಾಗುತ್ತವೆ. 'ಕನ್ನಡ ಅಧ್ಯಯನ'ವು ಏಕಕಾಲಕ್ಕೆ ನಾಡಿನ ಗತದ ತಡಕಾಟವನ್ನು, ವರ್ತಮಾನದ ಮುಖಾಮುಖಿಯನ್ನು ಹಾಗೂ ಭವಿಷ್ಯದ ಕನಸು ಕಟ್ಟುವಿಕೆಯನ್ನು ಮಾಡಬಯಸುತ್ತದೆ. ಈ ಮೂಲಕ ವಿದ್ವಾಂಸರಿಗೆ ಸಾಂಸ್ಕೃತಿಕ ವೇದಿಕೆಯಂತೆಯೂ, ಓದುಗರಿಗೆ ಬೌದ್ಧಿಕ ಸಂಗಾತಿಯಂತೆಯೂ ಕೆಲಸ ಬೇಕೆಂಬುದು ಇದರ ಹಂಬಲ.

'ಕನ್ನಡ ಅಧ್ಯಯನ'ವು ಸೊಲ್ಲು, ಲೇಖನ, ಹಿಂದಣ ಹೆಜ್ಜೆ, ಕನ್ನಡಿ, ಎಲೆಮರೆ, ಮುಖಾಮುಖಿ, ಹೊಳಹು, ಪುಸ್ತಕ ಪರಿಚಯ, ಆಕರಸೂಚಿ -ಮುಂತಾದ ವಿಭಾಗಗಳಲ್ಲಿ ಬರಹಗಳನ್ನು ಒಳಗೊಂಡಿರುತ್ತದೆ. ಪತ್ರಿಕೆಯ ಪ್ರತಿ ಸಂಪುಟದಲ್ಲಿ ಮಳೆ, ಚಳಿ, ಗಾಳಿ, ಬಿಸಿಲು ಎಂಬ ಹೆಸರಿನ ನಾಲ್ಕು ಸಂಚಿಕೆಗಳು ಇರುತ್ತವೆ.

Reg. No. 05999/23/AL/93/TL